ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶುಕ್ರವಾರ, 1 ಮೇ 2026
ಸಂಪುಟ 16, ಸಂಚಿಕೆ 37, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ಗಂಗಾವತಿ: 6 ಅಪರಾಧಿಗಳಿಗೆ ಮರಣದಂಡನೆ | 02
ವಾರದೊಳಗೆ ಎತ್ತಿನಹೊಳೆ ಬಾಕಿ ಕಾಮಗಾರಿ | 02
ಇಂದು ವಿಶ್ವ ಕಾರ್ಮಿಕರ ದಿನ

ಪಾಕ್‌ನಲ್ಲಿ ಐಟಿ ಎಂದರೆ ಇಂಟರ್‌ನ್ಯಾಷನಲ್ ಟೆರರಿಸಂ: ರಾಜನಾಥ್

ಐಟಿಗೆ ಟೆರರ್‌ನ ಅರ್ಥ

• **ಹೊಸದಿಲ್ಲಿ:** ಭಾರತ ಮತ್ತು ಪಾಕಿಸ್ತಾನ ಒಂದೇ ಸಮಯದಲ್ಲಿ ಸ್ವಾತಂತ್ರ್ಯ ಪಡೆದವು. ಆದರೆ ಇಂದು ಭಾರತವು ಇನ್ಫಾರ್ಮೇಶನ್ ಟೆಕ್ನಾಲಜಿಗಾಗಿ ಜಗತ್ತಿನಲ್ಲಿ ಪ್ರಸಿದ್ಧವಾಗಿದ್ದರೆ, ಪಾಕಿಸ್ತಾನ ಇಂಟರ್‌ನ್ಯಾಷನಲ್ ಟೆರರಿಸಮ್‌ಗಾಗಿ ಗುರುತಿಸಿಕೊಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಿಡಿಕಾರಿದರು.



ಭಯೋತ್ಪಾದನೆ ಎಂಬುದು 'ವಿಕೃತ ಹಾಗೂ ವಕ್ರ ಮನೋಭಾವದಿಂದ' ಹುಟ್ಟಿಕೊಳ್ಳುವ ದುಷ್ಟ ಶಕ್ತಿಯಾಗಿದ್ದು, ಅದನ್ನು ಎದುರಿಸುವ ಹೋರಾಟವು ಕೇವಲ ರಾಷ್ಟ್ರೀಯ ಭದ್ರತೆಗಾಗಿ ಮಾತ್ರವಲ್ಲ, ಮಾನವೀಯ ಮೌಲ್ಯಗಳನ್ನು ರಕ್ಷಿಸುವ ಮೂಲ ಹೋರಾಟವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟದ ದೃಷ್ಟಿಕೋನದಲ್ಲಿ ಮಹತ್ವದ ಬದಲಾವಣೆ ಉಂಟಾಗಿದೆ ಎಂದು ಅವರು ತಿಳಿಸಿದ್ದಾರೆ.

ಆಪರೇಷನ್ ಸಿಂದೂರ ಮೂಲಕ ಭಾರತವು ಇನ್ನು ಮುಂದೆ ಕೇವಲ ರಾಜತಾಂತ್ರಿಕ ಹೇಳಿಕೆಗಳಲ್ಲೇ ಸೀಮಿತವಾಗಿರುವ ದೇಶವಲ್ಲ ಎಂಬುದನ್ನು ವಿಶ್ವಕ್ಕೆ ಸ್ಪಷ್ಟ ಸಂದೇಶ ನೀಡಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮಾತಿನ ಮಟ್ಟದಲ್ಲೇ ಉಳಿಯದೆ, ದೃಢವಾದ ಕ್ರಮಗಳ ಮೂಲಕ ತನ್ನ ಬದ್ಧತೆಯನ್ನು ತೋರಿಸಿದೆ ಎಂದು ಅವರು ಹೇಳಿದರು. ➡ಪುಟ ೪

ಉಗ್ರವಾದ ಸಹಿಸಲ್ಲ

ಯಾವ ಸಂದರ್ಭದಲ್ಲಾದರೂ ಭಯೋತ್ಪಾದನೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲ ಎಂಬ ದೃಢ ನಿಲುವನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಅವರು ಪುನರುಚ್ಚರಿಸಿದರು. 'ಭಯೋತ್ಪಾದನೆ ಮಾನವಕುಲದ ಮೇಲೆ ಕಪ್ಪು ಮಸಿ ಎರಚುವಂತಹುದು. ಇದು ಪ್ರತಿಯೊಂದು ಮಾನವೀಯ ಮೌಲ್ಯಕ್ಕೂ ವಿರುದ್ಧವಾಗಿರುವ ಕ್ರೂರ ಚಿಂತನೆ' ಎಂದರು. ಭಯೋತ್ಪಾದನೆಗೆ ಧಾರ್ಮಿಕ ಬಣ್ಣ ನೀಡುವುದು ಸರಿಯಲ್ಲ. ➡ಪುಟ ೪

ಕಠಿಣ ಕ್ರಮಕ್ಕೆ ಸಿಎಂ ಆದೇಶ

• **ಬೆಂಗಳೂರು:** ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ಏಳು ಜನರ ಸಾವಿಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ, ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗದ ಇಇ ಅಮಾನತಿಗೆ, ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ. ಮೃತರ ಕುಟುಂಬಕ್ಕೆ ಪ್ರಧಾನಿ ಸಂತಾಪ ಸೂಚಿಸಿದ್ದು, ತಲಾ 2 ಲಕ್ಷ ಪರಿಹಾರ ಘೋಷಣೆ ಮಾಡಿದ್ದಾರೆ. • ವಿವರ ಪುಟ ೩

ಕಿರುಸುದ್ದಿ

ಅಂಗಡಿ ಬಂದ್‌ಗೆ ಸೂಚನೆ

ಹುಬ್ಬಳ್ಳಿ: ಬದ್ಧ ಪೂರ್ಣಿಮಾ ಅಂಗವಾಗಿ ಮೇ 1 ರಂದು ಪಾಲಿಕೆ ಹು-ಧಾ ವಧಾಲಯಗಳು ಹಾಗೂ ಎಲ್ಲ ಮಾಂಸದ ಅಂಗಡಿಗಳನ್ನು ಬಂದ್ ಮಾಡಲು ಸೂಚಿಸಲಾಗಿದೆ. ಮಾಂಸದ ಅಂಗಡಿಗಳನ್ನು ತೆರೆದಿದ್ದಲ್ಲಿ ಪಾಲಿಕೆಯಿಂದ ಅವರ ಲೈಸೆನ್ಸ್ ರದ್ದುಪಡಿಸಿ, ಸರ್ಕಾರದ ನಿಯಮಗಳನ್ವಯ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮುಖ್ಯ ಪಶು ವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 3ಕ್ಕೆ ಉಪನ್ಯಾಸ

ಧಾರವಾಡ: ಸತ್ತೂರಿನ ನಾರಾಯಣ ಪಾರಾಯಣ ಬಳಗದಿಂದ ನರಸಿಂಹ ಸ್ತುತಿ ವಿಶೇಷ ಉಪನ್ಯಾಸ ಮೇ 3ರಂದು ಬೆಳಗ್ಗೆ 8.15ರಿಂದ 9.15ರವರೆಗೂ ವನಸಿರಿ ನಗರದ ವಿಶ್ವನಾಥ ಕಾಂಗೋ ಅವರ ನಿವಾಸದಲ್ಲಿ ಜರುಗಲಿದೆ. ಸಂಪನ್ಮೂಲ ವ್ಯಕ್ತಿ ಪಂ ಮುರುಳಿಧರಾಚಾರ್ಯ ಮಳಗಿ ಉಪನ್ಯಾಸ ನೀಡಲಿದ್ದು, ಇದಕ್ಕೂ ಮುನ್ನ ಬೆಳಗ್ಗೆ 7.15ಕ್ಕೆ ಬಳಗದ ಸದಸ್ಯರಿಂದ ಹರಿ ವಾಯು ಸ್ತೋತ್ರ ಪಾರಾಯಣ ನಡೆಯಲಿದೆ ಎಂದು ಬಳಗದ ಕಾರ್ಯದರ್ಶಿ ಅವಧಾನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಂಗಚಂದ್ರ ಪ್ರಶಸ್ತಿಗೆ ಆಯ್ಕೆ




ಧಾರವಾಡ: ಪಂ.ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನವು ರಂಗನಿರ್ದೇಶಕ ದಿ. ಜಗುಚಂದ್ರ ಕೂಡಲ ಅವರ ಸ್ಮರಣಾರ್ಥ ರಂಗಭೂಮಿ ಕ್ಷೇತ್ರದಲ್ಲಿ ನೀಡುವ ರಂಗಚಂದ್ರ ಪ್ರಶಸ್ತಿಗೆ ಕಲಾವಿದರಾದ ಪ್ರಮೀಳಾ ಜಕ್ಕಣ್ಣವರ ಮತ್ತು ಭೀಮಗೊಂಡ ಖಟಾವಿ ಆಯ್ಕೆಯಾಗಿದ್ದಾರೆ.
ಕಲಾವಿದೆ ಪ್ರಮೀಳಾ ಜಕ್ಕಣ್ಣವರ ಸಿಂಧೂರ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣ, ಜೈ ಸಿದ್ಧಿ ನಾಯಕ, ಮೈಲಾರ ಮಹಾದೇವ ನಾಟಕ, ದಿಶಾಂತರ ಹಾಗೂ ಕಿನ್ನರ ಧಾರವಾಹಿ ಮತ್ತು ನೇಗಿಲ ಯೋಗಿ ಬದುಕು ಬಂಡಿ ಚಲಚಿತ್ರದಲ್ಲಿ ನಟಿಸಿದ್ದು, ಅವರ ಸಾಧನೆ ಗುರಿತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಬೆಳಗಾವಿ ಜಿಲ್ಲೆಯ ಭೀಮಗೊಂಡ ಖಟಾವಿ ಅವರು ಬಾಲ್ಯದಿಂದಲೇ ನಾಟಕಗಳಲ್ಲಿ ಅಭಿನಿಸಿದ್ದು, ಐತಿಹಾಸಿಕ, ಪೌರಣಿಕ ಸೇರಿದಂತೆ 400ಕ್ಕೂ ಅಧಿಕ ನಾಟಕಗಳಲ್ಲಿ ಅಭಿನಯಿಸಿದ್ದು, ಅವರ ಸಾಧನೆಗೆ ರಂಗಚಂದ್ರ ಪ್ರಶಸ್ತಿ ಒಲಿದಿದೆ. ಮೇ ಮೊದಲ ವಾರ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದೆ ಎಂದು ಪ್ರತಿಷ್ಠಾನ ಪ್ರಕಟಣೆ ತಿಳಿಸಿದೆ.

ಬೈಕ್ ಸವಾರಿ: ಪಾಲಕರಿಗೆ ದಂಡ

ಧಾರವಾಡ: ಅಪ್ರಾಪ್ತ ಮಗನ ಕೈಗೆ ದ್ವಿಚಕ್ರ ವಾಹನ ಕೊಟ್ಟ ತಪ್ಪಿಗೆ ಪಾಲಕರಿಗೆ ರೂ. 25 ಸಾವಿರ ದಂಡ ಹಾಕಿದ ಘಟನೆ ನಡೆದಿದೆ. ಮೈನುದ್ದೀನ್ ಜಲಾಲದರ ದಂಡ ಭರಿಸಿದ ಪಾಲಕರು. ತಮ್ಮ ಅಪ್ರಾಪ್ತ ಮಗ ಬೈಕ್ ಚಲಾಯಿಸಿ, ಪೊಲೀಸರ ಕೈಗೆ ಸಿಕ್ಕಿಬಿದ್ದ ಹಿನ್ನೆಲೆ ಸಂಚಾರಿ ನಿಯಮಾನುಸಾರ ಪೊಲೀಸರು ದಂಡ ವಿಧಿಸಿದ್ದಾರೆ. ಬುಧವಾರ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಮೈನುದ್ದೀನ್ ರೂ.25 ಸಾವಿರ ದಂಡ ಭರಿಸಿದ್ದಾರೆ. ಬಳಿಕ ಪೊಲೀಸರು ಮಾಲೀಕರಿಗೆ ಸಂಚಾರಿ ನಿಯಮಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ವಾಯು ಸೈನಿಕ ಭವನಕ್ಕೆ ಭೂಮಿಪೂಜೆ ಇಂದು

ಧಾರವಾಡ: ಭಾರತೀಯ ಮಾಜಿ ವಾಯು ಸೈನಿಕರ ಸಂಘ ಕರ್ನಾಟಕ ರಾಜ್ಯ, ಶಾಖೆ ಹುಬ್ಬಳ್ಳಿ-ಧಾರವಾಡ ಘಟಕದ ವಾಯು ಸೈನಿಕ ಭವನ ಹಾಗೂ ತರಬೇತಿ ಕೇಂದ್ರ ಉದ್ಘಾಟನೆ ಭೂಮಿ ಪೂಜಾ ಕಾರ್ಯಕ್ರಮ ಮೇ 1ರಂದು ಬೆಳಗ್ಗೆ 11.35ಕ್ಕೆ ಸುತಗಟ್ಟಿ ಸಿದ್ಧ ವಿನಾಯಕ ನಗರದಲ್ಲಿ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಭೂಮಿಪೂಜೆ ನೆರವೇರಿಸಲಿದ್ದು, ಭಾರತೀಯ ಮಾಜಿ ವಾಯು ಸೈನಿಕರ ಸಂಘದ ರಾಜ್ಯ ಶಾಖೆ ಅಧ್ಯಕ್ಷ ಏರ್ ಮಾರ್ಷಲ್ ಎಚ್.ಬಿ.ರಾಜಾರಾಮ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಅರವಿಂದ ಬೆಲ್ಲದ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ. ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ, ಪಾಲಿಕೆ ಸದಸ್ಯೆ ಸುನಿತಾ ಮಾಳವಾದಕರ ಪಾಲ್ಗೊಳ್ಳಲಿದ್ದಾರೆ ಎಂದು ಘಟಕದ ಉಪಾಧ್ಯಕ್ಷ ಹಾಗೂ ನಿವೃತ್ತ ಏರ್ ಕಮಾಂಡರ್ ಸಿ.ಎಸ್. ಹವಾಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಜಯಂತ್ಯುತ್ಸವ

ಧಾರವಾಡ: ಬುದ್ಧಿಸ್ಟ ಪಾಲಿ ಎಜ್ಯುಕೇಶನ್ ಮತ್ತು ರಿಸರ್ಚ್ ಟ್ರಸ್ಟ್, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸಹಯೋಗದಲ್ಲಿ ಭಗವಾನ್ ಗೌತಮ ಬದ್ಧರ ಜಯಂತ್ಯುತ್ಸವ ಮೇ 1ರಂದು ಆಯೋಜಿಸಿದ್ದಾಗಿ ಟ್ರಸ್ಟ್ ಅಧ್ಯಕ್ಷ ಪಬ್ಬಜ್ಜೊರವಿತಿಪಾಲಿವಿಜ್ಞಾಮುನಿಯೊ ತಿಳಿಸಿದರು.
ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಗಂಟೆಗೆ ಕಡಪಾ ಮೈದಾನದದಲ್ಲಿ ಕಾರ್ಯಕ್ರಮ ಆರಂಭವಾಗಲಿದೆ. ಅಶೋಕ ಸ್ತೂಪ, ಬಿ.ಆರ್. ಅಂಬೇಡ್ಕರ್, ಬಸವೇಶ್ವರರ, ದ.ರಾ ಬೇಂದ್ರೆ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು ಎಂದರು. ಲಕ್ಷ್ಮಣ ಬಕ್ಕಾಯಿ, ಅಶೋಕ ಬಂಡಾರಿ, ಪ್ರಕಾಶ ಮಲ್ಲಿಗವಾಡ, ಸದಾನಂದ, ಶಿವಾನಂದ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಮಹಾನಗರ ಪಾಲಿಕೆ ಚಿಟಗುಪ್ಪಿ ಆಸ್ಪತ್ರೆಯ ಎದುರಿನ ರಸ್ತೆ ಎಂಟು ದಿನಗಳ ಒಳಗಾಗಿ ಡಾ. ರಾಜಕುಮಾರ ವೃತ್ತ ಎಂದು ನಾಮಕರಣ ಮಾಡಬೇಕು ಎಂದು ಆಗ್ರಹಿಸಿ ಉತ್ತರ ಕರ್ನಾಟಕ ಆಟೋ ಚಾಲಕ ಸಂಘ, ಯುವ ಕರ್ನಾಟಕ ವೇದಿಕೆ, ಆಟೋ ಮಾಲೀಕರ, ಚಾಲಕರ ಸಂಘದಿಂದ ಪಾಲಿಕೆಗೆ ಮನವಿ ಸಲ್ಲಿಸಲಾಯಿತು.

ಓದು ನಿತ್ಯದ ಕಾಯಕವಾಗಲಿ: ಆನಂದ ಪಾಟೀಲ

ಅಳ್ನಾವರ: ನಿರಂತರ ಓದಿನಿಂದ ಭೌದ್ಧಿಕ ಮಟ್ಟ ಗಟ್ಟಿಗೊಳ್ಳುವದರ ಜೊತೆಗೆ ಜೀವನದಲ್ಲಿ ನಿರ್ದಿಷ್ಟ ಗುರಿ ಮುಟ್ಟಲು ಸಾಧ್ಯವಿದೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆನಂದ ಪಾಟೀಲ ಹೇಳಿದರು. ತಾಲೂಕಿನ ಕಡಬಗಟ್ಟಿ ಗ್ರಾಮದ ಅರಿವು ಕೇಂದ್ರ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದಲ್ಲಿ ಆಯೋಜಿಸಿದ್ದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಜನ ಸಾಮಾನ್ಯರ ವಿಶ್ವ ವಿದ್ಯಾಲಯಗಳು ಎಂದೆನಿಕೊಳ್ಳುತ್ತಿರುವ ಗ್ರಂಥಾಲಯಗಳು ಜನರಿಗೆ ಜ್ಞಾನ ನೀಡುವ ಕೇಂದ್ರಗಳಾಗಿ ಮಾರ್ಪಟ್ಟಿವೆ. ಓದು ಬದುಕಿನ ಒಂದು ಭಾಗವಾಗಬೇಕು ಎಂದರು. ಎಮ್.ಎಸ್.ಐ ಎಲ್ ಮಾಜಿ ನಿರ್ದೇಶಕ ಶಿವಾಜಿ ಡೊಳ್ಳಿನ ಮಾತನಾಡಿ, ಬದಲಾಗುತ್ತಿರುವ ಶಿಕ್ಷಣ ಪದ್ಧತಿಗೆ ತಕ್ಕಂತೆ ಅಧ್ಯಯನದಲ್ಲಿ ತೊಡಗಿದಾಗ ಮಾತ್ರ ಹೆಚ್ಚಿನ ಫಲಿತಾಂಶ ಪಡೆಯಬಹುದಾಗಿದೆ ಎಂದರು. 10ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಕಡಬಗಟ್ಟಿ ಗ್ರಾಮದ ದಿವ್ಯಾ ಗೋವಿನಕೊಪ್ಪ ಮತ್ತು ಹುಲಿಕೇರಿ ಗ್ರಾಮದ ತೇಜಶ್ರೀ ಕೇದಾರ್ಜಿ ಇವರಿಬ್ಬರನ್ನು ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿದ ದಿವ್ಯಾ ಮಾತನಾಡಿ, ಹಳ್ಳಿಯಲ್ಲಿಯೂ ಈಗ ಗ್ರಂಥಾಲಯಗಳು ಡಿಜಿಟಲ್ ಜ್ಞಾನವನ್ನು ನೀಡುತ್ತಿದ್ದು, ಹೆಚ್ಚಿನ ಅಂಕಗಳಿಕೆಗೆ ಗ್ರಂಥಾಲಯದಲ್ಲಿ ಓದಿನಿಂದ ಸಾಧ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಎಲ್ಲಾ ಮಕ್ಕಳು ನಿಯಮಿತವಾಗಿ ಗ್ರಂಥಾಲಯಕ್ಕೆ ಭೇಟಿ ನೀಡಬೇಕು ಎಂದರು. ಎಸ್.ಡಿ.ಎಂ.ಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೋವಿನಕೊಪ್ಪ, ಮುಖ್ಯ ಶಿಕ್ಷಕ ಏಕನಾಥ ಹೊನಗೇಕರ, ದೇವೇಂದ್ರ ಖಾನಾಪೂರ, ರಾಜು ಗೋವಿನಕೊಪ್ಪ, ಶ್ರೀನಿವಾಸ ಕೇದಾರ್ಜಿ, ನೇತ್ರಾನಂದ ಬೆಳಗಾವಿ, ಗ್ರಂಥಪಾಲಕ ಗುರುರಾಜ ಇದ್ದರು.



ಅಳ್ನಾವರ: ತಾಲೂಕಿನ ಕಡಬಗಟ್ಟಿ ಗ್ರಾಮದ ಅರಿವು ಕೇಂದ್ರ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದಲ್ಲಿ ಆಯೋಜಿಸಿದ್ದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಬೃಹತ್ ಮಹಾನಗರ ಪಾಲಿಕೆ ಘೋಷಣೆಗೆ ಪ್ರಸ್ತಾವ

ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆ ಎಂದು ಘೋಷಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ ಯಾವುದೇ ಚರ್ಚೆ ಇಲ್ಲದೆ ಅನುಮೋದನೆ ನೀಡಲಾಯಿತು.

ಯಾವುದೇ ಚರ್ಚೆ ನಡೆಸದೆ ಆಡಳಿತ ಪಕ್ಷ ಏಕಪಕ್ಷೀಯ ನಿರ್ಧಾರ ಕೈಗೊಂಡಿದ್ದಾರೆ ಎಂದು ಕಾಂಗ್ರೆಸ್ ಸದಸ್ಯರು ಮೇಯರ್ ಹಾಗೂ ಸಭಾನಾಯಕ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ವಿಷಯ ಪ್ರಸ್ತಾಪವಾಗುತ್ತಿದ್ದಂತೆಚರ್ಚೆಗೆಅವಕಾಶನೀಡದೆ ಮೇಯರ್ ಠರಾವು ಪಾಸ್ ಮಾಡಿದರು. ಈ ವೇಳೆ ಕಾಂಗ್ರೆಸ್ ಸದಸ್ಯರು ಪ್ರತ್ಯೇಕ ಮಹಾನಗರ ಪಾಲಿಕೆ ಆಗಬೇಕು ಎಂದು ಘೋಷಣೆ ಕೂಗಿದ ಕಾಂಗ್ರೆಸ್ ಸದಸ್ಯರು, ಸಭೆಯ ವಿಷಯ ಪಟ್ಟಿ ಪ್ರತಿಯನ್ನು ಹರಿದು ಆಕ್ರೋಶ ವ್ಯಕ್ತಪಡಿಸಿದರು. ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದವರು ಸಭೆಯಿಂದ ಹೊರನಡೆದರು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆಯಾಗುತ್ತಿದೆ ಎಂಬುದನ್ನು ಬಿಜೆಪಿಯವರಿಗೆ ಸಹಿಸಲು ಆಗುತ್ತಿಲ್ಲ. ಹೀಗಾಗಿ ಪ್ರತ್ಯೇಕ ಮಹಾನಗರ ಪಾಲಿಕೆ ಬೇಡ, ಬೃಹತ್ ಮಹಾನಗರ ಪಾಲಿಕೆಯಾಗಬೇಕು ಎಂದು ಠರಾವು ಪಾಸ್ ಮಾಡಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಇಮ್ರಾನ್ ಯಲಿಗಾರ ದೂರಿದರು. ಈ ಹಿಂದಿನ ಸಾಮಾನ್ಯ ಸಭೆಯಲ್ಲಿ ಪ್ರತ್ಯೇಕ ಪಾಲಿಕೆ ಆಗಬೇಕು ಎಂದು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ಅಲ್ಲದೆ, ಕಾಂಗ್ರೆಸ್, ಬಿಜೆಪಿ ಶಾಸಕರು ಅಧಿವೇಶನದಲ್ಲಿಯೂ ಈ ವಿಷಯದ ಕುರಿತು ಚರ್ಚೆ ನಡೆಸಿದ್ದರು. ಹೆಚ್ಚು ಅನುದಾನ ಬರುತ್ತದೆ ಎಂಬ ಕಾರಣಕ್ಕೆ ಬೃಹತ್ ಮಹಾನಗರ ಪಾಲಿಕೆಯಾಗಬೇಕು ಎಂದು ಹೇಳುತ್ತಿದ್ದಾರೆ.

> ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಆದರೆ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಪ್ರತ್ಯೇಕವಾಗಲು ಎಲ್ಲ ಅರ್ಹತೆ ಇದೆ.
> ■ ಕವಿತಾ ಕಬ್ಬೇರ, ಕಾಂಗ್ರೆಸ್ ಸದಸ್ಯೆ

> ರಾಜ್ಯ ಸರ್ಕಾರದಿಂದ ಪಾಲಿಕೆಗೆ ನೂರಾರು ಕೋಟಿ ರೂಪಾಯಿ ಅನುದಾನ ಬರುವುದು ಬಾಕಿಯಿದೆ. ನ್ಯಾಯಯುತವಾಗಿ ಪಾಲಿಕೆಗೆ ಬರಬೇಕಾದ ಅನುದಾನ ನೀಡುವಂತೆ ಮುಖ್ಯಮಂತ್ರಿಗೆ ಹಲವು ಬಾರಿ ಮನವಿ ಸಲ್ಲಿಲಾಗಿದೆ. ಆದರೂ ಸ್ಪಂದಿಸಿಲ್ಲ.
> ■ ಜ್ಯೋತಿ ಪಾಟೀಲ, ಮೇಯರ್

ಆದರೆ ಹೆಚ್ಚು ಅನುದಾನ ಬರುವುದಿಲ್ಲ, 2011ರ ಜನಗಣತಿಯಂತೆ ಬೃಹತ್ ಮಹಾನಗರ ಪಾಲಿಕೆಯಾಗಲು ಅರ್ಹತೆ ಇಲ್ಲ, ಬಿಜೆಪಿ ಅವರಿಗೆ ಧಾರವಾಡ ಅಭಿವೃದ್ಧಿ ಯಾಗುವುದು ಇಷ್ಟವಿಲ್ಲ, ಆದ್ದರಿಂದ ಪ್ರತ್ಯೇಕಕ್ಕೆ ವಿರೋಧ ಮಾಡುತ್ತಿದ್ದಾರೆ. ಕ್ರೆಡಿಟ್‌ಗಾಗಿ ಬಿಜೆಪಿಯವರು ಈ ವಿಷಯದಲ್ಲಿ ರಾಜಕೀರಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರದಿಂದ 10 ಲಕ್ಷಕ್ಕಿಂತ ಜನಸಂಖ್ಯೆ ಇರುವ ನಗರಗಳಿಗೆ ಹೆಚ್ಚು ಅನುದಾನ ಬರುತ್ತದೆ. ಹು-ಧಾ ಪ್ರತ್ಯೇಕ ಮಾಡಿದರೆ ಎರಡೂ ನಗರಗಳು ಈ ಅನುದಾನ ಪಡೆಯಲು ಸಾಧ್ಯವಾಗುವುದಿಲ್ಲ, ಅವಳಿ ನಗರಗಳ ಸರ್ವಾಂಗೀಣ ಅಭಿವೃದ್ಧಿಯ ಉದ್ದೇಶದಿಂದ ಈ ನಿರ್ಣಯ ಕೈಗೊಳ್ಳಲಾಗಿದೆ. ಹೀಗಾಗಿಯೇ ಬೃಹತ್ ಮಹಾನಗರ ಪಾಲಿಕೆಗಾಗಿ ಠರಾವು ಪಾಸ್ ಮಾಡಲಾಗಿದೆ ಎಂದು ಮೇಯರ್ ಜ್ಯೋತಿ ಪಾಟೀಲ ಹೇಳಿದರು.



ವಿಷಯ ಬಂದಾಕ್ಷಣ ಗಲಾಟೆ

ಚರ್ಚೆ ಮಾಡುವ ಉದ್ದೇಶದಿಂದಲೇ ಈ ವಿಷಯ ಸಭೆಯಲ್ಲಿ ಮಂಡಿಸಲಾಗಿತ್ತು. ವಿರೋಧ ಪಕ್ಷದವರು ಚರ್ಚೆಗೆ ಅವಕಾಶ ಕೊಡಲಿಲ್ಲ. ವಿಷಯ ಬಂದಾಕ್ಷಣ ಮೇಯರ್ ಪೀಠದ ಎದುರು ಬಂದು ಗಲಾಟೆ ಮಾಡಿದರು. ಸರ್ವಾನುಮತದಿಂದ ಈ ವಿಷಯ ಮಂಡಿಸಲಾಗಿತ್ತು. ಕೇಂದ್ರಸರ್ಕಾರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ನೀಡಿ ಬಲಪಡಿಸಲು ಮುಂದಾಗಿದೆ. ಸರ್ವಾಂಗೀಣ ಅಭಿವೃದ್ಧಿ ಚಿಂತನೆಯಿಂದ ಇದನ್ನು ಬೃಹತ್ ಮಹಾಗರ ಪಾಲಿಕೆ ಮಾಡಲು ಠರಾವು ಪಾಸು ಮಾಡಲಾಗಿದೆ. ರಾಜಕೀಯ ಲಾಭದ ಉದ್ದೇಶ ಇಲ್ಲ ಎಂದು ಮೇಯರ್ ಜ್ಯೋತಿ ಪಾಟೀಲ ಹೇಳಿದರು.

ತೆರಿಗೆ ಪಾವತಿ ಅವಧಿ ವಿಸ್ತರಣೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ 2026-27 ನೇ ಸಾಲಿನ ಆಸ್ತಿ ತೆರಿಗೆ ಪಾವತಿ ಮೇಲೆ ನೀಡಲಾಗಿರುವ ಶೇ. 5 ರಷ್ಟು ರಿಯಾಯಿತಿ ಅವಧಿಯನ್ನು ಮೇ 31 ರ ವರೆಗೆ ವಿಸ್ತರಿಸಲು ನಿರ್ಧರಿಸಿದೆ. ಏ.12ರಿಂದ ಆರಂಭಗೊಂಡಿತ್ತು. ತಾಂತ್ರಿಕ ಸಮಸ್ಯೆಯಿಂದ ಪ್ರಸಕ್ತ ಸಾಲಿನ ಆಸ್ತಿ ತೆರಿಗೆ ಪಾವತಿ 12 ದಿನ ವಿಳಂಬವಾಗಿದೆ. ಇದರಿಂದ ಹು-ಧಾ ಅವಳಿ ನಗರದ ಸಾಕಷ್ಟು ಜನ ಆಸ್ತಿಮಾಲೀಕರಿಗೆ ತೆರಿಗೆ ಪಾವತಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಶೇ.5ರಷ್ಟು ರಿಯಾಯಿತಿ ಅವಧಿಯನ್ನು ಏ.30ರ ಬದಲು ಮೇ 31ರ ವರೆಗೆ ವೇಳೆ ವಿಸ್ತರಿಸಬೇಕು ಎಂದು ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಗುರುವಾರ ಸಭಾ ನಾಯಕ ಈರೇಶ ಅಂಚಟಗೇರಿ ವಿಷಯ ಮಂಡಿಸಿದರು.

- ಹು-ಧಾ ಮಹಾನಗರ ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆ ಮಾಡಿ ಕೇಂದ್ರ, ರಾಜ್ಯ ಸರ್ಕಾರದಿಂದ ಹೆಚ್ಚು ಅನುದಾನ ತಂದು ಎರಡೂ ನಗರ ಸರ್ವಾಂಗೀಣ ಅಭಿವೃದ್ಧಿ ಮಾಡುವುದೇ ನಮ್ಮ ಗುರಿ
- ಈ ಬಗ್ಗೆ ಎಲ್ಲ ನಾಯಕರು ಚರ್ಚೆ ನಡೆಸಿದ್ದಾರೆ ಎಂದ ಮೇಯರ್

ಮಸೂದೆ ವಿರೋಧ ಖಂಡನೀಯ: ಛಬ್ಬಿ

ಅಳ್ನಾವರ: ಮಹಿಳಾ ಮೀಸಲಾತಿ ಮಸೂದೆಗೆ ವಿರೋಧಿ ಭಾವನೆಯನ್ನು ತಳೆದಿರುವ ಕಾಂಗ್ರೆಸ್ ಪಕ್ಷ ಮಹಿಳೆಯರ ಸಬಲೀಕರಣದ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದು ಬಿಜೆಪಿ ಮುಖಂಡ ಹಾಗೂ ವಿ.ಪ ಮಾಜಿ ಸದಸ್ಯ ನಾಗರಾಜ ಛಬ್ಬಿ ಹೇಳಿದರು.

ಅಳ್ನಾವರದಲ್ಲಿ ಜರುಗಿದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿ, ಕೇಂದ್ರ ಸರ್ಕಾರ ತರಲು ಹೊರಟಿರುವ ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ಪಕ್ಷ ಅಡ್ಡಿ ಪಡಿಸಿರುವ ಸಂಗತಿ ದೇಶದ ಪ್ರತಿಯೊಬ್ಬ ಮಹಿಳೆಗೂ ಗೊತ್ತಿರುವ ಸಂಗತಿಯಾಗಿದೆ. ಆದರೆ ಕಾಂಗ್ರೆಸ್ ಮಹಿಳೆಯರ ಪರವಾಗಿದೆ ಎಂದು ಸುಳ್ಳು ಹೇಳುವುದನ್ನು ರೂಢಿಸಿಕೊಂಡಿದ್ದನ್ನು ಮಹಿಳೆಯರು ನಂಬುವುದಿಲ್ಲ ಎಂದರು.

ಶುಕ್ರವಾರ ಹುಬ್ಬಳ್ಳಿಯಲ್ಲಿ ನಡೆಯಲಿರುವ ಮಹಿಳಾ ಮೀಸಲಾತಿಯ ಬಗ್ಗೆ ಕಾಂಗ್ರೆಸ್‌ನ ಇಬ್ಬಗೆಯ ನೀತಿಯನ್ನು ಖಂಡಿಸಿ ಬೃಹತ್ ಪ್ರತಿಭಟನೆ ನಡೆಯಲಿದ್ದು ಕಲಘಟಗಿ ಮತ ಕ್ಷೇತ್ರದಿಂದ ಅತೀ ಹೆಚ್ಚು ಮಹಿಳೆಯರು ಇದರಲ್ಲಿ ಪಾಲ್ಗೊಂಡು ಕೇಂದ್ರದ ನಿರ್ಧಾರಕ್ಕೆ ಬೆಂಬಲ ಸೂಚಿಸಲಿದ್ದಾರೆ ಎಂದರು.

ಕಾಂಗ್ರೆಸ್‌ಗೆ ನಿಜವಾಗಿ ಮಹಿಳೆಯರು ಮುಖ್ಯವಾಹಿನಿಗೆ ಬರುವುದು ಇಷ್ಟವಿಲ್ಲ, ಹಾಗಾಗಿ ಮಹಿಳಾ ಮೀಸಲಾತಿಗೆ ವಿರೋಧ ಮಾಡುತ್ತಿದ್ದು ಇದು ಮುಂದಿನ ದಿನಗಳಲ್ಲಿ ಬಹು ದೊಡ್ಡ ಆಘಾತವನ್ನು ಪಕ್ಷ ಅನುಭವಿಸಲಿದೆ. ಮಹಿಳಾ ಮೀಸಲಾತಿಯ ಸಾಧಕ ಭಾಧಕಗಳ ಬಗ್ಗೆ ತಳಿಸುವ ಕೆಲಸವನ್ನು ಕಾರ್ಯಕರ್ತರು ಪ್ರಾಮಾಣಿಕವಾಗಿ ಮಾಡಬೇಕು ಎಂದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕಲ್ಮೇಶ ಬೇಲೂರ, ಮಂಡಳದ ಅಧ್ಯಕ್ಷ ಯಲ್ಲಪ್ಪ ಹುಲೆಪ್ಪನವರ, ಶಕ್ತಿ ಕೇಂದ್ರದ ಅಧ್ಯಕ್ಷ ಲಖನ ಬರಗುಂಡಿ, ನಾರಾಯಣ ಮೋರೆ, ಶಿವಾಜಿ ಡೊಳ್ಳಿನ, ಪರಶುರಾಮ ರೇಡೆಕರ, ಸಂದೀಪ ಪಾಟೀಲ, ಬಸವರಾಜ ಗುಂಡಗೋವಿ, ಭರತೇಶ ಪಾಟೀಲ, ಶುಭಂ ಗಾವಡೆ ಇತರರಿದ್ದರು.



ಅಮ್ಮನ ಹೆಸರಿನ ಪ್ರಶಸ್ತಿ ಪಡೆದಿದ್ದು ಸೌಭಾಗ್ಯ: ಉಮಾಶ್ರೀ

ಧಾರವಾಡ: ಹುಬ್ಬಳ್ಳಿಯ ಕರ್ನಾಟಕ ಜಾನಪದ ಕಲಾವಿದರ ಅಭಿವೃದ್ಧಿ ಸಂಘ, ಬೆಂಗಳೂರಿನ ಕನ್ನಡ-ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಇಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಬುಧವಾರ ಥೆರೇಸಮ್ಮ ಡಿಸೋಜಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜರುಗಿತು.

ರಂಗಭೂಮಿ ಹಿರಿಯ ಕಲಾವಿದೆ ಥೆರೇಸಮ್ಮ ಡಿಸೋಜಾ ಸ್ಮರಣಾರ್ಥ ನೀಡುವ 2025ನೇ ಸಾಲಿನ ರೂ.25 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಫಲಕ ಒಳಗೊಂಡ ಥೆರೇಸಮ್ಮ ಪ್ರಶಸ್ತಿ ನಟಿ ಹಾಗೂ ಮಾಜಿ ಸಚಿವೆ ಉಮಾಶ್ರೀ ಅವರಿಗೆ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿದ ನಟಿ ಉಮಾಶ್ರೀ ಮಾತನಾಡಿ, ಥೆರೇಸಮ್ಮ ಅವರು ಕೇವಲ ಒಬ್ಬ ಕಲಾವಿದೆಯಲ್ಲ, ಸಂಘಟನಾ ಶಕ್ತಿಯೂ ಹೌದು. ಅಪ್ಪಟ ಕಲಾಪ್ರೇಮಿಯಾದ ಥೆರೇಸಮ್ಮ ಹೆಸರಿನ ಪ್ರಶಸ್ತಿ ಸ್ವೀಕರಿಸಿರುವುದು ನನ್ನ ಬದುಕಿನ ಸೌಭಾಗ್ಯ ಎಂದು ಭಾವುಕರಾಗಿ ನುಡಿದರು.

ಥೆರೇಸಮ್ಮ ಅವರೊಂದಿಗಿನ ಒಡನಾಟ ಸ್ಮರಿಸಿದ ಉಮಾಶ್ರೀ ಅವರು, ಥೆರೇಸಮ್ಮ ಅವರು ಕಲಾವಿದರ ಒಕ್ಕೂಟ ಕಟ್ಟಿ ಬೆಳೆಸಿದವರು. ಕಲಾವಿದರ ಹಿತಕ್ಕಾಗಿ ಅವರು ಪಟ್ಟ ಶ್ರಮ ಅನನ್ಯ. ಪ್ರಶಸ್ತಿ ಹಣಕ್ಕಿಂತಲೂ ಅವರ ಪ್ರೀತಿ ಮತ್ತು ಗೌರವ ನನಗೆ ಅಮೂಲ್ಯವಾಗಿದೆ ಎಂದರು. ಜಾನಪದ ಮತ್ತು ನಾಟಕ ಕಲೆಗಳು ನಮ್ಮ ನಾಡಿನ ಜೀವನಾಡಿ. ತಂತ್ರಜ್ಞಾನ ಎಷ್ಟೇ ಬೆಳೆದರೂ ನೇರ ರಂಗಭೂಮಿಗೆ ಇರುವ ಶಕ್ತಿಯೇ ಬೇರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಂತಹ ಸಂಘಟನೆಗಳ ಜೊತೆ ಕಲಾವಿದರನ್ನು ಗುರುತಿಸುವ ಕಾರ್ಯ ಶ್ಲಾಘಿಸಿದರು.

ನಾನೊಬ್ಬ ರಂಗಭೂಮಿ ಕಲಾವಿದೆಯಾಗಿ ಬಣ್ಣ ಹಚ್ಚಿದ್ದು, ಕಲಾಭಿಮಾನಿಗಳ ಪ್ರೀತಿ ಮತ್ತು ವಿಶ್ವಾಸದಿಂದ ಇಂದು ಈ ಮಟ್ಟಕ್ಕೆ ಬೆಳೆದಿದ್ದೇನೆ. ಧಾರವಾಡದ ಮಣ್ಣಿನಲ್ಲಿ ಸಾಂಸ್ಕೃತಿಕ ಪರಂಪರೆ ಇರುವ ವಿದ್ಯಾವರ್ಧಕ ಸಂಘದಲ್ಲಿ ಗೌರವ ಸಿಕ್ಕಿರುವುದು ನನ್ನ ಜವಾಬ್ದಾರಿ ಮತ್ತಷ್ಟು ಹೆಚ್ಚಿಸಿದೆ. ಪ್ರಶಸ್ತಿಗಳು ಕೇವಲ ಅಲಂಕಾರಿಕ ವಸ್ತುವಾಗಬಾರದು, ಅವು ಹೊಸ ತಲೆಮಾರಿನ ಕಲಾವಿದರಿಗೆ ಸ್ಫೂರ್ತಿಯಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಕಿತ್ತೂರು ಚನ್ನಮ್ಮ ಪ್ರಶಸ್ತಿ ಪುರಸ್ಕೃತೆ ಗೀತಾ ಚಿಕ್ಕಮಠ ಅವರಿಗೆ ಸನ್ಮಾನಿಸಲಾಯಿತು. ಮಾಜಿ ಸಂಸದ ಐ.ಜಿ.ಸನದಿ, ಹುಡಾ ಅಧ್ಯಕ್ಷ ಶಾಕೀರ ಸನದಿ, ಅಡವೀಶ ಇಟಗಿ, ಡಾ.ಹೆಲನ್ ಮೈಸೂರು, ಡಾ. ಶಶಿಧರ ನರೇಂದ್ರ, ಪ್ರಭು ಹಂಚಿನಾಳ, ಸದಾನಂದ ಡಂಗನವರ, ಕುಮಾರ್ ಬೆಕ್ಕೇರಿ ಇದ್ದರು.



ಜನತಾ ಇಂಗ್ಲಿಷ್ ಸ್ಕೂಲ್ ಉತ್ತಮ ಫಲಿತಾಂಶ

ಕಲಘಟಗಿ: ಪಟ್ಟಣದ ಜನತಾ ಇಂಗ್ಲಿಷ್ ಸ್ಕೂಲ 2025-26 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಶೇ.96.59 ಆಗಿದ್ದು 88 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿದ್ದು 9 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ 30 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ 20 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಹಾಗೂ 25 ಜನ ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆಗೆ ಸ್ನೇಹಾ ಕುಂದಗೋಳ 595 ಅಂಕ ಪಡೆದು ಪ್ರಥಮ, ಉಮ್ಮೆಕುಲಸುಮ ಲಿಂಬುವಾಲೆ 574 ಅಂಕ ಪಡೆದು ದ್ವಿತೀಯ, ಸ್ಫೂರ್ತಿ ಯಲ್ಲಾಪೂರಕರ 562 ಅಂಕ ಪಡೆದು ತೃತೀಯ ಹಾಗೂ ಸೃಷ್ಟಿ ಗೌಳಿ 560, ಬಿಬಿಆಯಿಷಾ 552, ಮಂಜುನಾಥ ಲಮಾಣಿ 544, ಆಫಿಯಾ ನನ್ನೇನವರ 537, ಜ್ಯೋತಿ ಅತ್ತಿಮರದ, ಕಿರಣ ಲಮಾಣಿ 536 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಿಬ್ಬಂದಿ, ಆಡಳಿತ ಮಂಡಳಿಯವರು ಹರ್ಷ ವ್ಯಕ್ತಪಡಿಸಿದ್ದಾರೆ.



ನಿವೃತ್ತ ಪ್ರಾಚಾರ್ಯರಿಗೆ ಬೀಳ್ಕೊಡುಗೆ



ಧಾರವಾಡ: ನಗರದ ಜನತಾ ಶಿಕ್ಷಣ ಸಮಿತಿಯ ಮಂಜುನಾಥೇಶ್ವರ ಸಿಬಿಎಸ್‌ಇ ಶಾಲೆಯಲ್ಲಿ 22 ವರ್ಷಗಳು ಸುದೀರ್ಘವಾಗಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಸಾಧನಾ ಎಸ್. ಹಾಗೂ ಆಂಗ್ಲ ಮಾಧ್ಯಮ ಶಾಲೆಯ ಪ್ರಾಚಾರ್ಯರಾದ ರೇಣು ಪಾಟೀಲ ಅವರಿಗೆ ಸೇವಾ ನಿವೃತ್ತಿ ಹೊಂದಿದ ಹಿನ್ನೆಲೆ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಸನ್ಮಾನಿಸಿ ಬೀಳ್ಕೊಟ್ಟರು. ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಮಹಾವೀರ ಉಪಾಧ್ಯೆ ಇತರರಿದ್ದರು.

ಧಾರವಾಡ ಜಿಲ್ಲೆಗೆ ಸ್ಥವನ ಪ್ರಥಮ: ಸನ್ಮಾನ

ಹುಬ್ಬಳ್ಳಿ: ಚೌಗಲಾ ಶಿಕ್ಷಣ ಸಂಸ್ಥೆಯ ವಿದ್ಯಾನಿಕೇತನ ಕಾಲೇಜಿನ ವಿದ್ಯಾರ್ಥಿ ಸ್ಥವನ ಇನಾಂದಾರ 598 ಅಂಕಗಳನ್ನು ಪಡೆದು ಕರ್ನಾಟಕ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದು ಧಾರವಾಡ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಹಿನ್ನೆಲೆ ಚೌಗಲಾ ಶಿಕ್ಷಣ ಸಂಸ್ಥೆಯ ಪರವಾಗಿ ಸ್ಥವನ ಇನಾಂದಾರನಿಗೆ ಒಂದು ಲಕ್ಷ ರೂಪಾಯಿ ಹಣವನ್ನುಕೊಟ್ಟು ಪ್ರೋತ್ಸಾಹಿಸಲಾಯಿತು. ಸ್ಥವನ ಇನಾಂದಾರ ಮರುಮೌಲ್ಯಮಾಪನದಲ್ಲಿ 600 ಕ್ಕೆ598 ಅಂಕಗಳನ್ನುವಿಜ್ಞಾನ ವಿಭಾಗದಲ್ಲಿ ಪಡೆದು ರಾಜ್ಯಕ್ಕೆ 3ನೇ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದಾನೆ.

ಈ ಸಂದರ್ಭದಲ್ಲಿ ಹುಬ್ಬಳ್ಳಿ-ಧಾರವಾಡ ಮೇಯರ್ ಜ್ಯೋತಿ ಪಾಟೀಲ್ ಆಗಮಿಸಿ ಸ್ಥವನ ಇನಾಂದಾರನಿಗೆ ಸನ್ಮಾನಿಸಿದರು. ಅಲ್ಲದೇ ಅಮೃತಾ ಉಮಚಗಿ ಮರುಮೌಲ್ಯಮಾಪನದಲ್ಲಿ 600 ಕ್ಕೆ 596 ಅಂಕಗಳನ್ನು ಪಡೆದು ರಾಜ್ಯಕ್ಕೆ 5ನೇ ಸ್ಥಾನವನ್ನು ಪಡೆದುಕೊಂಡಿದ್ದಾಳೆ.

ಹು-ಧಾ ಮೇಯರ್ ಜ್ಯೋತಿ ಪಾಟೀಲ್ ಮಾತನಾಡಿ, 2047ಕ್ಕೆ ಭಾರತವು ವಿಕಸಿತ ಭಾರತದ ಕನಸನ್ನು ನನಸಾಗಿಸುವ ಗುರುತರ ಜವಾಬ್ದಾರಿಯನ್ನು ಯುವಕರು ವಹಿಸಬೇಕಾಗಿದೆ. ವಿದ್ಯಾರ್ಥಿಗಳು ಶಿಸ್ತು ಮತ್ತು ಸಂಯಮವನ್ನು ಪಾಲಿಸುವ ಮೂಲಕ ಉನ್ನತ ಸ್ಥಾನವನ್ನು ಪಡೆಯಬೇಕೆಂದು ಹೇಳಿದರು.

ಈ ವಿದ್ಯಾರ್ಥಿಗಳ ಸಾಧನೆಗೆ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಆನಂದ ಡಿ. ಮುಳಗುಂದ, ಕಾರ್ಯಾಧ್ಯಕ್ಷೆ ಶ್ರೀದೇವಿ ಅನಿಲಕುಮಾರ ಚೌಗಲೆ, ಕಾರ್ಯದರ್ಶಿ ಪ್ರೊ. ಅನಿಲಕುಮಾರ ಚೌಗಲೆ, ನಿರ್ದೇಶಕ ಮಂಡಳಿಯ ಸದಸ್ಯರಾದ ಡಾ. ರಮೇಶ ಭಂಡಿವಾಡ ಹಾಗೂ ಪ್ರೊ. ಗಂಗಾಧರ ಕಮಡೊಳ್ಳಿ ಹಾಗೂ ಬೋಧಕ - ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅಭಿನಂದನೆ ಸಲ್ಲಿಸಿದ್ದಾರೆ.



ಭವಿಷ್ಯದಲ್ಲಿ ಮನುಷ್ಯ ಗ್ರಹ ಜೀವಿ



ಧಾರವಾಡ: ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳು ಶೀಘ್ರ ಭಾರತೀಯ ಅಂತರಿಕ್ಷ ನಿಲ್ದಾಣ ಸ್ಥಾಪಿಸುವ ಗುರಿ ಹೊಂದಿದ್ದು, ಗಗನಯಾನಿಗಳು ಇಲ್ಲಿ ವಿವಿಧ ಪ್ರಯೋಗ ಕೈಗೊಳ್ಳಬಹುದು ಎಂದು ಇಸ್ರೋ ವಿಜ್ಞಾನಿ ಡಾ. ಬಿ.ಎಚ್.ಎಂ.ದಾರುಕೇಶ ಹೇಳಿದರು.

ನಗರದ ಎಸ್‌ಡಿಎಂ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಸೃಷ್ಟಿ-2026ರ ಅಂಗವಾಗಿ ನಡೆದ ಸೃಷ್ಟಿ ಟಾಕ್ಸ್ ಕಾರ್ಯಕ್ರಮದಲ್ಲಿ ಮಾತನಾಡಿ, ಮನುಕುಲ ಹೊಸ ಗ್ರಹಗಳತ್ತ ಹೆಜ್ಜೆ ಹಾಕುತ್ತಿದ್ದು, ಗ್ರಹಜೀವಿಯಾಗಿ ಹೊರ ಹೊಮ್ಮಲಿದ್ದಾನೆ ಎಂದರು.

ಬಾಹ್ಯಾಕಾಶದ ವಿಶಿಷ್ಟ ಸ್ಥಿತಿಯಾದ ಮೈಕ್ರೋ ಗ್ರಾವಿಟಿ ಬಗ್ಗೆ ವಿವರಿಸಿದ ಅವರು, ಪರಿಸರ ವ್ಯವಸ್ಥೆಯ ಗುರಿಗಳನ್ನು ಸಾಧಿಸಲು ಮೈಕ್ರೋ ಗ್ರಾವಿಟಿಯ ಪ್ರಯೋಗ ಮತ್ತು ಸಂಶೋಧನಾ ವೇದಿಕೆಗಳು ಬಹಳಷ್ಟು ಪ್ರಮುಖವಾಗಿವೆ. ಭೂಮಿಯ ಪರಿಸರ ವ್ಯವಸ್ಥೆಯಲ್ಲಿ ಸೃಷ್ಟಿಸಲು ಅಸಾಧ್ಯವಾದ ಸವಾಲುಗಳಿಗೆ ಮೈಕ್ರೋ ಗ್ರಾವಿಟಿ ಹೇಗೆ ಪರಿಹಾರ ನೀಡುತ್ತದೆ. ವಿದ್ಯಾರ್ಥಿಗಳು ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸುವಂತೆ ಹೇಳಿದರು.

ನಂತರ ವಿಜ್ಞಾನಿ ಡಾ.ದಾರುಕೇಶ ಸಾರ್ವಜನಿಕರೊಂದಿಗೆ ಸಂವಾದ ನಡೆಸುವ ಮೂಲಕ ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದರು. ಎಬಿವಿಪಿ ರಾಜ್ಯ ಪ್ರಮುಖ ಡಾ. ವಿ.ಜಿ.ಬಾಳಿಕಾಯಿ, ಬಸವೇಶ್ವರ ಕೋರೆ, ವಿಶ್ವನಾಥ ಭಟ್, ಡಾ.ರಾಮಚಂದ್ರ ಇದ್ದರು.

ಮಹನೀಯರ ಪುತ್ಥಳಿ ಪ್ರತಿಷ್ಠಾಪನೆಗೆ ಆಗ್ರಹ

ಹುಬ್ಬಳ್ಳಿ: ನಗರದ ಚಿಟಗುಪ್ಪಿ ಆಸ್ಪತ್ರೆ ಉದ್ಯಾನವನದಲ್ಲಿ ಬಸವೇಶ್ವರ, ಸರ್. ಸಿದ್ದಪ್ಪ ಕಂಬಳಿ ಸೇರಿದಂತೆ ಹಲವು ಮಹನೀಯರ ಪುತ್ಥಳಿ ಪ್ರತಿಷ್ಠಾಪಿಸಬೇಕು ಎಂದು ಆಗ್ರಹಿಸಿ ವಿವಿಧ ಸಂಘಟನೆಗಳು ಪಾಲಿಕೆ ಆಯುಕ್ತರಿಗೆ ಗುರುವಾರ ಮನವಿ ಸಲ್ಲಿಸಿದವು.

ಸರ್ ಸಿದ್ದಪ್ಪ ಕಂಬಳಿ ಅವರ ಪುತ್ಥಳಿ ಸ್ಥಳಾಂತರಿಸಿ, ಪುನರ್ ಸ್ಥಾಪಿಸಿದ ಮೇಲೆ ಬೇರೆ ಪುತ್ಥಳಿ ಪ್ರತಿಷ್ಠಾಪಿಸಬೇಕಿತ್ತು. ಆದರೆ ರಾತ್ರೋ ರಾತ್ರಿ ಬೇರೆ ಪುತ್ಥಳಿ ಪ್ರತಿಷ್ಠಾಪಿಸಿದ್ದು, ಖಂಡನೀಯವಾಗಿದೆ. ಸಂವಿಧಾನ ಪೀಠಿಕೆ, ಬಸವೇಶ್ವರರು, ಕನಕದಾಸ, ಭುವನೇಶ್ವರಿ ದೇವಿ, ಇಮ್ಮಡಿ ಪುಲಿಕೇಶಿ, ಬೆಳವಡಿ ಮಲ್ಲಮ್ಮ, ಪಾಟೀಲ ಪುಟ್ಟಪ್ಪ, ಡಾ. ರಾಜಕುಮಾರ ಅವರ ಪುತ್ಥಳಿ ಸ್ಥಾಪಿಸಬೇಕು ಎಂದು ಆಗ್ರಹಿಸಿದರು. ಕನ್ನಡ ನಾಡಿಗಾಗಿ ಹೋರಾಟ ಮಾಡಿದ ಮಹನೀಯರಿಗೆ ಮೊದಲ ಆದ್ಯತೆ ನೀಡಬೇಕಾಗಿತ್ತು. ಆದರೆ ಪಾಲಿಕೆ ಅವರನ್ನು ಕಡೆಗಣಿಸಿದೆ. ಮುಂದಿನ ದಿನಗಳಲ್ಲಿ ಅವರ ಪುತ್ಥಳಿ ಪ್ರತಿಷ್ಠಾಪಿಸದಿದ್ದರೆ ಪಾಲಿಕೆಗೆ ಮುತ್ತಿಗೆ ಹಾಕಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಸಂಗ್ರಾಮ ಸೇನೆ ರಾಜ್ಯಾಧ್ಯಕ್ಷ ಸಂಜೀವ ದುಮಕನಾಳ, ಕರ್ನಾಟಕ ನವನಿರ್ಮಾಣ ವೇದಿಕೆ ರಾಜ್ಯಾಧ್ಯಕ್ಷ ಈರಪ್ಪ ಎಮ್ಮಿ, ದಲಿತ ಕಾರ್ಮಿಕ ಅಸಂಘಟಿತ ಒಕ್ಕೂಟದ ವಿಜಯ ಕರಾ ಸೇರಿದಂತೆ ಅನೇಕರಿದ್ದರು.



ಪ್ರತ್ಯೇಕ ಪಾಲಿಕೆಗೆ ಅಡ್ಡಗಾಲು: ಆರೋಪ



ಧಾರವಾಡ: ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಶಾಸಕ ಅರವಿಂದ ಬೆಲ್ಲದ್ ಅವರು ಅಡ್ಡಗಾಲು ಹಾಕುವುದು ನಿಲ್ಲಿಸಬೇಕು ಎಂದು ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಅಭಿವೃದ್ಧಿ ವೇದಿಕೆ ಅಧ್ಯಕ್ಷ ವೆಂಕಟೇಶ ಮಾಚಕನೂರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹು-ಧಾ ಪಾಲಿಕೆ ವಿಭಜಿಸಿದರೆ ಕೇಂದ್ರದ 56 ಸಾವಿರ ಕೋಟಿ ಅನುದಾನ ಬರುವುದಿಲ್ಲ ಅಂತ ಸುಳ್ಳು ಸುದ್ದಿ ಹಬ್ಬಿಸುವುದು ಕೈ ಬಿಡಲು ಆಗ್ರಹಿಸಿದರು.

ಪ್ರಧಾನ ಕಾರ್ಯದರ್ಶಿ ರವಿ ಮಾಳಗೇರ ಮಾತನಾಡಿ, ಹು-ಧಾ ಪಾಲಿಕೆಯಿಂದ ಅಭಿವೃದ್ಧಿ ಕುಂಠಿತವಾಗಿದೆ. ಧಾರವಾಡಕ್ಕೂ ನ್ಯಾಯ ಸಿಗುತ್ತಿಲ್ಲ. ಹು-ಧಾ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಧಾರವಾಡಕ್ಕೆ ಪಾಲಿಕೆ ಬೇಡ ಎಂಬ ಠರಾವು ಮಾಡುವ ನಿರ್ಧಾರದ ವಿಷಯ ತಿಳಿದಿದೆ.ಯಾವುದೇ ಕಾರಣಕ್ಕೂ ಠರಾವು ಮಾಡಬಾರದು. ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ಕಡತವು ಬಹಳ ದಿನಗಳಿಂದ ರಾಜ್ಯಪಾಲರ ಕಚೇರಿಯಲ್ಲಿ ಉಳಿದಿದೆ. ಸ್ವತಃ ರಾಜ್ಯಪಾಲರೇ ಪ್ರಹ್ಲಾದ್ ಜೋಶಿ ಅವರ ಹೆಸರು ಹೇಳಿದ್ದಾರೆ. ಹೀಗಾಗಿ ಜೋಶಿ ಮತ್ತು ಬೆಲ್ಲದ ಅವರು ರಾಜ್ಯಪಾಲರ ಅನುಮೋದನೆ ಕೊಡಿಸುವಂತೆ ಒತ್ತಾಯಿಸಿದರು.

ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಅಭಿವೃದ್ಧಿ ವೇದಿಕೆ ಉಪಾಧ್ಯಕ್ಷ ವಿಠ್ಠಲ ಕಮ್ಮಾರ, ಶಂಕರ ನೀರಾವರಿ, ಸಹ ಕಾರ್ಯದರ್ಶಿ ವಸಂತ ಅರ್ಕಾಚಾರ, ವೀರಣ್ಣ ಶೆಟ್ಟರ್, ಸತೀಶ ನಾಯ್ಕರ ಸೇರಿದಂತೆ ಅನೇಕರು ಇದ್ದರು.

ಜನಾಕ್ರೋಶ ಪ್ರತಿಭಟನಾ ಮೆರವಣಿಗೆ ಇಂದು

ಹುಬ್ಬಳ್ಳಿ: ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳು ಮಹಿಳಾ ಮೀಸಲಾತಿ ಕಾಯ್ದೆ ವಿರೋಧಿಸಿರುವುದನ್ನು ಖಂಡಿಸಿ ಬಿಜೆಪಿ ರಾಜ್ಯ ಮಹಿಳಾ ಮೋರ್ಚಾದಿಂದ ನಗರದಲ್ಲಿ ಮೇ 1ರಂದು ಜನಾಕ್ರೋಶ ಪ್ರತಿಭಟನಾ ಮೆರವಣಿಗೆ ಹಾಗೂ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ. ಮಂಜುಳಾ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ಆರಂಭವಾಗಿ ನಗರದ ನೆಹರು ಮೈದಾನದ ವರೆಗೆ ನಡೆಯಲಿದೆ. ಬಳಿಕ ಪ್ರತಿಭಟನಾ ಸಭೆ ನಡೆಯಲಿದೆ ಎಂದರು. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮಾಜಿ ಸಿಎಂ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಶಾಸಕರಾದ ಮಹೇಶ ಟೆಂಗಿನಕಾಯಿ, ಸಿ.ಸಿ. ಪಾಟೀಲ, ಅರವಿಂದ ಬೆಲ್ಲದ, ಶಶಿಕಲಾ ಜೊಲ್ಲೆ, ರೂಪಾಲಿ ನಾಯ್ಕ, ಮಾಳವಿಕಾ ಇನ್ನಿತರ ನಾಯಕರು ಭಾಗಿಯಾಗಲಿದ್ದಾರೆ.

ಮಹಿಳೆಯರಿಗೆ ಸಮಾನ ಅವಕಾಶ ಕೊಡುವ ಕಾಯ್ದೆ ವಿರೋಧಪಕ್ಷಗಳು ಜಾರಿಯಾಗದಂತೆ ತಡೆದಿದ್ದರೆ. ನಾರೀಶಕ್ತಿ ವಂದನ ಜಾರಿಗೊಳಿಸಲು ಅಡ್ಡಗಾಲು ಹಾಕಿದ ಕಾಂಗ್ರೆಸ್ ವಿರುದ್ಧ ರಾಜ್ಯದ ಮಹಿಳೆಯರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಸಹಿ ಸಂಗ್ರಹ 5 ಲಕ್ಷ ದಾಟಿದೆ. ಚುನಾವಣೆಗೂ ಮಹಿಳಾ ಬಿಲ್‌ಗೂ ಯಾವುದೇ ಸಂಬಂಧ ಇಲ್ಲ ಎಂದರು.

ಮಾಜಿ ಶಾಸಕಿ ಸೀಮಾ ಮಸೂತಿ, ಜಿಲ್ಲಾಧ್ಯಕ್ಷೆ ಸೀಮಾ ಲದವಾ, ಅಕ್ಕಮ್ಮ ಹೆಗಡೆ, ಶೋಭಾ ನಿಸ್ಸೀಮಗೌಡರ, ಪೂಜಾ ರಾಯ್ಕರ ಇದ್ದರು.



ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶುಕ್ರವಾರ, 1 ಮೇ 2026
ಸಂಪುಟ 16, ಸಂಚಿಕೆ 37, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ಕ್ಷಮೆಯಾಚಿಸಿದ ನೇಪಾಳ ಏರ್‌ಲೈನ್ಸ್ | 02 | ದೇಸಿ ತಂತ್ರಜ್ಞಾನಕ್ಕೆ ಉತ್ತೇಜನ | 02 | 8,000 ಕೋಟಿ ಯೋಜನೆಗಳಿಗೆ ಶೀಘ್ರ ಚಾಲನೆ | 02

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಹುಣ್ಣಿಮೆ, ನಕ್ಷತ್ರ: ಸ್ವಾತಿ

ದಿನದ ಮಾತು

ಅರ್ಹರ ಮುಂದೆ ಕೊಂಕಿಲ್ಲದ ತಪ್ಪೊಪ್ಪಿಗೆ, ಮತ್ತೆ ಮಾಡೆನೆಂಬ ಭರವಸೆ. ಇದೇ ನಿಜವಾದ ಪಶ್ಚಾತ್ತಾಪ.
▲ ಗಾಂಧೀಜಿ

ಬುದ್ಧ ಪೂರ್ಣಿಮೆ; ಕರುಣೆಯ ಸಾಕ್ಷಾತ್ಕಾರ

ಲೇಖನ
◆ ಸಿ. ಪಿ. ರಾಧಾಕೃಷ್ಣನ್

◆ ಪುಟ 6

ಕಿರುಸುದ್ದಿ

ಇರಾನ್ ಕದನದಿಂದ ಪಾಕ್ ಆರ್ಥಿಕತೆಗೆ ಪೆಟ್ಟು: ಷರೀಫ್

◆ **ಇಸ್ಲಾಮಾಬಾದ್:** ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧವು ಕಳೆದ ಎರಡು ವರ್ಷಗಳಲ್ಲಿ ಪಾಕಿಸ್ತಾನ ಸಾಧಿಸಿದ ಆರ್ಥಿಕ ಪ್ರಗತಿಗೆ ಭಾರಿ ಹಿನ್ನಡೆ ಉಂಟುಮಾಡಿದೆ ಎಂದು ಪ್ರಧಾನಿ ಶೆಹಬಾಜ್ ಷರೀಫ್ ಬುಧವಾರ ತಿಳಿಸಿದ್ದಾರೆ. ಸಂಪುಟ ಸಭೆಯಲ್ಲಿ ಮಾತನಾಡಿದ ಷರೀಫ್, ಯುದ್ಧದ ಹಿನ್ನೆಲೆಯಲ್ಲಿ ಪಾಕ್‌ನ ತೈಲ ಆಮದು ವೆಚ್ಚ 300 ಮಿಲಿಯನ್ ಡಾಲರ್‌ನಿಂದ 800 ಮಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದು ದೇಶದ ಆರ್ಥಿಕತೆಯ ಮೇಲೆ ಹೆಚ್ಚಿನ ಒತ್ತಡ ಹೇರಿದೆ. ಪ್ರಸ್ತುತ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಪ್ರತಿದಿನ ಕಾರ್ಯಪಡೆಯೊಂದು ಪರಿಶೀಲನೆ ನಡೆಸುತ್ತಿದೆ ಎಂದು ಅವರು ಖಚಿತಪಡಿಸಿದ್ದಾರೆ.

◆ ಪುಟ 2

ಬಂಗಾಳ: ಬಿಜೆಪಿಗೆ ಐತಿಹಾಸಿಕ ಜಯ?

◆ ಪುಟ 2

ಭಾರತ-ಇಟಲಿ ರಕ್ಷಣಾ ಸಹಯೋಗಕ್ಕೆ ಸಹಿ

◆ ಪುಟ 2

ಅಮೆರಿಕನ್ನರಿಗೆ ಅರ್ಹ ಜಾಗ ಸಮುದ್ರದಾಳ: ಮೊಜ್ತಬಾ

◆ ಪುಟ 2

ಸಶಸ್ತ್ರ ಪಡೆಗೆ ಸಾವಯವ ಪೂರಿತ ಆಹಾರ ಪೂರೈಕೆ

◆ ಪುಟ 3

ಅಲ್ಪಸಂಖ್ಯಾತರ ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.

◆ ಪುಟ 3



ಗಂಗಾ ಎಕ್ಸ್‌ಪ್ರೆಸ್‌ವೇ: ಉ.ಪ್ರದೇಶದ ಸೇತು

◆ ಪುಟ 2

ಸುದ್ದಿ ಸಮಗ್ರ

ಆರೋಗ್ಯ ಇಲಾಖೆ ಇಇ ಅಮಾನತು, ಬೌರಿಂಗ್ ಮುಖ್ಯಸ್ಥರಿಗೆ ನೋಟಿಸ್ | ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ ಪ್ರಧಾನಿ

ಕಠಿಣ ಕ್ರಮಕ್ಕೆ ಆದೇಶ

◆ **ಬೆಂಗಳೂರು:** ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ಏಳು ಜನರ ಸಾವಿಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗದ ಇಇ ಅಮಾನತಿಗೆ ಹಾಗೂ ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಈ ನಡುವೆ ಮೃತರ ಕುಟುಂಬಕ್ಕೆ ಪ್ರಧಾನಿ ಸಂತಾಪ ಸೂಚಿಸಿದ್ದು, ತಲಾ ಎರಡು ಲಕ್ಷ ಪರಿಹಾರ ಘೋಷಣೆ ಮಾಡಿದ್ದಾರೆ.



ಬೌರಿಂಗ್ ದುರಂತ

ಭಾರೀ ಮಳೆಯಿಂದ ಬೌರಿಂಗ್ ಆಸ್ಪತ್ರೆ ದುರಂತದ ಹಿನ್ನೆಲೆಯಲ್ಲಿ ಗುರುವಾರ ವಿಧಾನ ಸೌಧದಲ್ಲಿ ಸಿಎಂ ಅಧ್ಯಕ್ಷತೆಯಲ್ಲಿ ಜಿಬಿಎ ಆಯುಕ್ತರುಗಳ ಸಭೆ ನಡೆಯಿತು. ಗೋಡೆಗೆ ಹಾನಿ ಆಗಲಿದೆ ಎಂದು ತಿಳಿದಿದ್ದರೂ ಕಾಮಗಾರಿ ನಡೆಯುವಾಗ ಮಣ್ಣು ಸುರಿದದ್ದು ಏಕೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಗೋಡೆಗೆ ಹಾನಿಯಾಗುವಂತೆ ಮಣ್ಣು ಸುರಿದದ್ದು ನೀವು ಏಕೆ ನೋಡಿಕೊಳ್ಳಲಿಲ್ಲ ಎಂದು ಆಸ್ಪತ್ರೆ ಮುಖ್ಯಸ್ಥರನ್ನು ಹಾಗೂ ಸಂಬಂಧಿಸಿದ ಇಂಜನೀಯರ್ ಅವರನ್ನು ಸಿಎಂ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ನೋಟಿಸ್ ನೀಡಲು ಸೂಚಿಸಿದ ಮುಖ್ಯಮಂತ್ರಿಗಳು, ಬೆಂಗಳೂರಿನಲ್ಲಿ ಗುಂಡಿಗಳನ್ನು ಮುಚ್ಚಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದರು. ಬುಧವಾರ ಬೆಂಗಳೂರಿನಲ್ಲಿ ಉಂಟಾದ ಮಳೆಯಲ್ಲಿ ಸಾಕಷ್ಟು ಹಾನಿಯಾಗಿದ್ದು, 250ಕ್ಕೂ ಹೆಚ್ಚು ಮರಗಳು ಬಿದ್ದಿವೆ. ಏಳು ಜನ ಸಾವನ್ನಪ್ಪಿದ್ದಾರೆ. ಈಗಾಗಲೇ ಸತ್ತವರ ಕುಟುಂಬದವರಿಗೆ 5 ಲಕ್ಷ ಪರಿಹಾರ ಘೋಷಣೆ ಮಾಡಲಾಗಿದೆ.

➡ ಪುಟ 4



ಸಿಎಂ ಸೂಚನೆಗಳು

- ರಾಜಕಾಲುವೆಗಳಲ್ಲಿ ಹೂಳು ತೆಗೆಯುವುದು
- ಪ್ರವಾಹ ಉಂಟಾಗದಂತೆ ಕ್ರಮ ತೆಗೆದುಕೊಳ್ಳುವುದು
- ಮಳೆಯಿಂದ ರಸ್ತೆಯಲ್ಲಿ ಬಿದ್ದಿರುವ ಕಸ, ರೆಂಬೆಗಳನ್ನು ತೆರವು ಮಾಡುವುದು
- ಅಂಡರ್‌ಪಾಸ್‌ಗಳಲ್ಲಿ ಮಳೆ ನೀರು ನಿಲ್ಲದಂತೆ ನೋಡಿಕೊಳ್ಳುವುದು
- ಜನ ಅಂಡರ್‌ಪಾಸ್ ಬಳಸದಂತೆ ಬ್ಯಾರಿಕೇಡ್ ಹಾಕುವುದು

ರಾಜ್ಯಾದ್ಯಂತ ಶಿಥಿಲ ಆಸ್ಪತ್ರೆ ಕಟ್ಟಡ ಪರಿಶೀಲನೆ

◆ **ಬೆಂಗಳೂರು:** ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಎಲ್ಲ ಆಸ್ಪತ್ರೆಯ ಕಟ್ಟಡಗಳನ್ನು ಹಾಗೂ ಕಾಂಪೌಂಡ್ ಪರಿಶೀಲಿಸಿ ಅಧ್ಯಯನ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದ್ದಾರೆ. ಮಳೆಯಿಂದ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು 7 ಮಂದಿ ಮೃತಪಟ್ಟ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಬಳಿಕ ಮಾತನಾಡಿದ ಅವರು, ಬೌರಿಂಗ್ ಆಸ್ಪತ್ರೆ ದುರಂತದ ಕುರಿತು ಪಿಡಬ್ಲುಡಿ ಇಲಾಖೆ ಮುಖ್ಯ ಇಂಜನೀಯರ್ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ. ವರದಿ ಬಂದ ನಂತರ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು ಎಂದು ಪಾಟೀಲ್ ತಿಳಿಸಿದರು.

➡ ಪುಟ 4

ತನಿಖೆಗೆ ಆದೇಶಿಸಿದ ಸರ್ಕಾರ

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿತ ಪ್ರಕರಣದ ತನಿಖೆಗೆ ಸರ್ಕಾರ ಆದೇಶಿಸಿದೆ. ಬೆಂಗಳೂರು ನಗರ ಜಿಲ್ಲಾಧಿಕಾರಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದ್ದು, ಸರ್ಕಾರಕ್ಕೆ 7 ದಿನದೊಳಗಾಗಿ ತನಿಖೆ ನಡೆಸಿ ವರದಿ ನೀಡಲು ಸೂಚಿಸಿದೆ. ಈ ಸಮಿತಿಯಲ್ಲಿ ತಹಶೀಲ್ದಾರ್ ಹಾಗೂ ಪಿಡಬ್ಲ್ಯುಡಿ ಇಲಾಖೆಯ ನಿವೃತ್ತ ಮುಖ್ಯ ಇಂಜನಿಯರ್ ಸೇರಿದಂತೆ ಆರು ತಜ್ಞರ ನೇಮಕ ಮಾಡಲಾಗಿದೆ.

ಪ್ರಧಾನಿ ಮೋದಿ ಸಂತಾಪ

◆ **ಹೊಸದಿಲ್ಲಿ/ಬೆಂಗಳೂರು:** ಬೆಂಗಳೂರಿನಲ್ಲಿ ಬುಧವಾರ ಸಂಜೆ ಸುರಿದ ಭಾರೀ ಮಳೆಗೆ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ದುರಂತ ಸಂಭವಿಸಿದ್ದು, ಘಟನೆಗೆ ಪ್ರಧಾನಿ ನರೇಂದ್ರ ಮೋದಿಯವರು ತೀವ್ರ ಸಂತಾಪ ಸೂಚಿಸಿದ್ದಾರೆ.


➡ ಪುಟ 4

ಕುಟುಂಬಗಳಿಗೆ ಮೃತದೇಹ ಹಸ್ತಾಂತರ

◆ ಪುಟ 3

ಕೇಂದ್ರ ರೈಲ್ವೆ ಸಚಿವ ವೈಷ್ಣವ್ ಹಸಿರು ನಿಶಾನೆ

ಜಮ್ಮು-ಕಾಶ್ಮೀರಕ್ಕೆ ವಂದೇಭಾರತ್ ಸೇತು



◆ **ಶ್ರೀನಗರ:** ಜಮ್ಮುವನ್ನು ಕಾಶ್ಮೀರದೊಂದಿಗೆ ಸಂಪರ್ಕಿಸುವ ಪ್ರಥಮ ನೇರ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ಹಸಿರು ನಿಶಾನೆ ತೋರಿದರು. ಕಣಿವೆ ರಾಜ್ಯದ ದುರ್ಗಮ ಪ್ರದೇಶಗಳಾದ ಪೂಂಛ್, ರಾಜೌರಿ, ಉರಿ ವಲಯಗಳನ್ನು ದೇಶದ ರೈಲ್ವೆ ಜಾಲದೊಂದಿಗೆ ಜೋಡಿಸಲು ಆದ್ಯತೆ ನೀಡುವುದಾಗಿ ಸಚಿವರು ಇದೇ ಸಂದರ್ಭ ಆಶ್ವಾಸನೆ ನೀಡಿದರು.

ಮಹತ್ವಾಕಾಂಕ್ಷಿ ಉಧಮ್‌ಪುರ-ಶ್ರೀನಗರ-ಬಾರಾಮುಲ್ಲಾ ರೈಲ್ವೆ ಲಿಂಕ್ ಯೋಜನೆ ಪೂರ್ತಿಯಾದ ಬಗ್ಗೆ ಮಾಹಿತಿ ನೀಡಿ, ಪೂಂಛ್ ಮತ್ತು ರಾಜೌರಿ ವಲಯವನ್ನು ರಾಷ್ಟ್ರೀಯ ರೈಲ್ವೆ ಜಾಲದೊಂದಿಗೆ ಜೋಡಿಸುವ ಮತ್ತು ಉರಿ ವಲಯಕ್ಕೂ ರೈಲ್ವೆ ಲೈನ್ ವಿಸ್ತರಿಸುವ ಯೋಜನೆಗಳ ಬಗ್ಗೆ ವಿವರವಾದ ಯೋಜನಾ ವರದಿಗಳನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದರು.

ಪೂಂಛ್ ಮತ್ತು ರಾಜೌರಿಯನ್ನು ರೈಲ್ವೆ ಜಾಲದೊಂದಿಗೆ ಜೋಡಿಸಲು ಆದ್ಯತೆ ನೀಡಲಿದ್ದೇವೆ. ಉರಿಗೂ ರೈಲು ಸೌಲಭ್ಯ ಕಲ್ಪಿಸುವ ಯೋಜನೆ ಕೈಗೆತ್ತಿಕೊಳ್ಳುತ್ತೇವೆ. ಈ ಯೋಜನೆಗಳಿಗೆ ಸಂಬಂಧಿತ ಡಿಪಿಆರ್‌ಗಳು ಸಿದ್ಧವಾಗಿದ್ದು, ಆದಷ್ಟು ಶೀಘ್ರ ಕಾಮಗಾರಿ ಶುರು ಮಾಡಲು ಪ್ರಯತ್ನಿಸುತ್ತೇವೆ ಎಂದವರು ವಂದೇ ಭಾರತ್ ರೈಲು ಉದ್ಘಾಟನೆ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.




ರೈಲ್ವೆ ಸೇವೆ ಮಹತ್ವದ ಮೈಲಿಗಲ್ಲು

ಜಮ್ಮು-ಶ್ರೀನಗರ ವಂದೇ ಭಾರತ್ ಎಕ್ಸ್‌ಪ್ರೆಸ್ ಒಂದು ಮಹತ್ವದ ಮೈಲಿಗಲ್ಲಿನ ಸಾಧನೆಯಾಗಿದೆ ಮತ್ತು ಜಮ್ಮು ಕಾಶ್ಮೀರದ ಜೀವನಾಡಿಯಾಗಿದೆ. ಜಮ್ಮು ಕಾಶ್ಮೀರದ ಜನರ ಪಾಲಿಗೆ ರೈಲ್ವೆ ಸೇವೆ ನಿಜಕ್ಕೂ ಮಹತ್ವದ ಮೈಲಿಗಲ್ಲು ಎಂದು ಸಚಿವ ಅಶ್ವಿನಿ ವೈಷ್ಣವ್ ಬಣ್ಣಿಸಿದರು.

➡ ಪುಟ 4

ರಾಜಕೀಯ ಜೀವನದ 50 ವರ್ಷಗಳ ಪಯಣ

ಬಿಎಸ್‌ವೈ ಅಭಿಮಾನೋತ್ಸವ ಹಲವೆಡೆ ಪೂರ್ವಭಾವಿ ಸಭೆ



◆ **ತುಮಕೂರು/ಹಾವೇರಿ:** ಅಪ್ರತಿಮ ಹೋರಾಟಗಾರ, ರೈತ ನಾಯಕ, ಬಡವರ ಕಣ್ಮಣಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಜೀವನದ 50 ವರ್ಷಗಳ ಪಯಣ ಪೂರೈಸಿದ ಶುಭ ಘಳಿಗೆಯಲ್ಲಿ ಬಿ.ಎಸ್.ವೈ. ಅವರ ಅಭಿಮಾನೋತ್ಸವವನ್ನು ನಡೆಸಲಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ತುಮಕೂರಿನ ಸ್ನೇಹಸಂಗಮ ಬ್ಯಾಂಕ್ ಸಭಾಂಗಣದಲ್ಲಿ ಗುರುವಾರ ನಡೆದ ಅಭಿಮಾನೋತ್ಸವದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಯಡಿಯೂರಪ್ಪ ಅವರು ಕರ್ನಾಟಕದಲ್ಲಿ ಹೋರಾಟಕ್ಕೆ ಮತ್ತೊಂದು ಹೆಸರು ಎಂದು ಅವರು ವಿಶ್ಲೇಷಿಸಿದರು. ಪರಿಶ್ರಮ, ಛಲಕ್ಕೆ ಅವರು ಹೆಸರು ಪಡೆದವರು. ಬಡವರು, ಶೋಷಿತ- ಪೀಡಿತರು, ರೈತರ ಪರವಾಗಿ ಅವರ ಧ್ವನಿಯಾಗಿ 5 ದಶಕಗಳಿಂದ ನಿರಂತರವಾಗಿ ಕೆಲಸ ಮಾಡಿದ್ದಾರೆ ಎಂದು ನುಡಿದರು.

➡ ಪುಟ 4

ಹುಕ್ಕೇರಿ ಶ್ರೀಗಳಿಗೆ ಸಂಸದ ರಾಘವೇಂದ್ರ ಆಹ್ವಾನ

◆ **ಹಾವೇರಿ:** ಜಿಲ್ಲೆಯ ಸುಪ್ರಸಿದ್ಧ ಧಾರ್ಮಿಕ ಮತ್ತು ದಾಸೋಹ ಕೇಂದ್ರವಾದ ಹುಕ್ಕೇರಿ ಮಠಕ್ಕೆ ಗುರುವಾರ ಸಂಸದ ರಾಘವೇಂದ್ರ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಭೇಟಿ ನೀಡಿ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಸದಾಶಿವ ಶ್ರೀಗಳಿಗೆ ಆಹ್ವಾನ ನೀಡಿದರು.

ನಾಯಕತ್ವ ಬದಲಾವಣೆ ಗೊಂದಲಕ್ಕೆ ಶೀಘ್ರ ತೆರೆ

◆ **ಕಲಬುರಗಿ:** ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕುರಿತು ಉಂಟಾಗಿರುವ ಗೊಂದಲವನ್ನು ಶೀಘ್ರದಲ್ಲೇ ಪರಿಹರಿಸಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು. ಮುಖ್ಯಮಂತ್ರಿ ಬದಲಾವಣೆ ವಿಚಾರ ಪ್ರಸ್ತುತ ಎದುರಾಗಿಲ್ಲ. ಈಗಾಗಲೇ ರಾಜ್ಯದಲ್ಲಿ ಸಿಎಂ ಇದ್ದಾರೆ. ಭವಿಷ್ಯದಲ್ಲಿ ಈ ವಿಷಯ ಎದುರಾದರೆ ಪಕ್ಷದೊಳಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು. ಪಕ್ಷದ ನಿರ್ಣಯಗಳಲ್ಲಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ಸಲಹೆ ಮಹತ್ವದ್ದಾಗಿದೆ ಎಂದು ಹೇಳಿದರು.



ಸಿಎಂ ಬದಲಾವಣೆ ವಿಚಾರ ಪ್ರಸ್ತುತ ಚರ್ಚೆ ಇಲ್ಲ

ಅಸ್ಸಾಂನಲ್ಲಿ ಕೈಗೆ ಹಿನ್ನಡೆ: ಪಂಚರಾಜ್ಯ ಚುನಾವಣೆಗಳ ಎಕ್ಸಿಟ್ ಪೋಲ್ ಬಗ್ಗೆ ಮಾತನಾಡಿದ ಖರ್ಗೆ, ಡಿಎಂಕೆ, ಕೇರಳದಲ್ಲಿ ಯುಡಿಎಫ್ ಅಧಿಕಾರಕ್ಕೆ ಬರಬಹುದು.

➡ ಪುಟ 4

ಎಲ್ಲಾ ಭಾರತೀಯರದ್ದೂ ಮಹಾದೇವನ ಡಿಎನ್‌ಎ

- ಜಾಮಿಯಾ ಉಪಕುಲಪತಿ ಹೇಳಿಕೆಗೆ ಬಿಜೆಪಿ ಬೆಂಬಲ
- ವಿಭಜನಕಾರಿ ಮಾತಲ್ಲ, ದೇಶ ಒಗ್ಗೂಡಿಸುವ ಹೇಳಿಕೆ: ಮಾಳವೀಯ

◆ **ಹೊಸದಿಲ್ಲಿ:** ಎಲ್ಲಾ ಭಾರತೀಯರ ಡಿಎನ್‌ಎಗೂ ಭಗವಾನ್ ಮಹಾದೇವನೊಂದಿಗೆ ಸಂಬಂಧವಿದೆ ಎಂಬ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಉಪ ಕುಲಪತಿ ಮಝ್ಹಾರ್ ಆಸಿಫ್ ಹೇಳಿಕೆಯನ್ನು ಬಿಜೆಪಿ ಬೆಂಬಲಿಸಿದೆ. ಭಾರತೀಯ ಜನತಾ ಪಕ್ಷ, ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಕುಲಪತಿ ಮಝ್ಹಾರ್ ಆಸೀಫ್ ಅವರ ಮಹಾದೇವನ ಡಿಎನ್‌ಎ ಕುರಿತಾದ ಹೇಳಿಕೆಯನ್ನು ಬೆಂಬಲಿಸಿದ್ದು, ಇದು ನಾಗರಿಕತೆಯ ರೂಪಕವೇ ಹೊರತು ವಿಭಜನೆಯ ಮಾತಲ್ಲ, ಬದಲಾಗಿ ಇದು ದೇಶ ಒಗ್ಗೂಡಿಸುವ ಹೇಳಿಕೆ ಎಂದು ಗುರುವಾರ ಹೇಳಿದೆ.



➡ ಪುಟ 4

ಕೇಂದ್ರ ಪರಿಸರ ಇಲಾಖೆಗೆ ದಂಡಸಹಿತ ಹಣ ಸೇರಿದ ತಕ್ಷಣ ಕೆಲಸ ಶುರು: ಡಿಕೆಶಿ

ವಾರದೊಳಗೆ ಎತ್ತಿನಹೊಳೆ ಬಾಕಿ ಕಾಮಗಾರಿ

◆ **ಬೆಂಗಳೂರು:** ಕೇಂದ್ರ ಪರಿಸರ ಇಲಾಖೆಯವರು ದಂಡ ಹಾಗೂ ಮಿಟಿಗೇಷನ್ ಪ್ಲಾನ್ ಸೇರಿ 257 ಕೋಟಿ ರೂ. ಹಣ ಸಂದಾಯ ಮಾಡಬೇಕು ಎಂದು ಸೂಚಿಸಿದ್ದಾರೆ. ತಕ್ಷಣವೇ ಈ ಹಣ ಪಾವತಿ ಮಾಡಿ ಎಂದು ನಿರ್ದೇಶಿಸಿದ್ದೇನೆ. ಈ ವಾರದೊಳಗೆ ಎತ್ತಿನಹೊಳೆ ಕೆಲಸ ಪ್ರಾರಂಭ ಮಾಡಿ ಎಂದು ಗುತ್ತಿಗೆದಾರರಿಗೆ ಸೂಚಿಸಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಎತ್ತಿನಹೊಳೆ, ಮೇಕೆದಾಟು, ಭದ್ರಾ ಮೇಲ್ದಂಡೆ ವಿಚಾರವಾಗಿ ವಿಧಾನಸೌಧದಲ್ಲಿ ಗುರುವಾರ ನಡೆದ ಸಭೆಯ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಎತ್ತಿನಹೊಳೆ ಯೋಜನೆಗೆ ಕೇಂದ್ರ ಪರಿಸರ ಇಲಾಖೆಯವರು ಒಂದಷ್ಟು ಷರತ್ತುಗಳನ್ನು ವಿಧಿಸಿ ಕಡತವನ್ನು ವಾಪಸ್ ಕಳುಹಿಸಿದ್ದರು. ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಬದಲಿ ಭೂಮಿಯನ್ನು ಹಸ್ತಾಂತರ ಮಾಡಲಾಗುತ್ತಿದೆ. ಶೇ.10ರಷ್ಟು ಭೂಮಿ ವರ್ಗಾವಣೆ ಬಾಕಿಯಿತ್ತು.

➡ ಪುಟ 4



5,300 ಎಕರೆ ಅರಣ್ಯ ಇಲಾಖೆಗೆ

ಮೇಕೆದಾಟು ವಿಚಾರವಾಗಿ ಡಿಪಿಆರ್ ಸಿದ್ಧವಾಗಿದ್ದು ಅದನ್ನು ಸಹ ಸಮಿತಿ ಮುಂದೆ ಸಲ್ಲಿಸಲಾಗುವುದು. ಮತ್ತೊಮ್ಮೆ ವೆಚ್ಚ ಪರಿಷ್ಕರಣೆ ಮಾಡಿದ್ದೇವೆ. ಸುಮಾರು 5,300 ಎಕರೆ ಜಮೀನನ್ನು ನಾವು ಅರಣ್ಯ ಇಲಾಖೆಗೆ ನೀಡಬೇಕಿದೆ. ಈ ಬಗ್ಗೆಯೂ ಕಂದಾಯ ಇಲಾಖೆ ಜತೆ ಮಾತನಾಡಲಾಗುವುದು ಎಂದರು.

ಗಂಗಾವತಿ ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಹತ್ಯೆ ಪ್ರಕರಣ

ಆರು ಅಪರಾಧಿಗಳಿಗೆ ಮರಣದಂಡನೆ

◆ **ಕೊಪ್ಪಳ:** ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿಯ ಒಂದನೇ ಹೆಚ್ಚುವರಿ ಸತ್ರ ನ್ಯಾಯಾಲಯವು ಮಹತ್ವದ ತೀರ್ಪು ನೀಡಿದ್ದು, ಹತ್ಯೆ ಪ್ರಕರಣದಲ್ಲಿ ದೋಷಿಗಳೆಂದು ಸಾಬೀತಾದ ಆರು ಮಂದಿಗೆ ನ್ಯಾಯಾಲಯವು ಗಲ್ಲು ಶಿಕ್ಷೆ ವಿಧಿಸಿ ಗುರುವಾರ ಆದೇಶ ಹೊರಡಿಸಿದೆ.

ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ಗಂಗಾವತಿ ಒಂದನೇ ಹೆಚ್ಚುವರಿ ಸತ್ರ ನ್ಯಾಯಾಲಯ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯಕ ಅವರು ಆರು ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ. ಇದರ ಜೊತೆಗೆ ಆರು ಜನರಿಗೆ ತಲಾ ಮೂರು ಲಕ್ಷ ದಂಡ ವಿಧಿಸಿದ್ದಾರೆ. ರವಿ, ವಿಜಯ್ ಅಲಿಯಾಸ್ ಮೈಲಾರಿ, ಧನರಾಜ್, ಭೀಮ್ ಅಲಿಯಾಸ್ ಭರತ್, ಸಲೀಮ್ ಮಹಮ್ಮದ್ ರಫೀಕ್, ಗಂಗಾಧರ ಗೌಳಿ ಗಲ್ಲು ಶಿಕ್ಷೆಗೆ ಗುರಿಯಾದವರು.

ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಟಿವಿಯ ದೃಶ್ಯಾವಳಿ ಪರಿಶೀಲಿಸಿದ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ್, ಅಪರಾಧಿಗಳು ಈ ಹಿಂದೆ ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಹಿನ್ನೆಲೆಯ ಬಗ್ಗೆಯೂ ಪರಿಶೀಲನೆ ನಡೆಸಿದರು.



ಏನಿದು ಪ್ರಕರಣ?

ಗಂಗಾವತಿ ನಗರದ ರಾಣಾ ಪ್ರತಾಪ್ ಸಿಂಗ್ ವೃತ್ತದಲ್ಲಿರುವ ಖಾಸಗಿ ಆಸ್ಪತ್ರೆ ಬಳಿ 2025ರ ಅಕ್ಟೋಬರ್ 8ರ ಮಧ್ಯರಾತ್ರಿ ಬಿಜೆಪಿ ಯುವ ಮೋರ್ಚಾದ ನಗರ ಘಟಕದ ಅಧ್ಯಕ್ಷ ವೆಂಕಟೇಶ ಕುರುಬರ (32) ಅವರನ್ನು ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು. ಅ.8ರ ತಡರಾತ್ರಿ ಊಟ ಮುಗಿಸಿಕೊಂಡು ಸ್ನೇಹಿತರೊಂದಿಗೆ ದ್ವಿಚಕ್ರ ವಾಹನದಲ್ಲಿ ವೆಂಕಟೇಶ ತೆರಳುತ್ತಿದ್ದ ವೇಳೆ ಕಾರಿನಲ್ಲಿ ಹಿಂಬಾಲಿಸಿದ ಯುವಕರ ಗುಂಪು, ದ್ವಿಚಕ್ರ ವಾಹನಕ್ಕೆ ಗುದ್ದಿ ಬೀಳಿಸಿದ್ದರು. ಬಳಿಕ ಕೆಳಕ್ಕೆ ಬಿದ್ದ ವೆಂಕಟೇಶನ ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿ ಕೊಚ್ಚಿ ಕೊಲೆ ಮಾಡಿದ್ದರು.

ತೀರ್ಪಿನಲ್ಲಿ ಏನಿದೆ?

ಗಂಗಾವತಿಯ ರೈಲ್ವೆ ನಿಲ್ದಾಣದ ಬಳಿ ನಡೆದಿದ್ದ ಮಾರುತಿ ಎಂಬ ಯುವಕನ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ ಪ್ರಕರಣದಲ್ಲಿ ವೆಂಕಟೇಶ ಪ್ರತ್ಯಕ್ಷ ಸಾಕ್ಷಿಯಾಗಿದ್ದರು. ಅಲ್ಲದೆ, ಮಾರುತಿ ಚಿಕಿತ್ಸೆಗೆ ಕೊನೆಯವರೆಗೂ ಬೆಂಬಲವಾಗಿ ನಿಂತಿದ್ದ ಎಂಬ ಕಾರಣಕ್ಕೆ ವೆಂಕಟೇಶನನ್ನು ಕೊಲೆ ಮಾಡಿದ್ದೀರಿ. ಸಭ್ಯ ನಾಗರಿಕ ಸಮಾಜ ಇಂತಹ ಕೃತ್ಯಗಳನ್ನು ಒಪ್ಪುವುದಿಲ್ಲ. ಅಪರಾಧ ಕೃತ್ಯಗಳ ಹಿನ್ನೆಲೆ ಪರಿಗಣಿಸಿ ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ.

ಮೇ ಅಂತ್ಯಕ್ಕೆ 191 ತಾಲ್ಲೂಕಲ್ಲಿ ಪುರಾತತ್ವ ಇಲಾಖೆ ಕಾರ್ಯ ಪೂರ್ಣ

ರಾಜ್ಯದಲ್ಲಿ ಪುರಾತನ ವಸ್ತುಗಳ ಸರ್ವೇ

▸ ವೀರಣ್ಣ ಬಳಿಗಾರ

◆ **ಬೆಂಗಳೂರು:** ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ರಾಜ್ಯದಲ್ಲಿ ಪುರಾತನ ವಸ್ತು ಮತ್ತು ಕಟ್ಟಡಗಳ ಸರ್ವೇ ಕಾರ್ಯ ಕೈಗೊಂಡಿದ್ದು, ಈ ಸಮೀಕ್ಷೆ ರಾಜ್ಯದ 191 ತಾಲ್ಲೂಕುಗಳನ್ನು ಒಳಗೊಂಡಿದೆ. ಈಗಾಗಲೇ 50 ಸಾವಿರಕ್ಕೂ ಹೆಚ್ಚು ಪುರಾತತ್ವ ವಸ್ತುಗಳನ್ನು ದಾಖಲಿಸಲಾಗಿದೆ.

ಪುರಾತನ ವಸ್ತುಗಳ ರಕ್ಷಣೆಯು ನಮ್ಮ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸುವ ಅಗತ್ಯ ಪ್ರಕ್ರಿಯೆಯಾಗಿದೆ. ಈ ನಿಟ್ಟಿನಲ್ಲಿ ಪುರಾತತ್ವ ಇಲಾಖೆಯು ಸ್ಮಾರಕಗಳು, ಶಿಲಾಶಾಸನಗಳು ಮತ್ತು ಕಲಾಕೃತಿಗಳನ್ನು ಸಂರಕ್ಷಿಸುವುದರ ಜತೆ ಸ್ಥಳ, ವಸ್ತುವಿನ ಮಹತ್ವವನ್ನು ನಾಗರಿಕರಿಗೆ ತಿಳಿಸಲು ಸರ್ವೇ ಕೈಗೊಂಡಿದೆ. ಶಾಸನಗಳು, ಪುರಾತತ್ವ ವಸ್ತುಗಳು, ಸ್ಮಾರಕಗಳು, ಪೂಜಾ ಸ್ಥಳಗಳು, ಕೋಟೆಗಳು, ಇತಿಹಾಸಿಕ ಮಹತ್ವ ಹೊಂದಿರುವ ಇತರ ಕಟ್ಟಡಗಳ ಸರ್ವೇ ನಡೆಯಲಿದ್ದು, ಮೇನಲ್ಲಿ ಸರ್ವೇ ಪೂರ್ಣಗೊಳ್ಳುವ ನಿರೀಕ್ಷೆಯಿದೆ. 21 ಮಾನದಂಡ ಆಧರಿಸಿ ಸರ್ವೇ ಮಾಡಲಾಗುತ್ತಿದೆ. ಭೌಗೋಳಿಕ ಹಿನ್ನೆಲೆ, ಪ್ರಸ್ತುತ ಸ್ಥಿತಿ, ಇತಿಹಾಸಿಕ ಮಹತ್ವ ಸೇರಿದಂತೆ ಮುಂತಾದ ಅಂಶಗಳು ಇರಲಿವೆ. ಸಮೀಕ್ಷಕರು ಸರ್ವೇ ಸಂದರ್ಭದಲ್ಲಿ ಪುರಾತನ ಸ್ಥಳದ ಸಂರಕ್ಷಣೆ ಅಗತ್ಯಗಳನ್ನು ದಾಖಲಿಸುವುದರ ಜತೆಗೆ ಪ್ರತಿ ಸ್ಥಳದ ಫೋಟೋಗಳನ್ನು ಕೂಡ ತೆಗೆದುಕೊಳ್ಳುತ್ತಾರೆ.

➡ ಪುಟ 4



ಪ್ರಮುಖಾಂಶಗಳು

- ರಾಜ್ಯದ 191 ತಾಲ್ಲೂಕುಗಳಲ್ಲಿ ಸರ್ವೇ
- 21 ಮಾನದಂಡಗಳ ಆಧಾರದ ಮೇಲೆ ಸ್ಥಳ ಪರಿಶೀಲನೆ
- ಸಂರಕ್ಷಣೆ ಅಗತ್ಯತೆಗಳ ಬಗ್ಗೆ ಫೋಟೋ ದಾಖಲೆ
- 1 ಲಕ್ಷಕ್ಕೂ ಹೆಚ್ಚು ಪುರಾತತ್ವ ವಸ್ತುಗಳ ಪಟ್ಟಿ ತಯಾರಿ
- ಈ ತಿಂಗಳಲ್ಲಿ ಸರ್ವೇ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ

ಸರ್ವೇ ದತ್ತಾಂಶ ವೆಬ್‌ಸೈಟ್‌ಗೆ ಅಪ್ಲೋಡ್

ಸರ್ವೇಯನ್ನು ಸಂಶೋಧನಾ ಸಹಾಯಕರು ಮತ್ತು ಸಂರಕ್ಷಣಾ ತಜ್ಞರ ಸಹಾಯದಿಂದ ನಡೆಸಲಾಗುತ್ತಿದೆ. ಸರ್ವೇಯಲ್ಲಿ ಕರ್ನಾಟಕದ ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್ ಸೆಂಟರ್ ಅಭಿವೃದ್ಧಿಪಡಿಸಿದ ಅಪ್ಲಿಕೇಶನ್ ಬಳಸಲಾಗುತ್ತಿದೆ. ದತ್ತಾಂಶ ಪೂರ್ಣಗೊಂಡ ಬಳಿಕ ಅದನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ನಗರೀಕರಣ ಪರಿಣಾಮದಿಂದ ಕನಿಷ್ಠ ಶೇ.30 ಪುರಾತತ್ವ ವಸ್ತುಗಳು ಕಳೆದುಹೋಗಿವೆ, ಸ್ಥಳಾಂತರಗೊಂಡಿವೆ.

➡ ಪುಟ 4

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,60,000 (2,55,000) ಅಪರಂಜಿ ಚಿನ್ನ: 1,50,930 (1,37,900) ಆಭರಣ ಚಿನ್ನ: 1,38,350 (1,12,830) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 76,886 (416↓) ಎನ್‌ಎಸ್‌ಇ 23,995 (97↓)

$1 = ₹94.26

400 ರೋಸ್ಟರ್ ಬಿಂದು ನಿಗದಿ

• **ಬೆಂಗಳೂರು:** ಪರಿಶಿಷ್ಟ ಜಾತಿ ಒಳಮೀಸಲಾತಿ ಅನುಷ್ಠಾನಕ್ಕೆ 400 ರೋಸ್ಟರ್ ಬಿಂದುಗಳನ್ನು ತೀರ್ಮಾನಿಸಲಾಗಿದೆ. ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿರುವ ಅಧಿಸೂಚನೆಗಳನ್ನು ಹೊರತುಪಡಿಸಿ, ಇನ್ನುಳಿದ ಹುದ್ದೆಗಳಿಗೆ ಹೊಸದಾಗಿ ಅಧಿಸೂಚನೆ ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮದವರಿಗೆ ತಿಳಿಸಿದರು.

ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿಗೆ ನಿಗದಿಪಡಿಸಿದ ಶೇ.15 ಮೀಸಲಾತಿಯಲ್ಲಿ ಪ್ರವರ್ಗ–ಎ, ಪ್ರವರ್ಗ–ಬಿ, ಪ್ರವರ್ಗ–ಸಿಗಳಿಗೆ ಒಳಮೀಸಲಾತಿಯನ್ನು ಕ್ರಮವಾಗಿ ಶೇ. 5.25, ಶೇ. 5.25 ಮತ್ತು ಶೇ.4.5 ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಈ ಪ್ರಮಾಣವನ್ನು ಅನುಷ್ಠಾನಗೊಳಿಸಲು 400 ರೋಸ್ಟರ್ ಬಿಂದುಗಳನ್ನು ಅನುಪಾಲಿಸಲಾಗುತ್ತದೆ. ಯಾವುದೇ ವೃಂದದಲ್ಲಿ 3ಕ್ಕಿಂತ ಕಡಿಮೆ ಪರಿಶಿಷ್ಟ ಜಾತಿ ಬಿಂದುಗಳು ಲಭ್ಯವಾಗುತ್ತಿದ್ದರೆ, ಪರಿಶಿಷ್ಟ ಜಾತಿಗೆ ಮೀಸಲಾದ ಹುದ್ದೆಗಳನ್ನು ಪರಿಶಿಷ್ಟ ಜಾತಿ ಸಾಮಾನ್ಯ ಎಂದು ಪರಿಗಣಿಸಿ ನೇಮಕಾತಿ ಮಾಡುವಂತೆ ಸಂಪುಟದಲ್ಲಿ ತೀರ್ಮಾನಿಸಲಾಗಿದೆ ಎಂದರು.

ವಿಶೇಷ ಸಭೆಗೆ ತೀರ್ಮಾನ: ರಾಜ್ಯ ಶಿಕ್ಷಣ ನೀತಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಇದು ಮಹತ್ವದ ಮತ್ತು ಗಂಭೀರವಾದ ವಿಷಯವಾದ್ದರಿಂದ ವಿವರವಾಗಿ ಚರ್ಚಿಸುವುದಕ್ಕಾಗಿ ವಿಶೇಷ ಸಭೆ ನಡೆಸಲು ನಿರ್ಣಯಿಸಲಾಯಿತು. ಶೀಘ್ರದಲ್ಲೇ ಸಭೆ ನಡೆಸಲಾಗುತ್ತದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಮುಂದಿನ ಆ.21ರಿಂದ 23ರವರೆಗೆ ನಡೆಯುವ ಸಮಾಧಾನ್ ಸಮಾರೋಹ್ ಕ್ರಿಯಾಯೋಜನೆಯಂತೆ ಸುಪ್ರೀಕೋರ್ಟ್‌ನಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಚಿವ ಸಂಪುಟ ಸಭೆ ಒಪ್ಪಿದೆ.

ರಾಮ ಬಾಣ



ಬಿಎಸ್‌ವೈ ಅಭಿಮಾನೋತ್ಸವ ಹಲವೆಡೆ ಪೂರ್ವಭಾವಿ ಸಭೆ

ಪುಟ ೩ ➡ ಸಂಸದ ಗೋವಿಂದ ಕಾರಜೋಳ ಅವರು ಮಾತನಾಡಿ, ಒಂದು ಶಾಸಕ ಸ್ಥಾನದಿಂದ 110 ಸ್ಥಾನ ತಲುಪಿ ಬಿಜೆಪಿ ಅಧಿಕಾರಕ್ಕೆ ತರಲು ಪ್ರಮುಖ ಕಾರಣಕರ್ತರು ಯಡಿಯೂರಪ್ಪನವರು. ಅವರು ಕಟ್ಟಿದ ಪಕ್ಷದ ಫಲಾನುಭವಿಗಳು ನಾವೆಲ್ಲಾ ಎಂದು ಹೇಳಿದರು. ಈ ಕಾರ್ಯಕ್ರಮಕ್ಕೆ 10 ಲಕ್ಷಕ್ಕೂ ಹೆಚ್ಚು ಜನರನ್ನು ನಿರೀಕ್ಷಿಸಿರುವುದಾಗಿ ತಿಳಿಸಿದರು.

ಬಿಎಸ್‌ವೈ ಧೀಮಂತ ನಾಯಕ

• **ಹಾವೇರಿ:** ಅಧಿಕಾರ ಮತ್ತು ಆದರ್ಶದ ನಡುವೆ ಯಾವಾಗಲೂ ಸಂಘರ್ಷ ಇರುತ್ತದೆ. ಆದರೆ, ಅಧಿಕಾರ ಬಂದಾಗಲೂ ಕೂಡ ಆದರ್ಶಗಳನ್ನು ಬಿಡದೆ ಅಧಿಕಾರವನ್ನು ಆದರ್ಶದ ಪಾಲನೆಗೆ ಉಪಯೋಗ ಮಾಡಿಕೊಂಡವರು ಧೀಮಂತ ನಾಯಕರಾಗುತ್ತಾರೆ. ಅವರು ಯಡಿಯೂರಪ್ಪನವರು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಗುರುವಾರ ಹಾವೇರಿಯ ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಕಾರ್ಯಾಲಯದಲ್ಲಿ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯುವ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ನನ್ನ ನೆಚ್ಚಿನ ನಾಯಕರಾದ ಬಿಎಸ್‌ವೈ ಅಭಿಮಾನೋತ್ಸವ ತಮ್ಮ ಕಠಿಣ ಪರಿಶ್ರಮದ ಫಲ. ಗುರಿ ಸಾಧನೆಯ ಛಲದಿಂದ ನಿರಂತರವಾಗಿ ಜನರ ಜತೆಗಿದ್ದು, ಪರಿಶ್ರಮದ ನಾಯಕರು ಯಾರಾದರೂ ಇದ್ದರೆ ಅದು ಕರ್ನಾಟಕದ ರಾಜಾಹುಲಿ ಯಡಿಯೂರಪ್ಪ ಎಂದು ಹೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕನೇಜಿ

◈ ಕುಕ್ಕರ್ ಬಾಂಬ್ ಸ್ಫೋಟದ ಆರೋಪಿಗೆ ನ್ಯಾಯಾಲಯ ನೀಡಿದ ಶಿಕ್ಷೆ ಸ್ವಾಗತಾರ್ಹ. ಇಂಥವನನ್ನು ಅಂದು ಬ್ರದರ್ಸ್, ಅಮಾಯಕರು ಅಂತ ಸಮರ್ಥನೆ ಮಾಡಿದವರು ಈಗ ಆತ್ಮವಿಮರ್ಶೆ ಮಾಡಿಕೊಳ್ಳಲಿ –ವೇದವ್ಯಾಸ ಕಾಮತ್

– ಆತ್ಮವಿಮರ್ಶೆ ಮಾಡಿಕೊಳ್ಳಲು ಅವರಲ್ಲಿ ಆತ್ಮವೇ ಇಲ್ಲವಲ್ಲ, ಬಹಳ ಹಿಂದೆಯೇ ಅವರು ಅದನ್ನು ಅಧಿಕಾರಕ್ಕಾಗಿ ಮಾರಿ ಬಿಟ್ಟಿದ್ದಾರೆ!

ದಿನ ಭವಿಷ್ಯ

ಮೇಷ
ನಿರಾಶೆ ಬಿಡಿ, ಇಂದು ನಿಮಗೆ ಒಳ್ಳೆಯದಾಗುವ ಕಾಲ. ಗುರಿ ಸಾಧನೆ. ಚಿಂತೆ ಪರಿಹಾರ. ಉದ್ಯೋಗದ ಆತಂಕ ನಿವಾರಣೆ. ಕೌಟುಂಬಿಕ ಸಮರಸತೆ.

ವೃಷಭ
ವೃತ್ತಿಯಲ್ಲಿ ನೀವು ಬಯಸಿದ ಬೆಳವಣಿಗೆ. ನಿಮ್ಮ ಕ್ಷಮತೆ ಮೆಚ್ಚುಗೆಗೆ ಪಾತ್ರವಾಗಲಿದೆ. ಆಸ್ತಿಯಾ ವಾಹನ ಖರೀದಿಗೆ ಕಾಲ ಕೂಡಿಬರಲಿದೆ.

ಮಿಥುನ
ವೃತ್ತಿಗೆ ಸಂಬಂಧಿಸಿ ಶುಭ ಬೆಳವಣಿಗೆ. ದಂಪತಿಗಳ ವಿರಸ ಶಮನಕ್ಕೆ ನಿಧಾನಗತಿ ಹಿಡಿದೀತು. ಈ ಹಂತದಲ್ಲಿ ಮೌನ ಸಾಧಿಸಿ.

ಕಟಕ
ಚಿಂತೆ ತಂದ ವಿಷಯವೊಂದು ಇಂದು ಇತ್ಯರ್ಥ ಕಾಣಲಿದೆ. ಹಿರಿಯರ ಮಾತಿಗೆ ಪ್ರತಿಯಾಡದಿರಿ. ಹಣದ ಕೊರತೆ ನೀಗುವುದು.

ಸಿಂಹ
ಹೊಸತನಕ್ಕೆ ತುಡಿಯುವಿರಿ. ಜೀವನಶೈಲಿ ಬದಲಿಸಲು ಮನಸ್ಸು ಮಾಡಿ. ಪ್ರಗತಿಗೆ ಅಡ್ಡಿ ತರುವ ಸಂಗತಿ ತ್ಯಜಿಸಿರಿ. ಧನವ್ಯಯ.

ಕನ್ಯಾ
ಅನಪೇಕ್ಷಿತ ಬೆಳವಣಿಗೆ. ಆಪ್ತರ ಜತೆ ವಿಶ್ವಾಸದಲ್ಲಿ ಕೊರತೆ. ನಿಮ್ಮ ಸಾಧನೆಗೆ ತೃಪ್ತಿಪಡಿ. ಸಾಧ್ಯವಾಗದ್ದಕ್ಕೆ ಕೊರಗುತ್ತಾ ಕೂರದಿರಿ.

ತುಲಾ
ನಿಮ್ಮ ಸಾಧನೆಗೆ ಮೆಚ್ಚುಗೆ ಪಡೆಯುವಿರಿ. ಆತ್ಮೀಯರ ಸ್ನೇಹದಲ್ಲಿ ಹುಳಿ ಹಿಂಡಲು ಕೆಲವರ ಯತ್ನ. ಅದಕ್ಕೆ ಆಸ್ಪದ ಕೊಡಬೇಡಿ.

ವೃಶ್ಚಿಕ
ನಿರೀಕ್ಷಿಸಿದ್ದಕ್ಕಿಂತ ಹೆಚ್ಚೇ ನಿಮಗಿಂದು ಒಳಿತಾಗಲಿದೆ. ಮನಸ್ಸಿಗೆ ಉಲ್ಲಾಸ. ಆತ್ಮೀಯರ ಜತೆ ಕಾಲಕ್ಷೇಪ. ಕೌಟುಂಬಿಕ ಸಮಾರಂಭದಲ್ಲಿ ಭಾಗಿ.

ಧನು
ಮನಸ್ಸಿನ ಶಾಂತಿ ಕಾಯ್ದುಕೊಳ್ಳಿ. ಕ್ಷುಲ್ಲಕ ವಿಚಾರಕ್ಕೆ ಜಗಳ ಮಾಡಬೇಡಿ. ಎಲ್ಲರ ಜತೆ ಹೊಂದಾಣಿಕೆಯಿರಲಿ. ಮಕ್ಕಳ ಸಾಧನೆ ತೃಪ್ತಿಕರ.

ಮಕರ
ಇತರರ ಜತೆ ಮಾತನಾಡುವಾಗ ಎಚ್ಚರ ವಹಿಸಿ. ಹದತಪ್ಪಿದ ಮಾತು ದೊಡ್ಡ ಜಗಳಕ್ಕೆ ಕಾರಣವಾದೀತು. ಆರ್ಥಿಕ ಉನ್ನತಿ ಸಾಧಿಸುವಿರಿ.

ಕುಂಭ
ನಿಮ್ಮ ಕೌಶಲದ ಕೆಲಸಕ್ಕೆ ಮೆಚ್ಚುಗೆ. ವೃತ್ತಿಯಲ್ಲಿ ತೋರುವ ಪೈಪೋಟಿಯಲ್ಲಿ ಗೆಲ್ಲುವಿರಿ. ದಂಪತಿ ಮಧ್ಯೆ ಅನವಶ್ಯ ಜಗಳವಾದೀತು.

ಮೀನ
ವೃತ್ತಿಯಲ್ಲಿ ಹೊಸ ಯೋಜನೆ ಅಳವಡಿಸಲು ಸಕಾಲ. ಒತ್ತಡವು ನಿಮ್ಮ ಏಕಾಗ್ರತೆಗೆ ಭಂಗ ತಂದೀತು. ಏಕಾಂಗಿಗಳಿಗೆ ವಿವಾಹ ಬಂಧ ಸಂಭವ.

ರಾಹುಕಾಲ : 10.30–12.00
ಗುಳಿಕಕಾಲ : 7.30–9.00

ಅದೃಷ್ಟ ಸಂಖ್ಯೆ : 4,9,2,5

ಬೆಂಗಳೂರು, ಮೈಸೂರು, ಮಂಗಳೂರಿನಲ್ಲಿ ಕೇಂದ್ರ ಸ್ಥಾಪನೆ: ಎಂಬಿಪಾ

3 ಕಡೆ ಡೇಟಾ ಪಾರ್ಕ್

• **ಬೆಂಗಳೂರು:** ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಸುಸ್ಥಿರ ಡೇಟಾ ಕೇಂದ್ರಗಳು(ಸಸ್ಟೇನಬಲ್ ಡೇಟಾ ಸೆಂಟರ್ಸ್) ಅಗತ್ಯವಿದ್ದು ಬೆಂಗಳೂರು, ಮೈಸೂರು ಮತ್ತು ಮಂಗಳೂರಿನಲ್ಲಿ ಡೇಟಾ ಪಾರ್ಕ್ ಸ್ಥಾಪಿಸಲು ಗುರುವಾರ ನಡೆದ ಸಂಬಂಧಿತ ಸಚಿವರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಗುರುವಾರ ಶಕ್ತಿ ಭವನದಲ್ಲಿ ನಡೆದ ಈ ಪ್ರಾಥಮಿಕ ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮತ್ತು ಐಟಿ ಸಚಿವ ಪ್ರಿಯಾಂಕ್ ಖರ್ಗೆ ಪಾಲ್ಗೊಂಡಿದ್ದರು.

ಬಳಿಕ ಮಾತನಾಡಿದ ಸಚಿವ ಎಂ.ಬಿ.ಪಾಟೀಲ್, ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಕೇಂದ್ರ ಪಾರ್ಕ್ ಸ್ಥಾಪಿಸಲಾಗುವುದು. ಪಾವಗಡದಿಂದ ಪೂರೈಕೆಯಾಗುವ ಸೌರ ವಿದ್ಯುತ್ ನೇರವಾಗಿ ಇಲ್ಲಿಗೆ ತಲುಪುತ್ತದೆ. ಜತೆಗೆ ಬೆಂಗಳೂರು ಜಲ ಮಂಡಳಿಯು ಎರಡು ಹಂತಗಳಲ್ಲಿ ಸಂಸ್ಕರಿಸಿದ 60 ಎಂ.ಎಲ್.ಡಿ ನೀರು ಪೂರೈಕೆಗೆ ತೊಂದರೆ ಇಲ್ಲ ಎಂದು ತಿಳಿಸಿದೆ. ಸ್ವತಃ ಉದ್ಯಮಗಳೇ ಈ ನೀರಿನ ಮೂರನೇ ಹಂತದ ಶುದ್ಧೀಕರಣ ಮಾಡಿಕೊಳ್ಳುತ್ತವೆ. ಈ ಮೂರೂ ಪಾರ್ಕ್‌ಗಳ ಒಟ್ಟು ಸಾಮರ್ಥ್ಯ 1,000 ಮೆಗಾವ್ಯಾಟ್ ಇರಲಿದೆ ಎಂದರು.

ಮಂಗಳೂರಿನಲ್ಲಿ ಕೂಡ ಡೇಟಾ ಪಾರ್ಕ್ ಸ್ಥಾಪನೆಗೆ ಭೂಮಿಯು ಲಭ್ಯವಿದೆ. ಅಲ್ಲಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿಗೆ ಸೇರಿದ 350 ಎಕರೆ ಇದೆ. ಮೈಸೂರಿನಲ್ಲಿ ಈ ಉದ್ದೇಶಕ್ಕೆ ಸೂಕ್ತ ಜಾಗ ಗುರುತಿಸಲಾಗುವುದು ಎಂದು ಅವರು ವಿವರಿಸಿದ್ದಾರೆ.



> ❝ **ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಕೇಂದ್ರ ಪಾರ್ಕ್ ಸ್ಥಾಪಿಸಲಾಗುವುದು. ಪಾವಗಡದಿಂದ ಪೂರೈಕೆಯಾಗುವ ಸೌರ ವಿದ್ಯುತ್ ನೇರವಾಗಿ ಇಲ್ಲಿಗೆ ತಲುಪುತ್ತದೆ.**
> ■ **ಎಂ.ಬಿ. ಪಾಟೀಲ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ**

ಈ ಪಾರ್ಕ್‌ಗಳಲ್ಲಿ ಯಾರೇ ಬಂದು ಡಾಟಾ ಸೆಂಟರ್ ಸ್ಥಾಪನೆಗೆ ಹೂಡಿಕೆ ಮಾಡಿದರೆ ಅವರಿಗೆ ವಿದ್ಯುತ್ ಮತ್ತು ನೀರು ನೀಡಲಾಗುವುದು. ಇದಕ್ಕೆ ಪೂರಕವಾದ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸದ್ಯದಲ್ಲೇ ಹೂಡಿಕೆದಾರರ ಜತೆಗೂ ಸಭೆ ಮಾಡಲಾಗುವುದು ಎಂದು ಪಾಟೀಲ್ ತಿಳಿಸಿದರು.

ಮುಂದಿನ ಸಭೆಯಲ್ಲಿ ಜಲಸಂಪನ್ಮೂಲ ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಇನ್ನೊಂದು ಸಚಿವರ ಮತ್ತು ಉನ್ನತ ಅಧಿಕಾರಿಗಳ ತಂಡವನ್ನೂ ಈ ಸಂಬಂಧ ರಚಿಸಲಾಗುವುದು. ಒಟ್ಟಿನಲ್ಲಿ ತ್ವರಿತವಾಗಿ ಈ ಡೇಟಾ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು ಎಂದರು.

ಸಭೆಯಲ್ಲಿ ಇಂಧನ ಮತ್ತು ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಗೌರವ್ ಗುಪ್ತ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಐಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ಕೆಎಸ್ಐಐಡಿಸಿ ಎಂಡಿ ಖುಷ್ಬು ಗೋಯಲ್, ಕೆಐಎಡಿಬಿ ಆಯುಕ್ತ ಡಾ.ಮಹೇಶ್, ಬೆಂಗಳೂರು ಜಲಮಂಡಳಿಯ ಅಧ್ಯಕ್ಷ ರಾಮಪ್ರಸಾತ್ ಮನೋಹರ್, ಐಟಿ ನಿರ್ದೇಶಕ ರಾಹುಲ್ ಸಂಕನೂರು ಭಾಗವಹಿಸಿದ್ದರು.

ಮರುಪರೀಕ್ಷೆ ಬರೆಯಲು ಅವಕಾಶ

» **ಸಿಇಟಿ ವೇಳೆ ಜನಿವಾರ, ಹಿಜಾಬ್ ತೆಗೆಸಿದ ಪ್ರಕರಣ**

• **ಬೆಂಗಳೂರು:** ಸಿಇಟಿ ವೇಳೆ ಜನಿವಾರ ಮತ್ತು ಹಿಜಾಬ್ ತೆಗೆಯುವಂತೆ ಸೂಚಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ಬರೆಯಲು ಅವಕಾಶ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

ಈ ಕುರಿತು ಸುದ್ದಿಗಾರ ಜತೆ ಮಾತನಾಡಿದ ಅವರು, ಸಿಬ್ಬಂದಿಗೆ ಡ್ರೆಸ್ ಕೋಡ್ ಬಗ್ಗೆ ತರಬೇತಿ ನೀಡಲಾಗಿತ್ತು. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ 2ಗಂಟೆ ಮುಂಚಿತವಾಗಿ ತಲುಪಬೇಕು ಎಂಬ ಸೂಚನೆಯೂ ನೀಡಲಾಗಿತ್ತು. ಆದರೆ, ಬೆಂಗಳೂರಿನ ಕೃಪಾನಿಧಿ ಪದವಿಪೂರ್ವ ಕಾಲೇಜು, ಚಿಕ್ಕಬಳ್ಳಾಪುರದ ನಾಗಾರ್ಜುನ ಕಾಲೇಜು ಮತ್ತು ಬಿಜಿಎಸ್ ಕಾಲೇಜಿನ ಸಿಬ್ಬಂದಿ ನಿಯಮ ಉಲ್ಲಂಘಿಸಿದ್ದಾರೆ ಎಂದು ಅಸಮಧಾನ ವ್ಯಕ್ತಪಡಿಸಿದರು. ಈ ವರ್ಷ ನಾಲ್ವರು ವಿದ್ಯಾರ್ಥಿಗಳಿಗೆ ಜನಿವಾರ ಮತ್ತು ಓರ್ವ ವಿದ್ಯಾರ್ಥಿನಿಗೆ ಹಿಜಾಬ್ ತೆಗೆಯುವಂತೆ ಸೂಚಿಸಲಾಗಿದೆ. ಈ ಘಟನೆಯಿಂದನಮಗೆತೊಂದರೆಯಾಯಿತು ಮತ್ತು ಪರೀಕ್ಷೆಯ ಮೇಲೆ ಗಮನ ಹರಿಸಲು ಸಾಧ್ಯವಾಗಲಿಲ್ಲ, ಆದ್ದರಿಂದ ಕೃಪಾಂಕ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ರಚಿಸಿದ ಸಮಿತಿಯು ಸಲ್ಲಿಸಿದ ವರದಿಯನ್ನು ನಾವು ಪರಿಶೀಲಿಸುತ್ತಿದ್ದೇವೆ ಎಂದರು.

ರೈಲ್ವೆ ಸೇವೆ ಮಹತ್ವದ ಮೈಲಿಗಲ್ಲು

ಪುಟ ೩ ➡ ಕಳೆದ ವರ್ಷ ಜೂ.6ರಂದು ಕತ್ರಾ ಮತ್ತು ಕಾಶ್ಮೀರ ಸಂಪರ್ಕಿಸುವ ವಂದೇ ಭಾರತ್ ರೈಲು ಸೇವೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದ್ದರು. ಪ್ರಸಕ್ತ ಈ ರೈಲಿನ ಓಡಾಟ ವ್ಯಾಪ್ತಿಯನ್ನು ಜಮ್ಮುತಾವಿ ರೈಲು ನಿಲ್ದಾಣವರೆಗೆ ವಿಸ್ತರಿಸಲಾಗಿದೆ. ಈ ರೈಲು ಬಲು ಜನಪ್ರಿಯತೆಯನ್ನೂ ಗಳಿಸಿದೆ ಎಂದು ಗಮನ ಸೆಳೆದರು. ರೈಲಿನ ಪ್ರಯಾಣಿಕ ಸಾಮರ್ಥ್ಯ ಹೆಚ್ಚಿಸಲು ಬಲು ಬೇಡಿಕೆಯಿದೆ ಎಂದು ಹೇಳಿದರು.

ಈ ಹಿಂದೆ ಎಂಟು ಬೋಗಿಗಳ ರೈಲು ಓಡಾಡುತ್ತಿತ್ತು. ಸಾಮರ್ಥ್ಯ ಹೆಚ್ಚಿಸಲು ಬೇಡಿಕೆ ಬಂದ ಹಿನ್ನೆಲೆಯಲ್ಲಿ ಪ್ರಸ್ತುತ ವಂದೇ ಭಾರತ್ ರೈಲಿಗೆ 20 ಕೋಚ್‌ಗಳನ್ನು ಅಳವಡಿಸಲಾಗಿದೆ. ರೈಲಲ್ಲಿ ಸಿಮೆಂಟ್, ಕಾರುಗಳು, ಬೈಕ್‌ಗಳೇ ಇತ್ಯಾದಿ ವಸ್ತುಗಳ ಸಾಗಣೆಗೆ ಅವಕಾಶವಿರುವ ಕಾರಣ ಕಾಶ್ಮೀರ ಜನತೆಗೆ ತುಂಬು ಪ್ರಯೋಜನವಾಗಲಿದೆ ಎಂದು ಸಚಿವರು ವಿವರಿಸಿದರು. ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಪ್ರಧಾನಿ ಕಾರ್ಯಾಲಯದ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಕಾರ್ಯಕ್ರಮದಲ್ಲಿದ್ದರು. ಶ್ರೀನಗರ–ಜಮ್ಮು ನಡುವಣ ನೇರ ರೈಲು ಸೇವೆಗಳು ಪ್ರಯಾಣದ ಸಮಯವನ್ನು ಕುಗ್ಗಿಸಲಿವೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ವೇಗ ಕೊಡಲಿವೆ. ಅಲ್ಲದೆ, ಸರ್ವಋತು ಭೂಸಾರಿಗೆ ಸಂಪರ್ಕವನ್ನೂ ಕಲ್ಪಿಸಲಿವೆ.

ರಾಜ್ಯದಲ್ಲಿ ಪುರಾತನ ವಸ್ತುಗಳ ಸರ್ವೇ

ಪುಟ ೩ ➡ ಸಾರ್ವಜನಿಕ ಸಾರಿಗೆ ಮೂಲಕ ಸ್ಥಳಕ್ಕೆ ಹೇಗೆ ತಲುಪಬೇಕು ಎಂಬ ವಿವರಗಳು, ಉದಾಹರಣೆಗೆ ಹತ್ತಿರದ ಬಸ್ ನಿಲ್ದಾಣ ಮತ್ತು ರೈಲು ನಿಲ್ದಾಣ ವಿವರಗಳನ್ನೂ ವರದಿಯಲ್ಲಿ ಸೇರಿಸಲಾಗುತ್ತದೆ.

> ❝ **ತಾಲ್ಲೂಕು ಮಟ್ಟದಲ್ಲಿ ಸರ್ವೇ ಕೈಗೊಂಡಿದ್ದೇವೆ. ಸಮೀಕ್ಷೆ ನಿಖರವಾದ ದತ್ತಾಂಶವನ್ನು ಒದಗಿಸುತ್ತದೆ. ಇದರ ಆಧಾರದ ಮೇಲೆ ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಬಹುದು.**
> ■ **ಎ. ದೇವರಾಜ್, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತ**

ಸರ್ವೇ ದತ್ತಾಂಶ ವೆಬ್ ಸೈಟ್‌ಗೆ ಅಪ್ಲೋಡ್

ಪುಟ ೩ ➡ ಅಥವಾ ಆಕ್ರಮಣಕ್ಕೆ ಒಳಗಾಗಿವೆ. ಕೆಲವು ಸ್ಥಳಗಳಿಗೆ ಭೇಟಿ ನೀಡಿದಾಗ, ಜನರು ಶಾಸನಗಳನ್ನು ಧ್ವಂಸಮಾಡಿದ ಅಥವಾ ಕಲ್ಲುಗಳನ್ನು ಬೇರೆ ಕಟ್ಟಡಗಳಿಗೆ ಬಳಸಿದ ಉದಾಹರಣೆಗಳು ಇವೆ. ಇವುಗಳನ್ನು ಪತ್ತೆ ಮಾಡಿ ಸರ್ವೆ ಮಾಡುವುದು ಇಲಾಖೆಗೆ ಸವಾಲಾಗಿದೆ. ಈ ಸರ್ವೇ ಪೂರ್ಣಗೊಂಡ ಬಳಿಕ ರಾಜ್ಯಾದ್ಯಂತ 1 ಲಕ್ಷಕ್ಕೂ ಹೆಚ್ಚು ಪುರಾತತ್ವ ವಸ್ತುಗಳನ್ನು ಪಟ್ಟಿ ಮಾಡುವ ನಿರೀಕ್ಷೆಯಿದೆ. ಈ ಮಾಹಿತಿಗಳು ಸಂರಕ್ಷಣೆ, ಸ್ಮಾರಕ ರಕ್ಷಣೆ ಅಕ್ರಮ ಮತ್ತು ಅಕ್ರಮಣಗಳ ವಿರುದ್ಧ ಕ್ರಮ ಕೈಗೊಳ್ಳಲು ಸಹಕಾರಿಯಾಗಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾರದೊಳಗೆ ಎತ್ತಿನಹೊಳೆ ಬಾಕಿ ಕಾಮಗಾರಿ

ಪುಟ ೩ ➡ ಮುಂದಿನ ಒಂದು ವಾರದೊಳಗೆ ಈ ಪ್ರಕ್ರಿಯೆ ನಡೆಯಲಿದೆ ಎಂದರು. ತುಮಕೂರು ಭಾಗದಲ್ಲೂ ಭೂಸ್ವಾಧೀನಕ್ಕೆ ಸರ್ವೇ ನಡೆಸಲು ಕ್ರಮ ತೆಗೆದುಕೊಳ್ಳಲಾಗುವುದು. ಆದಷ್ಟು ಬೇಗ ಚಿಕ್ಕಬಳ್ಳಾಪುರ ಹಾಗೂ ಕೋಲಾರಕ್ಕೆ ನೀರನ್ನು ತೆಗೆದುಕೊಂಡು ಹೋಗಲಾಗುವುದು. ಎತ್ತಿನಹೊಳೆ, ಭದ್ರಾ, ಮೇಲ್ದಂಡೆ ಹಾಗೂ ಮೇಕೆದಾಟು ವಿಚಾರವಾಗಿ ಸಂಬಂಧಪಟ್ಟ ಶಾಸಕರ, ಅಧಿಕಾರಿಗಳ ಸಭೆ ನಡೆಸಿದ್ದೇವೆ. ಈ ಸಭೆಯಲ್ಲಿ ಕಂದಾಯ, ಅರಣ್ಯ ಹಾಗೂ ಗೃಹಸಚಿವರು ಭಾಗವಹಿಸಿದ್ದರು. ಎತ್ತಿನಹೊಳೆ ವಿಚಾರವಾಗಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿದ್ದೆ. ನಾವು ಅವರ ಷರತ್ತುಗಳನ್ನು ಒಪ್ಪಿಕೊಂಡು ಮುಂದುವರಿದಿದ್ದೇವೆ ಎಂದು ತಿಳಿಸಿದರು.

ಸಭೆಯಲ್ಲಿ ಸಚಿವರಾದ ಡಾ. ಜಿ. ಪರಮೇಶ್ವರ, ಕೃಷ್ಣಬೈರೇಗೌಡ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಠಿಣ ಕ್ರಮಕ್ಕೆ ಆದೇಶ

ಪುಟ ೩ ➡ ಗಾಯಗೊಂಡವರಿಗೆ ಉಚಿತ ಚಿಕಿತ್ಸೆ ನೀಡುವಂತೆ ಸೂಚಿಸಿದರು.

ಮುಂಗಾರು ಮಳೆಗೂ ಮೊದಲೇ ಸಿದ್ಧತೆ ಕೈಗೊಳ್ಳಿ: ಮುಂಗಾರು ಮಳೆ ಪ್ರಾರಂಭವಾಗುವ ಮೊದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಬೆಂಗಳೂರಿನ ಐದೂ ವಲಯಗಳ ಆಯುಕ್ತರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಒಣಗಿರುವ ಅಪಾಯಕಾರಿ ಮರಗಳ ರೆಂಬೆಗಳನ್ನು ಕತ್ತರಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕ ರಿಜ್ವಾನ್ ಅರ್ಷದ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಬಿಎ ಆಯುಕ್ತ ಮಹೇಶ್ವರ ರಾವ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಇದ್ದರು.

ರಾಜ್ಯಾದ್ಯಂತ ಶಿಥಿಲ ಆಸ್ಪತ್ರೆ ಕಟ್ಟಡ ಪರಿಶೀಲನೆ

ಪುಟ ೩ ➡ ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಸೇರಿದಂತೆ ರಾಜ್ಯದಲ್ಲಿರುವ ಎಲ್ಲ ಆಸ್ಪತ್ರೆ ಕಟ್ಟಡಗಳನ್ನು ಹಾಗೂ ಕಾಂಪೌಂಡ್‌ಗಳನ್ನು ತಜ್ಞರ ತಂಡ ಪರಿಶೀಲನೆ ನಡೆಸಲು ಆದೇಶಿಸಲಾಗಿದೆ ಎಂದರು.



ಪ್ರಧಾನಿ ಮೋದಿ ಸಂತಾಪ

ಪುಟ ೩ ➡ ದುರ್ಘಟನೆ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಬೆಂಗಳೂರಿನಲ್ಲಿ ಗೋಡೆ ಕುಸಿತದಿಂದ ಸಂಭವಿಸಿದ ಅನಾಹುತವು ಅತ್ಯಂತ ದುರದೃಷ್ಟಕರ. ದುಃಖತಪ್ತ ಕುಟುಂಬಗಳಿಗೆ ನನ್ನ ಸಂತಾಪಗಳು. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸುವೆ ಎಂದು ಅಧಿಕೃತ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ. ಘಟನೆಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ಕೇಂದ್ರ ಸರ್ಕಾರ ಪರಿಹಾರ ಘೋಷಿಸಿದೆ. ಮೃತರ ಕುಟುಂಬಕ್ಕೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ 50,000 ರೂಪಾಯಿಗಳ ಪರಿಹಾರ ನೀಡುವುದಾಗಿ ತಿಳಿಸಿದೆ.

ನಾಯಕತ್ವ ಬದಲಾವಣೆ ಗೊಂದಲಕ್ಕೆ ಶೀಘ್ರ ತೆರೆ

ಪುಟ ೩ ➡ ಅಸ್ಸಾಂನಲ್ಲಿ ಕಾಂಗ್ರೆಸ್‌ಗೆ ಸ್ವಲ್ಪ ಹಿನ್ನಡೆ ಕಾಣುತ್ತಿದೆ. ಪುದುಚೇರಿನಲ್ಲಿ ಬಿಜೆಪಿ ವಿರುದ್ಧ ಸಮಬಲ ಹೋರಾಟ ನಡೆದಿದ್ದು ಫಲಿತಾಂಶ ಟಫ್ ಆಗಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮುನ್ನಡೆ ಸಾಧಿಸುವ ಸಾಧ್ಯತೆ ಇದೆ. ಬಿಜೆಪಿ ಕಠಿಣ ಸ್ಪರ್ಧೆ ನೀಡಿದೆ ಎಂದ ಅವರು, ಮೂರು ದಿನಗಳಲ್ಲಿ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಹೇಳಿದರು.

ಬೌರಿಂಗ್ ದುರಂತ- ಕ್ರಮಕ್ಕೆ ಸೂಚನೆ: ಬೆಂಗಳೂರು ನಗರದ ಬೌರಿಂಗ್ ಆಸ್ಪತ್ರೆ ಆವರಣದಲ್ಲಿ ಕಾಂಪೌಂಡ್ ಕುಸಿದು ಏಳು ಮಂದಿ ಮೃತಪಟ್ಟ ಘಟನೆಗೆ ಖರ್ಗೆ ಸಂತಾಪ ವ್ಯಕ್ತಪಡಿಸಿದರು. ಹಳೆಯ ಹಾಗೂ ಮಣ್ಣಿನ ಗೋಡೆಯಾಗಿದ್ದ ಕಾಂಪೌಂಡ್ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದು, ಮೃತರ ಕುಟುಂಬಗಳಿಗೆ ಪರಿಹಾರ ನೀಡಲು ಸೂಚಿಸಲಾಗಿದೆ ಎಂದರು.

ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು. ಕಾಂಪೌಂಡ್ ಬಳಿ ಅನಧಿಕೃತವಾಗಿ ತರಕಾರಿ ಮಾರಾಟ ಮಾಡದಂತೆ ನೋಡಿಕೊಳ್ಳಬೇಕು. ಪಾದಚಾರಿ ಮಾರ್ಗದಲ್ಲಿ ಕುಳಿತು ವ್ಯಾಪಾರ ಮಾಡುವವರಿಗೂ ಸೂಕ್ತ ಸ್ಥಳ ಕಲ್ಪಿಸುವುದು ಪಾಲಿಕೆಯ ಜವಾಬ್ದಾರಿ ಎಂದು ಹೇಳಿದರು. ಬೆಂಗಳೂರಿನಲ್ಲಿ ನಡೆದ ಈ ಘಟನೆ ಇತರೆಡೆ ಮರುಕಳಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಜೆಡಿಎಸ್‌ನಿಂದ ತಲಾ ಒಂದು ಲಕ್ಷ ಪರಿಹಾರ

ಬೌರಿಂಗ್ ಆಸ್ಪತ್ರೆ ಬಳಿ ಸಂಭವಿಸಿದ ದುರ್ಘಟನೆಯಲ್ಲಿ ಮೃತಪಟ್ಟವರ ಮನೆಗಳಿಗೆ ಹಾಗೂ ಆಸ್ಪತ್ರೆಗೆ ವಿಧಾನ ಪರಿಷತ್‌ನ ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕ ಟಿ.ಎ.ಶರವಣ ನೇತೃತ್ವದ ಜೆಡಿಎಸ್ ನಿಯೋಗ ಭೇಟಿ ನೀಡಿತು. ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ನಿಯೋಗವು, ಗಾಯಾಳುಗಳ ಆರೋಗ್ಯ ವಿಚಾರಿಸಿತು. ಜೆಡಿಎಸ್ ಪಕ್ಷದಿಂದ ಮೃತರ ಕುಟುಂಬಸ್ಥರಿಗೆ ತಲಾ 1 ಲಕ್ಷ ರೂ.ಗಳಂತೆ 7 ಲಕ್ಷ ರೂ. ಹಾಗೂ ಗಾಯಾಳುಗಳ ಕುಟುಂಬಗಳಿಗೆ ತಲಾ 25 ಸಾವಿರ ರೂ. ಪರಿಹಾರವನ್ನು ಶರವಣ ಘೋಷಣೆ ಮಾಡಿದರು.

ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ರಚಿಸುವುದು ಖಚಿತ



• **ಬೆಂಗಳೂರು:** ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ರಚನೆಯಾಗುವುದು ಖಚಿತ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಬಂಗಾಳದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮೇಲೆ ಜನತೆ ವಿಶ್ವಾಸ ಇಟ್ಟಿದ್ದಾರೆ. ಅಸ್ಸಾಂನಲ್ಲಿ ಮತದಾರರು ಮೂರನೇ ಬಾರಿ ಸೇವೆ ಮಾಡುವ ಅವಕಾಶ ನೀಡಲಿದ್ದಾರೆ ಎಂದು ತಿಳಿಸಿದರು. ಬಂಗಾಳದಲ್ಲಿ ಈ ಬಾರಿ ರಾಷ್ಟ್ರವಾದಿಗಳ ಸರ್ಕಾರ ರಚನೆ ಆಗಲಿದೆ ಎಂದು ನುಡಿದರು. ಪುದುಚೇರಿಯಲ್ಲಿ ಎನ್‌ಡಿಎ ಸರ್ಕಾರ ಬರಲಿದೆ. ತಮಿಳುನಾಡಿನಲ್ಲಿ ಒಳ್ಳೆಯದೇ ಆಗಲಿದೆ. ಕೇರಳದಲ್ಲಿ ಬಿಜೆಪಿ ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತದೆ ಎಂದು ವಿವರಿಸಿದರು.

ಐಟಿಗೆ ಟೆರರ್‌ನ ಅರ್ಥ

ಪುಟ ೧ ➡ **ಸಮನ್ವಯದ ಸಾಧನೆ:** ಆಪರೇಶನ್ ಸಿಂಧೂರ್ ಅನ್ನು ಭಾರತೀಯ ರಕ್ಷಣಾ ಪಡೆಗಳ ಸಮನ್ವಯ ಹಾಗೂ ಏಕತೆಯ ಉಜ್ವಲ ಉದಾಹರಣೆಯಾಗಿದೆ ಎಂದು ಹೇಳಿದರು. ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆಯು ಏಕೀಕೃತ ಯೋಜನೆ ಯಲ್ಲಿ ಕಾರ್ಯನಿರ್ವಹಿಸಿ, ಭಾರತವು ಈಗ ಒಗ್ಗಟ್ಟಿನ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಿದೆ ಎಂದರು.

ಆಪರೇಷನ್ ಸಿಂದೂರನ್ನು ಭಾರತ ತನ್ನದೇ ಷರತ್ತು ಗಳಲ್ಲಿ, ತನ್ನದೇ ಸಮಯದಲ್ಲಿ ನಡೆಸಿ, ತನ್ನದೇ ನಿರ್ಧಾರ ದಲ್ಲಿ ಸ್ಥಗಿತಗೊಳಿಸಿತು ಎಂದು ಅವರು ತಿಳಿಸಿದರು. ಕಾರ್ಯಾಚರಣೆಯ ವೇಳೆ ಕೇವಲ ದಾಳಿಗೆ ಕಾರಣರಾದವರನ್ನೇ ನಿಖರವಾಗಿ ಗುರಿಯಾಗಿಸಲಾಗಿದೆ ಎಂದು ಹೇಳಿದರು.

ಉತ್ಪಾದನಾ ಕ್ಷೇತ್ರದ ಸಾಧನೆ

ಭಾರತದ ರಕ್ಷಣಾ ಉತ್ಪಾದನಾ ಕ್ಷೇತ್ರವೂ ವೇಗವಾಗಿ ಬೆಳೆಯುತ್ತಿದ್ದು, 2025–26 ಹಣಕಾಸು ವರ್ಷದಲ್ಲಿ ರಕ್ಷಣಾ ಉತ್ಪನ್ನಗಳ ರಫ್ತು 38,424 ಕೋಟಿ ರೂ.ಗೆ ಏರಿಕೆಯಾಗಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.62.66 ಹೆಚ್ಚಳವಾಗಿದೆ ಎಂದು ರಾಜ್‌ನಾಥ್ ಸಿಂಗ್ ಅವರು ಮಾಹಿತಿ ನೀಡಿದರು. ಹೊಸ ಜಾಗತಿಕ ವ್ಯವಸ್ಥೆಯಲ್ಲಿ ಹೊಸ ಭಾರತ ಯಾವುದೇ ಭಯೋತ್ಪಾದಕನಿಗೂ ಹಾಗೂ ಅದನ್ನು ಪ್ರೋತ್ಸಾಹಿಸುವವರನ್ನು ವಿಭಿನ್ನವಾಗಿ ನೋಡುವುದಿಲ್ಲ ಎಂಬ ಸ್ಪಷ್ಟ ನೀತಿಯನ್ನು ಅನುಸರಿಸುತ್ತಿದೆ ಎಂದು ಅವರು ಹೇಳಿದರು.

ಉಗ್ರವಾದ ಸಹಿಸಲ್ಲ

ಭಯೋತ್ಪಾದನೆಗೆ ನಕ್ಸಲಿಸಂ ಮೊದಲಾದ ಹಿಂಸಾತ್ಮಕ ಸಿದ್ಧಾಂತಗಳೊಂದಿಗೆ ಸಂಪರ್ಕಿಸುವುದು ಅತ್ಯಂತ ಅಪಾಯಕರ ಎಂದು ಅವರು ಎಚ್ಚರಿಸಿದರು. ಇದು ಭಯೋತ್ಪಾದಕರಿಗೆ ಪರೋಕ್ಷ ಬೆಂಬಲ ನೀಡುವಂತಾಗುತ್ತದೆ ಎಂದರು.

ಮೋದಿ ನಾಯಕತ್ವಕ್ಕೆ ಶ್ಲಾಘನೆ

ಪ್ರಧಾನಿ ನರೇಂದ್ರ ಮೋದಿ ನಾಯಕತ್ವವನ್ನು ಕೊಂಡಾಡಿ, ಭಯೋತ್ಪಾದನೆ ಬಗ್ಗೆ ಶೂನ್ಯ ಸಹಿಷ್ಣುತೆಯ ಮೋದಿ ಸರಕಾರದ ಧೋರಣೆ ಪ್ರಶಂಸಾರ್ಹ. ಭಾರತ ಯಾವ ಕಾರಣಕ್ಕೂ ಪರಮಾಣು ದಾಳಿ ಬೆದರಿಕೆಗಳಿಗೆ ಹೆದರಲ್ಲ, ಜಗ್ಗಲ್ಲವೆಂದು ಪುನರುಚ್ಚರಿಸಿದರು.



ಅಣ್ವಸ್ತ್ರ ದಾಳಿ ಬೆದರಿಕೆಗೆ ಭಾರತ ತಲೆಬಾಗಿಲ್ಲ

ಭಾರತವು ಯಾವುದೇ ಅಣು ದಾಳಿಯ ಬೆದರಿಕೆಗೆ ತಲೆಬಾಗದೆ ತನ್ನ ಗುರಿಗಳನ್ನು ಸಾಧಿಸಿದೆ. ಅಗತ್ಯವಿದ್ದರೆ ದೀರ್ಘಕಾಲದ ಸಂಘರ್ಷಕ್ಕೂ ಸಿದ್ಧವಾಗಿರುವ ಸಾಮರ್ಥ್ಯ ಭಾರತಕ್ಕಿದೆ. ಪರಮಾಣು ದಾಳಿ ಬೆದರಿಕೆಗೆ ನಾವು ಹೆದರಿಕೊಂಡು ಸಿಂದೂರ ಕಾರ್ಯಾಚರಣೆಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿಲ್ಲ ಎಂದೂ ರಾಜನಾಥ್ ಗುಡುಗಿದ್ದಾರೆ.

ಎಲ್ಲಾ ಭಾರತೀಯರದ್ದೂ ಮಹಾದೇವನ ಡಿಎನ್‌ಎ

ಪುಟ ೩ ➡ **ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಹೇಳಿಕೆ:** ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) 100ನೇ ವರ್ಷಾಚರಣೆ ಅಂಗವಾಗಿ ಮಂಗಳವಾರ ಆಯೋಜಿಸಲಾಗಿದ್ದ ಯುವ ಕುಂಭ ಕಾರ್ಯಕ್ರಮದಲ್ಲಿ ಮಜರ್ ಆಸೀಫ್ ಮಾತನಾಡುತ್ತಾ, ಎಲ್ಲಾ ಭಾರತೀಯರ ಡಿಎನ್‌ಎ ಭಗವಾನ್ ಮಹಾದೇವನೊಂದಿಗೆ ಸಂಬಂಧ ಹೊಂದಿದೆ ಎಂದು ಹೇಳಿದ್ದರು.



ಮಜರ್ ಆಸೀಫ್ ನೀಡಿದ ಹೇಳಿಕೆಯ ವೀಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ವಿವಾದಕ್ಕೆ ಕಾರಣವಾಗಿತ್ತು. ವಿವಿಧ ಭಾಷೆ, ಧರ್ಮ ಮತ್ತು ಭೌಗೋಳಿಕ ಹಿನ್ನೆಲೆ ಹೊಂದಿದ್ದರೂ, ಭಾರತೀಯರು ಸಾಮಾನ್ಯ ಡಿಎನ್‌ಎ ಮೂಲಕ ಪರಸ್ಪರ ಸಂಬಂಧ ಹೊಂದಿದ್ದಾರೆ ಎಂದು ಅವರು ಪ್ರತಿಪಾದಿಸಿದ್ದರು.

ರಾಜಕೀಯ ಸಮರ್ಥನೆ: ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಆಸೀಫ್ ಹೇಳಿಕೆಯನ್ನು ಶಬ್ದಶಃ ಅರ್ಥೈಸುವ ಬದಲು ಅದನ್ನು ನಾಗರಿಕತೆಯ ಸಂಕೇತವಾಗಿ ನೋಡಬೇಕು ಎಂದು ತಿಳಿಸಿದ್ದಾರೆ. ಹಂಚಿ ಹೋಗಿರುವ ಪೂರ್ವಜರು ಮತ್ತು ಸಾಂಸ್ಕೃತಿಕ ನಿರಂತರತೆಯನ್ನು ಈ ಹೇಳಿಕೆ ಪ್ರತಿಬಿಂಬಿಸುತ್ತದೆ ಎಂದು ಅವರು ವಾದಿಸಿದ್ದಾರೆ. ಇಂತಹ ಹೇಳಿಕೆಗಳನ್ನು ಅವೈಜ್ಞಾನಿಕ ಎಂದು ಟೀಕಿಸುವುದು ನಾಗರಿಕತೆಯ ಕಲ್ಪನೆಗಳ ಬಗ್ಗೆ ಇರುವ ಅಸಹಿಷ್ಣುತೆಯನ್ನು ತೋರಿಸುತ್ತದೆ ಎಂದು ಅವರು ಹೇಳಿದ್ದಾರೆ.

ಐತಿಹಾಸಿಕ ಮತ್ತು ಸಾಂಸ್ಕೃತಿಕ ಉಲ್ಲೇಖ: ಭಾರತದ ಸಮ್ಮಿಶ್ರ ಸಂಸ್ಕೃತಿಯನ್ನು ಬೆಂಬಲಿಸಲು ಮಾಳವೀಯ, ಮೌಲಾನಾ ಅಬುಲ್ ಕಲಾಂ ಆಜಾದ್ ಮತ್ತು ಮೌಲಾನಾ ವಹೀದುದ್ದೀನ್ ಖಾನ್‌ರಂತಹ ನಾಯಕರನ್ನು ಉಲ್ಲೇಖಿಸಿದ್ದಾರೆ. ಮತಾಂತರ ಒಬ್ಬರ ಜನಾಂಗ ಅಥವಾ ಮೂಲವನ್ನು ಬದಲಿಸುವುದಿಲ್ಲ ಎಂದು ವಹೀದುದ್ದೀನ್ ಖಾನ್ ಹೇಳಿದ್ದರು. ಅಲ್ಲದೆ, ಕವಿ ಮುಹಮ್ಮದ್ ಇಕ್ಬಾಲ್, ಭಗವಾನ್ ರಾಮನನ್ನು ಇಮಾಮ್–ಎ–ಹಿಂದ್ ಎಂದು ಬಣ್ಣಿಸಿರುವುದನ್ನೂ ಅವರು ಈ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ.

ಸುಪ್ರೀಂ ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಅಭಿಯಾನ

◆ **ಬೆಂಗಳೂರು:** ದೇಶಾದ್ಯಂತ ಬಾಕಿ ಇರುವ ಪ್ರಕರಣಗಳ ಸೌಹಾರ್ದಯುತ ಇತ್ಯರ್ಥಕ್ಕಾಗಿ ಸಮಾಧಾನ ಸಮಾರೋಹ ವಿಶೇಷ ಲೋಕ ಅದಾಲತ್ ಅಭಿಯಾನವನ್ನು ಸುಪ್ರೀಂಕೋರ್ಟ್ ಹಮ್ಮಿಕೊಂಡಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಆರ್.ದೇವದಾಸ್ ತಿಳಿಸಿದರು.

ಹೈಕೋರ್ಟ್‌ನ ಕಾರ್ಯನಿರ್ವಾಹಕ ಮುಖ್ಯಸ್ಥರ ಸಭಾ ಕೊಠಡಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾನ್ಯವಾಗಿ ಲೋಕ್ ಅದಾಲತ್‌ಗಳ ಮೂಲಕ ಪ್ರಕರಣಗಳ ವಿಲೇವಾರಿ ನಡೆಯುತ್ತದೆಯಾದರೂ, ಈ ಬಾರಿ ವಿಶೇಷವಾಗಿ ಸುಪ್ರೀಂ ಕೋರ್ಟ್ ಪ್ರಕರಣಗಳಿಗಾಗಿಯೇ ಪ್ರಥಮವಾಗಿ ಈ ಪ್ರತ್ಯೇಕ ಅಭಿಯಾನವನ್ನು ರೂಪಿಸಲಾಗಿದೆ. ಆಗಸ್ಟ್ 21, 22 ಮತ್ತು 23ರಂದು ನಡೆಯಲಿದ್ದು, ಇದಕ್ಕೆ ಪೂರಕವಾದ ಪೂರ್ವ ಸಮಾಧಾನ ಪ್ರಕ್ರಿಯೆಗಳು ಈಗಾಗಲೇ ಆರಂಭಗೊಂಡಿವೆ ಎಂದು ತಿಳಿಸಿದರು.

ಕರ್ನಾಟಕದಿಂದ 4,328 ಪ್ರಕರಣ: ಈ ಮಹತ್ವದ ಅಭಿಯಾನದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಒಟ್ಟು 4,328 ಪ್ರಕರಣಗಳನ್ನು ಪೂರ್ವ ಸಮಾಧಾನ ಪ್ರಕ್ರಿಯೆಗಾಗಿ ಗುರುತಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು 1,245 ಪ್ರಕರಣಗಳು ಹಾಗೂ ಬೆಳಗಾವಿಯಲ್ಲಿ 517, ಚಾಮರಾಜನಗರ ಜಿಲ್ಲೆಯಲ್ಲಿ ಕನಿಷ್ಠ 4 ಪ್ರಕರಣಗಳು ಹಾಗೂ ಯಾದಗಿರಿಯಲ್ಲಿ 14 ಪ್ರಕರಣಗಳು ಪಟ್ಟಿಯಲ್ಲಿವೆ.



> ಸುಪ್ರೀಂ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಇದೊಂದು ಸುವರ್ಣಾವಕಾಶ. ಈಗಾಗಲೇ 4,128 ಪ್ರಕರಣಗಳನ್ನು ಗುರುತಿಸಲಾಗಿದ್ದು, ಪಟ್ಟಿಯಲ್ಲಿ ಹೆಸರಿಲ್ಲದಿದ್ದರೂ ರಾಜಿ ಸಂಧಾನಕ್ಕೆ ಆಸಕ್ತಿ ಇರುವವರು ಅರ್ಜಿ ಸಲ್ಲಿಸಬಹುದು.
> ■ ನ್ಯಾ. ದೇವದಾಸ್, ಹೈಕೋರ್ಟ್ ಜಡ್ಜ್

ಇವುಗಳಲ್ಲಿ ಸರ್ಕಾರವೇ ಒಂದು ಪಕ್ಷಗಾರರಾಗಿರುವ 937ಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಕ್ಕೆ ಯೋಗ್ಯವೆಂದು ಗುರುತಿಸಲಾಗಿದೆ.

ಇತ್ಯರ್ಥಕ್ಕೆ ಲಭ್ಯವಿರುವ ಪ್ರಕರಣಗಳ ವಿಧಗಳು: ಬ್ಯಾಂಕಿಂಗ್ ಮತ್ತು ವಿಮೆ, ಮೋಟಾರು ಅಪಘಾತ ಪರಿಹಾರ, ನಾಗರಿಕ ಕಾನೂನು, ಗ್ರಾಹಕ ವ್ಯಾಜ್ಯಗಳು, ಕ್ರಿಮಿನಲ್ ಪ್ರಕರಣಗಳು, ಕೌಟುಂಬಿಕ ವಿವಾದಗಳು, ಭೂಸ್ವಾಧೀನ, ಆಸ್ತಿ ತೆರಿಗೆ ಮತ್ತು ಸೇವಾ ಕಾನೂನುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಈ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದೆ.

ಪ್ರಕ್ರಿಯೆ ಮತ್ತು ಸೌಲಭ್ಯಗಳು: ಪಕ್ಷಗಾರರ ಅನುಕೂಲಕ್ಕಾಗಿ ಸ್ಥಳೀಯ ಜಿಲ್ಲಾ ಮತ್ತು ತಾಲೂಕು ಕಾನೂನು ಸೇವಾ ಪ್ರಾಧಿಕಾರಗಳಲ್ಲಿ ಭೌತಿಕವಾಗಿ ಅಥವಾ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಲು ವ್ಯವಸ್ಥೆ ಮಾಡಲಾಗಿದೆ. ಒಂದು ವೇಳೆ ಪಕ್ಷಗಾರರು ಬೇರೆ ರಾಜ್ಯಗಳಲ್ಲಿ ವಾಸಿಸುತ್ತಿದ್ದರೂ ಸಹ ವರ್ಚುವಲ್ ವಿಧಾನದ ಮೂಲಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದು.

ಲೋಕ ಅದಾಲತ್‌ನ ಲಾಭಗಳು: ಈ ಪ್ರಕ್ರಿಯೆಯಲ್ಲಿ ಯಾವುದೇ ನ್ಯಾಯಾಲಯದ ಶುಲ್ಕವಿರುವುದಿಲ್ಲ. ಒಂದು ವೇಳೆ ಈಗಾಗಲೇ ಶುಲ್ಕ ಪಾವತಿಸಿದ್ದರೆ, ಪ್ರಕರಣ ಇತ್ಯರ್ಥವಾದ ನಂತರ ಅದನ್ನು ಹಿಂದಿರುಗಿಸಲಾಗುತ್ತದೆ. ಲೋಕ ಅದಾಲತ್‌ನಲ್ಲಿ ನೀಡಲಾಗುವ ಆದೇಶವು ಅಂತಿಮವಾಗಿದ್ದು, ಇದನ್ನು ಮತ್ತೆ ಎಲ್ಲಿಯೂ ಪ್ರಶ್ನಿಸಲು ಅವಕಾಶವಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ: ವಕೀಲರು ಮತ್ತು ಪಕ್ಷಗಾರರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್ (www.kslsa.kar.nic.in) ಅಥವಾ ಸುಪ್ರೀಂ ಕೋರ್ಟ್‌ನ ಅಧಿಕೃತ ಜಾಲತಾಣದಲ್ಲಿ ಹೆಚ್ಚಿನ ವಿವರ ಪಡೆಯಬಹುದು.

ಅಭಿಮಾನೋತ್ಸವ



ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನಕ್ಕೆ 50 ವರ್ಷ ತುಂಬಿದ ಸವಿನೆನಪಿಗಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವದ ಸ್ಟಿಕ್ಕರ್‌ನ್ನು ಶಿವಮೊಗ್ಗದ ಬಿಜೆಪಿ ಕಚೇರಿಯಲ್ಲಿ ಬಿಡುಗಡೆಗೊಳಿಸಲಾಯಿತು. ಸಂಸದ ಬಿ.ವೈ. ರಾಘವೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಪ್ರಮುಖರಾದ ದತ್ತಾತ್ರಿ, ಧನಂಜಯ ಸರ್ಜಿ, ಜ್ಯೋತಿಪ್ರಕಾಶ್, ಎಂ.ಬಿ. ಹರಿಕೃಷ್ಣ ಮತ್ತಿತರರಿದ್ದರು.

ಕಿರುಸುದ್ದಿ

ಆದಿತ್ಯ ಪ್ರಕರಣ ಸಿಬಿಐಗೆ ವಹಿಸಲು ಬೆಲ್ಲದ ಆಗ್ರಹ

◆ **ಧಾರವಾಡ:** ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಮೂವರನ್ನು ಅಮಾನತು ಮಾಡಿದರೆ ಸಾಲದು. ಸಮಗ್ರ ತನಿಖೆಗೆ ಸಿಬಿಐ ಇಲ್ಲವೇ ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ವಿಧಾನಸಭೆ ವಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆಗ್ರಹಿಸಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸ್ ಕಿರುಕುಳದಿಂದ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಕಾನ್ಸಟೇಬಲ್‌ರನ್ನ ಅಮಾನತು ಮಾಡಲಾಗಿದೆ. ತಪ್ಪಿನ ಮೂಲ ಬೇರು ಪತ್ತೆ ಹಚ್ಚಲು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಿದರು.

ಸರ್ಕಾರಿ ನೌಕರಿ ನೀಡಿ: ಎರಡು ದಿನಗಳೊಳಗೆ ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳದಿದ್ದರೆ, ಧಾರವಾಡದಿಂದ ಹೋರಾಟ ಮಾಡುವ ಎಚ್ಚರಿಕೆ ನೀಡಿದ ಬೆಲ್ಲದ, ಮೃತನ ತಾಯಿಗೆ ಸರ್ಕಾರ 50 ಲಕ್ಷ ರೂ. ಪರಿಹಾರ ಹಾಗೂ ಸರ್ಕಾರಿ ನೌಕರಿ ನೀಡಬೇಕು ಎಂದು ಆಗ್ರಹಿಸಿದರು.

ಪತ್ನಿಯನ್ನು ಕೊಲೆ ಮಾಡಿ ಪೊಲೀಸರಿಗೆ ಶರಣಾದ ಪತಿ

◆ **ಮೈಸೂರು:** ಪತಿಯೇ ತನ್ನ ಪತ್ನಿಯನ್ನು ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ಮೈಸೂರಿನ ಹಳೆ ಕೆಸರೆ ಗ್ರಾಮದಲ್ಲಿ ನಡೆದಿದೆ. ಮಹೇಶ್ ಎಂಬಾತನೇ ತನ್ನ ಪತ್ನಿ ಪುಷ್ಪ ಎಂಬಾಕೆಯನ್ನು ಕೊಲೆ ಮಾಡಿದವ. ಖಾಸಗಿ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಪುಷ್ಪ ಅವರು ಪ್ರತಿ ದಿನ ಕೆಲಸ ಮುಗಿಸಿ ರಾತ್ರಿ ಮನೆಗೆ ಬರುತ್ತಿದ್ದರು. ಎಂದಿನಂತೆ ಕಳೆದ ರಾತ್ರಿ ಪುಷ್ಪ ಕೆಲಸ ಮುಗಿಸಿ ಮನೆಗೆ ಬಂದಾಗ ದಂಪತಿ ನಡುವೆ ತೀವ್ರ ಜಗಳ ನಡೆದಿದೆ. ಜಗಳ ವಿಕೋಪಕ್ಕೆ ತಿರುಗುತ್ತಿದ್ದಂತೆ ಆಕ್ರೋಶಗೊಂಡ ಮಹೇಶ್ ಕೊಡಲಿಯಿಂದ ಕೊಚ್ಚಿ ಪುಷ್ಪಾಳನ್ನು ಕೊಲೆ ಮಾಡಿದ್ದಾನೆ. ಪತ್ನಿಯನ್ನು ಕೊಂದ ನಂತರ ಮಹೇಶ್, ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದಾನೆ. ವಿಷಯ ತಿಳಿಯುತ್ತಿದ್ದಂತೆ ನರಸಿಂಹರಾಜ ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಆಯುಕ್ತರ ಕಚೇರಿಯಲ್ಲೇ ವ್ಯಕ್ತಿ ಆತ್ಮಹತ್ಯೆಗೆ ಯತ್ನ

◆ **ಬೆಳಗಾವಿ:** ಜಮೀನು ಭೂ ಪರಿವರ್ತನೆ(ಎನ್‌ಎ) ಸಂಬಂಧ ಸಮಸ್ಯೆ ಹಿನ್ನೆಲೆ ವ್ಯಕ್ತಿಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಡೆದಿದೆ. ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನ ರುದ್ರಯ್ಯ ಅಮ್ಮಿನಬಾವಿಮಠ(50) ಎಂಬವರು ಎರಡು ಎಕರೆ ಜಮೀನನ್ನು ಎನ್‌ಎ ಮಾಡಲು ಅರ್ಜಿ ಸಲ್ಲಿಸಿ ಹಲವು ದಿನಗಳಿಂದ ಕಚೇರಿಗಳಿಗೆ ಅಲೆದಾಡುತ್ತಿದ್ದರು. ಹಾವೇರಿ ಡಿಸಿ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರೂ, ಲ್ಯಾಂಡ್ ವಿದ್ ಚೇಂಜ್ ಆಗುವವರೆಗೂ ಎನ್‌ಎ ಮಾಡಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಕಚೇರಿಗೆ ಹಲವು ಬಾರಿ ಭೇಟಿ ನೀಡಿ ಮನವಿ ಮಾಡಿದ್ದ ರುದ್ರಯ್ಯ, ಗುರುವಾರ ಪ್ರಾದೇಶಿಕ ಆಯುಕ್ತ ಜಾನಕಿ ಅವರನ್ನು ಭೇಟಿ ಮಾಡಲು ಮತ್ತೊಮ್ಮೆ ಆಗಮಿಸಿದ್ದರು. ಆದರೆ, ಆಯುಕ್ತ ಕಚೇರಿಯಲ್ಲಿ ಲಭ್ಯವಿಲ್ಲ ಎಂಬ ಮಾಹಿತಿ ತಿಳಿದ ಬಳಿಕ ಮನನೊಂದು ಕಚೇರಿಯಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಕ್ಷಣವೇ ಅವರನ್ನು ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.ಗಳ ಯೋಜನೆಗೆ ಅಸ್ತು

ಅಲ್ಪಸಂಖ್ಯಾತರಿಗೆ ಬಂಪರ್

◆ **ಬೆಂಗಳೂರು:** ರಾಜ್ಯದ ಅಲ್ಪಸಂಖ್ಯಾತರಿಗೆ ರಾಜ್ಯ ಸರ್ಕಾರ ಬಂಪರ್ ಕೊಡುಗೆ ನೀಡಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿಧಾನಸಭಾ ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತರು ವಾಸಿಸುತ್ತಿರುವ ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.ಗಳ ಕ್ರಿಯಾ ಯೋಜನೆ ರೂಪಿಸಿ ಕಾಮಗಾರಿಗಳನ್ನು ಅನುಷ್ಠಾನಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಕುರಿತು ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮದವರಿಗೆ ವಿವರ ನೀಡಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರದೇಶಗಳಲ್ಲಿನ ಅತೀ ಹಿಂದುಳಿದ ಅಲ್ಪಸಂಖ್ಯಾತರು ವಾಸಿಸುತ್ತಿರುವ ನಗರ ಪ್ರದೇಶಗಳಲ್ಲಿ ಅತೀ ಹಿಂದುಳಿದ ಕಾಲೊನಿಗಳನ್ನು ಮಾದರಿ ಕಾಲೊನಿಗಳನ್ನಾಗಿ ಅಭಿವೃದ್ಧಿ ಪಡಿಸಬೇಕಿದೆ. ಇದಕ್ಕಾಗಿ ರಾಜ್ಯದ 11 ಕಾರ್ಪೊರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಂ ಅಥವಾ ಕಾಲೊನಿ ಅಭಿವೃದ್ಧಿ ಯೋಜನೆ ಹಾಗೂ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ 2026-27 ಮತ್ತು 2027-28ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯ ಒಪ್ಪಿಗೆಯಂತೆ 600 ಕೋಟಿ ರೂ.ಗಳಿಗೆ ಕ್ರಿಯಾ ಯೋಜನೆ ರೂಪಿಸಿದೆ ಎಂದರು.

ಹೈಸ್ಪೀಡ್ ರೈಲು ಕಾರಿಡಾರ್‌ಗೆ ತಾತ್ವಿಕ ಅನುಮೋದನೆ: ಕರ್ನಾಟಕ ರಾಜ್ಯದೊಳಗೆ ಹೈದರಾಬಾದ್-ಬೆಂಗಳೂರು ಹೈಸ್ಪೀಡ್ ರೈಲು ಕಾರಿಡಾರ್ ಕೈಗೊಳ್ಳಲು ಮತ್ತು ಅನುಷ್ಠಾನಗೊಳಿಸಲು ಸಚಿವ ಸಂಪುಟವು ತಾತ್ವಿಕ ಅನುಮೋದನೆ ನೀಡಿದೆ. ಅದರ ಅನುಷ್ಠಾನಕ್ಕೆ ಅಗತ್ಯವಾದ ಆಡಳಿತಾತ್ಮಕ ಮತ್ತು ಶಾಸನಬದ್ಧ ಬೆಂಬಲ ನೀಡಲು ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಅಧಿಕಾರ ನೀಡಲಾಗಿದೆ. ಈ ಕಾರಿಡಾರ್ ಒಟ್ಟು 607.03 ಕಿ.ಮೀ. ಉದ್ದವಿದೆ. ತುಮಕೂರು, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ 101.03 ಕಿ.ಮೀ. ಕರ್ನಾಟಕದ ಒಳಗಡೆ ಇರುತ್ತದೆ. ಒಟ್ಟು 15 ನಿಲ್ದಾಣಗಳ ಪೈಕಿ 3 ನಿಲ್ದಾಣಗಳೆಂದರೆ ಅಲಿಪುರ, ದೇವನಹಳ್ಳಿ ಮತ್ತು ಕೋಡಿಹಳ್ಳಿ ಕರ್ನಾಟಕದಲ್ಲಿರುತ್ತವೆ ಎಂದು ತಿಳಿಸಿದರು.

ಆದೇ ರೀತಿ ಬೆಂಗಳೂರು-ಚೆನ್ನೈ ಹೈಸ್ಪೀಡ್ ರೈಲು ಕಾರಿಡಾರ್ ಕೈಗೊಳ್ಳುವುದಕ್ಕೂ ಸಚಿವ ಸಂಪುಟ ತಾತ್ವಿಕ ಅನುಮತಿ ನೀಡಿದೆ ಎಂದರು.

ಸಚಿವ ಸಂಪುಟದ ಇತರೆ ನಿರ್ಣಯಗಳು

- ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದಲ್ಲಿ 6 ಎಂಆರ್‌ಐ ಯಂತ್ರಗಳನ್ನು 81 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಖರೀದಿಸಿ, ಜಿಲ್ಲಾಸ್ಪತ್ರೆಗಳಿಗೆ ಪೂರೈಸಲು ಅನುಮೋದನೆ
- ಬೀದರ್-ಬೆಂಗಳೂರು ಮತ್ತು ಕಲಬುರಗಿ-ಬೆಂಗಳೂರು ಮಾರ್ಗಗಳಲ್ಲಿ ವಿಮಾನ ಸೇವೆಗಳಿಗೆ 28.47 ಕೋಟಿ ರೂ. ಸಬ್ಸಿಡಿ ಸಹಾಯ
- ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ 2026-27ನೇ ಸಾಲಿನಲ್ಲಿ 115.84 ಕೋಟಿ ರೂ.ಗಳ ವೆಚ್ಚದಲ್ಲಿ ಶಾಲಾ ಕಿಟ್‌ಗಳನ್ನು ಒದಗಿಸಲು ಒಪ್ಪಿಗೆ
- 2025-26ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ರಾಜ್ಯದ ರೈತರಿಂದ ಬಿಳಿಜೋಳ ಖರೀದಿಸಲು ಅವಶ್ಯವಿರುವ ಹೆಚ್ಚುವರಿ ಗೋಣಿ ಚೀಲಗಳನ್ನು 21.35 ಕೋಟಿ ರೂ. ವೆಚ್ಚದಲ್ಲಿ ಖರೀದಿ ಮಾಡಲು ಸಮ್ಮತಿ
- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಅವಶ್ಯವಿರುವ 80 ನಗರ ಸಾರಿಗೆ ಬಸ್ಸುಗಳನ್ನು 32 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ
- ಭಾರತ ಸರ್ಕಾರದ ಅರ್ಬನ್ ಚಾಲೆಂಜ್ ಫಂಡ್‌ನ ಕಾರ್ಯಕ್ರಮ ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಮತ್ತು ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ರಚಿಸಲು ಸಮ್ಮತಿ

ಉನ್ನತ ಶಿಕ್ಷಣ ಸಚಿವ ಸುಧಾಕರ್ ಮಾಹಿತಿ

ಶೈಕ್ಷಣಿಕ ಸಂಯೋಜಕ ಹುದ್ದೆಗೆ ಅತಿಥಿ ಶಿಕ್ಷಕರು

◆ **ಬೆಂಗಳೂರು:** ಯುಜಿಸಿ ಅರ್ಹತೆ ಪಡೆಯದೇ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕನಿಷ್ಠ 5 ವರ್ಷ ಕಾರ್ಯನಿರ್ವಹಿಸಿರುವಂತಹ ಉಪನ್ಯಾಸಕರಿಗೆ ಮುಂದಿನ ಶೈಕ್ಷಣಿಕ ಸಾಲಿನಿಂದ ಮೂರು ವರ್ಷಗಳ ಕಾಲ ರಾಜ್ಯ ಸರ್ಕಾರವು ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಿಸಿದೆ.

ಗುರುವಾರ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು, ಅತಿಥಿ ಉಪನ್ಯಾಸಕರನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕಗಳಲ್ಲಿ ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಿಸಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದರು. ಅಲ್ಲದೇ, ಉಪನ್ಯಾಸಕರಾಗಿ ಕಾರ್ಯನಿರ್ವಹಿಸಲು ಬಯಸುವವರಿಗೆ ನೆಟ್ ಮತ್ತು ಕೆ-ಸೆಟ್ ಪಡೆಯಲು ಬೇಕಾದ ಆನ್‌ಲೈನ್ ತರಬೇತಿ ನೀಡಲಾಗುತ್ತದೆ. ಇದನ್ನು ಬಳಸಿಕೊಂಡು ಮತ್ತೆ ಉಪನ್ಯಾಸಕ ಸೇವೆಗೆ ಮರಳಬಹುದು ಎಂದರು. 5 ರಿಂದ 10 ವರ್ಷ ಸೇವೆ ಸಲ್ಲಿಸಿರುವವರಿಗೆ 28 ಸಾವಿರ ರೂ., 10 ರಿಂದ 15 ವರ್ಷ ಸೇವೆ ಸಲ್ಲಿಸಿರುವವರಿಗೆ 29 ಸಾವಿರ ರೂ. ಮತ್ತು 15 ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯ ನಿರ್ವಹಿಸುವವರಿಗೆ ಮಾಸಿಕ 30 ಸಾವಿರ ರೂ. ಗೌರವಧನ ನಿಗದಿ ಮಾಡಲಾಗಿದೆ. ವಾರ್ಷಿಕ 10 ತಿಂಗಳ ಅವಧಿಗೆ ಮಾತ್ರ ಗೌರವಧನ ನೀಡಲಾಗುತ್ತದೆ. ನಿವೃತ್ತಿ ವೇಳೆ 5 ಲಕ್ಷ ರೂ. ಇಡುಗಂಟು ನೀಡಲಾಗುತ್ತದೆ. ಶೈಕ್ಷಣಿಕ ಸಂಯೋಜಕರಿಗೆ ವಾರ್ಷಿಕ 95.08 ಕೋಟಿ ರೂ. ಅನುದಾನ ನೀಡಲಾಗುತ್ತದೆ ಎಂದರು.

10,335 ಕರ್ತವ್ಯ ನಿರ್ವಹಿಸಿದ ಅತಿಥಿ ಉಪನ್ಯಾಸಕರು

5,267 ಯುಜಿಸಿ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರು



5,068 ಯುಜಿಸಿ ಅರ್ಹತೆ ಹೊಂದಿರದ ಅತಿಥಿ ಉಪನ್ಯಾಸಕರು

3,853 ಯುಜಿಸಿ ಅರ್ಹತೆ ಹೊಂದದ ಕೌನ್ಸಿಲಿಂಗ್ ಮೂಲಕ ಆಯ್ಕೆಯಾದನಂತರ ಲಭ್ಯವಾದ ಅತಿಥಿ ಉಪನ್ಯಾಸಕರು

ಕೌನ್ಸೆಲಿಂಗ್ ಆಧಾರಿತ ವರ್ಗಾವಣೆ ವ್ಯವಸ್ಥೆ ಜಾರಿ

◆ **ಬೆಂಗಳೂರು:** ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಬಿಎಂಆರ್‌ಡಿಎ ಮತ್ತು ನಗರ ನಿಗಮಗಳಲ್ಲಿನ ಎಲ್ಲಾ ಉಪ-ನೋಂದಣಾಧಿಕಾರಿಗಳ ವರ್ಗಾವಣೆಯನ್ನು ಪಾರದರ್ಶಕ, ಪ್ರಭಾವವಿಲ್ಲದ, ಯಾರದ್ದೂ ಹಸ್ತಕ್ಷೇಪವಿಲ್ಲದ ಕೌನ್ಸೆಲಿಂಗ್ ಆಧಾರಿತ ವರ್ಗಾವಣಾ ವ್ಯವಸ್ಥೆಯನ್ನು ಜಾರಿಗೊಳಿಸಿದ್ದೇವೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಚಿವರು, ಈ ಪ್ರಕ್ರಿಯೆಯನ್ನು 2 ವರ್ಷಗಳ ಹಿಂದೆಯೇ ಪ್ರಾರಂಭಿಸಿದ್ದೇವೆ. ನಗರಗಳಲ್ಲಿ ಹೆಚ್ಚು ವರ್ಷ ಸೇವೆ ಸಲ್ಲಿಸಿದ 33 ಉಪ ನೋಂದಣಿದಾರರನ್ನು 2024ರಲ್ಲಿ ಕಡ್ಡಾಯವಾಗಿ ವರ್ಗಾವಣೆ ಮಾಡಿ ಕೌನ್ಸೆಲಿಂಗ್ ಮೂಲಕ ಜಾಗ ನೀಡಲಾಗಿತ್ತು. ವರ್ಗಾವಣೆಯಿಂದ ಖಾಲಿಯಾಗಿದ್ದ ನಗರ ಭಾಗದ ಹುದ್ದೆಗಳನ್ನು ಮುಕ್ತ ಮತ್ತು ಪಾರದರ್ಶಕ ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ಭರ್ತಿ ಮಾಡಲಾಯಿತು. ಈ ಪಾರದರ್ಶಕ ಪ್ರಕ್ರಿಯೆಯಲ್ಲಿ ಒಟ್ಟು 90 ಅಧಿಕಾರಿಗಳನ್ನು ವರ್ಗಾಯಿಸಲಾಯಿತು ಎಂದಿದ್ದಾರೆ. 2024ರಲ್ಲಿ ಈ ವ್ಯವಸ್ಥೆಯನ್ನು ಒಮ್ಮೆ ಪ್ರಾಯೋಗಿಕವಾಗಿ ಪ್ರಾರಂಭಿಸಿದ್ದೆವು. ಈಗ, ನಾವು ಮುಂದಿನ ಪ್ರಮುಖ ಹೆಜ್ಜೆ ಇಡುತ್ತಿದ್ದೇವೆ. 2024ರಲ್ಲಿ ಒಂದು-ಬಾರಿ ಕ್ರಮವಾಗಿದ್ದನ್ನು ಈಗ ನಿಯಮಿತ ಮತ್ತು ಶಾಶ್ವತ ವ್ಯವಸ್ಥೆಯಾಗಿ ಮಾಡಲಾಗುತ್ತಿದೆ. ಇಂದಿನಿಂದ ಪ್ರತಿ ವರ್ಷ ಇದನ್ನು ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ತಿದ್ದುಪಡಿ ಅಥವಾ ನಿಯಮಗಳನ್ನು ತಂದಿದ್ದೇವೆ ಎಂದಿದ್ದಾರೆ.

ಪ್ರಮುಖ ನಗರ ಪ್ರದೇಶಗಳಲ್ಲಿ 5 ವರ್ಷಗಳನ್ನು ಪೂರ್ಣಗೊಳಿಸಿದ ಅಧಿಕಾರಿಗಳನ್ನು ಕೌನ್ಸೆಲಿಂಗ್ ಮೂಲಕ ನಗರೇತರ ಪ್ರದೇಶಗಳಿಗೆ ವರ್ಗಾಯಿಸಲಾಗುತ್ತದೆ. ಕೆಲಸದ ವಾತಾವರಣವನ್ನು ಸೃಷ್ಟಿಸುವ ನ್ಯಾಯಯುತ ಮತ್ತು ಪಾರದರ್ಶಕ ವ್ಯವಸ್ಥೆಯನ್ನು ರಚಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

7 ಜನರ ಮೃತದೇಹ ಹಸ್ತಾಂತರ

◆ **ಬೆಂಗಳೂರು:** ಭಾರೀ ಗಾಳಿ ಮಳೆಗೆ ಆಸ್ಪತ್ರೆಯ ತಡೆಗೋಡೆ ಕುಸಿದು ದುರ್ಮರಣಕ್ಕೀಡಾದ ಏಳು ಜನರ ಮೃತದೇಹಗಳನ್ನ ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ತಡರಾತ್ರಿ ಪೊಲೀಸರ ಭದ್ರತೆಯೊಂದಿಗೆ ಬೌರಿಂಗ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಪೂರ್ಣಗೊಳಿಸಲಾಗಿದ್ದು, ಸೋಮವಾರ ಮುಂಜಾನೆ ವೇಳೆಗೆ ಮೃತದೇಹಗಳನ್ನು ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಈದುರಂತಕ್ಕೆಸಂಬಂಧಿಸಿದಂತೆಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವಿನ ಪ್ರಕರಣ (ಯುಡಿಆರ್) ದಾಖಲಿಸಿಕೊಳ್ಳಲಾಗಿದೆ.

ಬುಧವಾರ ಸಂಜೆ ವೇಳೆಗೆ ನಗರದಲ್ಲಿ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದಿತ್ತು. ಪರಿಣಾಮ ಪಕ್ಕದ ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುತ್ತಿದ್ದ ಮೊಹಮ್ಮದ್ ಅಬ್ದುಲ್ ಹಕ್(52), ಫಯಾಜ್ ಅಹಮ್ಮದ್(39), ಹೆಣ್ಣು ಮಗು ಮುಸಾವೀರ್ ಬೇಗಂ(6), ಕೇರಳದ ಪ್ರವಾಸಿಗರಾದ ಲತಾ(57), ಸ್ಮಿತಾ(47), ಉತ್ತರಪ್ರದೇಶದ ಮೊಹಮದ್ ಸಲಾವುದ್ದಿನ್ ಅನ್ಸಾರಿ(36) ಹಾಗೂ ಅಸ್ಸಾಂನ ನಸೀಮುಲ್ಲಾ(19) ಸ್ಥಳದಲ್ಲೇ ಮೃತಪಟ್ಟಿದ್ದರು. ಅಲ್ಲದೇ ಕೇರಳ ಮೂಲದ ಪ್ರೀತಿ (51), ಸಿಜಾ (45) ಹಾಗೂ ಮಾಯಾ(51) ಎಂಬ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಅವರಿಗೆ ಚಿಕಿತ್ಸೆ ಮುಂದುವರಿದಿದೆ.

ಭಾರೀ ಗಾಳಿ ಮಳೆಗೆ ತಡೆಗೋಡೆ ಕುಸಿದು ದುರ್ಘಟನೆ



ಉನ್ನತ ಮಟ್ಟದ ತನಿಖೆಗೆ ಆಗ್ರಹ

ಬೌರಿಂಗ್ ಆಸ್ಪತ್ರೆ ಕಟ್ಟಡ ಹಳೆಯದಾಗಿದ್ದರೂ ಜಿಬಿಎ ಅಧಿಕಾರಿಗಳಾಗಲಿ, ಶಾಸಕರಾಗಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದೇ ದುರಂತಕ್ಕೆ ಕಾರಣ ಎಂದು ವಿಪಕ್ಷಗಳು ಆರೋಪಿಸಿವೆ. ಏಳು ಮಂದಿ ಅಮಾಯಕರ ಸಾವಿಗೆ ಆಡಳಿತದ ನಿರ್ಲಕ್ಷ್ಯವೇ ಕಾರಣವಾಗಿದ್ದು, ಜಿಬಿಎ ಅಧಿಕಾರಿಗಳು, ಸ್ಥಳೀಯ ಶಾಸಕರನ್ನು ಹೊಣೆಗಾರರನ್ನಾಗಿಸಬೇಕು. ಜತೆಗೆ ದುರಂತ ಕುರಿತಂತೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಉನ್ನತ ಮಟ್ಟದ ತನಿಖೆ ನಡೆಸಬೇಕು. ಸಂತ್ರಸ್ತರ ಕುಟುಂಬಗಳಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಬೇಕು ಎಂದು ವಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ.

ಸಶಸ್ತ್ರ ಪಡೆಗೆ ಸಾವಯುವ ಪೂರಿತ ಆಹಾರ ಪೂರೈಕೆ



ಕೇಂದ್ರ ಆಹಾರ ಸಚಿವ ಜೋಶಿ ಹೇಳಿಕೆ

◆ **ಹೊಸದಿಲ್ಲಿ:** ದೇಶದ ಸಶಸ್ತ್ರ ಪಡೆಗಳಿಗೆ ಸಾವಯವ ಪೂರಿತ ಆಹಾರ ಪೂರೈಕೆಗೆ ಕೇಂದ್ರ ಸರ್ಕಾರ ಒತ್ತು ನೀಡಿದ್ದು, ಭಾರತ್ ಬ್ರ್ಯಾಂಡ್ ಪೌಷ್ಟಿಕ ಆಹಾರ, ಬಾಸ್ಮತಿ ಅಕ್ಕಿ ಪೂರೈಕೆಗೆ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ.

ದಿಲ್ಲಿಯ ಕೃಷಿ ಭವನದಲ್ಲಿ ಗುರುವಾರ, ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು ಈ ಸಂಬಂಧ ಭಾರತೀಯ ಸೇನೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪೌಷ್ಟಿಕ ಆಹಾರ ಪೂರೈಕೆ ಬಗ್ಗೆ ಚರ್ಚಿಸಿದರು. ಸಶಸ್ತ್ರ ಪಡೆಗಳಿಗೆ ಗುಣಮಟ್ಟದ ಮತ್ತು ಸಾವಯವ ಪಡಿತರ ಆಹಾರ ಧಾನ್ಯ ಪೂರೈಸುವ ಬಗ್ಗೆ ಗಮನ ಹರಿಸಿದ ಸಚಿವರು, ಭಾರತ್ ಬ್ರ್ಯಾಂಡ್ ಅಕ್ಕಿ ಮತ್ತು ಗೋಧಿ ಉತ್ಪನ್ನ ಸರಬರಾಜು ವಿಸ್ತರಣೆಗೆ ಮಹತ್ವದ ಚರ್ಚೆ ನಡೆಸಿದರು.

ಅಕ್ಕಿ ಮತ್ತು ಗೋಧಿಯಂತಹ ಭಾರತ್ ಬ್ರ್ಯಾಂಡ್ ಉತ್ಪನ್ನಗಳ ವಿಸ್ತರಣೆ ಜತೆಗೆ ಉತ್ತಮ ಗುಣಮಟ್ಟದ ಬಾಸ್ಮತಿ ಅಕ್ಕಿ ಸಂಗ್ರಹಣೆ ಸೇರಿದಂತೆ ಸಶಸ್ತ್ರ ಪಡೆಗಳಿಗೆ ಅಗತ್ಯ ವಸ್ತುಗಳ ಖರೀದಿ ಕುರಿತು ಸಚಿವ ಜೋಶಿ ಅವರು ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡಿದರು. ಇದೇ ವೇಳೆ ಸಚಿವ ಜೋಶಿ ಅವರು, ರೈತರನ್ನು ಪ್ರೋತ್ಸಾಹಿಸುವಲ್ಲಿ ಮತ್ತು ಬೆಂಬಲಿಸುವಾಗ ಮತ್ತು ಸಶಸ್ತ್ರ ಪಡೆಗಳಿಗೆ ಉತ್ತಮ ಗುಣಮಟ್ಟದ, ಪೌಷ್ಟಿಕ ಆಹಾರ ಪೂರೈಕೆಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದರು.

ನಾವೀನ್ಯತಾ ಸೃಷ್ಟಿ ಸಮಾರೋಪದಲ್ಲಿ ಸಚಿವೆ ಕರಂದ್ಲಾಜೆ ಅಭಿಮತ

ಯುವಶಕ್ತಿ ಭಾರತದ ಅಭಿವೃದ್ಧಿಯ ಎಂಜಿನ್

◆ **ಧಾರವಾಡ:** ಯುವಶಕ್ತಿ ದೇಶದ ಅಭಿವೃದ್ಧಿ ಎಂಜಿನ್. ನಾವೀನ್ಯತೆ, ತಂತ್ರಜ್ಞಾನದ ಸದ್ಬಳಸಿ, ಜಾಗತಿಕ ಮಟ್ಟದಲ್ಲಿ ಭಾರತ ಅಗ್ರಸ್ಥಾನಕ್ಕೆ ಏರಿಸಬೇಕು ಎಂದು ಕೇಂದ್ರ ಕಾರ್ಮಿಕ ಇಲಾಖೆಯ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಸಲಹೆ ನೀಡಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನಗರದ ಅಭಿಯಾಂತ್ರಿಕ-ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮೂರು ದಿನ ನಡೆದ ರಾಜ್ಯಮಟ್ಟದ ನಾವೀನ್ಯತಾ ಸೃಷ್ಟಿ-2026 ಕಾರ್ಯಕ್ರಮದಲ್ಲಿ ಗುರುವಾರ ಸಮಾರೋಪ ಭಾಷಣ ಮಾಡಿದರು.

ನಾವೀನ್ಯತೆಗೆ ಒತ್ತು: ಸಂಶೋಧನೆಗಳು ಕೇವಲ ಪ್ರಯೋಗಾಲಯಕ್ಕೆ ಸೀಮಿತ ಆಗದೆ ಸಾಮಾನ್ಯ ಜನರ ಸಮಸ್ಯೆಗಳಿಗೆ ಪರಿಹಾರ ನೀಡುವಂತಿರಬೇಕು. ಕೃಷಿ, ರಕ್ಷಣೆ, ಕೃಗಾರಿಕಾ ವಲಯಗಳಲ್ಲಿ ಸ್ಥಳೀಯ ತಂತ್ರಜ್ಞಾನಕ್ಕೆ ಒತ್ತು ನೀಡಬೇಕಿದೆ ಎಂದರು.

ಆತ್ಮನಿರ್ಭರ ಭಾರತ: ಪ್ರಧಾನಿ ಮೋದಿ ಅವರ 'ಆತ್ಮನಿರ್ಭರ ಭಾರತ'ದ ಕನಸನ್ನು ನನಸು ಮಾಡಲು ಎಂಜಿನಿಯರಿಂಗ್ ವಿದ್ಯಾರ್ಥಿಗಳ ಕೊಡುಗೆ ಅಪಾರ. ಹೊಸ ಆಲೋಚನೆ ಗಳಿಗೆ ಸರ್ಕಾರ ಸ್ಟಾರ್ಟ್‌ಅಪ್ ಮೂಲಕ ವೇದಿಕೆ ಕಲ್ಪಿಸುತ್ತಿದೆ ಎಂದು ತಿಳಿಸಿದರು.



> ತಂತ್ರಜ್ಞಾನವು ಮನುಷ್ಯನ ಜೀವನ ಸುಲಭಗೊಳಿಸುವ ಜತೆಗೆ ನಾವೀನ್ಯತೆಗಳು ಗ್ರಾಮೀಣ ಭಾರತದ ಸಬಲೀಕರಣಕ್ಕೂ ಪೂರಕವಾಗಿರಬೇಕು. ಶೈಕ್ಷಣಿಕ ಸಂಸ್ಥೆ ಮತ್ತು ಉದ್ಯಮಗಳ ನಡುವೆ ಸಮನ್ವಯ ಸಾಧಿಸಿದಾಗ ಹೊಸ ನಾವೀನ್ಯತೆಗಳು ಮಾರುಕಟ್ಟೆಗೆ ಬರಲು ಸಾಧ್ಯ.
> ■ ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಶೈಕ್ಷಣಿಕ ಪರಂಪರೆ: ಧಾರವಾಡವು ವಿದ್ಯಾಕಾಶಿಯಾಗಿದ್ದು, ಇಲ್ಲಿನ ಎಸ್‌ಡಿಎಂ ಶಿಕ್ಷಣ ಸಂಸ್ಥೆಯು ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಗೆ ಮಾದರಿ. ವಿಕಸಿತ ಮತ್ತು ಆತ್ಮನಿರ್ಭರ ಭಾರತಕ್ಕೆ ಪೂರಕ ಶಿಕ್ಷಣ ನೀಡುತ್ತಿರುವುದಾಗಿಯೂ ಶೋಭಾ ಶ್ಲಾಘಿಸಿದರು. ಧಾರವಾಡ ಐಐಐಟಿ ನಿರ್ದೇಶಕ ಡಾ.ಮಹಾದೇವ ಪ್ರಸನ್ನ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹೊಸ ಆಲೋಚನೆಗಳಿಗೆ ಹೆಚ್ಚಿನ ಬೆಲೆ ಎಂದರು.

ಅತ್ಯುತ್ತಮ ಮಾದರಿಗಳಿಗೆ ಪ್ರಶಸ್ತಿ

ಮೂರು ದಿನ ನಡೆದ ಸೃಷ್ಟಿ ನಾವೀನ್ಯತಾ ರಾಜ್ಯಮಟ್ಟದ ಈ ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ನಾವೀನ್ಯತೆ ಪ್ರದರ್ಶಿಸಿದರು. ಅಲ್ಲದೇ, ಅತ್ಯುತ್ತಮ ಮಾದರಿಗಳಿಗೆ ಸಚಿವರು ಪ್ರಶಸ್ತಿ ನೀಡಿ ಗೌರವಿಸಿದರು.

ಅಭಿವೃದ್ಧಿ ಹೆಜ್ಜೆ ಇರಿಸಿ: ಎಬಿವಿಪಿ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಬಾಲಕೃಷ್ಣ ಮಾತನಾಡಿ, ಪ್ರತಿಭೆಗಳು ಗುರುತಿಸುವ ತಾಣವಾಗಿಯೂ ಸೃಷ್ಟಿ ಬೆಳೆದಿದೆ ಎಂದರು. ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂದರಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ, ಸೃಷ್ಟಿ ಸಂಚಾಲಕ ದರ್ಶನ್ ವಿ., ದರ್ಶನ ಹೆಗಡೆ, ಡಾ.ಬವರಾಜ ಕುಬಗಡ್ಡಿ, ವಿಜಯಲಕ್ಷ್ಮೀ ಮಾನೆ, ಪ್ರೊ.ಇಂದಿರಾ ಉಮರ್ಜಿ ಇದ್ದರು.

ಸಚಿವ ಶರಣಪ್ರಕಾಶ ಪಾಟೀಲ್ ವಿರುದ್ಧ ನಿಖಿಲ್ ಕುಮಾರಸ್ವಾಮಿ ಕಿಡಿ

ಮಹಿಳಾ ಮೀಸಲಾತಿ ಬಿಲ್‌ಗೆ ಕೈ ವಿರೋಧ

◆ **ಕಲಬುರಗಿ:** ಹಿಂದೆ ಮೂರು ಬಾರಿ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್ ತಮ್ಮ ಸ್ವಂತಕ್ಷೇತ್ರ ಸೇಡಂಗೆ ಒಂದು ಸುಸಜ್ಜಿತ ಸರ್ಕಾರಿ ಆಸ್ಪತ್ರೆ ನಿರ್ಮಾಣ ಮಾಡಲು ಸಾಧ್ಯವಾಗಿಲ್ಲ. ಇಲ್ಲಿನ ಜನರು ತುರ್ತು ಚಿಕಿತ್ಸೆಗೆ ಕಲಬುರಗಿ ಅಥವಾ ಹೈದರಾಬಾದ್‌ಗೆ ಹೋಗಬೇಕಾದ ದುಸ್ಥಿತಿ ಇದೆ. ಜನರ ಆರೋಗ್ಯಕ್ಕಿಂತ ಇವರಿಗೆ ರಾಜಕೀಯವೇ ಮುಖ್ಯವಾಗಿದೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು.

ಜಿಲ್ಲೆಯ ಸೇಡಂ ತಾಲೂಕಿನ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಆದೇಶ ನೀಡಿದರೂ, ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುತ್ತಿಲ್ಲ. ಒಂದಲ್ಲ ಒಂದು ಸಬೂಬು ಹೇಳಿ ಚುನಾವಣೆಯನ್ನು ಮುಂದೂಡುತ್ತಲೇ ಬಂದಿದೆ. ಚುನಾವಣೆ ನಡೆಯದೆ ಇರುವುದರಿಂದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮಟ್ಟದಲ್ಲಿ ಅಭಿವೃದ್ಧಿ ಕೆಲಸಗಳು ಸಂಪೂರ್ಣ ಸ್ಥಗಿತಗೊಂಡಿವೆ. ಜೆಡಿಎಸ್ ಈ ಕೂಡಲೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದರು.



ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ರೈತರ ಸಂಪೂರ್ಣ ಸಾಲ ಮನ್ನಾ ಮಾಡಿ ಅನ್ನದಾತರ ನೆರವಿಗೆ ನಿಂತರು. ಆದರೆ, ಕಾಂಗ್ರೆಸ್ ಸರ್ಕಾರಕ್ಕೆ ಯಾವುದೇ ಒತ್ತಡ ಇಲ್ಲದಿದ್ದರೂ, ತಮ್ಮ ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಪಾಸ್ ಮಾಡಲು ಮುಂದಾದಾಗ, ಕಾಂಗ್ರೆಸ್ ತಿರಸ್ಕರಿಸಿದೆ. ಈಗ ಮಹಿಳೆಯರಿಗೆ ತಿಂಗಳಿಗೆ 2,000 ರೂ. ಕೊಟ್ಟು ಸಬಲೀಕರಣ ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಮಹಿಳೆಯರನ್ನು ನಿಜವಾಗಿ ಸಬಲೀಕರಣಗೊಳಿಸಿದವರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು. ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ 50% ಮೀಸಲಾತಿ ಜಾರಿಗೆ ತಂದು, ಗ್ರಾಮ ಪಂಚಾಯಿತಿಯಿಂದ ಲೋಕಸಭೆಯವರೆಗೆ ಮಹಿಳೆಯರು ನಾಯಕತ್ವ ವಹಿಸಲು ದಾರಿ ಮಾಡಿಕೊಟ್ಟರು ಎಂದರು.

ಕೋರ್ ಕಮಿಟಿ ಅಧ್ಯಕ್ಷ ಜೆ.ಕೆ ಕೃಷ್ಣಾರೆಡ್ಡಿ, ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್, ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್, ರಾಜ ವೆಂಕಟಪ್ಪ ನಾಯಕ್, ಜಿಲ್ಲಾಧ್ಯಕ್ಷ ಬಾಲರಾಜ್ ಗುತ್ತೇದಾರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಸಂಪಾದಕೀಯ

ಸಾರಿಗೆ ಹೋರಾಟ: ತಾತ್ಕಾಲಿಕ ತೇಪೆಗಳಿಗೆ ಅಂತ್ಯ ಯಾವಾಗ?

ರಾಜ್ಯದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಹೃದಯವಾಗಿರುವ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳ ಕಾರ್ಮಿಕರ ಪ್ರತಿಭಟನೆ ಆಗಾಗ ಕೇಳಿಬರುತ್ತಿರುವ ಸುದ್ದಿಯಾಗಿಬಿಟ್ಟಿದೆ. ಪ್ರತಿಬಾರಿಯೂ ಕಾರ್ಮಿಕರು ಹೋರಾಟದ ಹಾದಿ ಹಿಡಿದಾಗ, ರಾಜ್ಯ ಸರ್ಕಾರ ತಾತ್ಕಾಲಿಕ ಭರವಸೆಗಳ ಮೂಲಕ ಪರಿಸ್ಥಿತಿಯನ್ನು ತಣಿಸುವ ಪ್ರಯತ್ನ ಮಾಡುತ್ತಿದೆ. ಆದರೆ, ಇಂತಹ ತಾತ್ಕಾಲಿಕ ಪರಿಹಾರಗಳು ಮೂಲ ಸಮಸ್ಯೆಗಳನ್ನು ನಿವಾರಿಸಲು ವಿಫಲವಾಗುತ್ತಿವೆ.



ಕಾರ್ಮಿಕರ ಪ್ರಮುಖ ಬೇಡಿಕೆಗಳಲ್ಲಿ ವೇತನ ಪರಿಷ್ಕರಣೆ, ಬಾಕಿ ಸೌಲಭ್ಯಗಳ ಪಾವತಿ, ಕೆಲಸದ ಒತ್ತಡದ ಕಡಿತ ಹಾಗೂ ಸೇವಾ ಭದ್ರತೆ ಪ್ರಮುಖವಾಗಿವೆ. ಇವು ಉದ್ಯೋಗದ ಗೌರವ ಮತ್ತು ಬದುಕಿನ ಭದ್ರತೆಯೊಂದಿಗೆ ನೇರವಾಗಿ ಸಂಬಂಧ ಹೊಂದಿವೆ. ಆದರೂ, ಸರ್ಕಾರವು ಹಣಕಾಸಿನ ಅಡಚಣೆಗಳನ್ನೋ ಅಥವಾ ಆಡಳಿತಾತ್ಮಕ ಸವಾಲುಗಳನ್ನೋ ಕಾರಣವಾಗಿ ಮುಂದಿಟ್ಟುಕೊಂಡು ನಿರಂತರವಾಗಿ ಈ ಬೇಡಿಕೆಗಳನ್ನು ಮುಂದೂಡುತ್ತಿರುವುದು ಸಮಸ್ಯೆಯನ್ನು ಗಾಢಗೊಳಿಸಿದೆ. ಇದರಿಂದಾಗಿ, ಕಾರ್ಮಿಕರಲ್ಲಿ ಅಸಮಾಧಾನ ಹೆಚ್ಚುತ್ತಿದೆ ಮತ್ತು ಹೋರಾಟದ ಮಾರ್ಗವೇ ಏಕೈಕ ಆಯ್ಕೆ ಎಂಬ ಭಾವನೆ ಬಲವಾಗುತ್ತಿದೆ. ಈ ಸ್ಥಿತಿ ಸಾರ್ವಜನಿಕ ಸಾರಿಗೆ ಸೇವೆಯ ನಿರಂತರತೆಗೆ ಕೂಡ ಅಪಾಯಕಾರಿಯಾಗಿದೆ. ಪ್ರಯಾಣಿಕರಿಗೂ ಇದು ಅನಾನುಕೂಲಕಾರಿಯಾಗಿದೆ.

ಇಂತಹ ಸಂದರ್ಭದಲ್ಲಿ, ಸರ್ಕಾರವು ದೀರ್ಘಕಾಲೀನ ದೃಷ್ಟಿಕೋನವನ್ನು ಅಳವಡಿಸಿಕೊಂಡು, ಕಾರ್ಮಿಕ ಸಂಘಟನೆಗಳೊಂದಿಗೆ ಪ್ರಾಮಾಣಿಕ ಮಾತುಕತೆಗೆ ಮುಂದಾಗಬೇಕು. ಕೇವಲ ತಾತ್ಕಾಲಿಕ ಸಮಾಧಾನವಲ್ಲ, ಒಂದು ಸಮಗ್ರ ಮತ್ತು ಶಾಶ್ವತ ಪರಿಹಾರ ಕಂಡುಹಿಡಿಯುವ ಪ್ರಯತ್ನ ಅಗತ್ಯ. ಪರಸ್ಪರ ವಿಶ್ವಾಸ ಮತ್ತು ಸಹಕಾರದ ಆಧಾರದಲ್ಲಿ ಕೈಗೊಂಡ ಮಾತುಕತೆ ಮಾತ್ರ ಈ ಸಮಸ್ಯೆಗೆ ಅಂತಿಮ ಪರಿಹಾರ ನೀಡಬಲ್ಲದು.

ಆದರೆ, ಇಲ್ಲಿ ಒಂದು ಕಠಿಣ ಪ್ರಶ್ನೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಎಷ್ಟರವರೆಗೆ ಇದೇ ಚಕ್ರ ಮುಂದುವರಿಯಬೇಕು? ಪ್ರತೀ ಪ್ರತಿಭಟನೆಗೂ 'ಸಭೆ–ಭರವಸೆ–ವಿಳಂಬ' ಎಂಬ ಮಾದರಿಯೇ ಮುಂದುವರಿದರೆ, ಅದು ಆಡಳಿತದ ದೌರ್ಬಲ್ಯವೋ ಅಥವಾ ನೀತಿ ಸ್ಪಷ್ಟತೆಯ ಕೊರತೆಯೋ ಎಂಬ ಅನುಮಾನ ಸಹಜವಾಗುತ್ತದೆ. ಸಮಸ್ಯೆಗಳನ್ನು ಕಾಲಹರಣ ಮಾಡುವ ಧೋರಣೆ ತಾತ್ಕಾಲಿಕವಾಗಿ ಸುಲಭದಂತಾಗಬಹುದು, ಆದರೆ ದೀರ್ಘಾವಧಿಯಲ್ಲಿ ಅದು ಇನ್ನಷ್ಟು ದೊಡ್ಡ ಸಂಕಷ್ಟಕ್ಕೆ ದಾರಿ ಮಾಡಿಕೊಡುತ್ತದೆ. ಇದೇ ವೇಳೆ, ಕಾರ್ಮಿಕ ಸಂಘಟನೆಗಳೂ ತಮ್ಮ ಹೋರಾಟವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಮತೋಲನದಲ್ಲಿಡಬೇಕಾಗಿದೆ. ಆದರೆ, ಈ ಸಮತೋಲನವನ್ನು ಸಾಧಿಸಲು ಸರ್ಕಾರವೇ ಮೊದಲ ಹೆಜ್ಜೆ ಇಡುವುದು ಸೂಕ್ತ. ನಿರ್ಧಾರಗಳಲ್ಲಿ ಸ್ಪಷ್ಟತೆ, ಸಮಯಬದ್ಧ ಕ್ರಮಗಳು ಮತ್ತು ಜವಾಬ್ದಾರಿತನ ಈ ಮೂರು ಅಂಶಗಳು ಸೇರಿ ಬಂದಾಗ ಮಾತ್ರ, ಸಾರಿಗೆ ವ್ಯವಸ್ಥೆಯ ಈ ಮರುಕಳಿಸುವ ಸಂಕಷ್ಟಕ್ಕೆ ಶಾಶ್ವತ ಪರಿಹಾರ ದೊರೆಯಬಹುದು. ಹಾಗಂತ ಇಲ್ಲಿ ಸರ್ಕಾರದ್ದು ತಪ್ಪು, ಕಾರ್ಮಿಕ ಸಂಘಟನೆಗಳ ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಇಬ್ಬರೂ ಕುಳಿತು ಬಗೆಹರಿಸಿಕೊಳ್ಳಬೇಕು ಅಷ್ಟೇ.

ಬುದ್ಧ ಪೂರ್ಣಿಮೆ; ಕರುಣೆಯ ಸಾಕ್ಷಾತ್ಕಾರ

ಸಿ. ಪಿ. ರಾಧಾಕೃಷ್ಣನ್, ಉಪರಾಷ್ಟ್ರಪತಿ



ದೇವಾಲಯಗಳಲ್ಲಿ ಉತ್ಸವಗಳನ್ನು ಆಚರಿಸಲಾಗುವ ಚಿತ್ರಾ ಪೌರ್ಣಮಿಯ ಈ ಶುಭ ದಿನದಂದು ಪ್ರತಿ ಮನೆಯಲ್ಲೂ ಸಮೃದ್ಧಿ ಬೆಳೆಯಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಎಲ್ಲಾ ಸಹೋದರ ಸಹೋದರಿಯರಿಗೆ ಬುದ್ಧ ಪೂರ್ಣಿಮೆಯ ಹೃತ್ಪೂರ್ವಕ ಶುಭಾಶಯಗಳು.

ಭಾರತವು ಜಗತ್ತಿಗೆ ನೀಡಿದ ಅನೇಕ ಶ್ರೇಷ್ಠ ಕೊಡುಗೆಗಳಲ್ಲಿ ಬೌದ್ಧಧರ್ಮವು ಪ್ರಮುಖವಾದುದು. ಭಗವಾನ್ ಬುದ್ಧನ ಜೀವನ ಮತ್ತು ಅಮೂಲ್ಯ ಬೋಧನೆಗಳು ಪ್ರಪಂಚಾದ್ಯಂತ ಕೋಟ್ಯಂತರ ಜನರ ಬದುಕಿಗೆ ಬೆಳಕಾಗಿದೆ. 'ತನ್ನನ್ನು ತಾನು ಅರಿಯುವುದು' ಅಥವಾ ಆತ್ಮಸಾಕ್ಷಾತ್ಕಾರದ ಮಹತ್ವವನ್ನು ಭಾರತವು ಇಡೀ ಜಗತ್ತಿಗೆ ಕಲಿಸಿಕೊಟ್ಟಿದೆ. ಬುದ್ಧ ಎಂಬ ಪದದ ಅರ್ಥವೇ ಜಾಗೃತಗೊಂಡವನು ಅಥವಾ ಅರಿವು ಪಡೆದವನು ಎಂದಾಗಿದೆ. ಮಾನವಕುಲಕ್ಕೆ ಆತ್ಮದ ಅರಿವು ಮೂಡಿಸಲು ಶ್ರಮಿಸಿದ ಈ ಮಹಾತ್ಮನ ಜನನ ಮತ್ತು ಜ್ಞಾನೋದಯ ಎರಡೂ ಒಂದೇ ದಿನದಂದು ಸಂಭವಿಸಿರುವುದು ಅತ್ಯಂತ ವಿಶೇಷವಾಗಿದೆ.



ರಾಜಕುಮಾರ ಸಿದ್ಧಾರ್ಥ ಎಲ್ಲಾ ಸುಖ–ಸೌಲಭ್ಯಗಳ ನಡುವೆ ಬೆಳೆದವರು. ಆದರೆ, ತಮ್ಮ 29ನೇ ವಯಸ್ಸಿನಲ್ಲಿ ಅರಮನೆಯ ವೈಭೋಗ, ಪತ್ನಿ, ಮಗ ಮತ್ತು ಸಕಲ ಸಂಪತ್ತನ್ನು ತ್ಯಜಿಸಿ ಸತ್ಯದ ಹುಡುಕಾಟಕ್ಕೆ ಹೊರಟರು. ಆರು ವರ್ಷಗಳ ಕಠಿಣ ತಪಸ್ಸಿನ ನಂತರ, ಬೋಧಗಯಾದ ಬೋಧಿ ವೃಕ್ಷದ ಅಡಿಯಲ್ಲಿ ಅವರಿಗೆ ಪರಮ ಜ್ಞಾನೋದಯವಾಯಿತು. ಅಂದಿನಿಂದ ಅವರು ಬುದ್ಧ ಎಂದು ಪ್ರಸಿದ್ಧರಾದರು. ಬೌದ್ಧ ಧರ್ಮದ ನಾಲ್ಕು 'ಉದಾತ್ತ ಸತ್ಯಗಳು' ಮತ್ತು ನೈತಿಕ ಜೀವನದ ಹಾದಿಯು ಒಂದು ಹೊಸ ತತ್ವಶಾಸ್ತ್ರಕ್ಕೆ ನಾಂದಿ ಹಾಡಿತು. ಇದು ವಿಶ್ವ ಇತಿಹಾಸದಲ್ಲಿ ಭಾರತದ ಗೌರವವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ವಾರಾಣಸಿಯ ಸಮೀಪವಿರುವ ಸಾರನಾಥದಲ್ಲಿ, ಅವರು ಐವರು ಬಿಕ್ಕುಗಳಿಗೆ ತಮ್ಮ ಮೊದಲ ಬೋಧನೆಯನ್ನು ನೀಡಿದರು. ಧರ್ಮಚಕ್ರ ಪ್ರವರ್ತನ ಎಂದು ಕರೆಯಲ್ಪಡುವ ಈ ಬೋಧನೆಯು ಬೌದ್ಧಧರ್ಮದ ಅಡಿಪಾಯವಾಯಿತು ಮತ್ತು ಬೌದ್ಧಧರ್ಮದ ಔಪಚಾರಿಕ ಆರಂಭಕ್ಕೆ ದಾರಿಯಾಯಿತು. ಕಾಲಾನಂತರದಲ್ಲಿ, ಬುದ್ಧನ ಬೋಧನೆಗಳಿಗೆ ಮಾರುಹೋಗಿ ಅನೇಕರು ಅನುಯಾಯಿಗಳಾದರು. ಮಗಧದ ರಾಜ ಬಿಂಬಿಸಾರನು ರಾಜಗೃಹದ 'ವೇಣುವನ' (ಬಿದಿರಿನ ತೋಪು) ವನ್ನು ದಾನವಾಗಿ ನೀಡಿದರೆ, ಅನಾಥಪಿಂಡಿಕ ಎಂಬ ಶ್ರೀಮಂತ ವ್ಯಾಪಾರಿಯು ಇಡೀ 'ಜೇತವನ'ವನ್ನು ಚಿನ್ನದ ನಾಣ್ಯಗಳಿಂದ ಮುಚ್ಚಿ ಬೌದ್ಧವಿಹಾರವನ್ನು ನಿರ್ಮಿಸಿಕೊಟ್ಟನು. ಇಂತಹ ಕಾರ್ಯಗಳು ಅಂದಿನ ಭಾರತದಲ್ಲಿದ್ದ ಧರ್ಮದ ಮೇಲಿನ ಅಚಲ ನಂಬಿಕೆಯನ್ನು ತೋರಿಸುತ್ತವೆ.

ಭೂತಕಾಲದ ಬಗ್ಗೆ ಚಿಂತಿಸಬೇಡಿ, ವರ್ತಮಾನದಲ್ಲಿ ಬದುಕಿ. ಸತ್ಯಕ್ಕೆ ಹೆಚ್ಚಿನ ಶಕ್ತಿಯಿದೆ. ಮನಸ್ಸು ಎಲ್ಲಾ ಕ್ರಿಯೆಗಳ ಮೂಲವಾಗಿದೆ, ಆದ್ದರಿಂದ ಸಕಾರಾತ್ಮಕ ಆಲೋಚನೆಗಳನ್ನು ಬೆಳೆಸಿಕೊಳ್ಳಿ. ಕಷ್ಟ ಬಂದಾಗ ಹೆದರಿ ಓಡಬೇಡಿ. ಜೀವನದ ಪಯಣವು ಅಂತಿಮವಾಗಿ ವೈಯಕ್ತಿಕವಾದುದು. ಅದನ್ನು ಆಧ್ಯಾತ್ಮಿಕ ಹಾದಿಯಲ್ಲಿ ಮುನ್ನಡೆಸಿ. ಮಾತುಗಳು ನೋಯಿಸಬಹುದು, ಆದ್ದರಿಂದ ಮೃದುವಾಗಿ ಮಾತನಾಡಿ. ಪ್ರೀತಿ ಮತ್ತು ಅಹಿಂಸೆ ಅತ್ಯಗತ್ಯ. ಯಾವಾಗಲೂ ಕಲಿಕೆಯನ್ನು ಮುಂದುವರಿಸಿ ಎಂದಿಗೂ ನಿಲ್ಲಿಸಬೇಡಿ ಎನ್ನುವ ಉದಾತ್ತ ಚಿಂತನೆಗಳನ್ನು ಭಾರತೀಯ ತತ್ತ್ವಶಾಸ್ತ್ರಕ್ಕೆ ಸೇರಿಸಿದ ಶ್ರೇಯಸ್ಸು ಬೌದ್ಧ ಧರ್ಮದ್ದು. ತಮಿಳು ಸಾಹಿತ್ಯದ ಶ್ರೇಷ್ಠ ಕೃತಿಗಳಾದ ಮಣಿಮೇಖಲೈ ಮತ್ತು ಕುಂಡಲಕೇಸಿ ಬೌದ್ಧ ತತ್ವಶಾಸ್ತ್ರವನ್ನು ಸುಂದರವಾಗಿ ಚಿತ್ರಿಸಿವೆ. ಕಾಲಗತಿಯಲ್ಲಿ ಅನೇಕ ಗ್ರಂಥಗಳು ನಾಶವಾಗಿದ್ದರೂ ಅವು ನೀಡಿದ ಸಂದೇಶಗಳು ಇಂದಿಗೂ ಅಮೂಲ್ಯವಾಗಿವೆ. ''ಬುದ್ಧಿಯನ್ನು ಮಬ್ಬುಗೊಳಿಸುವ ಮಾದಕ ದ್ರವ್ಯಗಳು ಮತ್ತು ಜೀವಹಿಂಸೆಯನ್ನು ಜ್ಞಾನಿಗಳು ಯಾವತ್ತೂ ಒಪ್ಪುವುದಿಲ್ಲ; ಅರಿವುಳ್ಳವರು ಇವುಗಳಿಂದ ದೂರವಿರುತ್ತಾರೆ. ಹುಟ್ಟು–ಸಾವುಗಳು ಮತ್ತು ಸಾವಿನ ನಂತರದ ಮರುಜನ್ಮವು ನಿದ್ರೆ ಮತ್ತು ಎಚ್ಚರದಷ್ಟೇ ಸಹಜವಾದ ಸತ್ಯ. ಯಾರು ಸತ್ಕರ್ಮಗಳನ್ನು ಮಾಡುತ್ತಾರೋ ಅವರು ಉನ್ನತ ಗತಿಯನ್ನು ಪಡೆಯುತ್ತಾರೆ, ಕೆಟ್ಟ ಕೆಲಸ ಮಾಡುವವರು ಅಪಾರ ಸಂಕಟಕ್ಕೆ ಗುರಿಯಾಗುತ್ತಾರೆ. ಈ ಸತ್ಯವನ್ನು ಅರಿತ ವಿವೇಚನಾಶೀಲರು ಲೌಕಿಕ ವ್ಯಾಮೋಹಗಳನ್ನು ಕಡಿದುಕೊಳ್ಳುತ್ತಾರೆ'' ಹೀಗೆ ತಮಿಳು ಮಹಾಕಾವ್ಯ ಮಣಿಮೇಖಲೈ ಬೌದ್ಧಧರ್ಮದ ಸಾರವನ್ನು ವಿವರಿಸುತ್ತದೆ. (ಆಧಿರೈ ಪಿಚ್ಚೈಯಿಟ್ಟ ಕಾದೈ: 84–90)

ಬುದ್ಧನು ಐದು ಪ್ರಮುಖ ನೈತಿಕ ಸೂತ್ರಗಳನ್ನು (ಪಂಚಶೀಲ) ಬೋಧಿಸಿದನು: ಅಹಿಂಸೆ, ಕಳ್ಳತನ ಮಾಡದಿರುವುದು, ನೈತಿಕ ನಡವಳಿಕೆ, ಸತ್ಯಸಂಧತೆ ಮತ್ತು ಮಾದಕ ವಸ್ತುಗಳಿಂದ ದೂರವಿರುವುದು. ಕೇವಲ ಧರ್ಮವನ್ನಷ್ಟೇ ಅಲ್ಲದೆ, ಮನಸ್ಸೇ ಎಲ್ಲದಕ್ಕೂ ಮೂಲ ಎಂಬ ಮನೋವೈಜ್ಞಾನಿಕ ಸತ್ಯವನ್ನು ಅವರು ತಿಳಿಸಿಕೊಟ್ಟರು. ಒಳ್ಳೆಯ ಆಲೋಚನೆ ಮತ್ತು ನಡವಳಿಕೆಗಳು ಸಮಾಜದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡುತ್ತವೆ. ಕಂಗೆಟ್ಟ ಮನಸ್ಸುಗಳಿಗೆ ಸ್ಪಷ್ಟತೆ ಮತ್ತು ಜ್ಞಾನದ ಬೆಳಕು ನೀಡಿದ ಕಾರಣಕ್ಕಾಗಿ ಅವರನ್ನು ಏಷ್ಯಾದ ಬೆಳಕು ಎಂದು ಕರೆಯಲಾಗುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಹೇಳಿದ ಮಾತುಗಳು ಇಲ್ಲಿ ನೆನಪಿಗೆ ಬರುತ್ತವೆ: ಭಗವಾನ್ ಗೌತಮ ಬುದ್ಧನ ಜೀವನ ಸಂದೇಶವು ಇಂದಿಗೂ ಪ್ರಸ್ತುತವಾಗಿದೆ. ಶಾಂತಿಯು ನಮ್ಮೊಳಗಿನಿಂದಲೇ ಶುರುವಾಗುತ್ತದೆ ಎಂದು ಅವರು ಕಲಿಸಿದರು. ನಮ್ಮನ್ನು ನಾವು ಗೆಲ್ಲುವುದೇ ಜಗತ್ತಿನ ಶ್ರೇಷ್ಠ ವಿಜಯ ಎಂದು ಅವರು ತೋರಿಸಿಕೊಟ್ಟರು. ಇಂದಿನ ಜಗತ್ತಿನ ಸಂಘರ್ಷ ಮತ್ತು ಉದ್ವಿಗ್ನತೆಗಳ ನಡುವೆ ಬುದ್ಧನ ಬೋಧನೆಗಳು ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿವೆ. ಅಶೋಕನು ಕೇವಲ ದೇಶದೊಳಗೆ ಮಾತ್ರವಲ್ಲದೆ, ಬಿಕ್ಕುಗಳ ಸಹಾಯದೊಂದಿಗೆ ಏಷ್ಯಾದಾದ್ಯಂತ ಬೌದ್ಧ ಧರ್ಮವನ್ನು ಹರಡಿದನು. ಆತನ ಮಗ ಮಹಿಂದನು ಶ್ರೀಲಂಕಾಕ್ಕೆ ಬುದ್ಧನ ಸಂದೇಶಗಳನ್ನು ಕೊಂಡೊಯ್ದನು. ಬೌದ್ಧ ಬಿಕ್ಕುಗಳು ತಮಿಳುನಾಡಿನಲ್ಲೂ ಧರ್ಮ ಪ್ರಚಾರ ಮಾಡಿದ್ದರು ಎಂಬುದಕ್ಕೆ ಅಲ್ಲಿನ ಹಲವಾರು ಪ್ರದೇಶಗಳಲ್ಲಿ ಇಂದಿಗೂ ಕಂಡುಬರುವ ಬೌದ್ಧಧರ್ಮದ ಕುರುಹುಗಳೇ ಸಾಕ್ಷಿ.

ಬೌದ್ಧ ಬಿಕ್ಕುಗಳು ಯಾವುದೇ ತಾರತಮ್ಯವಿಲ್ಲದೆ ಜನರಿಗೆ ಉಚಿತವಾಗಿ ವೈದ್ಯಕೀಯ ನೆರವು ಮತ್ತು ಶಿಕ್ಷಣವನ್ನು ನೀಡುತ್ತಿದ್ದರು. ಅವರು ಪವಿತ್ರ ತ್ರಿಪಿಟಕ ಗ್ರಂಥಗಳನ್ನು ಬೋಧಿಸುತ್ತಾ, ಆಕರ್ಷಕವಾದ ಜಾತಕ ಕಥೆಗಳನ್ನು ಹಂಚಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ, ಜನರಲ್ಲಿ ಅರಿವು ಮೂಡಿಸಲು ಮತ್ತು ಮಾನಸಿಕ ಶಾಂತಿಗಾಗಿ ಧ್ಯಾನದ ಅಭ್ಯಾಸಗಳನ್ನು ಕಲಿಸಿಕೊಡುತ್ತಿದ್ದರು. ದಾನ ಮಾಡುವುದು, ಅದರಲ್ಲೂ ವಿಶೇಷವಾಗಿ ಹಸಿದವರಿಗೆ ಅನ್ನದಾನ ಮಾಡುವುದು ಒಂದು ಪರಮ ಧರ್ಮವೆಂದು ಪರಿಗಣಿಸಲಾಗಿತ್ತು. ಹಸಿದವರಿಗೆ ಊಟ ಹಾಕುವುದು ಎಂದರೆ ಅವರಿಗೆ ಮರುಜೀವ ನೀಡುವುದಕ್ಕೆ ಸಮಾನ ಎಂಬ ಉದಾತ್ತ ಚಿಂತನೆಯನ್ನು ಬೌದ್ಧ ಸಾಹಿತ್ಯವು ಸಾರುತ್ತದೆ. ನಮ್ಮ ಈ ಪುಣ್ಯಭೂಮಿಯಲ್ಲಿ ಸಾವಿರಾರು ವರ್ಷಗಳಿಂದ ವಿವಿಧ ಆಧ್ಯಾತ್ಮಿಕ ಚಿಂತನೆಗಳು ಮತ್ತು ತತ್ವಶಾಸ್ತ್ರಗಳು ಹುಟ್ಟಿ ಬೆಳೆದಿವೆ. ಅದು ಬೌದ್ಧಧರ್ಮವಿರಲಿ ಅಥವಾ ಜೈನಧರ್ಮವಿರಲಿ, ಯಾವುದೇ ಧರ್ಮವನ್ನಾದರೂ ಭಾರತಾದ್ಯಂತ ಏಕತೆಯ ಭಾವದಿಂದ ಸ್ವೀಕರಿಸಲಾಗಿದೆ. ಇದು ನಮ್ಮ ದೇಶವು ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಮೊದಲಿನಿಂದಲೂ ಒಂದೇ ಎಂಬ ಸತ್ಯವನ್ನು ಸಾಬೀತುಪಡಿಸುತ್ತದೆ. ನಿರಂತರ ಕಲಿಕೆಗೆ ಒತ್ತು ನೀಡಿದ ಬೌದ್ಧಧರ್ಮವು, ಅತ್ಯಂತ ದೊಡ್ಡ ಮಟ್ಟದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮತ್ತು ಗ್ರಂಥಾಲಯಗಳನ್ನು ನಿರ್ಮಿಸಿತು. ಸುಮಾರು 5 ಶತಮಾನದಷ್ಟು ಹಿಂದೆಯೇ ನಳಂದಾ ವಿಶ್ವವಿದ್ಯಾನಿಲಯವು ಜಗತ್ತಿನ ಶ್ರೇಷ್ಠ ಕಲಿಕಾ ಕೇಂದ್ರವಾಗಿ ಹೊರಹೊಮ್ಮಿತ್ತು. ಅಲ್ಲಿ ಸುಮಾರು 10,000 ವಿದ್ಯಾರ್ಥಿಗಳು ಮತ್ತು 1,500 ಶಿಕ್ಷಕರು ಅಧ್ಯಯನ ಹಾಗೂ ಬೋಧನೆಯಲ್ಲಿ ತೊಡಗಿದ್ದರು ಎಂಬುದು ಹೆಮ್ಮೆಯ ವಿಷಯ.

ನಳಂದಾದಂತೆಯೇ, ತಮಿಳುನಾಡಿನ ಕಾಂಚೀಪುರಂನಲ್ಲೂ ಒಂದು ಸುಪ್ರಸಿದ್ಧ ವಿಶ್ವವಿದ್ಯಾನಿಲಯವಿತ್ತು ಎಂದು ಇತಿಹಾಸದ ದಾಖಲೆಗಳು ಹೇಳುತ್ತವೆ. ವಿಕ್ರಮಶಿಲಾ ಮತ್ತು ಓದಂತಪುರಿಯಂತಹ ವಿಶ್ವವಿದ್ಯಾನಿಲಯಗಳು ಹಾಗೂ ಅಲ್ಲಿ ರಚಿತವಾದ ಅಪಾರ ಸಾಹಿತ್ಯ ಕೃತಿಗಳು, ಭಾರತದ ಬೌದ್ಧಿಕ ಶಕ್ತಿಯನ್ನು ಇಡೀ ಜಗತ್ತಿಗೆ ಪರಿಚಯಿಸಿದವು.

ಬೌದ್ಧ ಶಿಕ್ಷಣ ಕೇಂದ್ರಗಳಲ್ಲಿ ಕಲಿಯಲು ಏಷ್ಯಾದ ಮೂಲೆ ಮೂಲೆಗಳಿಂದ ವಿದ್ವಾಂಸರು ಭಾರತಕ್ಕೆ ಬರುತ್ತಿದ್ದರು. ಚೀನಾದ ಪ್ರಸಿದ್ಧ ಬಿಕ್ಕು ಫಾಹಿಯಾನ್, ಬೌದ್ಧಧರ್ಮದ ಅಧ್ಯಯನಕ್ಕಾಗಿಯೇ ಭಾರತದಲ್ಲಿ 15 ವರ್ಷಗಳ ಕಾಲ ಸಂಚರಿಸಿದ್ದರು. ಮತ್ತೊಬ್ಬ ಚೀನೀ ಬಿಕ್ಕು ಹ್ಯುಯೆನ್ ತ್ಸಾಂಗ್ ಅವರು 16 ವರ್ಷಗಳ ಕಾಲ ಭಾರತದಲ್ಲಿದ್ದು, ನಳಂದಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಿದ್ದಲ್ಲದೆ ಅಮೂಲ್ಯ ಗ್ರಂಥಗಳನ್ನು ಸಂಗ್ರಹಿಸಿ ತಮ್ಮ ದೇಶಕ್ಕೆ ಕೊಂಡೊಯ್ದರು.ಹ್ಯುಯೆನ್ ತ್ಸಾಂಗ್ ಬರೆದಿರುವ ಪ್ರವಾಸ ಕಥನಗಳ ಪ್ರಕಾರ, ಅವರು ತಮಿಳುನಾಡಿನ ಕಾಂಚೀಪುರಂಗೆ ಭೇಟಿ ನೀಡಿದ್ದರು. ಅಲ್ಲಿನ ಬೌದ್ಧ ವಿಶ್ವವಿದ್ಯಾನಿಲಯದಲ್ಲಿ ಉಳಿದುಕೊಂಡು ಹಸ್ತಪ್ರತಿಗಳನ್ನು ನಕಲು ಮಾಡಿಕೊಂಡಿದ್ದರು. ಅಷ್ಟೇ ಅಲ್ಲದೆ, ಅಲ್ಲಿನ ವಿದ್ಯಾರ್ಥಿಗಳಿಗಾಗಿ ಅವರು ವಿಶೇಷ ಉಪನ್ಯಾಸಗಳನ್ನು ನೀಡಿದ್ದರು ಎಂಬ ಮಾಹಿತಿ ಇದೆ.

ತೀವ್ರವಾದ ತಪಸ್ಸಿನಿಂದಾಗಿ ಬುದ್ಧನು ದೈಹಿಕವಾಗಿ ಬಹಳ ಬಳಲಿದ್ದನು. ಆತನ ಸ್ಥಿತಿಯನ್ನು ಕಂಡು ಕನಿಕರಗೊಂಡ ಸುಜಾತೆ, ಪ್ರೀತಿಯಿಂದ ಹಾಲಿನ ಪಾಯಸವನ್ನು (ಕ್ಷೀರಾನ್ನ) ಅರ್ಪಿಸಿದಳು. ಇದು ಬುದ್ಧನಿಗೆ ಪುನಶ್ಚೇತನ ನೀಡಿ ಪ್ರಾಣ ಉಳಿಸಿದ್ದಲ್ಲದೆ, ಬೋಧಿ ವೃಕ್ಷದ ಅಡಿಯಲ್ಲಿ ಜ್ಞಾನೋದಯಕ್ಕಾಗಿ ಧ್ಯಾನ ಮಾಡಲು ಬೇಕಾದ ಶಕ್ತಿಯನ್ನು ನೀಡಿತು. ಆಕೆಯ ಈ ಮಮತೆ ಮತ್ತು ದಯೆಯ ನೆನಪಿಗಾಗಿ, ಇಂದಿಗೂ ಬುದ್ಧ ಪೂರ್ಣಿಮೆಯ ದಿನದಂದು ಪಾಯಸವನ್ನು ತಯಾರಿಸಿ ಅರ್ಪಿಸುವ ಸಂಪ್ರದಾಯವಿದೆ. ಪ್ರೀತಿಯೇ ಸಂತೋಷದ ಸೆಲೆ, ಪ್ರೀತಿಯೇ ಜಗತ್ತಿನ ಬೆಳಕು ಮತ್ತು ಪ್ರೀತಿಯೇ ಎಲ್ಲಕ್ಕಿಂತ ದೊಡ್ಡ ಶಕ್ತಿ ಎಂಬ ಬುದ್ಧನ ಬೋಧನೆಗಳು ಇಂದಿನ ಆಧುನಿಕ ಜಗತ್ತಿಗೂ ಅತ್ಯಂತ ಅಗತ್ಯವಾಗಿವೆ. ಈ ಜಗತ್ತಿನಾದ್ಯಂತ ಪ್ರೀತಿ ಮತ್ತು ಶಾಂತಿ ಸದಾ ನೆಲಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.


ಸಂದೇಹವಿದ್ದರೂ ನಂಬಿಕೆಯನ್ನಿಡಬೇಕು

ಸಂದೇಹೋऽಸ್ತಿ ಸದಾ ದೈವೇ ಧರ್ಮೇ ನ್ಯಾಯೇ ಗುರೌ ತಥಾ।
ತಥಾಪಿ ಕೃತ್ವಾ ವಿಶ್ವಾಸಂ ಮಾನವೋ ಭುವಿ ಸಂಚರೇತ್॥ –ಸುವಚನ ಶತಕಂ

ದೇವರು, ಧರ್ಮ, ನ್ಯಾಯ, ಗುರು– ಇತ್ಯಾದಿಗಳಲ್ಲಿ ಸದಾ ಸಂದೇಹವೇ? ಆದರೂ ಅವುಗಳಲ್ಲಿ ನಂಬಿಕೆಯನ್ನಿಟ್ಟು ಮನುಷ್ಯನು ಲೋಕದಲ್ಲಿ ನಡೆದುಕೊಳ್ಳಬೇಕು –ಎಂಬುದು ಶ್ಲೋಕಾರ್ಥ.

ಕೊನೆಗೂ ಫಲ ಕೊಡುವುದು ವಿಶ್ವಾಸವೇ. ವಿಶ್ವಾಸವಿಲ್ಲದ ಯಾವ ಕ್ರಿಯೆಯೂ ಫಲವನ್ನೀಯುವುದಿಲ್ಲ. ಫಲ ಬೇಕಾದರೆ ವಿಶ್ವಾಸವಿರಿಸಿ ಮುನ್ನುಗ್ಗಬೇಕು. ಆದ್ದರಿಂದಲೇ 'ವಿಶ್ವಾಸೋ ಫಲದಾಯಕಃ' ಎಂದಿದ್ದಾರೆ.

ಮಾನವನ ಜೀವನವೇ ಪರಸ್ಪರ ವಿಶ್ವಾಸದಿಂದ ಸಾಗಬೇಕಾಗಿದೆ. ವಿಶ್ವಾಸವಿಲ್ಲದಿದ್ದರೆ ಸಾಧಿಸುವುದಕ್ಕೆ ಸುತಾರಾಂ ಸಾಧ್ಯವಿಲ್ಲ. ನಮ್ಮೆದುರು ಸಾಧನೆ ಮಾಡಿದ ಎಷ್ಟೊಂದು ವ್ಯಕ್ತಿಗಳಿಲ್ಲ. ವಿಶ್ವಾಸದಿಂದ ಮುಂದುವರಿಯದೇ ಅವರೇನನ್ನೂ ಸಾಧಿಸಿಲ್ಲ. ವಿಶ್ವಾಸವೇ ಬೇಡಿಕೆಯ, ಸಾಧನೆಯ ತಾಯಿ.



ಸಂದೇಹಿಸುವುದು ಮನುಷ್ಯರ ಸಹಜ ಸ್ವಭಾವ ಎಂಬಂತಾಗಿದೆ. ಯಾವುದೇ ವಿಷಯವಿರಲಿ, ಅದರ ಕುರಿತು ವಿಶ್ವಾಸಕ್ಕಿಂತ ಮೊದಲು ಸಂದೇಹವೇ ಹುಟ್ಟಿಕೊಳ್ಳುತ್ತದೆ. ಮೊದಲು ಸಂದೇಹಿಸಿ ಅನಂತರ ಮುಂದುವರೆಸುವ ಜಾಯಮಾನ. ಯಾವುದರ ಬಗ್ಗೂ ಸರಿಯಾಗಿ ತಿಳಿದುಕೊಳ್ಳದಿರುವುದರಿಂದ ಸಂದೇಹ, ಸಂಶಯ ತಲೆ ಎತ್ತುತ್ತದೆ.

ಅದರಲ್ಲಿಯೂ ದೇವರು, ಧರ್ಮ, ನ್ಯಾಯ, ಗುರು... ಇತ್ಯಾದಿಗಳಲ್ಲಿ ಸದಾ ಸಂದೇಹವೇ. ಸಂದೇಹಿಸುವುದಕ್ಕೆ ಕಾರಣವಿಲ್ಲದಿಲ್ಲ. ದೇವರ ಕುರಿತು ಎಲ್ಲರೂ ಮಾತನಾಡುವವರೇ. ಆದರೆ ದೇವರನ್ನು ಕಂಡವರು ಯಾರು ಇಲ್ಲ. ಗ್ರಂಥಗಳಲ್ಲಿ ಬರೆದದ್ದನ್ನು ಓದಿಯೋ, ಹಿರಿಯರು ಹೇಳಿದ್ದನ್ನು ಕೇಳಿಯೋ ಒಂದಿಷ್ಟು ತಿಳಿದುಕೊಳ್ಳುತ್ತೇವೆ.

ಧರ್ಮದ ಕುರಿತಾಗಿಯೂ ಅನೇಕರು ಅನೇಕ ಬಗೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಧರ್ಮದ, ದೇವರ ಮೂಲತತ್ವ ತಿಳಿಯದಿದ್ದರೂ ಮಾತನಾಡುವವರಿಗೆ ಕೊರತೆಯಿಲ್ಲ. ನಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸುವ ಕೆಲಸ ಮಾಡುತ್ತಾರೆ. ಇವುಗಳ ಕುರಿತು ಹೇಳುವುದೂ ಕಷ್ಟ. ಅರ್ಥ ಮಾಡಿಕೊಳ್ಳುವುದೂ ಕಷ್ಟ. ಆದರೆ ಇವುಗಳ ಬಗ್ಗೆ ನಂಬಿಕೆ ಇಟ್ಟುಕೊಂಡರೆ ನಷ್ಟವೇನೂ ಆಗದು. ದೇವರು, ಧರ್ಮಗಳ ಹೆಸರಿನಲ್ಲಿ ಒಳಿತನ್ನೇ ಹೇಳುವುದರಿಂದ, ಅದನ್ನು ನಾವು ಅನುಸರಿಸುವದರಿಂದ ಒಂದೊಮ್ಮೆ ಒಳಿತಾಗದಿದ್ದರೂ ಅದರಿಂದ ಕೆಡುಕಂತೂ ಆಗುವುದಿಲ್ಲ. ನ್ಯಾಯದ ವಿಷಯದಲ್ಲಿ ಗೊಂದಲವಿದ್ದರೂ ನಂಬಿಕೆಯನ್ನು ಕಳೆದುಕೊಳ್ಳಬಾರದು. ಕೆಲವೊಮ್ಮೆ ನ್ಯಾಯ ನೀಡುವವನ ಮಾನಸಿಕ ಸ್ಥಿತಿ, ಒತ್ತಡ ಇತ್ಯಾದಿಗಳಿಂದಾಗಿ ಅಲ್ಪಸ್ವಲ್ಪ ಬದಲಾಗಬಹುದು ಅಥವಾ ವಿಳಂಬವಾಗಬಹುದು. ಆದರೂ ನಂಬಿಕೆಯನ್ನು ಬಿಡಬಾರದು.

ಗುರುವಾದವನು ಹೇಳುವ ಮಾತುಗಳಲ್ಲಿ ಕೆಲವಷ್ಟು ಸಂದೇಹ ಬರಬಹುದು. ಆಗ ಕುಳಿತು ಚರ್ಚಿಸಿ ಮುಂದುವರಿಯಬೇಕು. ಕೆಲವೊಮ್ಮೆ ಪರಿಸ್ಥಿತಿಯ ಒತ್ತಡ ದಿಂದ ಪ್ರಮಾದವಾಗಲೂಬಹುದು. ಅಷ್ಟಕ್ಕೆ ಗುರುವನ್ನು ನಿಂದಿಸುವುದಾಗಲಿ, ಜರೆಯುವುದನ್ನಾಗಲಿ ಮಾಡಬಾರದು. ಗುರುತ್ವವೇ ಗುರುವಿನ ಹಿರಿಮೆಯ ದ್ಯೋತಕವಾದ್ದರಿಂದ ಅವನೆಂದೂ ವಂಚಿಸಲಾರ, ದ್ರೋಹವೆಸಗಲಾರ ಎಂಬ ನಂಬಿಕೆ ನಮ್ಮದಾಗಬೇಕು.

ಇಂತಹ ಬಲವಾದ ನಂಬಿಕೆ, ದೃಢ ವಿಶ್ವಾಸ ಇವೇ ನಮ್ಮನ್ನು ಮೇಲೆತ್ತುತ್ತವೆ. ಉತ್ತಮ ಸ್ಥಾನದಲ್ಲಿ ನಿಲ್ಲುವಂತೆ ಮಾಡುತ್ತವೆ.

ಪಶ್ಚಿಮ ಬಂಗಾಳ: ಮತದಾರನ ಸಂದೇಶವೇನು?

ಅರವಿಂದ ಶೆಣೈ

> ಬಿಜೆಪಿಯ ತಾಳ್ಮೆ ಮತ್ತು ಸಂಘಟನಾ ಚತುರತೆ ಈ ಬಾರಿಯ ಚುನಾವಣೆಯಲ್ಲಿ ಫಲ ನೀಡುವುದೆ, ತೃಣಮೂಲದ ಕೋಟೆಯನ್ನು ಭೇದಿಸುವುದೇ ?

ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದ ಕುರಿತಂತೆ ಎಕ್ಸಿಟ್ ಪೋಲ್‌ಗಳು ನುಡಿದಿರುವ ಭವಿಷ್ಯಗಳು ಎಲ್ಲರ ಕುತೂಹಲವನ್ನು ಇಮ್ಮಡಿಗೊಳಿಸಿದೆ. ಪ.ಬಂಗಾಳದಲ್ಲಿ ಮಮತಾ ಬ್ಯಾನರ್ಜಿಗೆ ಇದಿರಿಲ್ಲ ಎಂದು ಬಹುತೇಕ ಮಂದಿ ಭಾವಿಸಿದ್ದರೆ, ಕೆಲವು ಎಕ್ಸಿಟ್ ಪೋಲ್‌ಗಳು ಮಮತಾಗೆ ಈ ಬಾರಿ ಸೋಲಾಗುವ ಹಾಗೂ ಬಿಜೆಪಿಯೇ ಅಧಿಕಾರ ಹಿಡಿಯುವ ಸಾಧ್ಯತೆಯಿದೆ ಎಂದು ತಿಳಿಸಿರುವುದು ರೋಚಕತೆ ಸೃಷ್ಟಿಸಿದೆ. ಇನ್ನು ಕೆಲವು ಎಕ್ಸಿಟ್ ಪೋಲ್‌ಗಳು ಟಿಎಂಸಿಯೇ ಅಧಿಕಾರ ಹಿಡಿಯುವುದೆಂದು ನುಡಿದಿದ್ದರೂ ಬಿಜೆಪಿ ನಿರ್ವಹಣೆಯೂ ಉನ್ನತ ಮಟ್ಟದಲ್ಲಿರುವುದೆಂದು ತಿಳಿಸಿವೆ.

34 ಲಕ್ಷ ಹೆಚ್ಚುವರಿ ಮತಗಳು ಯಾರ ಪರ?

ಪ.ಬಂಗಾಳದಲ್ಲಿ ಈ ಬಾರಿ ಶೇ.90ಕ್ಕಿಂತ ಹೆಚ್ಚು ಮತದಾನ ಆಗಿರುವುದು ಎಲ್ಲರ ಹುಬ್ಬೇರಿಸಿದೆ. ಇದು 'ಎಸ್‌ಐಆರ್' ಫಲ ಎಂಬುದಾಗಿ ಕೆಲವರು ವಿಶ್ಲೇಷಿಸುತ್ತಾರೆ. ಆದರೆ ಅದಷ್ಟೇ ನಿಜವಲ್ಲ. 2021ಕ್ಕೆ ಹೋಲಿಸಿದರೆ ಈ ಬಾರಿ 34 ಲಕ್ಷ ಹೆಚ್ಚು ಮತದಾರರು ಮತ ಹಾಕಿದ್ದಾರೆ. 2021ರಲ್ಲಿ 5.98 ಕೋಟಿ ಮತದಾರರು ಮತ ಚಲಾಯಿಸಿದ್ದರೆ, ಈ ಬಾರಿ ಮತ ಚಲಾಯಿಸಿದವರ ಸಂಖ್ಯೆ 6.31 ಕೋಟಿ. ಎಸ್‌ಐಆರ್‌ನಲ್ಲಿ 90 ಲಕ್ಷ ಮತದಾರರ ಹೆಸರು ತೆಗೆದು ಹಾಕಿದ ಹೊರತಾಗಿಯೂ 34 ಲಕ್ಷ ಹೆಚ್ಚುವರಿ ಮತದಾರರು ಮತದಾನ ಮಾಡಿರುವುದು ಗಮನಾರ್ಹ.



2021ರಲ್ಲಿ ತೃಣಮೂಲ ಕಾಂಗ್ರೆಸಿಗೆ ಬಿಜೆಪಿಗಿಂತ ಒಟ್ಟು 60 ಲಕ್ಷ ಹೆಚ್ಚು ಮತ ಬಿದ್ದಿತ್ತು. ಆಗಿನ ಮತದಾರರು ಈಗಲೂ ಅದೇ ರೀತಿ ಮತ ಚಲಾಯಿಸಿದ್ದಾರೆ ಎಂದುಕೊಂಡರೂ, ಹೆಚ್ಚುವರಿ 34 ಲಕ್ಷ ಮತದಾರರು ಫಲಿತಾಂಶವನ್ನೆ ಬದಲಿಸಿಬಿಡುವ ಸಾಮರ್ಥ್ಯ ಹೊಂದಿದ್ದಾರೆ.

ಈ ಮತದಾರರು ಯಾವ ಪಕ್ಷದೆಡೆಗೆ ಒಲವು ತೋರಿದ್ದಾರೆ ಎನ್ನುವುದು ಒಟ್ಟು ಫಲಿತಾಂಶದ ಮೇಲೆ ನಿರ್ಣಾಯಕ ಪರಿಣಾಮ ಬೀರಲೂ ಬಹುದು.

''ಈ ಬಾರಿ ಮತದಾರರು ತೃಣಮೂಲದ ಬೆದರಿಕೆಗೆ ಮಣಿಯದೆ ನಿರ್ಭೀತಿಯಿಂದ ಮತಗಟ್ಟೆಗೆ ಬಂದಿದ್ದಾರೆ. ಇದೆಲ್ಲ ಆಡಳಿತ ವಿರೋಧಿ ಮತಗಳು'' ಎಂಬುದಾಗಿ ಬಿಜೆಪಿ ಬಣ್ಣಿಸುತ್ತಿದೆ. ಆದರೆ ತೃಣಮೂಲ ಈ ವಾದವನ್ನು ತಳ್ಳಿಹಾಕಿ, ಎಸ್‌ಐಆರ್ ವಿರುದ್ಧ ತಮ್ಮ ಆಕ್ರೋಶ ಹೊರಹಾಕಲು ಬಂದ ಮತದಾರರಿವರು ಎಂದು ಹೇಳಿಕೊಂಡಿದೆ.

ಸರಕಾರ ರೂಪಿಸುವ ಆ ಐದು ಜಿಲ್ಲೆಗಳು

ಕೆಲವು ದಶಕಗಳಿಂದ ಪ.ಬಂಗಾಳದಲ್ಲಿ ಯಾವ ಪಕ್ಷ ಆಡಳಿತಕ್ಕೆ ಬರುವುದೆಂಬುದನ್ನು ಐದು ಜಿಲ್ಲೆಗಳು ನಿರ್ಧರಿಸುತ್ತವೆ. ಈ ಬಾರಿಯೂ ಚಿತ್ರಣ ಬದಲಾಗಿಲ್ಲ, ಈ ಐದು ಜಿಲ್ಲೆಗಳೇ ಪ.ಬಂಗಾಳದ ಆಡಳಿತ ಯಾರ ಕೈಗೆ ಬರಬಹುದೆಂಬುದನ್ನು ನಿರ್ಧರಿಸುವಂತಿದೆ. ಈ ಐದು ಜಿಲ್ಲೆಗಳನ್ನು 'ಪ್ರೆಸಿಡೆನ್ಸಿ ವಲಯ' ಎಂದು ಕರೆಯಲಾಗುತ್ತದೆ. ಎರಡನೇ ಹಂತದಲ್ಲಿ ಅಂದರೆ, ಏ.29ರಂದು ಈ ಪ್ರದೇಶದಲ್ಲಿ ಮತದಾನ ನಡೆದಿದ್ದು, ಅಲ್ಲೂ ಭಾರೀ ಪ್ರಮಾಣದ ಮತದಾನ ನಡೆದಿದೆ.

ಈ ಐದು ಜಿಲ್ಲೆಗಳು ಪ್ರತಿಬಾರಿಯೂ ಒಂದು ಪಕ್ಷಕ್ಕೆ ಭಾರೀ ಬೆಂಬಲ ನೀಡಿ ಮತ್ತೊಂದು ಪಕ್ಷವನ್ನು ನೆಲಕಚ್ಚಿಸುವ ರೂಢಿ ಹೊಂದಿವೆ. 1977ರಲ್ಲಿ ಎಡಪಕ್ಷಗಳು ಅಧಿಕಾರಕ್ಕೇರಿದಂದಿನಿಂದ ಇದೇ ಕಥೆ ನಡೆದಿದೆ. ಈ ಐದು ಜಿಲ್ಲೆಗಳೆಂದರೆ– ಕೊಲ್ಕತಾ, ಹೌರಾ, 24 ಉತ್ತರ ಪರಗಣ, 24 ದಕ್ಷಿಣ ಪರಗಣ ಮತ್ತು ನಾಡಿಯಾ. ಮೊದಲೇ ಹೇಳಿದಂತೆ ಈ ಐದು ಜಿಲ್ಲೆಗಳು ಯಾವುದಾದರೂ ಒಂದು ಪಕ್ಷವನ್ನು ಪೂರ್ಣವಾಗಿ ಬೆಂಬಲಿಸುತ್ತವೆ. ಮಹತ್ವದ ವಿಚಾರವೆಂದರೆ ಪ.ಬಂಗಾಳದ ಒಟ್ಟು 294 ಸ್ಥಾನಗಳಲ್ಲಿ 108 ಸ್ಥಾನಗಳು ಈ ಐದು ಜಿಲ್ಲೆಗಳಲ್ಲಿವೆ. ಹಾಗಾಗಿ ಈ ಕ್ಷೇತ್ರಗಳು ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ.

ಈ ಪ್ರದೇಶದ ವಿಶೇಷವೆಂದರೆ ಪ.ಬಂಗಾಳದ ಮುಖ್ಯಮಂತ್ರಿಗಳೂ ಇದೇ ಜಿಲ್ಲೆಗಳಿಂದ ಆಯ್ಕೆಯಾಗುತ್ತಿರುವುದು. ಪ.ಬಂಗಾಳದ ಸಾಂಸ್ಕೃತಿಕ ಮತ್ತು ಬೌದ್ಧಿಕ ಕೇಂದ್ರ ಕೂಡಾ ಇದೇ ಪ್ರದೇಶವಾಗಿದೆ. ವಿಪರ್ಯಾಸವೆಂದರೆ ಹಿಂಸಾಚಾರ, ಅಪರಾಧ, ಬೆದರಿಕೆ ಮುಂತಾದವುಗಳಲ್ಲೂ ಇದೇ ಪ್ರದೇಶ ಕುಖ್ಯಾತಿ ಪಡೆದಿದೆ. 1984ರಲ್ಲಿ ಅತ್ಯಂತ ನಿಷ್ಠ ಪೊಲೀಸ್ ಅಧಿಕಾರಿಯಾಗಿದ್ದ ಸಂಜೀವ್ ಮೆಹ್ತಾ ಅವರನ್ನು ಹೌರಾದಲ್ಲಿ ಗೂಂಡಾಗಳ ತಂಡವೊಂದು ಕಡಿದು ಕೊಲೆಗೈದಿತ್ತು. ಮೊನ್ನೆ ಮೊನ್ನೆ ಚುನಾವಣಾ ಕಾರ್ಯಕ್ಕೆ ನಿಯುಕ್ತರಾಗಿದ್ದ ಉತ್ತರ ಪ್ರದೇಶದ ಪೊಲೀಸ್ ಅಧಿಕಾರಿ 'ಸಿಂಗಂ' ಖ್ಯಾತಿಯ ಅಜಯ್ ಶರ್ಮಾ ತೃಣಮೂಲದ ಅಭ್ಯರ್ಥಿ ಜಹಾಂಗೀರ್ ಖಾನ್‌ಗೆ ಚುನಾವಣಾ ಅಕ್ರಮ ನಡೆಸದಂತೆ ಎಚ್ಚರಿಕೆ ನೀಡಿದ, ಅದಕ್ಕೆ ಪ್ರತಿಯಾಗಿ ಜಹಾಂಗೀರ್ ಖಾನ್ ಕೂಡಾ ಬೆದರಿಕೆ ಹಾಕಿದ ಘಟನೆ ನಡೆದಿದೆ.

ಮಾಜಿ ಮುಖ್ಯಮಂತ್ರಿ ಜ್ಯೋತಿಬಸು ದಕ್ಷಿಣ ಪರಗಣ ಜಿಲ್ಲೆಯ ಸತ್‌ಗಾಚಿಯಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ಬುದ್ಧದೇವ್ ಭಟ್ಟಾಚಾರ್ಯ ಜಾದವ್‌ಪುರದಿಂದ ಸ್ಪರ್ಧಿಸಿದ್ದರು. ಮಮತಾ ಬ್ಯಾನರ್ಜಿ ಕೊಲ್ಕತ್ತಾದ ಭವಾನಿಪುರದಿಂದ ಸ್ಪರ್ಧಿಸುತ್ತಿದ್ದಾರೆ. ಆಕೆಯ ವಿರುದ್ಧವಾಗಿ ಬಿಜೆಪಿಯ ಸುವೇಂದು ಅಧಿಕಾರಿ ಇದೇ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

2006ರಲ್ಲಿ ಎಡರಂಗವು ಕಟ್ಟಕಡೆಯದಾಗಿ ಚುನಾವಣೆ ಜಯಿಸಿದಾಗ ಅದು ಈ ಐದು ಜಿಲ್ಲೆಗಳ 108 ಸ್ಥಾನಗಳಲ್ಲಿ 72ನ್ನು ಗೆದ್ದಿತ್ತು. ಮಮತಾ ಬ್ಯಾನರ್ಜಿ ಅಬ್ಬರದ ಪ್ರಚಾರ ನಡೆಸಿದ ಹೊರತಾಗಿಯೂ ಕಮ್ಯುನಿಸ್ಟ್ ಕೋಟೆಯನ್ನು ಭೇದಿಸಲು ವಿಫಲರಾಗಿದ್ದರು. ಎಡರಂಗದ ಬುದ್ಧದೇವ್ ಮುಖ್ಯಮಂತ್ರಿಯಾಗಿ ಮುಂದುವರಿದಿದ್ದರು. ಆದರೆ 2011ರಲ್ಲಿ ಇಲ್ಲಿ ಕಮ್ಯುನಿಸ್ಟ್ ಕೋಟೆ ಧರಾಶಾಹಿಯಾಯಿತು. ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿ ಕಮ್ಯುನಿಸ್ಟರನ್ನು ಧೂಳೀಪಟ ಮಾಡಿದವು. ಈ ಪ್ರದೇಶದ 82 ಸ್ಥಾನಗಳನ್ನು ಗೆಲ್ಲಲು ಈ ಮೈತ್ರಿಕೂಟ ಸಫಲವಾಯಿತು. ಆ ಕಾಲದಲ್ಲಿ ಹಲವಾರು ರಾಜಕೀಯ ವಿಶ್ಲೇಷಕರು ಇದೊಂದು ಅನಿರೀಕ್ಷಿತ ಬೆಳವಣಿಗೆ. ಮುಂದಿನ ಚುನಾವಣೆಯಲ್ಲಿ ಮತ್ತೆ ಎಡರಂಗ ಅಧಿಕಾರಕ್ಕೆ ಬರಲಿದೆ ಎಂದು ಮಾತನಾಡಿಕೊಂಡಿದ್ದರು.ಆದರೆ ಅವರ ಭವಿಷ್ಯ ಸುಳ್ಳಾಯಿತು. ಬಳಿಕ ಎಡರಂಗ ಅಧಿಕಾರಕ್ಕೆ ಬರಲೇ ಇಲ್ಲ.

ಅಲ್ಲಿಂದ ಬಳಿಕ ಈ ಪ್ರೆಸಿಡೆನ್ಸಿ ಪ್ರದೇಶವು ತೃಣಮೂಲದ ಭದ್ರಕೋಟೆಯಾಯಿತು. 2016ರ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದ ತೃಣಮೂಲ ಕಾಂಗ್ರೆಸ್ 91 ಸ್ಥಾನಗಳನ್ನು ಇಲ್ಲಿ ಗೆದ್ದಿತು. 2021ರಲ್ಲಿ ಬಿಜೆಪಿಯ ಪ್ರಬಲ ಹೋರಾಟದ ಹೊರತಾಗಿಯೂ 97 ಸ್ಥಾನಗಳನ್ನು ಗೆದ್ದಿತು. ಒಂದು ವಲಯದಿಂದಲೇ 80–90 ಸ್ಥಾನಗಳನ್ನು ಗೆದ್ದರೆ, ಮತ್ತೆ ಬಹುಮತಕ್ಕೆ ಬೇಕಾದ 148 ಸ್ಥಾನಗಳನ್ನು ಗಳಿಸುವುದು ಕಷ್ಟವೇನಲ್ಲ. ಕಳೆದ ಕೆಲವು ದಶಕಗಳಿಂದ ಆಗುತ್ತಿರುವುದು ಇದುವೆ. ಆಡಳಿತ ಪಕ್ಷವು ಈ ಐದು ಜಿಲ್ಲೆ ಗಳಲ್ಲಿ ಅಧಿಕ ಸ್ಥಾನಗಳನ್ನು ಗೆಲ್ಲುವ ಮೂಲಕ ಇಡೀ ರಾಜ್ಯದ ಚುಕ್ಕಾಣಿ ಹಿಡಿಯುವಂತಾಗಿದೆ.

ಅದಕ್ಕಾಗಿಯೇ ಬಿಜೆಪಿ ಕೂಡಾ ಈ ಬಾರಿ ಈ ಪ್ರೆಸಿಡೆನ್ಸಿ ವಲಯದಲ್ಲಿ ಉತ್ತಮ ನಿರ್ವಹಣೆ ನೀಡಲು ಹೆಚ್ಚು ಶ್ರಮ ಹಾಕಿರುವುದು. ಈ ಪ್ರದೇಶದಲ್ಲಿ ಮಮತಾ ಕೋಟೆಯನ್ನು ಭೇದಿಸಿದರೆ ಪ.ಬಂಗಾಳವನ್ನು ಗೆಲ್ಲುವುದು ಕಷ್ಟವಲ್ಲವೆಂದು ಬಿಜೆಪಿ ಕೂಡಾ ಅರಿತಿದೆ. 2011ರಲ್ಲಿ ಕಮ್ಯುನಿಸ್ಟರು ಧೂಳೀಪಟವಾದಂತೆಯೇ ಈ ಬಾರಿ ತೃಣಮೂಲ ಕಾಂಗ್ರೆಸ್ ಧೂಳೀಪಟವಾಗಬಹುದೆಂದು ಬಿಜೆಪಿ ನಿರೀಕ್ಷಿಸುತ್ತಿದೆ. ಆದರೆ ಅದು ಅಷ್ಟು ಸುಲಭವಲ್ಲ ಎಂಬುದೂ ನಿಜವೆ. ಯಾಕೆಂದರೆ ಈ ಪ್ರದೇಶದಲ್ಲಿ ಮುಸ್ಲಿಮರ ಸಂಖ್ಯೆಯೂ ಅಧಿಕವಿದೆ. ಮಮತಾ ಪಕ್ಷವಂತೂ ಮುಸ್ಲಿಮರನ್ನು ಅತಿಯಾಗಿ ಓಲೈಸುತ್ತಿದೆ.

ಬಿಜೆಪಿ ತಾಳ್ಮೆಯುತ ಸಿದ್ಧತೆ

ಬಿಜೆಪಿಯೇನೂ ಹಠಾತ್ತನೆ ಪ.ಬಂಗಾಳದಲ್ಲಿ ಸ್ಪರ್ಧೆಗೆ ಧುಮುಕುತ್ತಿರುವುದಲ್ಲ. 2021ರಲ್ಲಿ ಈ ಐದು ಜಿಲ್ಲೆಗಳಲ್ಲಿ ಬಿಜೆಪಿ ಸೋಲಲು ಕಾರಣ ಅದಕ್ಕೆ ಅಭ್ಯರ್ಥಿಗಳು ದೊರಕದಿದ್ದುದು. ತೃಣಮೂಲದಿಂದ ಅತೃಪ್ತರಾಗಿ ಬಂದ ವ್ಯಕ್ತಿಗಳಿಗೆ ಬಿಜೆಪಿ ಟಿಕೆಟ್ ನೀಡಲಾಗಿತ್ತು. ಅವರೆಲ್ಲರೂ ಸೋತಿದ್ದರು. ಸೋತ ಬಳಿಕ ಅವರೆಲ್ಲ ಮತ್ತೆ ತೃಣಮೂಲ ಪಕ್ಷವನ್ನು ಸೇರಿಕೊಂಡಿದ್ದರು. ಬಿಜೆಪಿ ಇದರಿಂದ ಪಾಠ ಕಲಿತುಕೊಂಡಿತ್ತು. ಕಳೆದ ಐದು ವರ್ಷಗಳಿಂದ ಬಿಜೆಪಿ ಈ ಪ್ರದೇಶದಲ್ಲಿ ತನ್ನದೇ ಆದ ಬಲಿಷ್ಠ ಅಭ್ಯರ್ಥಿಗಳನ್ನು ಬೆಳೆಸುವ ಪ್ರಯತ್ನ ನಡೆಸಿದೆ. ಈ ಬಾರಿಯ ಅಭ್ಯರ್ಥಿ ಪಟ್ಟಿಯಲ್ಲಿ ಸ್ಥಳೀಯ ಮುಖಂಡರೇ ಹೆಚ್ಚು ಕಾಣುತ್ತಿದ್ದಾರೆ.

ತಾಳ್ಮೆ ಹಾಗೂ ವ್ಯವಸ್ಥಿತ ಸಿದ್ಧತೆ ರಾಜ್ಯ ಗೆಲ್ಲಲು ಮುಖ್ಯ ಎಂಬುದನ್ನು ಬಿಜೆಪಿ ಅರಿತಿದೆ. ಈಗ ಬಿಜೆಪಿ ಪ್ರಬಲವಾಗಿರುವ ಪ್ರತಿಯೊಂದು ರಾಜ್ಯದಲ್ಲಿ ಕೂಡಾ ಆರಂಭದಲ್ಲಿ ಪಕ್ಷವು ಸೋಲು ಕಂಡಿತ್ತು.

ಹಿನ್ನಡೆ ಅನುಭವಿಸಿತ್ತು. ಆ ಸೋಲುಗಳಿಂದಲೇ ಪಾಠ ಕಲಿತು ಮೇಲೇರಿ ಬಂದಿತ್ತು. ಮಹಾರಾಷ್ಟ್ರದಲ್ಲಿ ಪಕ್ಷ ಬೆಳೆಸುವ ಕಾರ್ಯ 1970ರಿಂದಲೇ ಆರಂಭವಾಗಿತ್ತು. ಕರ್ನಾಟಕದಲ್ಲಿ 1990ರಲ್ಲಿ ಇಂತಹ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ತನ್ನ ಹಿಂದೆ ಬಲಿಷ್ಠ ಸಂಘಟನಾ ಸಾಮರ್ಥ್ಯವಿದೆ ಎಂದು ಖಚಿತವಾದ ಬಳಿಕವೇ ಬಿಜೆಪಿ ಚುನಾವಣೆ ಗೆಲ್ಲುವ ಮತ್ತು ಸರಕಾರ ರಚಿಸುವ ಕುರಿತಂತೆ ಗಂಭೀರ ಚಿಂತನೆ ನಡೆಸುವುದು. ಬಿಜೆಪಿಯ ತಾಳ್ಮೆ ಮತ್ತು ಸಂಘಟನಾ ಚತುರತೆ ಈ ಬಾರಿಯ ಚುನಾವಣೆಯಲ್ಲಿ ಫಲ ನೀಡುವುದೆ, ತೃಣಮೂಲದ ಕೋಟೆಯನ್ನು ಭೇದಿಸುವುದೇ ಎಂಬುದನ್ನು ಮೇ 4ರ ಫಲಿತಾಂಶ ತಿಳಿಸಲಿದೆ.

ಕಟ್ಟಡ ಉಪವಿಧಿಗಳ ತಿದ್ದುಪಡಿಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯ

ಡಾ. ಎಂ.ಕೆ.ಶ್ರೀಧರನ್, ಸಾರ್ವಜನಿಕ ವ್ಯವಹಾರಗಳ ವಿಶ್ಲೇಷಕರು

ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ತನ್ನ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳ ಉಪವಿಧಿಗಳ ತಿದ್ದುಪಡಿಗಾಗಿ ಕರಡು ಅಧಿಸೂಚನೆ ರೂಪಿಸಿ ದಿನಾಂಕ 1 ನೇ ಏಪ್ರಿಲ್ 2026 ರಂದು ಐದೂ ನಗರ ಪಾಲಿಕೆಗಳ ಮೂಲಕ ಪ್ರಕಟಿಸಿ ಮುಂದಿನ 30 ದಿನಗಳಲ್ಲಿ ಆಯಾ ನಗರ ಪಾಲಿಕೆಗಳಲ್ಲಿ ಆಕ್ಷೇಪಣೆ ಹಾಗೂ ಸಲಹೆಗಳನ್ನು ಅವಕಾಶ ಕಲ್ಪಿಸಿದೆ. ಈ ಅಧಿಸೂಚನೆಯಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಿರುವ ಹಲವಾರು ಕಟ್ಟಡ ನಿರ್ಮಾಣಗಳಲ್ಲಿನ ಉಲ್ಲಂಘನೆ ಮಿತಿಯನ್ನು ಹಾಲಿ ಇರುವ ಶೇ. 5 ರಿಂದ ಶೇ.15ಕ್ಕೆ ಹೆಚ್ಚಿಸುವ ಪ್ರಸ್ತಾಪವನ್ನು ಮಾಡಲಾಗಿದೆ. ನಕ್ಷೆಯ ಉಲ್ಲಂಘನೆ ಮಾಡಿರುವ ಕಟ್ಟಡಗಳ ಸಂಖ್ಯೆ ಹೆಚ್ಚಾಗಿದ್ದು, ಅವುಗಳಿಗೆ ನೀರು ಮತ್ತು ವಿದ್ಯುತ್ ಸಂಪರ್ಕ ಸಿಗದಿರುವುದರಿಂದ ಜನರಿಗೆ ತೊಂದರೆ ಆಗುತ್ತಿದ್ದು ಅದನ್ನು ಪರಿಹರಿಸಲು ಈ ಅಧಿಸೂಚನೆ ಸಹಕಾರಿ ಎಂಬುದು ಸರ್ಕಾರದ ನಿಲುವು.

ಆದರೆ ನಿಯಮ ಉಲ್ಲಂಘನೆ ಮಾಡಿದ ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಕ್ರಮ ಹಲವು ಅನಪೇಕ್ಷಿತ ಪರಿಣಾಮಗಳನ್ನು ಉಂಟುಮಾಡುತ್ತವೆ ಎಂದು ವಿಷಯ ಪರಿಣಿತರು ಎಚ್ಚರಿಸುತ್ತಾರೆ. ಮೊದಲನೆಯದು ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವುದು ಒಳ್ಳೆಯ ಆಡಳಿತದ ಲಕ್ಷಣವಲ್ಲ. ಇಂಥ ಕ್ರಮಗಳನ್ನು ನ್ಯಾಯಾಲಯಗಳು ಪದೇ ಪದೇ ಸ್ಥಗಿತಮಾಡಿವೆ ಮತ್ತು ರದ್ದುಗೊಳಿಸಿವೆ. ಯೋಜನಾಬದ್ಧವಾದ ನಗರದ ಬೆಳವಣಿಗೆಗೆ ಇದು ಮಾರಕವೂ ಹೌದು. ಜೊತೆಗೆ ನಿಯಮಗಳನ್ನು ಅನುಸರಿಸಿ ಮನೆ–ಕಟ್ಟಡ ಕಟ್ಟಿರುವ ಎಲ್ಲಾ ನಾಗರಿಕರನ್ನೂ ಅಗೌರವಿಸಿದಂತೆ ಭಾಸವಾಗುವ ಪರಿಣಾಮ ಈ ಅಧಿಸೂಚನೆಯಿಂದ ಆಗುತ್ತದೆ. ಕಾನೂನಿಗೆ ಅನುಗುಣವಾಗಿ ಇಷ್ಟು ಸಂಖ್ಯೆಯ ಕಟ್ಟಡಗಳು ಏಕೆ ನಿರ್ಮಾಣವಾದವು ಎಂಬ ಪ್ರಶ್ನೆ ಇಲ್ಲಿ ಪ್ರಸ್ತುತ. ಪಾಲಿಕೆಯ ಮತ್ತು ಸರ್ಕಾರದ ಅಧಿಕಾರಿಗಳು ಕಾನೂನುಗಳ ಪಾಲನೆಯಲ್ಲಿ ವಿಫಲವಾಗಿರುವುದೇ ಇದಕ್ಕೆ ಮೂಲ ಕಾರಣ. ಭ್ರಷ್ಟಾಚಾರವು ಕಾನೂನುಗಳ ಅನುಷ್ಠಾನವನ್ನು ಸಡಿಲಗೊಳಿಸಿದೆ ಎಂಬುದು ವ್ಯಾಪಕವಾಗಿರುವ ಅಭಿಪ್ರಾಯವಾಗಿದೆ. ಜನಪ್ರತಿನಿಧಿಗಳ ಸಮ್ಮತಿ ಇಲ್ಲದೇ ಈ ವೈಫಲ್ಯ ಸಾಧ್ಯವಾಗುವುದಾಗಲೀ ಅಥವಾ ಮುಂದುವರೆಯುವುದಾಗಲೀ ಅಸಂಭವ.

ಕಳೆದ ಎರಡು ದಶಕಗಳಿಂದ ಕರ್ನಾಟಕದ ಸರ್ಕಾರಗಳು ಉಲ್ಲಂಘನೆ ಮಾಡಿದ ಕಟ್ಟಡಗಳನ್ನು ಕ್ರಮಬದ್ಧಗೊಳಿಸಲು ಪ್ರಯತ್ನಿಸುತ್ತಿವೆ. 2004 ರಲ್ಲಿ ಧರ್ಮ ಸಿಂಗ್ ಮುಖ್ಯಮಂತ್ರಿಯಾಗಿದ್ದು, ಸಿದ್ದರಾಮಯ್ಯನವರು ಉಪಮುಖ್ಯಮಂತ್ರಿಯಾಗಿದ್ದಾಗ ಕ್ರಮಬದ್ಧಗೊಳಿಸುವ ನಿಯಮಗಳನ್ನು ರೂಪಿಸುವ ಮತ್ತು ಜಾರಿಮಾಡುವ ಪ್ರಯತ್ನಗಳು ಪ್ರಾರಂಭವಾದವು. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆದ ಕೂಡಲೇ, 2007 ರಲ್ಲಿ ಮೂರು ತಿಂಗಳ ಅವಧಿಯಲ್ಲಿ ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಅವಕಾಶ ನೀಡಲಾಯಿತು.2013ರಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕ್ರಮಬದ್ದಗೊಳಿಸುವ ಪ್ರಯತ್ನವನ್ನು ಮತ್ತೊಮ್ಮೆ ಮಾಡಲಾಯಿತು. 2013–2014 ಅವಧಿಯಲ್ಲಿ ಜಾರಿಗೆ ತರಲಾದ ಕಾನೂನು ಶೇ 50ರಷ್ಟು ನಿಯಮ ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವ ಅವಕಾಶ ನೀಡಿತ್ತು. ಆದರೆ, 2017 ರಲ್ಲಿ ಸರ್ವೋಚ್ಚ ನ್ಯಾಯಾಲಯವು ಇದಕ್ಕೆ ತಡೆ ನೀಡಿತು. 2020–2021 ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಬಿ–ಖಾತಾ ಸಕ್ರಮಗೊಳಿಸುವ, ಮತ್ತು ಮಾರ್ಗದರ್ಶೀ ಮೌಲ್ಯಾಧಾರಿತ ಶುಲ್ಕದೊಂದಿಗೆ ಉಲ್ಲಂಘನೆಗಳನ್ನು ಕ್ರಮಬದ್ಧಗೊಳಿಸುವ ಪ್ರಯತ್ನ ಮಾಡಲಾಯಿತು. ನ್ಯಾಯಲಾಲಯಗಳು ಈ ಪ್ರಯತ್ನಗಳಿಗೆ ಮನ್ನಣೆ ನೀಡುತ್ತಿಲ್ಲ. ಏಕೆಂದರೆ, ಈ ಬದಲಾವಣೆಗಳು ನಗರದ ಬೆಳವಣಿಗೆಯಲ್ಲಿ ಅವ್ಯವಸ್ಥೆಯನ್ನು ತರಲಿದ್ದು ಅದು ಸಂವಿಧಾನದ ಆಶಯಗಳಿಗೆ ಅನುಗುಣವಾಗಿಲ್ಲ ಎಂಬುದೇ ಆಗಿದೆ.

ಹಾಗಾದರೆ, ಸರ್ಕಾರಗಳು ಏಕೆ ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವ ಪ್ರಯತ್ನಗಳನ್ನು ಸತತವಾಗಿ ಮಾಡುತ್ತಿವೆ ಎಂಬ ಪ್ರಶ್ನೆಗೂ ಕೂಡ ಉತ್ತರ ಅಗತ್ಯ. ಮೊದಲನೆಯದಾಗಿ, ನಿಯಮಗಳ ಉಲ್ಲಂಘನೆಯನ್ನು ತಡೆಯದ ಸರ್ಕಾರಗಳು ಅಂಥಹಾ ಕಟ್ಟಡಗಳ ಸಂಖ್ಯೆ ಹೆಚ್ಚಾದಂತೆ ಸಾರ್ವಜನಿಕರ ಒತ್ತಡಕ್ಕೆ ಒಳಗಾಗುತ್ತವೆ. ಅವರಿಗೆ ಪರಿಹಾರವನ್ನು ಕೊಡೂವ ನಿಟ್ಟಿನಲ್ಲಿ ಕಾನೂನು ಬದಲಾವಣೆಗೆ ಸರ್ಕಾರಗಳು ಮುಂದಾಗಬಹುದು. ಕಟ್ಟಡ ಉಲ್ಲಂಘನೆಯು ವ್ಯಾಪಕವಾಗಿ ನಡೆಯುತ್ತಿದ್ದು ಇದನ್ನು ತಡೆಯುವುದು ಹೇಗೆ ಎನ್ನುವ ಬಗ್ಗೆ ಚಿಂತನೆ ಅಗತ್ಯವಿದೆ. ಕಾನೂನುಗಳ ಸಮರ್ಪಕ ನಿರ್ವಹಣೆ ಆಗಬೇಕಿದ್ದು ಅದಕ್ಕಾಗಿ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಸಾಧ್ಯಮಾಡುವುದು ಅಪೇಕ್ಷಿತ ಪರಿಣಾಮಗಳನ್ನು ತರಬಹುದು. ಸೆಟ್ ಬ್ಯಾಕ್ ಉಲ್ಲಂಘನೆಗಳು, ನೆರೆಹೊರೆಯವರಲ್ಲಿ ಅವುಗಳಿಂದ ಉಂಟಾಗುವ ವಿವಾದಗಳನ್ನು ಪರಿಹರಿಸಲು ಕಟ್ಟಡ ನಿಯಂತ್ರಣ ಸಮಿತಿಗಳನ್ನು ಸ್ಥಾಪಿಸಬೇಕು. ನಿಯಮಿತ ಪರಿಶೀಲನೆಗಳನ್ನು ಸಾರ್ವಜನಿಕರೇ ಪ್ರಾರಂಭಿಸಲು ಅನುಮತಿಸುವ ಕಾನೂನು ನಿಯಮಗಳನ್ನು ಜಾರಿಮಾಡಬಹುದು. ಈ ಸಮಿತಿಗಳಿಗೆ ತಾಂತ್ರಿಕ ಪರಿಶೀಲನೆ ನಡೆಸುವ ಮತ್ತು ನಿಯಮಗಳ ಪಾಲನೆಯ ಕರ್ತವ್ಯ ಇರುವ ಅಧಿಕಾರಿಗಳನ್ನು ಉಲ್ಲಂಘನೆಗಳಿಗೆ ಹೊಣೆಯಾಗಿಸುವ ಅಧಿಕಾರಗಳನ್ನು ನೀಡಬಹುದು.

ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಮುನ್ನ ಹೊಸ ಕಟ್ಟಡಗಳ ನಿರ್ಮಾಣದಲ್ಲಿ ನಿಯಮಗಳನ್ನು ವಿನಾಯಿತಿ ಇಲ್ಲದಂತೆ ಜಾರಿ ಮಾಡುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ಬೇಕಾದರೆ ನಿವೇಶನದ ಸುತ್ತಾ ಖಾಲಿ ಬಿಡಲೇಬೇಕಾದ ಜಾಗವನ್ನು ಹೊಸದಾಗಿ ನಿರ್ದೇಶಿಸಬಹುದು. ಖಾಲಿ ಜಾಗವನ್ನು ಮಿತಿಗೊಳಿಸಬಹುದಾದರೂ ನಾಲ್ಕೂ ದಿಕ್ಕುಗಳಲ್ಲಿ ಜಾಗ ಬಿಡುವುದರಿಂದ ವ್ಯಾಜ್ಯಗಳನ್ನು ಕಡಿಮೆ ಮಾಡಬಹುದು. ನಂತರ ಅದೇ ನಿಯಮಗಳನ್ನು ಉಲ್ಲಂಘಿದ ಕಟ್ಟಡಗಳೂ ಅಳವಡಿಸಿಕೊಳ್ಳಬೇಕಾದ ಸಕ್ರಮ ಕಾನೂನನ್ನು ಜಾರಿ ಮಾಡಬೇಕಾದದ್ದು ಸೂಕ್ತ. ಈ ಕ್ರಮ ಸೂಕ್ತ ಆಡಳಿತದ ವಿಧಾನವಾಗಿದ್ದು ನ್ಯಾಯಾಲಯಗಳೂ ಅದನ್ನು ಅಂಗೀಕರಿಸುವ ಸಾಧ್ಯತೆ ಹೆಚ್ಚು.

ಕಳೆದ ಒಂದು ತಿಂಗಳಲ್ಲಿ ಸಾರ್ವಜನಿಕರಿಂದಲೂ, ಸಂಘ–ಸಂಸ್ಥೆಗಳಿಂದಲೂ ಸಕಾರಣಗಳೊಂದಿಗೆ ಹಲವಾರು ಆಕ್ಷೇಪಗಳನ್ನು ಐದೂ ಪಾಲಿಕೆಗಳಿಗೆ ಸಲ್ಲಿಕೆಯಾಗಿದೆ. ಈಗ ಜನಾಭಿಪ್ರಾಯವನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಶಾಸಕಾಂಗದ ಮೇಲೆ ಇದೆ.

ಚಾಣಕ್ಯ ಸಮೀಕ್ಷೆ: ಬಿಜೆಪಿಗೆ 192 ಸ್ಥಾನಗಳ ನಿರೀಕ್ಷೆ

ಬಂಗಾಳ: ಬಿಜೆಪಿಗೆ ಐತಿಹಾಸಿಕ ಜಯ?

- ಟಿಎಂಸಿಗೆ 100 ಸ್ಥಾನಗಳಷ್ಟೇ ಸಾಧ್ಯತೆ
- ಇತರೆ ಪಕ್ಷಗಳಿಗೆ ಅಲ್ಪ ಅವಕಾಶ
- ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಸಾಧ್ಯತೆ

ಕೋಲ್ಕತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆಗಳು ರಾಜ್ಯ ರಾಜಕೀಯದಲ್ಲಿ ದೊಡ್ಡ ಬದಲಾವಣೆಯ ಸೂಚನೆ ನೀಡುತ್ತಿವೆ. ಟುಡೇಸ್ ಚಾಣಕ್ಯ ಸಮೀಕ್ಷೆಯ ಪ್ರಕಾರ, ಭಾರತೀಯ ಜನತಾ ಪಕ್ಷ (ಬಿಜೆಪಿ) ಭಾರೀ ಬಹುಮತದೊಂದಿಗೆ ಅಧಿಕಾರಕ್ಕೆ ಏರುವ ಸಾಧ್ಯತೆ ವ್ಯಕ್ತವಾಗಿದೆ.

ಈ ಸಮೀಕ್ಷೆ ಪ್ರಕಾರ, 294 ಸ್ಥಾನಗಳ ವಿಧಾನಸಭೆಯಲ್ಲಿ ಬಿಜೆಪಿ ಸುಮಾರು 192 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ. ಇದು ಸ್ಪಷ್ಟ ಬಹುಮತಕ್ಕಿಂತ ಬಹಳ ಹೆಚ್ಚಾಗಿದ್ದು, ರಾಜ್ಯದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಸ್ಥಾಪನೆಯ ದಾರಿಯನ್ನು ಸುಗಮಗೊಳಿಸಬಹುದು.



ಇನ್ನೊಂದೆಡೆ, ಸಿಎಂ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ಸುಮಾರು 100 ಸ್ಥಾನಗಳಷ್ಟೇ ಸಿಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಇತರೆ ಪಕ್ಷಗಳಿಗೆ ಅತಿ ಕಡಿಮೆ ಸ್ಥಾನಗಳು ಸಿಗುವ ಸಾಧ್ಯತೆ ಇದೆ. ಚಾಣಕ್ಯ ಸಮೀಕ್ಷೆ ಬಿಜೆಪಿ ಪರ ಸ್ಪಷ್ಟ ಅಲೆ ಇದೆ ಎಂದು ಸೂಚಿಸಿದ್ದು, ಇದು ಬಂಗಾಳ ರಾಜಕೀಯದಲ್ಲಿ ಐತಿಹಾಸಿಕ ಬದಲಾವಣೆಗೆ ಕಾರಣವಾಗಬಹುದು ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಇದೇ ವೇಳೆ, ಇತರ ಕೆಲವು ಸಮೀಕ್ಷೆಗಳು ಮಿಶ್ರ ಚಿತ್ರಣ ನೀಡುತ್ತಿದ್ದರೂ, ಬಹುತೇಕ ಎಕ್ಸಿಟ್ ಪೋಲ್‌ಗಳು ಬಿಜೆಪಿ ಮುನ್ನಡೆಯನ್ನೇ ಸೂಚಿಸುತ್ತಿವೆ. ಕೆಲವು ಸಮೀಕ್ಷೆಗಳು ಕಠಿಣ ಪೈಪೋಟಿಯನ್ನೂ ಸೂಚಿಸುತ್ತಿವೆ. ಇಲ್ಲಿ ಎರರ್ ಮಾರ್ಜಿನ್ 11 ಸ್ಥಾನಗಳನ್ನು ನೀಡಲಾಗಿದೆ.

ಕೇರಳದಲ್ಲಿ ಕಠಿಣ ಪೈಪೋಟಿ: ಹಾಗೆಯೇ, ಕೇರಳದಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್ ನಡುವೆ ಕಠಿಣ ಪೈಪೋಟಿ ಇದೆ ಎಂದು ಇದೇ ಸಮೀಕ್ಷೆ ಹೇಳಿದೆ. ಯುಡಿಎಫ್‌ಗೆ 69, ಎಲ್‌ಡಿಎಫ್‌ಗೆ 64, ಬಿಜೆಪಿಗೆ 7, ಇತರೆ 1 ಸ್ಥಾನ ಸಿಗಬಹುದು ಎಂದಿದೆ. ಇಲ್ಲಿ ಎರರ್ ಮಾರ್ಜಿನ್ 9 ಸ್ಥಾನಗಳಿವೆ.

ಡಿಎಂಕೆಗೆ ಗೆಲುವು: ತಮಿಳುನಾಡಿನಲ್ಲಿ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಮತ್ತೆ ಸರ್ಕಾರ ರಚಿಸುವ ಸಾಧ್ಯತೆಗಳಿವೆ ಎಂದು ಈ ಸಮೀಕ್ಷೆ ಹೇಳಿದೆ. ಇದರ ಪ್ರಕಾರ, ಟಿವಿಕೆಯ ವಿಜಯ್ ಎಐಎಡಿಎಂಕೆ ಮತ ಕಬಳಿಸಿದ್ದಾರೆ ಎಂದಿದೆ. ಇಲ್ಲಿ ಡಿಎಂಕೆ 125, ಎಐಎಡಿಎಂಕೆ 45, ಟಿವಿಕೆ 63, ಇತರೆ 1 ಸ್ಥಾನ ಗೆಲ್ಲಬಹುದು ಎಂದಿದೆ. ಇಲ್ಲೂ ಎರರ್ ಮಾರ್ಜಿನ್ 11 ಸೀಟುಗಳನ್ನು ನೀಡಲಾಗಿದೆ.

ಅಸ್ಸಾಂನಲ್ಲಿ ಬಿಜೆಪಿ: ಈಶಾನ್ಯ ರಾಜ್ಯ ಅಸ್ಸಾಂನಲ್ಲಿ ಬಿಜೆಪಿಯೇ ಮತ್ತೆ ಅಧಿಕಾರ ಹಿಡಿಯಲಿದೆ ಎಂಬುದು ಟುಡೇಸ್ ಚಾಣಕ್ಯದ ಭವಿಷ್ಯ. ಇಲ್ಲಿ ಬಿಜೆಪಿ 102, ಕಾಂಗ್ರೆಸ್ 23 ಮತ್ತು ಇತರೆ 1 ಸ್ಥಾನದಲ್ಲಿ ಗೆಲ್ಲಬಹುದು ಎಂದಿದೆ. ಇಲ್ಲಿ ಎರರ್ ಮಾರ್ಜಿನ್ 9 ಸ್ಥಾನಗಳನ್ನು ನೀಡಲಾಗಿದೆ.

ತೆಲಂಗಾಣದಲ್ಲಿ ₹8,000 ಕೋಟಿ ಯೋಜನೆಗಳಿಗೆ ಶೀಘ್ರ ಚಾಲನೆ

ಸಿಕಂದರಾಬಾದ್: ಪ್ರಧಾನಮಂತ್ರಿ ನರೇಂದ್ರ ಮೋದಿ, ಮೇ 10 ರಂದು ತೆಲಂಗಾಣಕ್ಕೆ ಭೇಟಿ ನೀಡಲಿದ್ದು, 8,000 ಕೋಟಿ ರೂಪಾಯಿ ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ.



ಇದು ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ರಾಜ್ಯಕ್ಕೆ ನೀಡುತ್ತಿರುವ ಮೊದಲ ಭೇಟಿಯಾಗಿದೆ.

ಮೂಲಸೌಕರ್ಯ ಮತ್ತು ಸಾರ್ವಜನಿಕ ಸಂಪರ್ಕ: ಅಧಿಕೃತ ವೇಳಾಪಟ್ಟಿಯ ಪ್ರಕಾರ, ಪ್ರಧಾನಿ ಬೀಬಿನಗರದ ಏಮ್ಸ್ ನೂತನ ಸೌಲಭ್ಯಗಳು, ಎಂಎಂಟಿಎಸ್ ಹಂತ 2 ರ ವಿಸ್ತರಣೆ, ಹಾಗೂ ವಿವಿಧ ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.

ಬೇಗಂಪೇಟೆ ವಿಮಾನ ನಿಲ್ದಾಣದಲ್ಲಿ ಅಧಿಕೃತ ಕಾರ್ಯಕ್ರಮಗಳ ನಂತರ, ಸಿಕಂದರಾಬಾದ್‌ನ

- ಮೇ 10ಕ್ಕೆ ಮೋದಿ ತೆಲಂಗಾಣ ಭೇಟಿ

ರಾಜಕೀಯ ಹಿನ್ನೆಲೆ

ತೆಲಂಗಾಣದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಹಿನ್ನೆಲೆಯಲ್ಲಿ ಈ ಭೇಟಿ ರಾಜಕೀಯವಾಗಿ ಮಹತ್ವ ಪಡೆದಿದೆ. ಈ ಹಿಂದೆ ಜಿಎಚ್‌ಎಂಸಿ ಚುನಾವಣೆಯಲ್ಲಿ ಬಿಜೆಪಿ 48 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಜನರಿಗೆ ತಲುಪಿಸುವುದು ಮತ್ತು ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಹಾಗೂ ಹಿಂದಿನ ಬಿಆರ್‌ಎಸ್ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸುವುದು ಈ ಭೇಟಿಯ ಪ್ರಮುಖ ಉದ್ದೇಶ ಎಂದು ಹೇಳಲಾಗುತ್ತಿದೆ.

ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಸುಮಾರು ಎರಡು ಲಕ್ಷ ಜನರನ್ನು ಸೇರಿಸುವ ಗುರಿಯನ್ನು ಹೊಂದಲಾಗಿದೆ.



594
ಕಿ.ಮೀ. ಉದ್ದದ ಹೆದ್ದಾರಿ, ತುರ್ತು ರನ್‌ವೇ ಸಹಿತ ಮೂಲಸೌಕರ್ಯ

ಪಶ್ಚಿಮ, ಪೂರ್ವ ಉತ್ತರ ಪ್ರದೇಶ ನಡುವಿನ ಸಂಪರ್ಕ ಸೇತು

ಸುದ್ದಿ ಸಮಗ್ರ

ಉತ್ತರ ಪ್ರದೇಶದ ಮೂಲಸೌಕರ್ಯ ಕ್ಷೇತ್ರದಲ್ಲಿ ಇಂದು ಹೊಸ ಮೈಲಿಗಲ್ಲು ಸ್ಥಾಪನೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ, 594 ಕಿ.ಮೀ. ಉದ್ದದ ಗಂಗಾ ಎಕ್ಸ್‌ಪ್ರೆಸ್ ವೇಯನ್ನು ಉದ್ಘಾಟಿಸಿದ್ದಾರೆ. ಪಶ್ಚಿಮದ ಮೀರತ್ ಮತ್ತು ಪೂರ್ವದ ಪ್ರಯಾಗ್‌ರಾಜ್ ಅನ್ನು ಸಂಪರ್ಕಿಸುವ ಈ ಆರು ಪಥಗಳ ನಿಯಂತ್ರಿತ ಹೆದ್ದಾರಿ, ಈಗ ರಾಜ್ಯದ ಅತಿ ಉದ್ದದ ಎಕ್ಸ್ ಪ್ರೆಸ್‌ವೇ ಆಗಿದೆ. ಸುಮಾರು 36,230 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಈ ಯೋಜನೆ, ಪ್ರಯಾಣದ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡುವ ಮೂಲಕ ಮತ್ತು ಪ್ರದೇಶದ ಸಂಚಾರ ಮತ್ತು ಸರಕು ಸಾಗಣೆಯನ್ನು ಅನ್ನು ಸುಧಾರಿಸುವ ಮೂಲಕ ಗ್ರಾಮೀಣ ಮತ್ತು ನಗರ ಉತ್ತರ ಪ್ರದೇಶದ ಆರ್ಥಿಕ ಚಿತ್ರಣವನ್ನು ಬದಲಿಸುವ ಗುರಿ ಹೊಂದಿದೆ. ಈ ಸಂಪರ್ಕ ಸೇತುವಿನ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಗಂಗಾ ಎಕ್ಸ್‌ಪ್ರೆಸ್‌ವೇ ಉ.ಪ್ರದೇಶದ ಸೇತು

ಎಂಜಿನಿಯರಿಂಗ್, ಕಾರ್ಯತಂತ್ರದ ವೈಶಿಷ್ಟ್ಯ

ಈ ಬೃಹತ್ ಯೋಜನೆಯಲ್ಲಿ ಗಂಗಾ ನದಿಯ ಮೇಲೆ 960 ಮೀಟರ್ ಮತ್ತು ರಾಮಗಂಗಾ ನದಿಯ ಮೇಲೆ 720 ಮೀಟರ್ ಉದ್ದದ ಸೇತುವೆಗಳನ್ನು ನಿರ್ಮಿಸಲಾಗಿದೆ. ನಾಗರಿಕ ಸಾರಿಗೆಯ ಜೊತೆಗೆ, ಈ ಹೆದ್ದಾರಿ ರಕ್ಷಣಾ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಷಹಜಹಾನ್‌ಪುರದಲ್ಲಿ 3.5 ಕಿ.ಮೀ. ಉದ್ದದ ತುರ್ತು ರನ್‌ವೇ (ಏರ್‌ಸ್ಟ್ರಿಪ್) ನಿರ್ಮಿಸಲಾಗಿದೆ. ಇದನ್ನು ಈಗಾಗಲೇ ಭಾರತೀಯ ವಾಯುಪಡೆ ಪರೀಕ್ಷಿಸಿದ್ದು, ತುರ್ತು ಸಂದರ್ಭಗಳಲ್ಲಿ ಯುದ್ಧ ವಿಮಾನಗಳ ಕಾರ್ಯಾಚರಣೆಗೆ ಇದು ಸಹಕಾರಿಯಾಗಲಿದೆ.

ಭವಿಷ್ಯದ ವಿಸ್ತರಣೆ, ಪ್ರಯಾಣಿಕರ ಸೌಲಭ್ಯ

ಪ್ರಸ್ತುತ ಇದು ಆರು ಪಥಗಳ ರಸ್ತೆಯಾಗಿದ್ದರೂ, ಭವಿಷ್ಯದಲ್ಲಿ ಎಂಟು ಪಥಗಳಿಗೆ ವಿಸ್ತರಿಸುವಂತೆ ವಿನ್ಯಾಸಗೊಳಿಸಲಾಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಇಂಧನ ಕೇಂದ್ರಗಳು, ಫುಡ್ ಕೋರ್ಟ್‌ಗಳು ಮತ್ತು ವಿಶ್ರಾಂತಿ ಕೊಠಡಿಗಳನ್ನು ಒಳಗೊಂಡ ಒಂಬತ್ತು ಸಾರ್ವಜನಿಕ ಸೇವಾ ಸಂಕೀರ್ಣಗಳನ್ನು ನಿರ್ಮಿಸಲಾಗಿದೆ. ಅಲ್ಲದೆ, ಈ ಎಕ್ಸ್ ಪ್ರೆಸ್‌ವೇಯನ್ನು ಹರಿದ್ವಾರದವರೆಗೆ ಇನ್ನೂ 146 ಕಿ.ಮೀ. ವಿಸ್ತರಿಸುವ ಯೋಜನೆಯೂ ಜಾರಿಯಲ್ಲಿದೆ.



594 ಕಿ.ಮೀ.
ಒಟ್ಟು ಉದ್ದ

ಮಾರ್ಗ: ಮೀರತ್ (ಬಿಜೋಲಿ) ಯಿಂದ ಪ್ರಯಾಗ್‌ರಾಜ್

36,230
ರೂ. ಕೋಟಿ ಅಂದಾಜು ಯೋಜನಾ ವೆಚ್ಚ

120
ಕಿಮೀ ಪ್ರತಿ ಗಂಟೆಗೆ ವೇಗದ ಮಿತಿ


ಹಾದುಹೋಗುವ ಜಿಲ್ಲೆ
12 (ಮೀರತ್, ಉನ್ನಾವೊ, ರಾಯ್‌ಬರೇಲಿ, ಪ್ರಯಾಗ್ ರಾಜ್ ಸೇರಿ)

ಪ್ರಮುಖ ನಿರ್ಮಾಣ
960 ಮೀ ಗಂಗಾ ಸೇತುವೆ; 3.5 ಕಿಮೀ ವಾಯುಪಡೆ ಏರ್‌ಸ್ಟ್ರಿಪ್

ಪಥಗಳು
6 (8ಕ್ಕೆ ವಿಸ್ತರಿಸಬಹುದಾದ)
ಅಂದಾಜು ಪ್ರಯಾಣ ಸಮಯ: 6ರಿಂದ 7 ಗಂಟೆ

ರಾಜ್ಯದಾದ್ಯಂತ ಸಂಚಾರ ದೂರ ಕಡಿತ

ವಾಹನ ಸವಾರರಿಗೆ ಈ ಯೋಜನೆಯ ಪ್ರಮುಖ ಆಕರ್ಷಣೆಯೆಂದರೆ ಪ್ರಯಾಣದ ಸಮಯದ ಕಡಿತ. ಪ್ರಸ್ತುತ, ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಮೂಲಕ ಮೀರತ್‌ನಿಂದ ಪ್ರಯಾಗ್‌ರಾಜ್‌ಗೆ ಪ್ರಯಾಣಿಸಲು 10 ರಿಂದ 12 ಗಂಟೆಗಳ ಸಮಯ ಬೇಕಾಗುತ್ತದೆ. ಗಂಗಾ ಎಕ್ಸ್ ಪ್ರೆಸ್‌ವೇ ಪ್ರಾರಂಭದೊಂದಿಗೆ, ಈ ಸಮಯ ಕೇವಲ 6 ಅಥವಾ 7 ಗಂಟೆಗಳಿಗೆ ಇಳಿಕೆಯಾಗುವ ನಿರೀಕ್ಷೆಯಿದೆ. ಗಂಟೆಗೆ 120 ಕಿಮೀ ವೇಗಕ್ಕೆ ಅನುಗುಣವಾಗಿ ಇದನ್ನು ವಿನ್ಯಾಸಗೊಳಿಸಲಾಗಿದ್ದು, ದೆಹಲಿ-ಎನ್‌ಸಿಆರ್‌ನಿಂದ ಬರುವ ಪ್ರಯಾಣಿಕರು ದೆಹಲಿ-ಮೀರತ್ ಎಕ್ಸ್ ಪ್ರೆಸ್‌ವೇ ಮೂಲಕ ಸುಲಭವಾಗಿ ಈ ರಸ್ತೆಯನ್ನು ಸಂಪರ್ಕಿಸಬಹುದು.



ಹೃದಯಭಾಗದ ಮೂಲಕ ಸಾಗುವ ಮಾರ್ಗ

ಈ ಎಕ್ಸ್‌ಪ್ರೆಸ್‌ವೇ ಹಾಪುರ್, ಬುಲಂದ್‌ಶಹರ್, ಅಮ್ರೋಹಾ, ಸಂಭಲ್, ಬದೌನ್, ಷಹಜಹಾನ್‌ಪುರ, ಹರ್ದೋಯಿ, ಉನ್ನಾವೊ, ರಾಯ್‌ಬರೇಲಿ ಮತ್ತು ಪ್ರತಾಪ್‌ಗಢ ಸೇರಿದಂತೆ 12 ಪ್ರಮುಖ ಜಿಲ್ಲೆಗಳ ಮೂಲಕ ಹಾದುಹೋಗುತ್ತದೆ. ಇದು 500ಕ್ಕೂ ಹೆಚ್ಚು ಹಳ್ಳಿಗಳನ್ನು ಜೋಡಿಸುವ ಮೂಲಕ ಹಿಂದೆ ಅಭಿವೃದ್ಧಿಯಿಂದ ವಂಚಿತವಾಗಿದ್ದ ಪ್ರದೇಶಗಳಲ್ಲಿ ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸುವ ನಿರೀಕ್ಷೆಯಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳೊಂದಿಗೆ ಸಂಪರ್ಕ ಸಾಧಿಸಲು ಇಲ್ಲಿ 21 ಇಂಟರ್‌ಚೇಂಜ್‌ಗಳನ್ನು ನೀಡಲಾಗಿದೆ.

ಆರ್ಥಿಕ ಪ್ರಭಾವ ಮತ್ತು ಟೋಲ್

ಅದಾನಿ ಎಂಟರ್‌ಪ್ರೈಸಸ್ ಮತ್ತು ಐಆರ್‌ಬಿ ಇನ್‌ಫ್ರಾಸ್ಟ್ರಕ್ಚರ್ ಸಹಯೋಗದೊಂದಿಗೆ ಪಿಪಿಪಿ ಮಾದರಿಯಲ್ಲಿ ಈ ಯೋಜನೆ ಕಾರ್ಯನಿರ್ವಹಿಸುತ್ತಿದೆ. ಟೋಲ್ ದರಗಳನ್ನು ಇನ್ನೂ ಅಂತಿಮಗೊಳಿಸಲಾಗುತ್ತಿದೆಯಾದರೂ, ರಾಜ್ಯದ ಇತರ ಎಕ್ಸ್ ಪ್ರೆಸ್‌ವೇಗಳಂತೆ ಪ್ರತಿ ಕಿಲೋಮೀಟರ್‌ಗೆ ರೂ.2ರಿಂದ ರೂ.3 ಇರಬಹುದು ಎಂದು ಅಂದಾಜಿಸಲಾಗಿದೆ. ಈ ಎಕ್ಸ್ ಪ್ರೆಸ್‌ವೇಯ 594 ಕಿ.ಮೀ. ಉದ್ದ, ಸರಕು ಸಾಗಣೆಗೆ ಅತ್ಯಂತ ಸೂಕ್ತ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದು ಸರಕುಗಳನ್ನು ರಸ್ತೆಯ ಮೂಲಕ ಸಾಗಿಸಲು ತುಂಬಾ ಅನುಕೂಲಕರ. ಈ ಯೋಜನೆಯಿಂದ ಉದ್ಯೋಗಾವಕಾಶಗಳು ಹೆಚ್ಚಲಿವೆ, ಸಾರಿಗೆ ವೆಚ್ಚ ಕಡಿಮೆಯಾಗಲಿದೆ ಮತ್ತು ಉತ್ತರ ಪ್ರದೇಶದ ಕೈಗಾರಿಕಾ ಕ್ಷೇತ್ರವು ಮತ್ತಷ್ಟು ಬಲಗೊಳ್ಳಲಿದೆ ಎಂದು ರಾಜ್ಯ ಸರ್ಕಾರ ನಿರೀಕ್ಷಿಸಿದೆ. ಮುಂಬರುವ ವರ್ಷಗಳಲ್ಲಿ ಇದು ರಾಜ್ಯದ ಆರ್ಥಿಕತೆಯ ಮೇಲೆ ದೊಡ್ಡ ಮಟ್ಟದ ಧನಾತ್ಮಕ ಪರಿಣಾಮ ಬೀರಲಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಗಂಗಾ ಎಕ್ಸ್ ಪ್ರೆಸ್‌ವೇಯನ್ನು ಒಂದು ಪರಿವರ್ತಕ ಮೂಲಸೌಕರ್ಯ ಯೋಜನೆ ಎಂದೇ ನೋಡಲಾಗುತ್ತಿದೆ. ಇದು ಪಶ್ಚಿಮ, ಮಧ್ಯ ಮತ್ತು ಪೂರ್ವ ಭಾಗಗಳನ್ನು ಒಂದೇ ಹೈ-ಸ್ಪೀಡ್ ಕಾರಿಡಾರ್ ಮೂಲಕ ಜೋಡಿಸುವ ಮೂಲಕ ಉತ್ತರ ಪ್ರದೇಶದ ಆರ್ಥಿಕ ಭೂಪಟವನ್ನೇ ಬದಲಿಸುವ ನಿರೀಕ್ಷೆಯಿದೆ.

ಕಿರುಸುದ್ದಿ

ಅಮೆರಿಕನ್ನರಿಗೆ ಅರ್ಹ ಜಾಗ ಸಮುದ್ರದಾಳ: ಮೊಜ್ತಬಾ

ದುಬೈ: ಅಮೆರಿಕನ್ನರಿಗೆ ಮಧ್ಯಪ್ರಾಚ್ಯದಲ್ಲಿ ಯಾವುದೇ ಜಾಗವಿಲ್ಲ, ಹಾಗೊಂದು ವೇಳೆ ಮಧ್ಯಪ್ರಾಚ್ಯದಲ್ಲಿ ಅಮೆರಿಕನ್ನರಿಗೆ ಅರ್ಹವಾದ ಜಾಗವೆಂದರೆ ಅದು ನಮ್ಮ ಸಮುದ್ರದಾಳ. ಯಾವುದೇ ಕಾರಣಕ್ಕೂ ನಮ್ಮ ಅಣ್ವಸ್ತ್ರ ಮತ್ತು ಕ್ಷಿಪಣಿ ಸಾಮರ್ಥ್ಯ ಬಿಟ್ಟುಕೊಡುವುದಿಲ್ಲ. ಇರಾನ್ ತನ್ನ ಅಣ್ವಸ್ತ್ರ ಮತ್ತು ಕ್ಷಿಪಣಿ ಸಾಮರ್ಥ್ಯವನ್ನು ರಾಷ್ಟ್ರೀಯ ಆಸ್ತಿಯನ್ನಾಗಿ ಸಂರಕ್ಷಿಸಿಕೊಳ್ಳಲಿದೆ ಎಂದು ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಗುರುವಾರ ಘೋಷಿಸಿದ್ದಾರೆ. ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಅಮೆರಿಕನ್ನರಿಗೆ ಸ್ಥಾನವಿಲ್ಲ ಮತ್ತು ಹಾರ್ಮುಜ್ ಜಲಸಂಧಿ ಇರಾನ್‌ನ ಸಂಪೂರ್ಣ ನಿಯಂತ್ರಣದಲ್ಲಿದೆ ಎಂದು ಖಮೇನಿ ಹೇಳಿದ್ದಾರೆ.



ಜರ್ಮನಿ ಸರಿ ಮಾಡಿಕೊಳ್ಳಿ ಮರ್ಝ್‌ಗೆ ಟ್ರಂಪ್ ಮತ್ತೆ ತಿವಿತ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜರ್ಮನಿ ಚಾನ್ಸಲರ್ ಫ್ರಿಡ್ರಿಕ್ ಮರ್ಝ್ ವಿರುದ್ಧ ಮತ್ತೆ ತೀವ್ರ ಟೀಕೆ ವ್ಯಕ್ತಪಡಿಸಿದ್ದಾರೆ. 'ತಮ್ಮ ದೇಶದ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳುವುದರಲ್ಲಿ ಹೆಚ್ಚು ಸಮಯ ಕಳೆಯಲಿ' ಎಂದು ಟ್ರಂಪ್ ತಿವಿದುಕೊಂಡಿದ್ದಾರೆ. ಇರಾನ್ ಸಂಬಂಧಿತ ಯುದ್ಧದ ವಿಚಾರದಲ್ಲಿ ಮರ್ಝ್ ನೀಡುತ್ತಿರುವ ಪ್ರತಿಕ್ರಿಯೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಟ್ರಂಪ್, ಜರ್ಮನಿಯ ವಲಸೆ ಹಾಗೂ ಇಂಧನ ನೀತಿಗಳಲ್ಲಿ ಗಂಭೀರ ಸಮಸ್ಯೆಗಳಿವೆ ಎಂದು ಆರೋಪಿಸಿದರು.

ಟಿವಿಕೆಯೊಂದಿಗೆ ಮೈತ್ರಿಗೆ ಎಐಎಡಿಎಂಕೆ ಚಿಂತನೆ

ಚೆನ್ನೈ: ತಮಿಳುನಾಡು ಚುನಾವಣೆಯಲ್ಲಿ ಮತದಾನೋತ್ತರ ಫಲಿತಾಂಶಗಳಲ್ಲಿ ಟಿವಿಕೆ ಪಕ್ಷಕ್ಕೆ ಉತ್ತಮ ಆರಂಭವನ್ನು ಸೂಚಿಸಿದ ಹಿನ್ನೆಲೆಯಲ್ಲಿ ಎಐಎಡಿಎಂಕೆ ಪಕ್ಷವು ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಜೊತೆ ಮೈತ್ರಿ ಮಾತುಕತೆಗಳನ್ನು ಪರಿಗಣಿಸುತ್ತಿದೆ. ಮತದಾನೋತ್ತರ ಸಮೀಕ್ಷೆಗಳ ಪ್ರಕಾರ, ಟಿವಿಕೆ ತಮಿಳುನಾಡಿನಲ್ಲಿ ರಾಜಕೀಯ ಅಲೆಯನ್ನು ಸೃಷ್ಟಿಸಿದೆ ಎಂದು ಸೂಚಿಸಲಾಗಿದೆ. ಮುಖ್ಯಮಂತ್ರಿ ಅಭ್ಯರ್ಥಿಗಳ ಪಟ್ಟಿಯಲ್ಲಿ ವಿಜಯ್ ಅತ್ಯಂತ ಜನಪ್ರಿಯರಾಗಿದ್ದಾರೆ. ಆ್ಯಕ್ಸಿಸ್ ಮೈ ಇಂಡಿಯಾ ಪ್ರಕಾರ, ವಿಜಯ್ ಪಕ್ಷಕ್ಕೆ 98ರಿಂದ 120 ಸ್ಥಾನಗಳು ದೊರೆಯಬಹುದು. ಡಿಎಂಕೆ-ಐಎನ್‌ಸಿ ಮೈತ್ರಿಗೆ 92ರಿಂದ 110 ಸ್ಥಾನಗಳು, ಎನ್‌ಡಿಎಗೆ 22ರಿಂದ 32 ಸ್ಥಾನಗಳು ಲಭಿಸುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಶೀಘ್ರ ಮೋದಿ 4 ರಾಷ್ಟ್ರಗಳ ಪ್ರವಾಸ


ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಮೇನಲ್ಲಿಯುರೋಪಿನ ನಾಲ್ಕು ರಾಷ್ಟ್ರಗಳ ಪ್ರವಾಸ ಕೈಗೊಳ್ಳಲಿದ್ದು, ಇಂಧನ ಭದ್ರತೆ, ಪಶ್ಚಿಮ ಏಷ್ಯಾ ಸಂಕಷ್ಟದಿಂದ ಉಂಟಾಗಿರುವ ವಾಣಿಜ್ಯ ವ್ಯತ್ಯಯಗಳ ನಿಯಂತ್ರಣ ಹಾಗೂ ಪ್ರಮುಖ ತಂತ್ರಜ್ಞಾನಗಳಲ್ಲಿ ಸಹಕಾರ ವೃದ್ಧಿ ಪ್ರಮುಖ ಅಜೆಂಡಾಗಳಾಗಿವೆ ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ.

ಮೇ15ರಿಂದ20ರವರೆಗೆನಡೆಯಲಿರುವಈಪ್ರವಾಸದಲ್ಲಿಮೋದಿ ಅವರು ನೆದರ್‌ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿ ದೇಶಗಳಿಗೆ ಭೇಟಿ ನೀಡಲಿದ್ದಾರೆ. ಪ್ರವಾಸದ ಆರಂಭ ಅಥವಾ ಅಂತ್ಯದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಸ್ವಲ್ಪ ಸಮಯ ತಂಗುವ ಸಾಧ್ಯತೆಯೂ ಇದೆ ಎಂದು ತಿಳಿದುಬಂದಿದೆ. ಆದರೆ ಈ ಕುರಿತು ಅಧಿಕೃತ ಘೋಷಣೆ ಇನ್ನಷ್ಟೇ ಹೊರಬೀಳಬೇಕಾಗಿದೆ.

ಪಹಲ್ಗಾಮ್ ಉಗ್ರ ದಾಳಿ ಹಿನ್ನೆಲೆಯಲ್ಲಿ ಕಳೆದ ವರ್ಷ ಮುಂದೂಡಲ್ಪಟ್ಟಿದ್ದ ಈ ಶೃಂಗಸಭೆಯಲ್ಲಿ ನವೀನತೆ, ಆರ್ಥಿಕ ಬೆಳವಣಿಗೆ, ಹವಾಮಾನ ಸ್ನೇಹಿ ಪರಿಹಾರಗಳು ಹಾಗೂ ಪರಸ್ಪರ ಪ್ರಯೋಜನಕಾರಿ ವಾಣಿಜ್ಯ, ಹೂಡಿಕೆ ಮೇಲೆ ಚರ್ಚೆ ನಡೆಯಲಿದೆ. ಇದೇ ವೇಳೆ ಡೆನ್ಮಾರ್ಕ್, ಫಿನ್ಲ್ಯಾಂಡ್, ಐಸ್ಲ್ಯಾಂಡ್, ನಾರ್ವೆ, ಸ್ವೀಡನ್ ದೇಶಗಳ ನಾಯಕರೊಂದಿಗೆ ಪ್ರಧಾನಿಗಳು ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸುವ ಸಾಧ್ಯತೆಯಿದೆ. ಭಾರತ ಮತ್ತು ಐರೋಪ್ಯ ಒಕ್ಕೂಟವು ಜನವರಿಯಲ್ಲಿ ಮಹತ್ವಾಕಾಂಕ್ಷಿ ಮುಕ್ತ ವಾಣಿಜ್ಯ ಒಪ್ಪಂದವನ್ನು ಅಂತಿಮಗೊಳಿಸಿದ ಬಳಿಕ ನಡೆಯುತ್ತಿರುವ ಇದು ಮೊದಲ ಯುರೋಪ್ ಪ್ರವಾಸವಾಗಿದ್ದು, ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ಗತಿ ಸಿಗುವ ನಿರೀಕ್ಷೆಯಿದೆ.

ಇರಾನ್ ಕದನದಿಂದ ಪಾಕ್‌ಗೆ ಆರ್ಥಿಕ ಪೆಟ್ಟು

ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧವು ಕಳೆದ ಎರಡು ವರ್ಷಗಳಲ್ಲಿ ಪಾಕಿಸ್ತಾನ ಸಾಧಿಸಿದ ಆರ್ಥಿಕ ಪ್ರಗತಿಗೆ ಭಾರಿ ಹಿನ್ನಡೆ ಉಂಟುಮಾಡಿದೆ, ಎಂದು ಪ್ರಧಾನಿ ಶೆಹಬಾಜ್ ಷರೀಫ್ ಬುಧವಾರ ತಿಳಿಸಿದ್ದಾರೆ.



ಸಂಪುಟ ಸಭೆಯಲ್ಲಿ ಮಾತನಾಡಿದ ಷರೀಫ್, ಯುದ್ಧದ ಹಿನ್ನೆಲೆಯಲ್ಲಿ ಪಾಕ್‌ನ ತೈಲ ಆಮದು ವೆಚ್ಚ 300 ಮಿಲಿಯನ್ ಡಾಲರ್‌ನಿಂದ 800 ಮಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದು ದೇಶದ ಆರ್ಥಿಕತೆಯ ಮೇಲೆ ಹೆಚ್ಚಿನ ಒತ್ತಡ ಹೇರಿದೆ. ಪ್ರಸ್ತುತಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಪ್ರತಿದಿನ ಕಾರ್ಯಪಡೆಯೊಂದು ಪರಿಶೀಲನೆ ನಡೆಸುತ್ತಿದೆ ಎಂದು ಅವರು ಖಚಿತಪಡಿಸಿದ್ದಾರೆ.

ರಾಜತಾಂತ್ರಿಕ ಸಂಧಾನ ಪ್ರಯತ್ನ: ಪ್ರಾದೇಶಿಕ ಸ್ಥಿರತೆಯನ್ನು ಉತ್ತೇಜಿಸಲು ಇಸ್ಲಾಮಾಬಾದ್ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಪಾಕ್ ಪ್ರಧಾನಿ ತಿಳಿಸಿದರು. ಏ.11ರಂದು ಇಸ್ಲಾಮಾಬಾದ್‌ನಲ್ಲಿ ನಡೆದಿದ್ದ ಇರಾನ್ ಮತ್ತು ಅಮೆರಿಕ ನಡುವೆ 21 ಗಂಟೆಗಳ ಸುದೀರ್ಘ ಸಂಧಾನ ಸಭೆ ಮಹತ್ವದ ರಾಜ ತಾಂತ್ರಿಕ ಯಶಸ್ಸನ್ನು ತಂದಿದೆ ಎಂದು ಬಣ್ಣಿಸಿದ್ದಾರೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಕಳೆದ ವಾರಾಂತ್ಯದಲ್ಲಿ ಪಾಕ್ ಭೇಟಿ ನೀಡಿ ಷರೀಫ್ ಮತ್ತು ಮುನೀರ್ ಜತೆ ಮಾತುಕತೆ ನಡೆಸಿದ್ದರು. ಮಧ್ಯಪ್ರಾಚ್ಯ ಯುದ್ಧ ಆರಂಭಕ್ಕೂ ಮೊದಲೇ ಆರ್ಥಿಕ ಸಮಸ್ಯೆಯಿಂದ ಬಳಲುತ್ತಿದ್ದ ಪಾಕಿಸ್ತಾನಕ್ಕೆ ಮತ್ತಷ್ಟು ಪೆಟ್ಟು ಬಿದ್ದಂತಾಗಿದ್ದು, ಸಂಧಾನ ಸಭೆಗೂ ಹಣವಿಲ್ಲದ ಪೇಚಿಗೆ ಸಿಲುಕಿತ್ತು.

ರೇಡಿಯೋಆ್ಯಕ್ಟಿವ್ ವಸ್ತು ಇಟ್ಟಿದ್ದಾಗಿ ಹುಸಿ ಬೆದರಿಕೆ

ನಾಗಪುರ: ಆರ್‌ಎಸ್‌ಎಸ್ ಮುಖ್ಯ ಕಚೇರಿ ಸೇರಿ ವಿವಿಧ ಸ್ಥಳಗಳಲ್ಲಿ ರೇಡಿಯೋಆ್ಯಕ್ಟಿವ್ ವಸ್ತುಗಳನ್ನು ಇಡಲಾಗಿದೆ ಎಂಬ ಅನಾಮಧೇಯ ಪತ್ರದ ಬೆದರಿಕೆಯಿಂದಾಗಿ ಭಾರೀ ಭದ್ರತಾ ಎಚ್ಚರಿಕೆ ಘೋಷಿಸಲಾಗಿದೆ.

- ಆರ್‌ಎಸ್‌ಎಸ್ ಕೇಂದ್ರ ಕಚೇರಿ ಸೇರಿ ಪ್ರಮುಖ ಸ್ಥಳಗಳಿಗೆ ಬೆದರಿಕೆ ಪತ್ರ

ಪೊಲೀಸ್ ಆಯುಕ್ತ ಡಾ. ರವೀಂದರ್ ಸಿಂಗಾಲ್ ಅವರಕಚೇರಿಗೆಏ.27ರಂದುಈಪತ್ರ ಬಂದಿದ್ದು, ತಕ್ಷಣವೇ ನಗರಾದ್ಯಂತ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪತ್ರದಲ್ಲಿ ಉಲ್ಲೇಖಿಸಿದ ಸ್ಥಳಗಳಲ್ಲಿ ವ್ಯಾಪಕ ಶೋಧ ಕಾರ್ಯ ನಡೆಸಿದರೂ ಇದುವರೆಗೆ ಯಾವುದೇ ರೇಡಿಯೋಆ್ಯಕ್ಟಿವ್ ವಸ್ತುಗಳ ಸುಳಿವು ಸಿಕ್ಕಿಲ್ಲ.

ಪೊಲೀಸರು ಈ ಪತ್ರವನ್ನು ಹುಸಿ ಬೆದರಿಕೆ ಆಗಿರಬಹುದೆಂದು ಅನುಮಾನಿಸುತ್ತಿದ್ದರೂ, ಅತ್ಯಂತ ಗಂಭೀರವಾಗಿ ತನಿಖೆ ಮುಂದುವರಿಸಿದ್ದಾರೆ. ಡಿಎಸ್‌ಎಸ್ ಎಂಬ ಸಂಘಟನೆ ಹೆಸರಿನಲ್ಲಿ ಇಂಗ್ಲಿಷ್‌ನಲ್ಲಿ ಈ ಪತ್ರ ಬರೆಯಲಾಗಿದ್ದು ಅಪಮಾನಕಾರಿ ಸಂಗತಿಗಳೂ ಸೇರಿವೆ ಎಂದು ಮೂಲಗಳು ತಿಳಿಸಿವೆ. ಪತ್ರದಲ್ಲಿ ಅತ್ಯಂತ ಅಪಾಯಕಾರಿ ರೇಡಿಯೋಆ್ಯಕ್ಟಿವ್ ವಸ್ತುವಾದ ಸೀಸಿಯಂ-137 ಅನ್ನು ನಗರದಲ್ಲಿ ಹಲವೆಡೆ ಇಡಲಾಗಿದೆ ಎಂದು ಹೇಳಲಾಗಿದೆ. ವಿಶೇಷವಾಗಿ ಆರ್‌ಎಸ್‌ಎಸ್ ಕೇಂದ್ರ, ಸ್ಮೃತಿ ಮಂದಿರ (ಡಾ. ಕೆ.ಬಿ. ಹೆಡ್ಗೇವಾರ್ ಹಾಗೂ ಎಂ.ಎಸ್. ಗೋಲ್ವಾಲ್ಕರ್ ಸ್ಮಾರಕ), ಗಣೇಶ ಪೇಠ್‌ನ ಬಿಜೆಪಿ ಕಚೇರಿ ಮುಂತಾದ ಸ್ಥಳಗಳನ್ನು ಉಲ್ಲೇಖಿಸಲಾಗಿದೆ. ಇದಲ್ಲದೆ, ಮೆಟ್ರೋನ ಆರೆಂಜ್ ಮತ್ತು ಆಕ್ವಾ ಲೈನ್‌ಗಳಲ್ಲಿನ ರೈಲುಗಳ ಸೀಟುಗಳ ಕೆಳಭಾಗದಲ್ಲಿ ಹಾಗೂ ಆಪ್ಲಿ ಬಸ್ ಸೇವೆ ಗಳಲ್ಲಿಯೂ ಈ ವಸ್ತುಗಳನ್ನು ಇರಿಸಲಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಕ್ಷಮೆಯಾಚಿಸಿದ ನೇಪಾಳ ಏರ್‌ಲೈನ್ಸ್

ಹೊಸದಿಲ್ಲಿ: ನೇಪಾಳದ ರಾಷ್ಟ್ರೀಯ ವಿಮಾನ ಸಂಸ್ಥೆ ನೇಪಾಳ ಏರ್‌ಲೈನ್ಸ್, ಜಮ್ಮು ಮತ್ತು ಕಾಶ್ಮೀರವನ್ನು ಪಾಕ್‌ನ ಭಾಗವೆಂದು ತೋರಿಸಿ, ಆಕ್ರೋಶ ವ್ಯಕ್ತವಾದ ಬಳಿಕ ಅದನ್ನು ಅಳಿಸಿ ಕ್ಷಮೆಯಾಚಿಸಿದೆ. ಕಠ್ಮಂಡುವಿನಲ್ಲಿ ಗುರುವಾರ ಈ ಕುರಿತು ಪ್ರಕಟಣೆ ನೀಡಿದ ಸಂಸ್ಥೆ, ತನ್ನ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿದ ನಕ್ಷೆಯಲ್ಲಿ ದೋಷಗಳಿದ್ದವು ಎಂಬುದನ್ನು ಒಪ್ಪಿಕೊಂಡಿದ್ದು, ಇದು ನೇಪಾಳ ಸರ್ಕಾರದ ಅಧಿಕೃತವಲ್ಲ ಎಂದು ಸ್ಪಷ್ಟಪಡಿಸಿದೆ. ಈ ವಿವಾದಿತ ಪೋಸ್ಟ್ ಅನ್ನು ಬುಧವಾರವೇ ಅಳಿಸಲಾಗಿದೆ. ವಿಷಯ ಗಂಭೀರವಾಗುತ್ತಿದ್ದಂತೆ ಸಂಸ್ಥೆ ತಕ್ಷಣ ಕ್ರಮ ಕೈಗೊಂಡಿದ್ದು, ತಪ್ಪು ಆಗಿದ್ದು ಹೇಗೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಆಂತರಿಕ ಪರಿಶೀಲನೆ ಪ್ರಾರಂಭಿಸಿರುವುದಾಗಿ ತಿಳಿಸಿದೆ. 'ನಮ್ಮ ನೆರೆ ರಾಷ್ಟ್ರಗಳು ಮತ್ತು ಸ್ನೇಹಿತ ದೇಶಗಳೊಂದಿಗೆ ಇರುವ ಬಲವಾದ ಸಂಬಂಧಗಳಿಗೆ ನಾವು ಮಹತ್ವ ನೀಡುತ್ತೇವೆ. ಈ ಪೋಸ್ಟ್‌ನಿಂದ ಯಾರಿಗಾದರೂ ಆಗಿರುವ ನೋವಿಗೆ ವಿಷಾದಿಸುತ್ತೇವೆ,' ಎಂದು ಸಂಸ್ಥೆ ತನ್ನ ಪ್ರಕಟಣೆಯಲ್ಲಿ ಹೇಳಿದೆ.

ಆಪರೇಷನ್ ಸಿಂದೂರ ವಾರ್ಷಿಕೋತ್ಸವದ ಹಿನ್ನೆಲೆ

ದೇಸಿ ರಕ್ಷಣಾ ತಂತ್ರಜ್ಞಾನಕ್ಕೆ ಉತ್ತೇಜನ

ಹೊಸದಿಲ್ಲಿ: ಸಿಂದೂರ ಕಾರ್ಯಾಚರಣೆಯ ಮೊದಲ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸಲು, ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ (ಆತ್ಮನಿರ್ಭರತೆ)ಗೆ ಉತ್ತೇಜನ ನೀಡಲು ಹೆಚ್ಚಿನ ದೇಸಿ ರಕ್ಷಣಾ ತಂತ್ರಜ್ಞಾನ ಮತ್ತು ಉಪಕರಣಗಳನ್ನು ಅಭಿವೃದ್ಧಿಪಡಿಸಲು ರಕ್ಷಣಾ ಸಂಸ್ಥೆಗಳು ಗಮನಹರಿಸಿವೆ.

ಸರ್ಕಾರ ರೂಪಿಸುತ್ತಿರುವ ಸ್ವಾವಲಂಬಿ ಪರಿಸರ ವ್ಯವಸ್ಥೆ ಹೆಚ್ಚು ಬಲಗೊಳ್ಳುತ್ತಿದ್ದು, ಖಾಸಗಿ ರಕ್ಷಣಾ ಕಂಪನಿಗಳು ಈ ದೃಷ್ಟಿಕೋನಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುವ ಗುರಿ ಹೊಂದಿವೆ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ದತ್ತಾಂಶಗಳು ಭಾರತದ ನಿಯಂತ್ರಣದಲ್ಲೇ ಇರುವಂತೆ ನೋಡಿಕೊಳ್ಳಲು ಸಂವಹನ ಸೇರಿದಂತೆ ಹೆಚ್ಚಿನ ಸ್ಥಳೀಯ ತಂತ್ರಜ್ಞಾನಗಳ ಅಭಿವೃದ್ಧಿಗೆ ಒತ್ತು ನೀಡಲಾಗು ತ್ತಿದೆ.

ಉದ್ಯಮದ ಪ್ರಗತಿ ಮತ್ತು ಭವಿಷ್ಯದ ಗುರಿ: ಸಿಎಸ್‌ಟಿ ಸೈಬರ್, ಡಿಫೆನ್ಸ್ ಕಂಪನಿಯ ಸಿಇಒ ಲಕ್ಷಯ್ ತಲ್ವಾರ್, ಭಾರತ ಕೇವಲ ಒಂದು ವರ್ಷದಲ್ಲಿ ಸೆಮಿಕಂಡಕ್ಟರ್‌ಗಳು, ಸೈಬರ್ ಭದ್ರತೆ ಮತ್ತು ರಕ್ಷಣಾ ನಾವೀನ್ಯತೆಗಳಲ್ಲಿ ಜಾಗತಿಕ ಬೆಳವಣಿಗೆಗಳನ್ನು ಮೀರಿಸುವ ಪ್ರಗತಿ ಸಾಧಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಭವಿಷ್ಯದಲ್ಲಿ ಸಂಪೂರ್ಣ ಸ್ವದೇಶಿ ವಿಡಿಯೋ ಮ್ಯಾನೇಜ್‌ಮೆಂಟ್ ಪ್ಲಾಟ್‌ಫಾರ್ಮ್‌ಗಳು, ಕೃತಕ ಬುದ್ಧಿಮತ್ತೆ ಆಧಾರಿತ ರೊಬೊಟಿಕ್ಸ್ ಅಭಿವೃದ್ಧಿಪಡಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಕಾರ್ಯತಂತ್ರದ ಪ್ರಾಮುಖ್ಯತೆ: ಫೆಬ್ರವರಿಯಲ್ಲಿ ಐಜಿ ಡ್ರೋನ್ಸ್ ಕಂಪನಿ, ಕಠಿಣ ಭೂಪ್ರದೇಶಗಳಲ್ಲಿ ಕಣ್ಗಾವಲು ನಡೆಸಲು ಹೈ-ಆಲ್ಟಿಟ್ಯೂಡ್ ಡ್ರೋನ್‌ಗಳನ್ನು ಪೂರೈಸುವ ರಕ್ಷಣಾ ಸಚಿವಾಲಯದ ಆದೇಶ ಪಡೆದುಕೊಂಡಿದೆ. ಜನವರಿ ತಿಂಗ ಳಲ್ಲಿ ಸೇನೆ, ನೌಕಾಪಡೆಯಿಂದ ಸ್ವದೇಶಿ ನಿರ್ಮಿತ ಡ್ರೋನ್ ವಿರೋಧಿ ವ್ಯವಸ್ಥೆಯಾದ ಐಜಿ ಟಿ-ಶುಲ್ ಪಲ್ಸ್‌ಗಾಗಿ ಆದೇಶಗಳನ್ನು ಈ ಸಂಸ್ಥೆ ಪಡೆದಿದೆ. ವಿದೇಶಿ ಕಂಪನಿಗಳ ಮೇಲೆ ಅವಲಂಬಿತವಾಗುವುದನ್ನು ತಪ್ಪಿಸಲು ಖಾಸಗಿ ಕಂಪನಿಗಳು ಮತ್ತು ನವೋದ್ಯಮ ಕಂಪನಿಗಳು ನಿಗದಿತ ಸಮಯದೊಳಗೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಸೈನ್ಯಕ್ಕೆ ತಲುಪಿಸಬೇಕು ಎಂದು ಸರ್ಕಾರ ಪ್ರತಿಪಾದಿಸುತ್ತಿದೆ.

ಆಪರೇಷನ್ ಸಿಂದೂರಕ್ಕೆ ವಾರ್ಷಿಕೋತ್ಸವ ಹಿನ್ನೆಲೆ

2025ರ ಏ.22ರಂದು ನಡೆದ ಪಹಲ್ಗಾಮ್ ಭೀಕರ ಭಯೋತ್ಪಾದನಾ ದಾಳಿಗೆ ಪ್ರತ್ಯುತ್ತರವಾಗಿ ಭಾರತೀಯ ಸೇನೆ ಮೇ 2025ರಲ್ಲಿ ಆಪರೇಷನ್ ಸಿಂದೂರ ಪ್ರತಿದಾಳಿ ನಡೆಸಿತ್ತು. ಈ ಕಾರ್ಯಾಚರಣೆಯಲ್ಲಿ ಕ್ಷಿಪಣಿಗಳು ಮತ್ತು ವಾಯು ರಕ್ಷಣಾ ವ್ಯವಸ್ಥೆ ಸೇರಿದಂತೆ ಹಲವಾರು ಸ್ವದೇಶಿ ನಿರ್ಮಿತ ತಂತ್ರಜ್ಞಾನಗಳನ್ನು ಬಳಸಲಾಗಿತ್ತು. ದೇಶದಲ್ಲೇ ಉತ್ಪಾದಿಸಿದ ಬ್ರಹ್ಮೋಸ್ ಅತಿ ವೇಗದ ಕ್ಷಿಪಣಿಗಳನ್ನೂ ಬಳಸಲಾಗಿತ್ತು.

ಯುದ್ಧೋಪಕರಣಗಳ ಜಂಟಿ ಉತ್ಪಾದನೆ, ದ್ವಿಪಕ್ಷೀಯ ರಕ್ಷಣಾ ಸಂಬಂಧ ವೃದ್ಧಿ

ಭಾರತ-ಇಟಲಿ ರಕ್ಷಣಾ ಸಹಯೋಗಕ್ಕೆ ಸಹಿ

ಹೊಸದಿಲ್ಲಿ: ರಕ್ಷಣಾ ಕ್ಷೇತ್ರದಲ್ಲಿ ಮಿಲಿಟರಿ ಉಪಕರಣಗಳ ಜಂಟಿ ಉತ್ಪಾದನೆ ನಿಟ್ಟಿನಲ್ಲಿ ರಕ್ಷಣಾ ಕೈಗಾರಿಕಾ ಜಾಲ ಅಭಿವೃದ್ಧಿಪಡಿಸಲು ಭಾರತ-ಇಟಲಿ ಗುರುವಾರ ಮಹತ್ವದ ಮಿಲಿಟರಿ ಸಹಯೋಗ ಯೋಜನೆ (ಎಂಸಿಪಿ) 2026-27ಕ್ಕೆ ಸಹಿ ಹಾಕಿವೆ.



ದಿಲ್ಲಿಯಲ್ಲಿ ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಇಟಲಿ ರಕ್ಷಣಾ ಸಚಿವ ಗಿಡೊ ಕ್ರೊಸೆಟ್ಟೊ ಮಾತುಕತೆ ಸಂದರ್ಭ ದ್ವಿಪಕ್ಷೀಯ ರಕ್ಷಣಾ ಮತ್ತು ವ್ಯೂಹಾತ್ಮಕ ಬಾಂಧವ್ಯಗಳಿಗೆ ಮತ್ತಷ್ಟು ಶಕ್ತಿ ತುಂಬಲು ನಿರ್ಧರಿಸಲಾಯಿತು. ಉಭಯ ರಾಷ್ಟ್ರಗಳ ಸಶಸ್ತ್ರ ಪಡೆಗಳ ನಡುವಣ ಮಿಲಿಟರಿ ಕಾರ್ಯಕ್ರಮಗಳಿಗೆ ಅವಕಾಶ ನೀಡುವ ದ್ವಿಪಕ್ಷೀಯ ಮಿಲಿಟರಿ ಸಹಕಾರ ಯೋಜನೆ 2026-27ನ್ನು ಇತ್ತಂಡಗಳು ಅನಾವರಣಗೊಳಿಸಿದವು.

ರಕ್ಷಣಾ ಕೈಗಾರಿಕಾ ಸಹಕಾರಕ್ಕೆ ಆದ್ಯತೆ: ಪಶ್ಚಿಮ ಏಷ್ಯಾದಲ್ಲಿನ ಪ್ರಸಕ್ತ ಸನ್ನಿವೇಶ ಸಹಿತ ಪ್ರಾದೇಶಿಕ ಮತ್ತು ಜಾಗತಿಕವಾದ ಹಲವು ವಿಚಾರಗಳ ಕುರಿತು ಚರ್ಚಿಸಿದ್ದಾಗಿ ಸಚಿವ ಸಿಂಗ್ ಮಾತುಕತೆ ಬಳಿಕ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ. ಇಟಲಿಯ ರಕ್ಷಣಾ ಸಹಕಾರ ಉಪಕ್ರಮ ಮತ್ತು ಭಾರತದ ಆತ್ಮನಿರ್ಭರ ಭಾರತ್ ಕಾರ್ಯಕ್ರಮ ಅನ್ವಯ ಪರಸ್ಪರ ಪ್ರಯೋಜನಕಾರಿ ರಕ್ಷಣಾ ಕೈಗಾರಿಕಾ ಸಹಕಾರವನ್ನು ಮತ್ತಷ್ಟು ವಿಸ್ತೃತಗೊಳಿಸುವ ಸಾಧ್ಯಾಸಾಧ್ಯತೆಗಳ ಕುರಿತೂ ನಾವು ಚರ್ಚಿಸಿದೆವು ಎಂದು ಸಚಿವ ಸಿಂಗ್ ಹೇಳಿದ್ದಾರೆ.

ಶಾಂತಿ-ಸ್ಥಿರತೆ ಆಧಾರ: ಭಾರತ-ಇಟಲಿ ನಡುವಣ ವ್ಯೂಹಾತ್ಮಕ ಪಾಲುದಾರಿಕೆಗೆ ಪರಸ್ಪರ ಹಂಚಿಕೊಂಡಿರುವ ಶಾಂತಿ, ಸ್ಥಿರತೆ, ಸ್ವಾತಂತ್ರ್ಯ ಮತ್ತು ಪರಸ್ಪರ ಗೌರವಗಳೇ ಮೂಲಾಧಾರವೆಂದು ಸಚಿವ ಸಿಂಗ್ ಮತ್ತು ಕ್ರೊಸೆಟ್ಟೊ ಪ್ರತಿಪಾದಿಸಿದರು.

ಹುತಾತ್ಮ ಸೈನಿಕರಿಗೆ ಕ್ರೊಸೆಟ್ಟೊ ನಮನ

ಮಾತುಕತೆಗೆ ಮುನ್ನ ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿದ ಇಟಲಿ ರಕ್ಷಣಾ ಸಚಿವ ಕ್ರೊಸೆಟ್ಟೊ, ರಾಷ್ಟ್ರ ಸೇವೆಗಾಗಿ ಪರಮೋಚ್ಚ ಬಲಿದಾನಗೈದ ಹುತಾತ್ಮ ಯೋಧರಿಗೆ ನಮನ ಸಲ್ಲಿಸಿದರು. ಭಾರತೀಯ ಸೇನೆಯ ತ್ರಿವಳಿಪಡೆಗಳ ಗೌರವ ರಕ್ಷೆಯನ್ನು ಸ್ವೀಕರಿಸಿದರು.

ಕಿರುಸುದ್ದಿ

ಬೌದ್ಧ ಸನ್ಯಾಸಿ ಶವ ಪತ್ತೆ

ಮುಂಡಗೋಡ: ಧಾರವಾಡ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬುಧವಾರ ಮುಂಡಗೋಡಿನ ಟಿಬೇಟಿಯನ್ ಲಾಮಾ ಕ್ಯಾಂಪ್ ನಂಬರ್ 1ರ ಬೌದ್ಧ ಸನ್ಯಾಸಿ ಶವ ಪತ್ತೆಯಾಗಿದೆ.



ತಾಲೂಕಿನ ಲಾಮಾ ಕ್ಯಾಂಪ್ ನಂಬರ್ 1ರ ತಶಿ ದುಂಡುಪ್ (38) ಬೌದ್ಧ ಸನ್ಯಾಸಿ ಶವ ಎಂದು ಗುರುತಿಸಲಾಗಿದೆ. ಧಾರವಾಡದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಮೃತದೇಹ ರಕ್ತ ಸಿಕ್ತವಾಗಿ ದೊರೆತಿದ್ದು, ಸನ್ಯಾಸಿ ಕಾಲಿಗೆ ಹಗ್ಗದಿಂದ ಕಟ್ಟಿದ್ದು, ಮುಖಕ್ಕೆ ಚಚ್ಚಿ ಭೀಕರವಾಗಿ ಕೊಲೆ ಮಾಡಿ ಬೀಸಾಕಿರೋ ಸಂಶಯ ವ್ಯಕ್ತವಾಗಿದೆ. ಈ ಸನ್ಯಾಸಿ ಮಂಗಳವಾರದಿಂದಲೇ ನಾಪತ್ತೆಯಾಗಿದ್ದರು ಎನ್ನಲಾಗುತ್ತದೆ. ಧಾರವಾಡ ಗ್ರಾಮೀಣ ಠಾಣೆಯ ಕ್ರೈಂ ಟೀಂನ ಪೊಲೀಸರು ಮುಂಡಗೋಡಿಗೆ ಬಂದು ಮಾಹಿತಿ ಕಲೆ ಹಾಕಿದ್ದಾರೆ. ಅಲ್ಲದೆ ಮುಂಡಗೋಡ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಶಾಂತಿದೂತರು, ಅಹಿಂಸಾ ಬೋಧನೆ ಮಾಡುವ ಬೌದ್ಧ ಸನ್ಯಾಸಿಯನ್ನ ಇಷ್ಟೊಂದು ಭೀಕರವಾಗಿ ಹತ್ಯೆ ಮಾಡಿದ್ದು ಏಕೆ ಅನ್ನೋ ಅನುಮಾನ ಮೂಡಿದೆ. ಹಣಕ್ಕಾಗಿ ಲಾಮಾ ಹತ್ಯೆಯಾದ್ನಾ..? ಅಥವಾ ಬೇರೆ ಏನಾದರು ಕಾರಣವಿದೆಯಾ..? ಎಂಬುವುದು ಪೊಲೀಸರ ತನಿಖೆಯ ನಂತರವಷ್ಟೇ ಸತ್ಯಾಸತ್ಯತೆ ಹೊರಬರಬೇಕಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1811	5700
ಉದ್ದಿನಕಾಳು	3259	7229
ಹೆಸರು ಕಾಳು	3900	7111
ಹುರುಳಿ ಕಾಳು	3701	3807
ಜೋಳ	1107	3859
ಅಲಸಂಧಿ	3029	3029
ಮಡಿಕೆ	13559	13559
ಮೆಕ್ಕೆಜೋಳ	1651	1891
ಈರುಳ್ಳಿ	500	1700
ಆಲೂಗಡ್ಡೆ	1200	1800
ಸೋಯಾಬಿನ್	5500	5896
ತೊಗರಿ	4159	5729
ನೆಲಗಡಲೆ (ಶೇಂಗಾ)	2670	5500
ಒಣ ಮೆಣಸಿನಕಾಯಿ	10400	10900

ಬರಿದಾದ ಕೃಷ್ಣೆಯ ಒಡಲು: ಸಂಕಷ್ಟದಲ್ಲಿ ಜನ, ಜಾನುವಾರು

▶ ಗೋಪಾಲ ಪಾಟೀಲ

ದಿಗಂತ ವಿಶೇಷ

ಜಮಖಂಡಿ: ಪ್ರತಿ ಬೇಸಿಗೆಯಲ್ಲೂ ಕೃಷ್ಣೆಗೆ ಗ್ರಹಣ ಹಿಡಿದಂತಾಗುತ್ತಿದ್ದು, ಜನ ಜಾನುವಾರುಗಳು ಸಂಕಷ್ಟ ಅನುಭವಿಸುವಂತಾಗಿದೆ.

ಇದಕ್ಕೊಂದು ಪರ್ಯಾಯ ವ್ಯವಸ್ಥೆ ಕಲ್ಪಿಸಲು ತಾಲೂಕಿನ ಚಿಕ್ಕಪಡಸಲಗಿ ಗ್ರಾಮದ ಹತ್ತಿರ ಕೃಷ್ಣೆಗೆ ಅಡ್ಡಲಾಗಿ ರೈತರಿಂದ ರೈತರಿಗಾಗಿ ರೈತರಿಗೋಸ್ಕರ ರೈತರಿಂದ ಪ್ರೇರಿತವಾದ ದೇಶದ ಮೊಟ್ಟ ಮೊದಲು ದಿ.ಸಿದ್ದು ನ್ಯಾಮಗೌಡರು ರೈತರ ಕರಸೇವೆಯಿಂದ 1989ರಲ್ಲಿ ಬ್ಯಾರೇಜ್ ನಿರ್ಮಿಸಿ ಇಂದಿಗೆ ಸುಮಾರು 37 ವಸಂತಗಳೇ ಗತಿಸಿವೆ.

ಮೊದಲು ಬ್ಯಾರೇಜ್‌ನ ಹಿನ್ನೀರಿನಲ್ಲಿ ಕೇವಲ 30 ಸಾವಿರ ಎಕರೆ ಜಮೀನು ನೀರಾವರಿಯಾಗಿತ್ತು. ದಿನಗಳೆದಂತೆ 70 ಸಾವಿರ ಎಕರೆ ಜಮೀನು ನೀರಾವರಿಯಾಗಿದ್ದು, ಅದರ ಜೊತೆಗೆ ಜನ ಜಾನುವಾರುಗಳಿಗೆ ಬೇಸಿಗೆಯಲ್ಲಿ ನೀರಿನ ಸಮಸ್ಯೆಯಾಗುತ್ತಿತ್ತು. ಅದಕ್ಕಾಗಿ ಪ್ರತಿಬಾರಿ ಮಹಾರಾಷ್ಟ್ರದತ್ತ ಮುಖ ಮಾಡುವ ಅನಿವಾರ್ಯತೆಯಿತ್ತು.

ಇದನ್ನು ತಪ್ಪಿಸಲು 2013ರಲ್ಲಿ ದಿ.ಸಿದ್ದು ನ್ಯಾಮಗೌಡರು ಹೊಸದಾಗಿ ಬ್ಯಾರೇಜ್ ತುಂಬುವ ಕಾರ್ಯ ಕೈಗೊಂಡಿದ್ದರು. ಈ ನೀರು ಸಾಲದಂತಾಯಿತು. ಮೊದಲಿದ್ದ ಎತ್ತರಕ್ಕಿಂತ 1.75 ಮೀಟರ್ ಬ್ಯಾರೇಜ್ ಎತ್ತರವನ್ನು ಹೆಚ್ಚಿಸಿದ್ದರಿಂದ ಈ ಮೊದಲು ಕೇವಲ 2.8



ಟಿಎಂಸಿ ಅಡಿ ನೀರಿನಗಿಂತ ಹೆಚ್ಚುವರಿಯಾಗಿ 1.5 ಟಿಎಂಸಿ ಅಡಿ ಅಂದರೆ 4.3 ಟಿಎಂಸಿ ಅಡಿ ನೀರು ಲಭ್ಯವಾಗಿತ್ತು.

2013ರಿಂದ ಬ್ಯಾರೇಜಿಗೆ ನೀರು ತುಂಬುವ ಕಾರ್ಯ ಪ್ರಾರಂಭವಾಗಿತ್ತು. ಕೇವಲ ಎರಡು ಮೂರು ಬಾರಿ ಈ ಕಾರ್ಯವಾಗಿಲ್ಲ. ರೈತರಿಂದ ವಂತಿಗೆ ಸ್ವೀಕರಿಸಿ ಪುನಃ ನೀರು ತುಂಬುವ ಕಾರ್ಯವನ್ನು ದಿ.ಸಿದ್ದು ನ್ಯಾಮಗೌಡರ ನಂತರ ಮಾಜಿ ಶಾಸಕ ಆನಂದ ನ್ಯಾಮಗೌಡರು ಮಾಡುತ್ತಲೇ ಬಂದಿದ್ದಾರೆ.

ಕೃಷ್ಣಾ ತೀರದ ರೈತರ ನೀರಿನ ಬವಣೆ ನೀಗಿಸಲು ಗಲಗಲಿ ಮರೇಗುದ್ದಿ ಏತ ನೀರಾವರಿ ಯೋಜನೆಯಲ್ಲಿ ಗಲಗಲಿ ಬ್ಯಾರೇಜ್‌ನಿಂದ ಆಲಮಟ್ಟಿ ಜಲಾಶಯದ ಹಿನ್ನೀರನ್ನೆತ್ತಿ ಹಿಪ್ಪರಗಿ ಬ್ಯಾರೇಜಿನವರೆಗೆ ನೀರೆತ್ತುವ ಕಾಮಗಾರಿಯೂ ಕೂಡಿ ಸುಮಾರು 216.50 ಕೋಟಿ ರೂ.ಗಳಿಗೆ ಟೆಂಡರ್ ಆಗಿದ್ದು, ಟೆಂಡರ್ ಅವಧಿಯಯಲ್ಲಿ ಈ ಕಾಮಗಾರಿ ಪೂರ್ಣಗೊಳಿಸುವುದು. ವಿಶೇಷ ಮುತುವರ್ಜಿ ವಹಿಸಲು

> **ಪ್ರತಿ ಬಾರಿಯೂ ನೀರು ತುಂಬುವ ಕಾರ್ಯಕ್ಕೆ ಸುಮಾರು 1.5 ಕೋಟಿ ರೂ.ಗಳ ವ್ಯಯವಾಗುತ್ತಿತ್ತು. ಅದರಲ್ಲಿ 1 ಕೋಟಿಯಷ್ಟು ವಿದ್ಯುತ ಬಿಲ್‌ಗಾಗಿ ವ್ಯಯಿಸಿದರೆ ಉಳಿದ ಹಣ ಬ್ಯಾರೇಜ್ ಕೆಲಸಕ್ಕಾಗುತ್ತಿತ್ತು ಇದರಿಂದ ಕೃಷ್ಣಾ ತೀರದ ರೈತರ ಸಂಘಕ್ಕೆ ಸುಮಾರು 10 ಕೋಟಿ ಸಾಲದ ಹೊರೆಯಿದೆ. ರೈತರು ಸರಿಯಾಗಿ ವಂತಿಗೆ ನೀಡಿದರೆ ಈ ಸಮಸ್ಯೆ ಇರುವುದಿಲ್ಲ.**
> ■ ಆನಂದ ನ್ಯಾಮಗೌಡ, ಮಾಜಿ ಶಾಸಕ

ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಬೇಸಿಗೆಯಲ್ಲಿ ಚಿಕ್ಕಪಡಸಲಗಿ ಬ್ಯಾರೇಜ್‌ನಲ್ಲಿನ ನೀರನ್ನು ಎತ್ತಿ ಹಾಕಲಾಗುತ್ತಿತ್ತು. ಇನ್ನು ಮುಂದೆ ಒಟ್ಟು 216.50 ಕೋಟಿ ವೆಚ್ಚದ ಯೋಜನೆಯಲ್ಲಿ, ಬೇಸಿಗೆ ಸಮಯದಲ್ಲಿ ಆಲಮಟ್ಟಿ ಡ್ಯಾಂನ ಹಿನ್ನೀರಿನಿಂದಲೇ ನೀರನ್ನು ಎತ್ತುವ ಕಾರ್ಯಕ್ಕಾಗಿ 11.50 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಇದರಿಂದ ಚಿಕ್ಕಪಡಸಲಗಿ ವ್ಯಾಪ್ತಿ ಪ್ರದೇಶದ ರೈತರಿಗೂ ಸಹ ಅನುಕೂಲವಾಗುತ್ತದೆ. ಮುಂದಿನ ಬೇಸಿಗೆಯಲ್ಲಿ ಈ ಕಾಮಗಾರಿಯು ಪೂರ್ಣಗೊಳಿಸುವ ಭರವಸೆಯನ್ನೂ ಸಹ ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ತಿಳಿಸಿದ್ದಾರೆ.

ಎಸೆಸ್ಸೆಲ್ಸಿ ಮರು ಮೌಲ್ಯಮಾಪನ ಇಂದು ಕಾಲೇಜಿಗೆ ಪ್ರಥಮ, ದ್ವಿತೀಯ ರ್‍ಯಾಂಕ್





ಕೊಟ್ಟೂರು: ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ಹಾಗೂ ನಿರಂತರ 11 ಬಾರಿ ಫಸ್ಟ್ ರ್‍ಯಾಂಕ್ ಪಡೆದು ರಾಜ್ಯದಲ್ಲಿ ಪ್ರಸಿದ್ಧಿಯಾಗಿರುವ ಇಂದು ಕಾಲೇಜಿನಲ್ಲಿ ಮರುಮೌಲ್ಯಮಾಪನದಲ್ಲಿ ಮಹತ್ವದ ಬದಲಾವಣೆಯಾಗಿದೆ.



ರಾಣೇಬೆನ್ನೂರು ತಾಲೂಕಿನ ಕುಪ್ಪೇಲೂರು ಗ್ರಾಮದ ಕೆಎಸ್‌ಆರ್‌ಟಿಸಿ ಬಸ್ ಡ್ರೈವರ್‌ನ ಮಗಳು ದೀಪಾ ಚಂದ್ರಕಾಂತ್ ಆಡಿನವರ್ ಕಲಾ ವಿಭಾಗದ ಇಂಗ್ಲಿಷ್ ವಿಷಯದಲ್ಲಿ 2 ಅಂಕ ಹೆಚ್ಚುವರಿ ಪಡೆದು ಒಟ್ಟು 595 ಅಂಕಗಳೊಂದಿಗೆ ರಾಜ್ಯಕ್ಕೆ 2ನೇ ರ್‍ಯಾಂಕ್ ಪಡೆದಿದ್ದಾಳೆ.

ವಾಣಿಜ್ಯ ವಿಭಾಗದಲ್ಲಿ ಹೂವಿನಹಡಗಲಿಯ ಭುವನೇಶ್ವರಿ ಇಂಗ್ಲಿಷ್ ವಿಷಯದಲ್ಲಿ 3 ಅಂಕಗಳನ್ನು ಪಡೆದು ಇಂಗ್ಲಿಷ್ ವಿಷಯದಲ್ಲಿ 98 ಅಂಕಗಳೊಂದಿಗೆ ಒಟ್ಟು 595 ಅಂಕಗಳನ್ನು ಪಡೆದು ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದಾಳೆ. ಹೊಸಪೇಟೆಯ ಹೂಗಾರ ಸಿಂಧು ಇಂಗ್ಲಿಷ್ ವಿಷಯದಲ್ಲಿ 2, ಅರ್ಥಶಾಸ್ತ್ರ ವಿಷಯದಲ್ಲಿ 5 ಅಂಕಗಳನ್ನು ಪಡೆದು ಒಟ್ಟು 595 ಅಂಕಗಳನ್ನು ಪಡೆದು ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದಾಳೆ.

ವಿದ್ಯಾರ್ಥಿನಿಯರ ಈ ಸಾಧನೆಗೆ ಇಂದು ಕಾಲೇಜಿನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಮತ್ತು ಸಮಸ್ತ ವಿದ್ಯಾರ್ಥಿ ಬಳಗ ಹರ್ಷ ವ್ಯಕ್ತಪಡಿಸಿದ್ದಾರೆ.

ಇಬ್ಬರು ಅಂತರ್ ರಾಜ್ಯ ಕಳ್ಳರ ಬಂಧನ ರೂ.15.37 ಲಕ್ಷ ಮೌಲ್ಯದ ಸ್ವತ್ತು ಜಪ್ತಿ

ಕಲಬುರಗಿ: ನಗರದ ದೇವಾನಗರದ ನಿವೃತ್ತ ಅಧಿಕಾರಿಯ ಮನೆ ಹಾಗೂ ಅಡ್ವೋಕೇಟ್ ಕಾಲೋನಿಯ ದೇವಸ್ಥಾನದಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳನ್ನು ಭೇದಿಸುವಲ್ಲಿ ಯಶಸ್ವಿಯಾಗಿರುವ ನಗರ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿ ಒಟ್ಟು 15.37 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.





ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಈ ಕುರಿತು ಮಾಹಿತಿ ನೀಡಿ, ದೇವಾನಗರದ ನಿವೃತ್ತ ಬಿಎಸ್‌ಎನ್‌ಎಲ್ ಅಧಿಕಾರಿ ಲಕ್ಷ್ಮೀಕಾಂತ ಜಹಾಗೀರಾದಾರ ಅವರ ಮನೆ ಬೀಗ ಮುರಿದು ಕಳ್ಳತನ ಮಾಡಿದ್ದ ತೆಲಂಗಾಣ ಮೂಲದ ಅಂತರರಾಜ್ಯ ಕಳ್ಳ ಶಿವಪ್ರಸಾದ್ ಆದಿನಾರಾಯಣ ಮಂತ್ರಿ ಅಲಿಯಾಸ್ ಮಂತ್ರಿ ಶಂಕರ (61) ಎಂಬಾತನನ್ನು ಬಂಧಿಸಲಾಗಿದೆ. ಈತನಿಂದ 14 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳನ್ನು ಜಪ್ತಿ ಮಾಡಲಾಗಿದೆ ಎಂದರು.

ಮತ್ತೊಂದು ಪ್ರಕರಣದಲ್ಲಿ, ಕಳೆದ ತಿಂಗಳು ಅಡ್ವೋಕೇಟ್ ಕಾಲೊನಿಯ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಬೀಗ ಮುರಿದು ದೇವಿಯ ಚಿನ್ನದ ತಾಳಿ ಹಾಗೂ ಬೆಳ್ಳಿಯ ಮೂರ್ತಿಯನ್ನು ದೋಚಿದ್ದ ಮೊಹ್ಮದ ಅಹ್ಮದ ಎಂಬಾತನನ್ನು ಸ್ಟೇಷನ್ ಬಜಾರ್ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ 1.37 ಲಕ್ಷ ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇಬ್ಬರೂ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು.

ಡಿಸಿಪಿ ಪ್ರವೀಣ್ ಹೆಚ್.ನಾಯಕ್ ಹಾಗೂ ಎಸಿಪಿ ಶರಣಬಸಪ್ಪ ಸುಬೇದಾರ ಮಾರ್ಗದರ್ಶನದಲ್ಲಿ ಪಿಐ ಗುರುಲಿಂಗಪ್ಪಗೌಡ ಪಾಟೀಲ ಹಾಗೂ ಸಿಬ್ಬಂದಿಗಳಾದ ಪ್ರಭಾಕರ, ಸಿರಾಜ್ ಪಟೇಲ್, ಶಿವಲಿಂಗ, ಯಲ್ಲಪ್ಪ ಸೇರಿದಂತೆ ಹಲವರು ತಾಂತ್ರಿಕ ಸಾಕ್ಷ್ಯಗಳ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಗಂಡನ ಕಿರುಕುಳಕ್ಕೆ ಪತ್ನಿ ಆತ್ಮಹತ್ಯೆ

ಬೆಳಗಾವಿ: ಜಿಲ್ಲೆಯ ಅಥಣಿ ಪಟ್ಟಣದ ಶಂಕರಮಠ ಗಲ್ಲಿಯಲ್ಲಿನ ವಿವಾಹಿತೆ ಗಂಡನ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.



ಸಂಗೀತಾ ಗಾಡಿವಡ್ಡರ (35) ಮೃತ ಗೃಹಿಣಿ. ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಕಳೆದ 15 ವರ್ಷಗಳ ಹಿಂದೆ ವೆಂಕಟೇಶ್ ಗಾಡಿವಡ್ಡರ್ ಜೊತೆ ಮೃತ ಸಂಗೀತಾ ವಿವಾಹವಾಗಿದ್ದರು. ಕಳೆದ ಕೆಲ ವರ್ಷಗಳಿಂದ ಗಂಡ ಹಾಗೂ ಹೆಂಡತಿ ನಡುವೆ ಜಗಳವಾಗುತ್ತಿತ್ತು. ಆದರೆ, ಬುಧವಾರ ಏ.29 ರಂದು ರಾತ್ರಿ ಗಂಡನ ಕಿರುಕುಳ ತಾಳಲಾರದೆ ಮಹಿಳೆ ಆತ್ಮಹತ್ಯೆಗೆ ಮಾಡಿಕೊಂಡಿದ್ದಾಳೆ.

ಸಂಗೀತಾ ಮನೆಯವರು ವರದಕ್ಷಿಣೆ ಕಿರುಕುಳದ ಆರೋಪ ಮಾಡಿದ್ದು, ಮನೆ ಕಟ್ಟಿಕೊಳ್ಳಲು 2 ಲಕ್ಷ ರೂ. ಕೊಡುವಂತೆ ತವರು ಮನೆಯವರಿಗೆ ಕೇಳು ಎಂದು ವೆಂಕಟೇಶ್ ಸಂಗೀತಾಗೆ ಹೇಳಿದ್ದ. ಆದರೆ ಹಣ ನೀಡದಿದ್ದಕ್ಕೆ ಮಗಳಿಗೆ ಹೊಡೆದು, ಬಳಿಕ ನೇಣು ಹಾಕಿದ್ದಾರೆಂದು ಮೃತಳ ತಾಯಿ ಆರೋಪಿಸಿದ್ದಾರೆ. ಈ ಕುರಿತು ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಆತ್ಮಹತ್ಯೆ



ದಾಂಡೇಲಿ: ನಗರದ ಬಾಂಬೆಚಾಳದ ಮನೆಯೊಂದರಲ್ಲಿ ವ್ಯಕ್ತಿಯೋರ್ವ ನೇಣಿಗೆ ಶರಣಾದ ಘಟನೆ ಗುರುವಾರ ನಡೆದಿದೆ. ಬಾಂಬೆಚಾಳದ ನಿವಾಸಿ ರಾಘವೇಂದ್ರ ದೇವೇಂದ್ರ ವಾಡಕರ (32) ಎಂಬವರೇ ನೇಣಿಗೆ ಶರಣಾದ ವ್ಯಕ್ತಿಯಾಗಿದ್ದಾರೆ. ಇವರು ಮಲೇಷ್ಯಾದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಕಳೆದ ನಾಲ್ಕೈದು ದಿನಗಳ ಹಿಂದೆಯಷ್ಟೆ ತಮ್ಮೂರು ದಾಂಡೇಲಿಗೆ ಬಂದಿದ್ದರು. ಮನೆಯಲ್ಲಿ ಯಾರೂ ಇಲ್ಲದಿದ್ದ ಸಮಯದಲ್ಲಿ ನೇಣಿಗೆ ಶರಣಾಗಿದ್ದಾರೆ ಎಂದು ತಿಳಿದುಬಂದಿದೆ. ಘಟನೆಗೆ ಕಾರಣ ಏನೆಂದು ಪೊಲೀಸ್ ತನಿಖೆಯಿಂದ ತಿಳಿದು ಬರಬೇಕಾಗಿದೆ. ಘಟನಾ ಸ್ಥಳಕ್ಕೆ ಪಿಎಸ್‌ಐ ಜಗದೀಶ ನಾಯ್ಕ ಸೇರಿದಂತೆ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ನಗರದ ಸಾರ್ವಜನಿಕ ಆಸ್ಪತ್ರೆಯ ಶವಗಾರದಲ್ಲಿ ಇರಿಸಲಾಗಿದೆ.

ಪಿಡಿಒ ಆತ್ಮಹತ್ಯೆ



ರೋಣ: ಎರಡು ಗ್ರಾಮ ಪಂಚಾಯತಗಳ ಕಾರ್ಯನಿರ್ವಹಣೆ ಹಾಗೂ ಲೋಕಾಯುಕ್ತ ತನಿಖೆಯಿಂದ ಮಾನಸಿಕವಾಗಿ ಜರ್ಜರಿತಗೊಂಡಿದ್ದ ಪಿಡಿಒ ಮಕ್ತುಂ ಹುಸೇನ್ ಕರಡಿಗುಡ್ಡ(46) ಪಟ್ಟಣದ ಶ್ರೀನಗರದ ಬಾಡಿಗೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಗುರುವಾರ ಬೆಳಗ್ಗೆ ನಡೆದಿದೆ.

ಮೂಲತ ಧಾರವಾಡದವರಾದ ಮಕ್ತುಂಹುಸೇನ್ ಕರಡಿಗುಡ್ಡ ಇವರು ಎರಡು ತಿಂಗಳ ಹಿಂದೆ ಅಷ್ಟೆ ರೋಣ ತಾಲೂಕಿಗೆ ಪಿಡಿಒಗಳಾಗಿ ಕಾರ್ಯನಿರ್ವಹಣೆಯಲ್ಲಿ ತೊಡಗಿಕೊಂಡಿದ್ದರು.

ತಾಲೂಕಿನಲ್ಲಿ ಪಿಡಿಒ ಹುದ್ದೆಗಳು ಕಡಿಮೆ ಸಂಖ್ಯೆಯಲ್ಲಿರುವ ಕಾರಣ ಮಕ್ತುಂಹುಸೇನ್ ಕರಡಿಗುಡ್ಡ ಇವರಿಗೆ ತಾಲೂಕಿನ ಅಸೂಟಿ ಮತ್ತು ಕೊತಬಾಳ ಗ್ರಾಮ ಪಂಚಾತಯತಗಳ ಅಭಿವೃದ್ಧಿ ಅಧಿಕಾರಿಗಳನ್ನಾಗಿ ನಿಯೋಜನೆ ಮಾಡಲಾಗಿತ್ತು. ಅಲ್ಲದೆ, 2021ರಿಂದ 2023ರೊಳಗೆ ಇವರ ಮೇಲೆ ಲೋಕಾಯುಕ್ತ ಪ್ರಕರಣ ಕೂಡ ದಾಖಲಾಗಿತ್ತು ಎಂಬ ವಿಷಯ ಕೂಡ ತಿಳಿದು ಬಂದಿದೆ. ಇನ್ನು ಆತ್ಮಹತ್ಯೆಗೆ ಶರಣಾದ ಪಿಡಿಒ ಅಧಿಕಾರ ಸ್ವೀಕಾರ ಮೊದಲೇ ಕೊತಬಾಳ ಗ್ರಾಪಂನಲ್ಲಿ ನರೇಗಾ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಕರಣ ದಾಖಲಾಗಿತ್ತು. ಮೃತ ಪಿಡಿಒ ಅವರಿಗೆ ಪತ್ನಿ, ಆಯಾನ್ (13) ರಿಹಾನ್ (11) ಫರಾನ್(8) ಮೂರು ಗಂಡು ಮಕ್ಕಳಿದ್ದಾರೆ. ಅಸೂಟಿ ಗ್ರಾಪಂ ಸಮಸ್ಯೆ ಬಗ್ಗೆ ನನ್ನ ಗಮನಕ್ಕೆ ತಂದಿದ್ದರು. ನಾನು ಸಹ ಆತನಿಗೆ ಧೈರ್ಯ ನೀಡಿ ಸ್ವತಃ ನಾನೇ ಅಲ್ಲಿಗೆ ತೆರಳಿ ಸಮಸ್ಯೆ ಬಗೆಹರಿಸಿದ್ದೆ. ಅಲ್ಲದೆ ಗ್ರಾಪಂ ಬದಲಾಯಿಸುವ ಬಗ್ಗೆನೂ ಹೇಳಿದ್ದೆ. ಚಿಕ್ಕ ಮಕ್ಕಳಿದ್ದಾರೆ ಸರ್ ಶಾಲೆ ಆರಂಭವಾದ ತಕ್ಷಣ ಮಕ್ಕಳನ್ನು ಇಲ್ಲಿಯೇ ಶಾಲೆಗೆ ಸೇರಿಸುವುದಾಗಿಯೂ ಹೇಳಿದ್ದರು. ಏಕೆ ಹೀಗೆ ಮಾಡಿಕೊಂಡರು ನನಗೆ ಅರ್ಥವಾಗುತ್ತಿಲ್ಲ ಎಂದು ರೋಣ ತಾಪಂ ಇಒ ಚಂದ್ರಶೇಖರ್ ಕಂದಕೂರ ತಿಳಿಸಿದರು.

ಮೇ 4ರ ನಂತರ ಸಿಎಂ ಸಿದ್ದರಾಮಯ್ಯ ಕುರ್ಚಿ ಡೌಟ್: ಸಂಸದ ಬೊಮ್ಮಾಯಿ

ಹಾವೇರಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಮುಖ್ಯಮಂತ್ರಿ ಆಗುವ ಆಸೆ ಇದೆ ಅಂದಿದ್ದಾರೆ. ಮೇ 4ರ ನಂತರ ಸಿಎಂ ಸಿದ್ದರಾಮಯ್ಯ ಅವರ ಕುರ್ಚಿ ಇರುತ್ತದೆಯೋ ಇಲ್ವವೊ ಗೊತ್ತಿಲ್ಲ, ನಾವೂ ಯಾವ ಬದಲಾವಣೆ ಆಗಲಿದೆ ಎಂದು ನಿರೀಕ್ಷೆ ಮಾಡುತ್ತಿದ್ದೇವೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ನಗರದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡುವ ವೇಳೆ ಪಂಚರಾಜ್ಯ ಚುನಾವಣೆಗಳ ಎಕ್ಸಿಟ್ ಪೋಲ್ ಕುರಿತು ಪ್ರತಿಕ್ರಿಯಿಸಿದ ಅವರು, ಆಸ್ಸಾಂನಲ್ಲಿ ಮೂರನೇ ಎರಡರಷ್ಟು ಬಹುಮತ ನಮಗೆ ಬರಲಿದೆ. ನಮ್ಮ ನಿರೀಕ್ಷೆಯಂತೆ ಎಕ್ಸಿಟ್ ಪೋಲ್ ಬಂದಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯವರು ಅವರು ಎಷ್ಟೆ ಸಮಸ್ಯೆ ಮಾಡಲಿ, ಏನೇ ಹಿಂಸೆ ಕೊಡಲಿ, ಜನ ಬದಲಾವಣೆ ಬಯಸಿದ್ದಾರೆ. ಅಲ್ಲಿನ ಜನ ಶೇ 90ರಷ್ಟು ಮತದಾನ ಮಾಡಿದ್ದಾರೆ. ಪಶ್ಚಿಮ ಬಂಗಾಳ ಫಲಿತಾಂಶ ದೇಶಕ್ಕೆ ದಿಕ್ಸೂಚಿ ಆಗಲಿದೆ. ಪಂಚರಾಜ್ಯ ಫಲಿತಾಂಶ ದೇಶಾದ್ಯಂತ ಬಿಜೆಪಿ ಸಾಧನೆಯ ಹೆಜ್ಜೆ ಆಗಿದೆ ಎಂದು ಹೇಳಿದರು.

ಬೆಂಗಳೂರಿನಲ್ಲಿ ಭಾರೀ ಮಳೆಗೆ ಸಾವು ನೋವು ಸಂಭವಿಸಿದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸತ್ತಿದೆಯೋ ಬದುಕಿದೆಯೋ ಗೊತ್ತಿಲ್ಲ ಇವರು ಯಾವ ತಯಾರಿಯನ್ನೂ ಮಾಡಿಲ್ಲ, ಭಾರೀ ಮಳೆ ಆಗಬಹುದು ಅಂತ ಹವಾಮಾನ ಇಲಾಖೆ ಹೇಳುತ್ತಲೇ ಬಂದಿದೆ. ಆದರೂ ಯಾವುದೇ ತಯಾರಿ ಮಾಡಿಕೊಂಡಿರಲಿಲ್ಲ, ಈ ಸರ್ಕಾರ ಜನರ ಪಾಲಿಗೆ ಸತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಇನ್ನು ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ ಅವರ ಅಭಿಮಾನೋತ್ಸವದ ಮೂಲಕ ರಾಜ್ಯದ ಮೂಲೆ ಮೂಲೆಗೂ ಸಂದೇಶ ಕೊಡುತ್ತೇವೆ. ರಾಜ್ಯದಲ್ಲಿ ಬದಲಾವಣೆ ಗಾಳಿ ಬೀಸುತ್ತಿದೆ. ಬಹಳ ದೊಡ್ಡ ರಾಜಕೀಯ ಬದಲಾವಣೆ ಆಗಲಿದೆ. ಈ ಕಾರ್ಯಕ್ರಮ ಬಿಜೆಪಿ ಆಕಾಶದತ್ತರಕ್ಕೆ ಹಾರುವ ಕಾರ್ಯಕ್ರಮ. ಬಿ.ಎಸ್ ಯಡಿಯೂರಪ್ಪ ಅಭಿಮಾನೋತ್ಸವಕ್ಕೆ 10 ಲಕ್ಷ ಜನ ಸೇರುವ ನಿರೀಕ್ಷೆ ಇದೆ. ದಾಖಲೆ ಪ್ರಮಾಣದಲ್ಲಿ ಕಾರ್ಯಕ್ರಮ ಆಗಲಿದೆ ಎಂದು ಹೇಳಿದರು.

ಬಾಲ್ಯ ವಿವಾಹ ತಪ್ಪಿಸಿದ ಅಕ್ಕಪಡೆಗೆ ಶ್ಲಾಘನೆ

ಬೆಳಗಾವಿ: ನಗರದ ವಂಟಮುರಿ ಕಾಲನಿಯಲ್ಲಿ ನಡೆಯಲಿದ್ದ ಬಾಲ್ಯ ವಿವಾಹವನ್ನು ಅಕ್ಕಪಡೆ ಹಾಗೂ ಪೊಲೀಸ್ ಇಲಾಖೆ ತಡೆದು 17 ವರ್ಷದ ಬಾಲಕಿಯನ್ನು ರಕ್ಷಣೆ ಮಾಡಿದ್ದೇವೆ ಎಂದು ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ಅವರು ಅಕ್ಕಪಡೆಗೆ ಶ್ಲಾಘನೀಯ ವ್ಯಕ್ತಪಡಿಸಿದರು.



ಗುರುವಾರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಏ.20ರಂದು ಪೆಟ್ರೋಲಿಂಗ್ ವೇಳೆ ಅಕ್ಕಪಡೆ ಸಿಬ್ಬಂದಿಗೆ ಒಂದು ಮನೆಯ ಮುಂದೆ ಮಂಟಪ ಹಾಕಿರುವುದು ಅನುಮಾನಾಸ್ಪದವಾಗಿ ಕಾಣಿಸಿಕೊಂಡಿದ್ದು, ಸ್ಥಳಕ್ಕೆ ತೆರಳಿ ವಿಚಾರಣೆ ನಡೆಸಿದರು. ಈ ವೇಳೆ ಏ.21ರಂದು ಬಾಲಕಿಯ ಮದುವೆಯನ್ನು ಮಹಾರಾಷ್ಟ್ರದ ಪುಣಾ ನಿವಾಸಿಯೊಂದಿಗೆ ನೆರವೇರಿಸಲು ಸಿದ್ಧತೆ ಮಾಡಿರುವುದು ತಿಳಿದುಬಂದಿತು ಎಂದರು.

ಬಾಲಕಿಯ ಆಧಾರ್ ಕಾರ್ಡ್ ಹಾಗೂ ಜನನ ಪ್ರಮಾಣ ಪತ್ರ ಪರಿಶೀಲಿಸಿದಾಗ, ಆಕೆಗೆ ಕೇವಲ 17 ವರ್ಷ 4 ತಿಂಗಳು ವಯಸ್ಸು ಇರುವುದಾಗಿ ದೃಢಪಟ್ಟಿತು. ತಕ್ಷಣ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು.

ಅವರ ಮಾರ್ಗದರ್ಶನದಲ್ಲಿ ಮಕ್ಕಳ ಸಹಾಯವಾಣಿ ತಂಡ ಹಾಗೂ ಮಾಳಮಾರುತಿ ಪೊಲೀಸ್ ಠಾಣೆಯ 112 ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿ ಕಾರ್ಯಾಚರಣೆ ನಡೆಸಲಾಯಿತು. ಸಮಯಕ್ಕೆ ತಕ್ಕಂತೆ ಬಾಲ್ಯ ವಿವಾಹವನ್ನು ತಡೆದು ಬಾಲಕಿಯನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಲಾಗಿದೆ. ಈ ಸಂಬಂಧ ಬಾಲಕಿಯ ತಂದೆಯ ವಿರುದ್ಧ ಬೆಳಗಾವಿ ನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನಮ್ಮ ಬೆಳಗಾವಿಯ ಪೊಲೀಸರು ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆಂದು ಶ್ಲಾಘನೀಯ ವ್ಯಕ್ತಪಡಿಸಿದರು.

ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಕೂಡ್ಲಿಗಿ: ಪಟ್ಟಣದಿಂದ ತಮ್ಮೂರಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಲಾರಿ ಡಿಕ್ಕಿಯಾಗಿ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪಟ್ಟಣ ಹೊರವಲಯದ ಬೆಂಗಳೂರು ರಸ್ತೆಯ ಎನ್.ಎಚ್ 50ರ ಅಂಡರ್ ಬ್ರಿಡ್ಜ್ ಬಳಿ ಗುರುವಾರ ನಡೆದಿದೆ. ತಾಲೂಕಿನ ಸೂಲದಹಳ್ಳಿ ನಿವಾಸಿ ಕೆ.ಬಸವರಾಜ (35) ಮೃತ ದುರ್ದೈವಿ. ಕೂಡ್ಲಿಗಿಯಲ್ಲಿ ಕೆಲಸ ಮುಗಿಸಿಕೊಂಡು ತಮ್ಮೂರು ಸೂಲದಹಳ್ಳಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ದುರ್ಘಟನೆ ನಡೆದಿದೆ. ಘಟನಾ ಸ್ಥಳಕ್ಕೆ ಪಿಎಸ್‌ಐ ಸಿ.ಪ್ರಕಾಶ್ ಸೇರಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



CHANGE OF NAME

I, **ASHISH NADAF** (Old Name) Resident of H No: 2A/1A/1K/4 Zeeba Manzil 1st Cross Dayanand Colony Keshwapur Hubballi 580023 Karnataka, have changed my name as **ASHISH RAJU NADAF** (New Name) henceforth I will be called and recognized by new name for all future purposes, dated: 30/04/2026.

CHANGE OF NAME

I, **GOURI RAYANAGOUDAR** (Old Name) Resident of Appaji H No: 46 Vasant Nagar Kusugal Road Keshwapur, Hubballi 580023 Karnataka, have changed my name as **GOURI VIRUPAKSHGOUDA RAYANAGOUDAR** (New Name) henceforth I will be called and recognized by new name for all future purposes, dated: 30/04/2026.

CHANGE OF NAME

I, **KIRAN KUMARI CHAGANLAL** (Old Name) Resident of H No 2, Subhash Nagar, Kusugal Road, Keshwapur, Hubballi -Dharwad City - 580023, Karnataka, India, have changed my name as **KIRAN VIJAY PARMAR** (New Name) henceforth I will be called and recognized by new name for all future purposes, dated: 30/04/2026.

ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್‌ನಿಂದ 'ಎ' ಶ್ರೇಣಿ ಮಾನ್ಯತೆ ಪಡೆದಿದೆ) (ಎನ್.ಐ.ಆರ್.ಎಫ್.-2023 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 54ನೇ ಸ್ಥಾನ
ಇನ್ ಫರ್ ಮೇಷನ್ ಅಂಡ್ ಕಮ್ಯೂನಿಕೇಷನ್ ಡಿವಿಜನ್
ಗಣಕ ವಿಜ್ಞಾನ ಅಧ್ಯಯನ ವಿಭಾಗದ ಕಟ್ಟಡ, ಮಾನಸಗಂಗೋತ್ರಿ, ಮೈಸೂರು-570006
ದೂರವಾಣಿ ಸಂ:0821-2419556 ಇ-ಮೇಲ್ ವಿಳಾಸ: icd@uni-mysore.ac.in

ನಂ.ಎಂ.ಜಿ.ಎಂ/ಐ.ಸಿ.ಡಿ/09/2026-2027 ದಿನಾಂಕ: 27.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಪಾರದರ್ಶಕ ಅಧಿನಿಯಮ ಹಾಗೂ ನಿಯಮಗಳ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೇಟಾ ಸೆಂಟರ್‌ನಲ್ಲಿ ಅಳವಡಿಸಲಾಗಿರುವ ವಿವಿಧ ಐ.ಟಿ ಪರಿಕರಣಗಳ ವಾರ್ಷಿಕ ನಿರ್ವಹಣಾ ಸೇವಾ ಕಾರ್ಯವನ್ನು ಪಡೆಯುವ ಸಂಬಂಧ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ: UOM/2026-27/SE0038

ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ **https://kppp.karnataka.gov.in/** ಅಥವಾ ದೂರವಾಣಿ ಸಂಖ್ಯೆ: 0821-2419445 . ಅನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ನಿರ್ದೇಶಕರು

ವಾಸಾಸಂಇ/ಮೈಸೂರು/ಶಿರಡಿಸಾಯಿ/130/2026-27

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ
ದೂರವಾಣಿ : 08472 -220196, midnglb@rediffmail.com / midnglb1@gmail.com

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ-1/ಕೆ.ಡಬ್ಲ್ಯೂ-1 &2/2026-27/606 ದಿನಾಂಕ: 29-04-2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1&2) ::

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2025-26ನೇ ಸಾಲಿನ 4702 ಆಣೆಕಟ್ಟು ಪಿಕಪ್ ಯೋಜನೆ, ಕೆರೆಗಳ ಆಧುನೀಕರಣ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆಪಿಪಿ ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಗರಿಷ್ಠ ರೂ. 35,06,330.32, ಕನಿಷ್ಠ ರೂ. 1,96,687.61,** 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ. ಪೋರ್ಟಲನಂತೆ, ಇ.ಎಂ.ಡಿ. ಗರಿಷ್ಠ ರೂ. 70,200.00, ಕನಿಷ್ಠ ರೂ. 4,500.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **08-05-2026 ಬೆಳಿಗ್ಗೆ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **11-05-2026 ಸಾಯಂಕಾಲ 17.30 ಗಂಟೆಯ ವರೆಗೆ,** 7) ಟೆಂಡರ ತೆರೆಯುವ ದಿನಾಂಕ: **12-05-2026 ಸಾಯಂಕಾಲ 17.30 ಗಂಟೆಯ ವರೆಗೆ** 8) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 9) ಅಂತರಜಾಲ ತಾಣದ ವಿಳಾಸ: (https:// KPPP.Karnataka.gov.in)

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/88/ಕೆ.ಎಸ್.ಎಂ.ಸಿ.&ಎ/2026-27

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಕಚೇರಿ, ಹುಬ್ಬಳ್ಳಿ

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025-26 ದಿನಾಂಕ: 30-04-2026

ಅಲ್ಪಾವಧಿ/ಇ-ಟೆಂಡರ್ ಅಧಿಸೂಚನೆ

ಉಲ್ಲೇಖ: ಜಾಹಿರಾತು ನಂ:- **1370** ದಿನಾಂಕ:- **17-03-2026,**

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್ 2025-26 & 2026-27ನೇ ಸಾಲಿನ ವಾರ್ಡ ವಾರು ಅನುದಾನ & ಸನ್ 2025-26ನೇ ಸಾಲಿನ ಸ್ಮಾರ್ಟಸಿಟಿ ಅನುದಾನ ಹಾಗೂ ಸನ್ 2025-26ನೇ ಸಾಲಿನ 15ನೇ ಹಣಕಾಸು ಅಭಿವೃದ್ಧಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ ಕಥಾಅ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
1) ಇಂಡೆಂಟ್ ನಂ-55293 ರೂ.10.00ಲಕ್ಷ, **2)** ಇಂಡೆಂಟ್ ನಂ-57004 ರೂ.8.06ಲಕ್ಷ, **3)** ಇಂಡೆಂಟ್ ನಂ-57772 ರೂ.17.00ಲಕ್ಷ, **4)** ಇಂಡೆಂಟ್ ನಂ-57850 ರೂ.24.95ಲಕ್ಷ.

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
5) ಇಂಡೆಂಟ್ ನಂ-57015 ರೂ.32.00ಲಕ್ಷ, **6)** ಇಂಡೆಂಟ್ ನಂ-57852 ರೂ.18.90ಲಕ್ಷ,

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
7) ಇಂಡೆಂಟ್ ನಂ-57844 ರೂ. 42.32ಲಕ್ಷ,

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
8) ಇಂಡೆಂಟ್ ನಂ-57003 ರೂ. 22.95ಲಕ್ಷ, **9)** ಇಂಡೆಂಟ್ ನಂ- 57433 ರೂ. 5.35ಲಕ್ಷ, **10)** ಇಂಡೆಂಟ್ ನಂ-57322 ರೂ.12.45ಲಕ್ಷ,

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
11) ಇಂಡೆಂಟ್ ನಂ-57010 ರೂ.25.00ಲಕ್ಷ, **12)** ಇಂಡೆಂಟ್ ನಂ-57006 ರೂ.9.22ಲಕ್ಷ, **13)** ಇಂಡೆಂಟ್ ನಂ-57005 ರೂ.19.04ಲಕ್ಷ **14)** ಇಂಡೆಂಟ್ ನಂ-57435 ರೂ. 28.14ಲಕ್ಷ, **15)** ಇಂಡೆಂಟ್ ನಂ-57543 ರೂ.10.00ಲಕ್ಷ, **16)** ಇಂಡೆಂಟ್ ನಂ-57771 ರೂ. 35.00ಲಕ್ಷ, **17)** ಇಂಡೆಂಟ್ ನಂ-57773 ರೂ.15.00ಲಕ್ಷ, **18)** ಇಂಡೆಂಟ್ ನಂ-57832 ರೂ. 28.00ಲಕ್ಷ, **19)** ಇಂಡೆಂಟ್ ನಂ-57835 ರೂ.25.00ಲಕ್ಷ, **20)** ಇಂಡೆಂಟ್ ನಂ-57836 ರೂ.10.00ಲಕ್ಷ, **21)** ಇಂಡೆಂಟ್ ನಂ-57848 ರೂ.44.60ಲಕ್ಷ, **22)** ಇಂಡೆಂಟ್ ನಂ-57847 ರೂ.24.00ಲಕ್ಷ, **23)** ಇಂಡೆಂಟ್ ನಂ-SE7666 ರೂ.47.10ಲಕ್ಷ,

ಮರು ಕರೆ ಕಾಮಗಾರಿ

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
24) ಇಂಡೆಂಟ್ ನಂ-42565 ರೂ.33.50ಲಕ್ಷ (2ನೇ ಕರೆ), **25)** ಇಂಡೆಂಟ್ ನಂ-42550 ರೂ.16.00ಲಕ್ಷ (2ನೇ ಕರೆ), **26)** ಇಂಡೆಂಟ್ ನಂ-57068 ರೂ. 8.00ಲಕ್ಷ (2ನೇ ಕರೆ), **27)** ಇಂಡೆಂಟ್ ನಂ-57149 ರೂ. 6.60ಲಕ್ಷ (2ನೇ ಕರೆ),

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
28) ಇಂಡೆಂಟ್ ನಂ- 56993 ರೂ. 3.36ಲಕ್ಷ (2ನೇ ಕರೆ)

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
29) ಇಂಡೆಂಟ್ ನಂ-55521 ರೂ.2.96ಲಕ್ಷ (2ನೇ ಕರೆ), **30)** ಇಂಡೆಂಟ್ ನಂ-57112 ರೂ.10.00ಲಕ್ಷ (2ನೇ ಕರೆ),

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
31) ಇಂಡೆಂಟ್ ನಂ-42566 ರೂ.33.50ಲಕ್ಷ (2ನೇ ಕರೆ), **32)** ಇಂಡೆಂಟ್ ನಂ-42567 ರೂ.33.00ಲಕ್ಷ (2ನೇ ಕರೆ) **33)** ಇಂಡೆಂಟ್ ನಂ-55255 ರೂ.4.45ಲಕ್ಷ (2ನೇ ಕರೆ), **34)** ಇಂಡೆಂಟ್ ನಂ-53453 ರೂ.25.00ಲಕ್ಷ (3ನೇ ಕರೆ) **35)** ಇಂಡೆಂಟ್ ನಂ-55548 ರೂ.4.00ಲಕ್ಷ (3ನೇ ಕರೆ), **36)** ಇಂಡೆಂಟ್ ನಂ-55394 ರೂ. 20.00ಲಕ್ಷ (4ನೇ ಕರೆ). **37)** ಇಂಡೆಂಟ್ ನಂ-51420 ರೂ.10.00ಲಕ್ಷ (4ನೇ ಕರೆ), **38)** ಇಂಡೆಂಟ್ ನಂ-44547 ರೂ. 11.00ಲಕ್ಷ (5ನೇ ಕರೆ), **39)** ಇಂಡೆಂಟ್ ನಂ-56552 ರೂ.22.00ಲಕ್ಷ (2ನೇ ಕರೆ) **40)** ಇಂಡೆಂಟ್ ನಂ- 55562 ರೂ. 30.00ಲಕ್ಷ (3ನೇ ಕರೆ). **41)** ಇಂಡೆಂಟ್ ನಂ-55546 ರೂ.25.00ಲಕ್ಷ (3ನೇ ಕರೆ). **42)** ಇಂಡೆಂಟ್ ನಂ- 22070 ರೂ. 34.95ಲಕ್ಷ (4ನೇ ಕರೆ), **43)** ಇಂಡೆಂಟ್ ನಂ-49820 ರೂ.5.00ಲಕ್ಷ (2ನೇ ಕರೆ), **44)** ಇಂಡೆಂಟ್ ನಂ- 52389 ರೂ. 6.00ಲಕ್ಷ (2ನೇ ಕರೆ), **45)** DMA/2026-27/Auction6473/Call-2 , **46)** ಇಂಡೆಂಟ್ ನಂ- 52389 ರೂ. 6.00ಲಕ್ಷ (2ನೇ ಕರೆ).

ಇ.ಎಂ.ಡಿ. ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ **ಸಂಖ್ಯೆ: 0836-2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ: **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟ್‌ನಲ್ಲಿ **ದಿನಾಂಕ: 04-05-2026** ಪಡೆಯಬಹುದಾಗಿದೆ.

ಕ್ರ ಸಂ 04, 07, 10, 23 ರಿಂದ 26, 29 ರಿಂದ 41, 46ರ ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 13-05-2026 ರಂದು ಸಾಯಂಕಾಲ 4.00 ಗಂಟೆಯವರೆಗೆ

ಕ್ರ ಸಂ 04, 07, 10, 23 ರಿಂದ 26 29 ರಿಂದ 41, 46ರ ಟೆಂಡರ ತೆರೆಯುವ ದಿನಾಂಕ: 14-05-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು

ಕ್ರ ಸಂ 01 ರಿಂದ 03 05 06 08, 09 11 ರಿಂದ 22 27, 28 42 ರಿಂದ 44ರ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 19-05-2026 ರಂದು ಸಾಯಂಕಾಲ 4.00 ಗಂಟೆಯವರೆಗೆ

ಕ್ರ ಸಂ 01 ರಿಂದ 03, 05, 06, 08, 09, 11 ರಿಂದ 22, 27, 28 42 ರಿಂದ 44ರ ಟೆಂಡರ ತೆರೆಯುವ ದಿನಾಂಕ: 20-05-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು

ಕ್ರ. ಸಂ **45**ರ ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ನಲ್ಲಿ (e-Auction) ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP) ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ನಿಯಮಗಳನ್ನು ಒಳಗೊಂಡಿರುವ ಟೆಂಡರ್ ದಸ್ತಾವೇಜನ್ನು ಅಂತರ್‌ಜಾಲ ವಿಳಾಸ **kppp.karnataka.gov.in** ದಲ್ಲಿ ದಿನಾಂಕ: **04-05-2026** ರಿಂದ ಪಡೆಯಬಹುದಾಗಿದೆ ಹೆಚ್ಚಿನ ಮಾಹಿತಿ ಕುರಿತು ಸರಬರಾಜು (Bidders) ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಕಚೇರಿ ರವರ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 13-05-2026** ರಂದು **17.30.00** ಗಂಟೆಯವರೆಗೆ.
ಇ-ಹರಾಜು ಪಾಲ್ಗೊಳ್ಳಲು ಕೊನೆಯ **ದಿನಾಂಕ: 14-05-2026** ರಂದು **17.30.000** ಗಂಟೆಯವರೆಗೆ.
ಇ-ಹರಾಜು ಜರುಗುವ **ದಿನಾಂಕ: 18-05-2026** ಮುಂಜಾನೆ **10.00** ಗಂಟೆಯಿಂದ ಸಾಯಂಕಾಲ **5.30** ಗಂಟೆಯವರೆಗೆ.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ./ಧಾರವಾಡ/106/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ವಿಭಾಗ ವಿಜಯಪುರ.

No.EE/MID/VJP/AE-1/4702/TND/2026-27/287 Date: 27.04.2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ-ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು: (1) ವಿಜಯಪುರ ಜಿಲ್ಲೆ ಚಡಚಣ ತಾಲ್ಲೂಕಿನ ಕೊಂಕಣಗಾಂವ ಗ್ರಾಮದ ಬೋರಿ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿ**(3ನೇ ಕರೆ)**, ಟೆಂಡರಿಗಿಟ್ಟ ಮೊತ್ತ: **ರೂ.799.79ಲಕ್ಷ,** ಇ.ಎಂ.ಡಿ. ಮೊತ್ತ: **ರೂ.12,00,000-00, ಮೇಲಿನ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು: (1) ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕು ಮಣ್ಣೂರ ಮತ್ತು ನಾಗವಾಡ ಗ್ರಾಮದ ಪರಿಶಿಷ್ಟ ಜಾತಿಯ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಸುಧಾರಣೆಗಾಗಿ ಸರಣಿ ಬಾಂದಾರ/ಬ್ಯಾರೇಜ್/ಬಿಸಿಬಿ ನಿರ್ಮಾಣ ಕಾಮಗಾರಿ**(2ನೇ ಕರೆ)**, ಟೆಂಡರಿಗಿಟ್ಟ ಮೊತ್ತ **ರೂ. 800.00ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ-ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ **https://kppp.karnataka.gov.in/#/portal/ portal-home** ನಲ್ಲಿ ಲಾಗಿನ್ ಆಗಿ **ದಿನಾಂಕ: 28.04.2026 ರಿಂದ** Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟ್‌ನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ್ ಮಾತ್ರ) "ಇ-ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ **https:// kppp.karnataka.gov.in/#/portal/ portal-home**ನಲ್ಲಿ ಲಾಗಿನ್ ಆಗಿ **ದಿನಾಂಕ: 06.05.2026ರ 17:30 ಘಂಟೆವರೆಗೆ** ಸ್ವೀಕರಿಸಲಾಗುವದು. **ದಿನಾಂಕ: 04.05.2026ರಂದು** ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ-ಬಿಡ್ ಸಭೆಯನ್ನುಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು **ದಿನಾಂಕ: 05.05.2026ರ 17:30 ಘಂಟೆವರೆಗೆ** ವಿಭಾಗ ಕಛೇರಿಯಲ್ಲಿ ಅಥವಾ " ಇ-ಪ್ರೋಕ್ಯರಮೆಂಟ್" ಹೆಲ್ಪಡೆಸ್ಕ್‌ನಿಂದ (ಫೋನ್: 080-25501216 ಮತ್ತು 080-25501227) ಪಡೆಯಬಹುದು ಹಾಗೂ ಟೆಂಡರ್‌ಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ.

ವಾಸಸಂಇ/ವಿಜಯಪುರ/ಆರ್.ಓ.ಸಂಖ್ಯೆ 58/ಕೆಎಸ್‌ಎಂಸಿಎ/2026-27

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2026-27 ದಿನಾಂಕ:29.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ರವರು, ಬೇಲೂರು ಉಪ ವಿಭಾಗ ವ್ಯಾಪ್ತಿಯ 2023-24 ಮತ್ತು 2024-25 ನೇ ಸಾಲಿನ ಪಿ.ಎಂ.ಶ್ರೀ ಯೋಜನೆಯಡಿ INDENT NO: (1)RDPR/2026-27/BD/ WORK_INDENT26387 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ-ಪ್ರೊಕ್ಯೂರ್‌ಮೆಂಟ್ ಅಡಿ KW-1ರ ರೀತ್ಯಾ ಅಂತರ್ಜಾಲದಲ್ಲಿ ದಿ: 29.04.2026 ರಿಂದ ದಿ:14.05.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:13.05.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:12.05.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:15.05.2026 ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/81/ಕೆಎಸ್‌ಎಂಸಿಎ/2026-27

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2026-27/514 ದಿನಾಂಕ:28/04/2026

ಇ-ಟೆಂಡರ್/ಮರುಟೆಂಡರ್/ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (Call-1, Call-2, Call-3 & Call-4)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059-ಎಸ್.ಸಿ.ಪಿ - ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 5 ಕಾಮಗಾರಿಗಳು ಮತ್ತು ಲೆಕ್ಕ ಶೀರ್ಷಿಕೆ 4059-ಟಿ.ಎಸ್.ಪಿ-ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 6 ಕಾಮಗಾರಿ, 3054-ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 2 ಕಾಮಗಾರಿಗಳು, 2059-ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ ನಿರ್ವಹಣೆ ಅಡಿ 1 ಕಾಮಗಾರಿ, 2216-ವಸತಿ ಗೃಹ ಕಟ್ಟಡಗಳ ದುರಸ್ತಿ/ನಿರ್ವಹಣೆ ಅಡಿ 1 ಕಾಮಗಾರಿ, 8443-ಠೇವಣಿ ವಂತಿಕೆ ಅಡಿ 1 ಕಾಮಗಾರಿ, 5054-ಜಿಮುರ ನವೀಕರಣ ಅಡಿ 1 ಕಾಮಗಾರಿ, 5054-ರಾಹೆ ಸುಧಾರಣೆ ಅಡಿ 1 ಕಾಮಗಾರಿ ಹಾಗೂ 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ ಅಡಿ 1 ಕಾಮಗಾರಿ, ಹೀಗೆ ಒಟ್ಟು 19 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 6.40 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 232.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:12-05-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:14-05-2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:16-05-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):18-05-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-177/KSMCA/2026-27

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಉಪ ನಿರ್ದೇಶಕರು, ನಗರ ಯೋಜನೆ
E-mail- ddtp.hubli@gmail.com Phone Number: 0836-2358034

ನಂ:ಹುಧಾಮಪಾ/50/05/ಕಪ/2026-27 ದಿನಾಂಕ: 30-04-2026

ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಿ ಪತ್ರಿಕಾ ಪ್ರಕಟಣೆ

ಹುಬ್ಬಳ್ಳಿ ಶಹರ ಮರಿಯನ್ ತಿಮ್ಮಸಾಗರದ ರಿ.ಸ.ನಂ 23ಎ, ಸಿ.ಸ.ನಂ: 4908ಬಿ/29 ನೇದ್ದರ ಕ್ಷೇತ್ರ 833.87 ಚ.ಮೀ ವಿಸ್ತೀರ್ಣದ ನಿವೇಶನದಲ್ಲಿ **"ಸಾಮಾಜಿಕ/ಸಾಂಸ್ಕೃತೀಕ"** ಉದ್ದೇಶದ ಕಟ್ಟಡ ಕಟ್ಟಲು ಅಧ್ಯಕ್ಷರು ಸೋಮವಂಶ ಶ್ರೀ ಸಹಸ್ರಾರ್ಜುನ ಕ್ಷತ್ರೀಯ ಪಂಚ ಟ್ರಸ್ಟ್ ಕಮೀಟಿ ರಾಜಧಾನಿ ಕಾಲನಿ ಹುಬ್ಬಳ್ಳಿ, ಇವರು ಕಟ್ಟಡ ಪರವಾನಿಗೆಗೆ ಅರ್ಜಿಯನ್ನು ಸಲ್ಲಿಸಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 237 ಬೆಮಪ್ರಾ 2009 ದಿನಾಂಕ: 19-09-2009 ರನ್ವಯ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಣೆ ನೀಡಲಾಗಿರುತ್ತದೆ.

ಸದರಿ **ಸಾಮಾಜಿಕ/ಸಾಂಸ್ಕೃತೀಕ** ಉದ್ದೇಶದ ಕಟ್ಟಡ ನಿರ್ಮಾಣದ ಬಗ್ಗೆ ಏನಾದರು ಆಕ್ಷೇಪಣೆ/ಪ್ರತಿಕ್ರೀಯೆ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ 15 ದಿನದೊಳಗಾಗಿ ಈ ಕೆಳಗೆ ಸಹಿ ಮಾಡಿದವರ ವಿಳಾಸಕ್ಕೆ ಲಿಖಿತವಾಗಿ ಸಲ್ಲಿಸುವುದು. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/- ಉಪ ನಿರ್ದೇಶಕರು, ನಗರ ಯೋಜನೆ
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ.

ಸಹಿ/- ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/105/ಮಣಿಜಾಲ್/2026-27

CHANGE OF NAME

I, **MAHAJABEEN KOLUR** (Old Name) Resident of H No: 2A/1A/1K/4 Zeeba Manzil 1st Cross Dayanand Colony Keshwapur Hubballi 580023 Karnataka, have changed my name as **MAHJABEEN NADAF** (New Name) henceforth I will be called and recognized by new name for all future purposes, dated: 30/04/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ
ಕಮಲಾಪುರ. ದೂರವಾಣಿ: 08394-241661
e-mail ID: hwhama@gmail.com

ಸಂಖ್ಯೆ:ಹವಿಪಪ್ರನಿಪ್ರಾ/ಕ/ಇ-ಟೆಂಡರ್/2026-27 ದಿನಾಂಕ:29-04-2026

ಅಲ್ಪವಾಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯಲ್ಲಿ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಈ ಕೆಳಗಿನ ಇ-ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಐ.ಬಿ.ಆವರಣ, ಹಂಪಿ ರೋಡ್, ಕಮಲಾಪುರ ಇವರ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಕಾಮಗಾರಿಯ ಹೆಸರು: ಉದ್ದಾನ ವಿರಭದ್ರ ದೇವಸ್ಥಾನದಿಂದ ಕಡ್ಡಿರಾಮಪುರ ಮತ್ತು ಹಂಪಿಗೆ ಹೊಗುವ ರಸ್ತೆಯವರೆಗೆ ತಿರುವು ರಸ್ತೆ ಅಭಿವೃದ್ಧಿ ಕಾಮಗಾರಿ **(Devlopment of diversion road from Uddan Virabhadra Temple upto the road leading to Kaddirampur and Hampi) (Tender No: HWHAMA/2026-27/RD/WORK_INDNT8).** ಸ್ಥಳ: ಹಂಪಿ ಸ್ಥಳೀಯ ಯೋಜನಾ ಪ್ರದೇಶ. **ಅಂದಾಜು ಮೊತ್ತ (ರೂ.ಗಳಲ್ಲಿ): 32,00,000/-.** ಇ.ಎಂ.ಡಿ. **ಮೊತ್ತ ರೂ.ಗಳಲ್ಲಿ: ರೂ.64,000/-. ಕಾಮಗಾ ಅವಧಿ: 90 ದಿನಗಳು**

ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1.ಇ-ಟೆಂಡರ್ ಅವಧಿ ದಿನಾಂಕ: **29/04/2026 ರಿಂದ 07/05/2026**
2.ಇ-ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **07/05/2026 ಸಂಜೆ: 5:00ರ ವರೆಗೆ.**
3.ಇ-ಟೆಂಡರ್‌ನ್ನು ಟೆಕ್ನಿಕಲ್ ಬಿಡ್ ತೆರೆಯುವ **ದಿನಾಂಕ:08/05/2026 ಸಂಜೆ: 5:30 ಗಂಟೆಗೆ.** 4.ಇ-ಟೆಂಡರ್‌ನ್ನು ಫೈನಾನ್ಸಿಯಲ್ ಬಿಡ್ ತೆರೆಯುವ **ದಿನಾಂಕ:11/05/2026 ಸಂಜೆ: 5:00 ಗಂಟೆಗೆ**

ಸಹಿ/-ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ
ನಿರ್ವಹಣಾ ಪ್ರಾಧಿಕಾರ ಕಮಲಾಪುರ

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/58

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.

ಸಂ: ಕಾ.ಇಂ(ವಿ)/ಲೋ.ಇ/ವಿದ್ಯುತ್/2025-26/146 ದಿನಾಂಕ: 29.04.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗೆ KW-2 STD ಷರತ್ತುಗೊಳಪಟ್ಟಂತೆ, ಮೊದಲನೇ ಟೆಂಡರ್ ಕರೆಯನ್ನು ಕೆ.ಪಿ.ಪಿ.ಪಿ. ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
1	Providing Street Light at KM 18.00 of Chitradurga SH 307 Kyadigere(NH 48) to Seebara Village near Service Road (NH-48) in Chitradurga Taluk. PWD/2025-26/EL/WORK_INDENT33403	Rs. 30.30

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https:// kppp.karnataka.gov.in**ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು **ದಿನಾಂಕ: 29.04.2026 ರಿಂದ 13.05.2026, 16.00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ **ದಿನಾಂಕ: 13.05.2026 ರಂದು 16.00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಸದರಿ ಟೆಂಡರ್ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).

ವಾಸಾಸಂಇ/ಉನಿ-ಸಿ.ಪಿ/438/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ಗದಗ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ, ಗದಗ
Phone No: 08372-238782 Fax No. 08372-237268 E.Mail-eepwdgad@gmail.com

ನಂ:ಕಾನಿಇಂಗ:ಲೋಇ:ಪಿಬಿ- 1 2 4 5 :ವಿವಿಧ: 2026-27/339 ದಿನಾಂಕ: 30/04/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1198.15 ಲಕ್ಷ** ಮೊತ್ತದಲ್ಲಿ ಒಟ್ಟು 07 ಕಾಮಗಾರಿಗೆ (ಕನಿಷ್ಠ **ಮೊತ್ತ ರೂ: 1.15 ಲಕ್ಷ** ಹಾಗೂ ಗರಿಷ್ಠ **ಮೊತ್ತ ರೂ: 497.00 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ-1, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.kppp.Karnataka.gov.in/** ದಲ್ಲಿ ನೋಡಿಕೊಳ್ಳಬಹುದು.

Work Indent No:- Part-1 34863, 32754/Call-2, 32764/Call-2 -SC, 33839/Call-3 32777, 32778,
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ:-05-05-2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:-07-05-2026 ಮಧ್ಯಾಹ್ನ 4.00 ಗಂಟೆಯ** ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:-08-05-2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ:-11-05-2026.**

Work Indent No:- Part-2 35306
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ:-16-05-2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:-18-05-2026 ಮಧ್ಯಾಹ್ನ 4.00 ಗಂಟೆಯ** ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:-19-05-2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ:-20-05-2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗೇರಿ-1 ಹಾಗೂ ಕೆಟಗೇರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ , 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ,
ಗದಗ

ವಾ.ಸಾ.ಸಂ.ಇ/ಗದಗ/46/ದೇಶಪಾಂಡೆಪಬ್ಲಿಸಿಟಿ/2026-27

ಕ್ರಿಮಿ. ನಂ. 496/2026
ಮಾನ್ಯ 2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ
ಅರ್ಜಿದಾರಳು: 1. ಚೋಳಪ್ಪ ತಂದೆ ಭರಮಪ್ಪ ಪೂಜಾರ
ವಿರುದ್ಧ
ಎದುರುಗಾರರು : ಜನನ ಮತ್ತು ಮರಣ ನೋಂದಣಾಧಿಕಾರಿ ಸಿ.ಎಮ್.ಸಿ. ರಾಣೇಬೆನ್ನೂರ
:- ಇಸ್ತಿಯಾರ ನಾಮಾ -:
ಇದರಲ್ಲಿ ಅರ್ಜಿದಾರನ ತಾಯಿ ನಾಗಮ್ಮ ಕೋಂಭರಮಪ್ಪ ಪೂಜಾರ ಇವರು ಹಾವೇರಿ ಜಿಲ್ಲಾ ರಾಣೇಬೆನ್ನೂರ ನ ಅರ್ಜಿದಾರರ ಮನೆಯಲ್ಲಿ ದಿ: 14-01-1985 ರಂದು ಮರಣ ಹೊಂದಿರುತ್ತಾರೆ. ಸದರ ಅರ್ಜಿದಾರಳ ತಂದೆ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಜನನ-ಮರಣ ನೋಂದಣಿ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವದು ಅತೀ ಅವಶ್ಯ ಇದ್ದು ಇದರ ಬಗ್ಗೆ ಸಾರ್ವಜನಿಕರ ಯಾವದೇ ತಂಟೆ ವ ತಕರಾರು ಇದ್ದಲ್ಲಿ 05/08/2026 ರಂದು ಬೆಳಿಗ್ಗೆ 10-30 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು.
ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ: 16/04/2026 ರಂದು ನೀಡಿದೆ.
ಸ್ಥಳ: ರಾಣೇಬೆನ್ನೂರು
ದಿನಾಂಕ : 5/02/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- (ಎಚ್. ಆರ್. ಹನುಮಂತಪ್ಪ) ಶಿರಸ್ತೇದಾರರು
2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರಾಣೇಬೆನ್ನೂರು
ಸಹಿ/- (ಶ್ರೀ ಎಸ್.ಕೆ ಐರಣಿ)
ವಕೀಲರು, ರಾಣೇಬೆನ್ನೂರು

ಸಾರ್ವಜನಿಕ ಪ್ರಕಟಣೆ
ಸಿದ್ದಾಪುರ ಜೆ.ಎಂ.ಎಫ್.ಸಿ. ಕೋರ್ಟಿನಲ್ಲಿ
ಕ್ರಿಮಿ. ನಂ. 1/2026
ಕುಸುಮಾಕರ ತಿಪ್ಪ ನಾಯ್ಕ .....ಅರ್ಜಿದಾರ
ವಿರುದ್ಧ
1ನೇ ತಹಶೀಲ್ದಾರರು ತಾ: ಸಿದ್ದಾಪುರ (ಉ.ಕ.)
ಕೂಡಾ .....ಎದುರುದಾರರು
ಸದ್ರಿ ಪ್ರಕರಣದ ಎದುರುದಾರರು ಮತ್ತು ಹಿತಾಸಕ್ತಿಯುಳ್ಳ ಸಂಬಂಧಿಕರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ :-
ಈ ಪ್ರಕರಣದ ಅರ್ಜಿದಾರನು ಸಿದ್ದಾಪುರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಸಹೋದರ ಮಧುಕರ ತಿಪ್ಪ ನಾಯ್ಕ ಸಾ: ಸಂಪೇಸರ ಗ್ರಾಮ: ಗುಬ್ಬಗೋಡ ಇವನು ದಿನಾಂಕ 25-07-2016 ರಂದು ಸಿದ್ದಾಪುರ ತಾಲೂಕು ಗುಬ್ಬಗೋಡ ಗ್ರಾಮದ ವಂದಾನೆ ಊರಿನಲ್ಲಿ ಮೃತರಾಗಿರುವುದಾಗಿಯೂ ಮತ್ತು ಮೃತರ ಮರಣ ದಾಖಲೆಯನ್ನು ಅರ್ಜಿದಾರರಿಗೆ ಪೂರೈಸುವಂತೆ 1 ಮತ್ತು 2ನೇ ಎದುರುದಾರರಿಗೆ ಆದೇಶವಾಗುವಂತೆ ಕೋರಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾನೆ. ಅರ್ಜಿದಾರನ ಕೋರಿಕೆಗೆ ಯಾವುದಾದರೂ ತಕ್ರಾರುಗಳಿದ್ದಲ್ಲಿ ದಿನಾಂಕ 05-06-26 ರಂದು ಬೆಳಿಗ್ಗೆ 10-45 ಗಂಟೆಗೆ ಸಿದ್ದಾಪುರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಹಾಜರಾಗಿ ಮೇಲೆ ಹೇಳಿದ ಪ್ರಕರಣದಲ್ಲಿ ತಮ್ಮ ತಕ್ರಾರು ಸಲ್ಲಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಲಾಗಿರುತ್ತದೆ.
ಇಂದು ದಿನಾಂಕ 28/4/2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಸಹಿ ಮಾಡಿ ನೀಡಲಾಗಿದೆ.
ಸಿದ್ದಾಪುರ
ದಿನಾಂಕ: 28-04-2026
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಜೆ.ಎಂ.ಎಫ್.ಸಿ. ಕೋರ್ಟ ಸಿದ್ದಾಪುರ (ಉ.ಕ.)
ಸಹಿ/- ಸುದರ್ಶನ ನಾಯ್ಕ
ಅರ್ಜಿದಾರರ ಪರ ವಕೀಲರು

ಕ್ರಿಮಿನಲ್ ಮಿಸಲೇನಿಯಸ್ ನಂ : 125/2026
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನವಲಗುಂದ ಇವರ ನ್ಯಾಯಾಲಯದಲ್ಲಿ ನವಲಗುಂದ
ಅರ್ಜಿದಾರ : ಶೇಖರಯ್ಯ ತಂದೆ ಗಂಗಯ್ಯ ನಮಸ್ತೇಮಠ
ವಿರುದ್ಧ
ಎದುರುದಾರರು : ಮೆ॥ ತಹಶೀಲ್ದಾರ ನವಲಗುಂದ.
ಜನನ-ಮರಣ ನೋಂದಣಾಧಿಕಾರಿಗಳು, ನವಲಗುಂದ.
ಪತ್ರಿಕಾ ಪ್ರಕಟಣೆ
ಪ್ರಸ್ತುತ ಈ ಪ್ರಕರಣವನ್ನು ಅರ್ಜಿದಾರನು ಮೆ: ನ್ಯಾಯಾಲಯಕ್ಕೆ ತನ್ನ ತಂದೆಯಾದ ಗಂಗಯ್ಯ ತಂದೆ ಶಿವಮೂರ್ತಯ್ಯ ನಮಸ್ತೇಮಠ ಇವರು ದಿನಾಂಕ: 12/05/1971 ರಂದು ನವಲಗುಂದ/ಅಣ್ಣಿಗೇರಿ ತಾಲೂಕ ಪೈಕಿ ಶಲವಡಿ ಗ್ರಾಮದಲ್ಲಿ ಮೋತಿಯಾಗಿದ್ದು, ಸದರೀಯವರ ಮರಣ ಮಾಹಿತಿಯನ್ನು ಎದುರುಗಾರರಲ್ಲಿ ದಾಖಲಿಸಲು ಮೆ॥ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ.
ಸದರ ಅರ್ಜಿಯು ವಿಚಾರಣೆಗೆ ಅಂತಾ ಮಾನ್ಯ ನ್ಯಾಯಾಲಯದವರು ದಿನಾಂಕ: 03/06/2026 ರಂದು ಬೆಳಿಗ್ಗೆ 10-30 ಗಂಟೆಗೆ ನಿಗದಿಯಾಗಿದ್ದು, ಕಾರಣ ಅರ್ಜಿಗೆ ಸಂಬಂಧಪಟ್ಟ ಯಾರಾದರೂ ತಕರಾರುಸ ವಗೈರೆ ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕ ಮತ್ತು ಸಮಯದಂದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರುಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬರದೇ ಇದ್ದಲ್ಲಿ ಪ್ರಕರಣವನ್ನು ಏಕ್‌ತರ್ಫಿ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಜಾಹೀರ ನೋಟೀಸು.
ಈ ಹೊತ್ತು ಕೋರ್ಟಿನ ಮೊಹರಿನೊಂದಿಗೆ ಹಾಗೂ ಆದೇಶದೊಂದಿಗೆ ಕೊಡಲ್ಪಟ್ಟಿರುತ್ತದೆ.
ನವಲಗುಂದ
ದಿನಾಂಕ: 30/04/2026
ಮಾನ್ಯ ಕೋರ್ಟ ಆಜ್ಞೆ ಮೇರೆಗೆ
ಸಹಿ/- ಶಿರಸ್ತೇದಾರರು,
ಜೆ.ಎಮ್.ಎಫ್.ಸಿ. ನ್ಯಾಯಾಲಯ ನವಲಗುಂದ.
ಸಹಿ/- (ಶ್ರೀ ಎಮ್.ಸಿ. ಗಂಗಾಧರಮಠ)
ವಕೀಲರು, ನವಲಗುಂದ

IN THE COURT DEPUTY COMMISSIONER, BALLARI
No. REV/APL/01/2026
BETWEEN :
Shri Chandrashekarappa Banagar son of late Sugappa R/o ward no 15, kalgudi street Kampli taluk .....Appellants
V/s
MS Sundari Sugars Ltd represented by its Managaing Director ward no 23, Kampli town Ballari District office address Sundari Sugars Ltd MV Nagar, left 4th cross Kappagal road Ballari & others .....Respondents

NOTICE/SUMMONS TO RESPONDENT NO. 2 to 6 UNDER ORDER 5 RULE 20 OF CPC 1908 BY WAY OF PAPER PUBLICATION

RESPONDENT NO. 2: Linguntla Jai Naidu R/o ward no 6th viniyaka nagar 2nd cross, sathyanarayana pet Kampli taluk Ballari District is hereby directed to take notice that;
RESPONDENT NO. 3: S M Gurushantaiah R/o ward no 6th viniyaka nagar 2nd cross, sathyanarayana pet Kampli taluk Ballari District is hereby directed to take notice that;
RESPONDENT NO. 4: S M Basavaraj son of S M Gurushantaiah R/o 6th main road ward no 17, SR Nagar Hospet, 583201 is hereby directed to take notice that;
RESPONDENT NO. 5: Lingaiah Jantanathappa R/o ward no 6th viniyaka nagar 2nd cross,, sathyanarayana pet Kampli taluk Ballari District is hereby directed to take notice that; &
RESPONDENT NO. 6: Kanitenani Sri Janaki Rao R/o ward no 6th viniyaka nagar 2nd cross,, sathyanarayana pet Kampli taluk Ballari District is hereby directed to take notice that ;

Whereas the Appellant in this case has filed an appeal against the order passed by the aside Assistant Commissioner, Ballari in No/Rev/Apl/227/2023-24 Dated:10/09/2024 pertaining to Sy.No. 1303/1 measuring 3.21 Acres of Kampli Village in Kampli Taluk.

Whereas, the notices sent through registered post acknowledgement due to the Respondent No. 2 to 6 has been returned as addressee not traceable.

Therefore, you are hereby informed that you are required to appear before this Court in person or through a pleader who shall be instructed and liable to answer all material questions on 06/05/2026 at 12:00 pm in the court of Deputy Commissioner, Ballari.

Take notice that in default of your appearance on the day above mentioned appeal will be heard and determined in your absence.

Given under my hand and seal of this court on this 24th day of april 2026.
Sd/- Deputy Commissioner Ballari



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	9	6	3	0	12	+0.832
ರಾಜಸ್ಥಾನ	9	6	3	0	12	+0.617
ಗುಜರಾತ್	9	5	4	0	10	-0.192
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	7	2	5	0	4	-0.736
ಲಖನೌ	8	2	6	0	4	-1.106

ಬೆಂಗಳೂರಿಗೆ ಸೋಲಿನಾಘಾತ | ರಾಯಲ್ ಓಟಕ್ಕೆ ತಡೆ | ಗಿಲ್, ಬಟ್ಲರ್, ಹೋಲ್ಡರ್ ಮಿಂಚಿನಾಟ

ಗುಜರಾತ್ ಆಟಕ್ಕೆ ಬಸವಳಿದ ಆರ್‌ಸಿಬಿ

ಅಹಮದಾಬಾದ್: ಬೆಂಗಳೂರು ತಂಡದ ರಾಯಲ್ ಓಟಕ್ಕೆ ಗುಜರಾತ್ ಟೈಟಾನ್ಸ್ ಬ್ರೇಕ್ ಹಾಕಿದೆ. ವೇಗಿ ಅರ್ಷದ್ ಖಾನ್, ಜೇಸನ್ ಹೋಲ್ಡರ್ ಅವರ ಮಾರಕ ಬೌಲಿಂಗ್ ದಾಳಿಗೆ ಕುಸಿದ ಆರ್‌ಸಿಬಿ, ಗಿಲ್ ಹಾಗೂ ಬಟ್ಲರ್ ಅಬ್ಬರದ ಮುಂದೆ ಮಂಕಾಯಿತು. ಅಹಮದಾಬಾದ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಶುಭಮನ್ ಪಡೆ 4 ವಿಕೆಟ್‌ಗಳಿಂದ ಗೆದ್ದಿದೆ.

ಬ್ಯಾಟಿಂಗ್ ಆಹ್ವಾನ ಪಡೆದ ಆರ್‌ಸಿಬಿ 19.2 ಓವರ್‌ಗಳಲ್ಲಿ 155 ರನ್‌ಗೆ ಪತನಗೊಂಡಿತು. ಪಡಿಕ್ಕಲ್ 40, ಕೊಹ್ಲಿ 28 ರನ್‌ಗಳಿಸಿದರು. ಗುಜರಾತ್ ಪರ ಅರ್ಷದ್ 3, ಹೋಲ್ಡರ್ ಮತ್ತು ರಶೀದ್ 4 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಗುಜರಾತ್ 15.5 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು.

ಕೊಹ್ಲಿಯಿಂದ ಅಬ್ಬರದ ಆರಂಭ: ಟಾಸ್ ಗೆದ್ದ ಗುಜರಾತ್ ಬೆಂಗಳೂರಿಗೆ ಬ್ಯಾಟಿಂಗ್ ಆಹ್ವಾನ ಕೊಟ್ಟಿತು. ಪಾಟಿದಾರ್ ಪಡೆ ಸಜ್ಜಾಯಿತು. ಮೊದಲಿಗೆ ವಿರಾಟ್ ಕೊಹ್ಲಿ ಅವರ ಬೌಂಡರಿಗಳ ಅಬ್ಬರ ಶುರುವಾಯಿತು. ಮೊದಲನೇ ಓವರ್‌ನಿಂದಲೇ ದಂಡಿಸುವ ಮನಸ್ಥಿತಿ ಕೊಹ್ಲಿ ಬ್ಯಾಟಿನಿಂದ ಗೋಚರಿಸಿದ್ದೇ ತಡ ಇತ್ತ ಜೇಕಬ್ ಬ್ಯಾಥಲ್ ಸಿರಾಜ್‌ಗೆ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ದೇವದತ್ತ ಪಡಿಕ್ಕಲ್ ಕೂಡ ಉತ್ತಮ ಬ್ಯಾಟಿಂಗ್ ಶುರು ಮಾಡಿದರು. ಕೊಹ್ಲಿ ಬೌಂಡರಿಗಳ ಅಬ್ಬರ. ಸಿರಾಜ್ ಎಸೆದ ಓವರ್‌ನಲ್ಲಿ ಬರೋಬ್ಬರಿ 5 ಬೌಂಡರಿ ಬಾರಿಸಿದರು. ಆದರೆ ಮುಂದಿನ ಓವರ್‌ನಲ್ಲೇ ವಿರಾಟ್(28; 13ಎ, 1ಸಿ) ರಬಾಡಗೆ ಕ್ಯಾಚಾದರು. ಪಾಟಿದಾರ್ ಮತ್ತು ಪಡಿಕ್ಕಲ್ ಕೊಂಚ ಹೊತ್ತು ಸೆಟ್ ಆಗುತ್ತಿದ್ದಂತೆ ಪವರ್ ಪ್ಲೇ ಮುಕ್ತಾಯಗೊಂಡಿತು. ಆರ್‌ಸಿಬಿ 59/2. ಅಂತಿಮ ಓವರ್‌ಗಳಲ್ಲಿ ಇಂಪ್ಯಾಕ್ಟ್ ಆಟಗಾರರಾಗಿ ವೆಂಕಟೇಶ್ ಅಯ್ಯರ್ ಬಂದರು. ಶೇಫರ್ಡ್ 17 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ವೆಂಕಟೇಶ್ ನಿಧಾನಗತಿ ಬ್ಯಾಟಿಂಗ್ ಶುರು ಮಾಡಿದರು. ಬ್ಯಾಟಿಂಗ್ ಗಿಳಿದ ವೇಗಿ ಭುವನೇಶ್ವರ್ ಕುಮಾರ್ ಎರಡು ಬೌಂಡರಿ ಬಾರಿಸುವಷ್ಟರಲ್ಲಿ 18 ಓವರ್‌ಗಳು ಮುಕ್ತಾಯಗೊಂಡವು. 15 ಬಾಲ್‌ಗಳಲ್ಲಿ 12 ರನ್ ಗಳಿಸಿದ ವೆಂಕಟೇಶ್ ಅಯ್ಯರ್ ಕ್ಯಾಚ್ ಆದರು. ಹ್ಯಾಜೆಲ್ವುಡ್ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದ ನಂತರ ಆರ್‌ಸಿಬಿ ಪತನಗೊಂಡಿತು. 19.2 ಓವರ್‌ಗಳಲ್ಲಿ 155 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರ್

ಆರ್‌ಸಿಬಿ 19.2 ಓವರ್‌ಗಳಲ್ಲಿ 155/10: ಪಡಿಕ್ಕಲ್ 40, ಕೊಹ್ಲಿ 28; ಅರ್ಷದ್ 22/3
ಗುಜರಾತ್ 15.5 ಓವರ್‌ಗಳಲ್ಲಿ 156/6: ಗಿಲ್ 43, ಬಟ್ಲರ್ 39; ಭುವನೇಶ್ವರ್ 28/3



ಕುಸಿದ ಆರ್‌ಸಿಬಿ

ಉತ್ತಮ ಆರಂಭ ಪಡೆದಿದ್ದ ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ ಭಾರೀ ಕುಸಿತ ಕಂಡಿತು. ತಂಡ 79 ರನ್ ಅನ್ನುವಷ್ಟರಲ್ಲಿ ಮೂರನೇ ವಿಕೆಟ್ ಕಳೆದುಕೊಂಡಿತು. ನಾಯಕ ರಜತ್ ಪಾಟಿದಾರ್ ಬೌಂಡರಿ-ಸಿಕ್ಸರ್ ಬಾರಿಸುತ್ತಲೇ ವಿವಾದಿತ ಕ್ಯಾಚ್‌ಗೆ ಬಲಿಯಾದರು. ಒತ್ತಡಕ್ಕೆ ಸಿಲುಕಿಕೊಂಡ ಆರ್‌ಸಿಬಿಗೆ ಪಡಿಕ್ಕಲ್ ಆಸರೆಯಾದರು. ಮಧ್ಯಮ ಓವರ್‌ಗಳಲ್ಲಿ ಸೆಟ್ ಆಗುವ ಔಪಚಾರಿಕತೆಗೆ ಬಿದ್ದ ಅವರು, ಒಂದೆರಡು ಆಕರ್ಷಕ ಬೌಂಡರಿಗಳನ್ನೂ ಬಾರಿಸಿದರು. ಜಿತೇಶ್ ಶರ್ಮ ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ಸ್ಫೋಟಕ ಬ್ಯಾಟಿಗ ಟೀಮ್ ಡೆವಿಡ್ ಆಟ 9 ರನ್‌ಗೆ ಸೀಮಿತವಾಗಿತ್ತು. ಕೃಣಾಲ್ ಪಾಂಡ್ಯ 4 ರನ್‌ಗೆ ವಿಕೆಟ್ ಒಪ್ಪಿಸಿದರು. ಅಲ್ಲಿ ಪಡಿಕ್ಕಲ್‌ಗೆ ಯಾರೊಬ್ಬರೂ ಸಾಥ್ ಕೊಡಲಿಲ್ಲ. ಮಧ್ಯಮ ಓವರ್ ತನಕ ಬ್ಯಾಟಿಂಗ್ ಮಾಡಿದ ಪಡಿಕ್ಕಲ್ 40 ರನ್‌ಗೆ ಔಟಾದರು. ಮಧ್ಯಮ ಓವರ್‌ಗಳಲ್ಲಿ ಆರ್‌ಸಿಬಿಯ ಬ್ಯಾಟಿಂಗ್ ಪಡೆಯೇ ಮುರಿದು ಬಿತ್ತು. ಒಟ್ಟು 76 ರನ್ ಗಳಿಸಿದ ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡಿತು.

ಗುಜರಾತ್ ಅಬ್ಬರ

ಗುರಿ ಬೆನ್ನತ್ತಿದ ಗುಜರಾತ್‌ಗೆ ಸ್ಫೋಟಕ ಆರಂಭ ಸಿಕ್ಕಿತು. ತಮ್ಮ ಸ್ವಾಭಾವಿಕ ಆಟಕ್ಕೂ ಮೀರಿ ಬಿರುಸಿನ ಬ್ಯಾಟಿಂಗ್ ಮಾಡಿದ ಗಿಲ್ ಸೆಟ್ ಆಗುವ ಔಪಚಾರಿಕತೆಗೆ ಬೀಳದೆ ದಂಡಿಸಿದರು. ಆದರೆ ಮತ್ತೊಂದು ಬದಿಯಲ್ಲಿ ಸ್ಫೋಟಕ ಬ್ಯಾಟರ್ ಸುದರ್ಶನ್ 6 ರನ್‌ಗೆ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ಜಾಸ್ ಬಟ್ಲರ್ ಕೂಡ ಗಿಲ್‌ನೊಂದಿಗೆ ದಂಡಿಸುವ ಯೋಜನೆಯಲ್ಲಿ ಸೇರಿಕೊಂಡರು. ಪವರ್‌ಪ್ಲೇ ಉದ್ದಕ್ಕೂ ಇಬ್ಬರೂ ಆರ್‌ಸಿಬಿ ಬೌಲಿಂಗ್ ಪಡೆಯ ಬೆವರಿಳಿಸಿದರು. ಆರಂಭಿಕ ಓವರ್‌ಗಳಲ್ಲಿ ಗುಜರಾತ್ 69 ರನ್‌ಗಳಿಸಿತು. ಭುವನೇಶ್ವರ್ ಕುಮಾರ್ 2 ವಿಕೆಟ್ ಕಿತ್ತರು. ಮಧ್ಯಮ ಓವರ್‌ಗಳಲ್ಲಿ ಬಟ್ಲರ್ ಅಬ್ಬರ. ಸಿಕ್ಸರ್ ಮತ್ತು ಬೌಂಡರಿಗಳೊಂದಿಗೆ ಅಬ್ಬರಿಸಿದ ಅವರಿಗೆ ಗಿಫ್ಟ್ ಕೊಟ್ಟ ಜಿತೇಶ್ ಕ್ಯಾಚ್ ಬಿಟ್ಟರು.

ಆರ್‌ಸಿಬಿ ಕಂಬ್ಯಾಕ್

19 ಬಾಲ್‌ಗಳಲ್ಲಿ ಬಾನೆತ್ತರದ 4 ಸಿಕ್ಸರ್, 2 ಸ್ಫೋಟಕ ಬೌಂಡರಿ ಬಾರಿಸಿ ಬಟ್ಲರ್ ಪೆವಿಲಿಯನ್ ಹೊರಟರು. ಆದರೆ ಆರ್‌ಸಿಬಿಗೆ ಗೆಲುವು ದೂರವಿತ್ತು. ಗುಜರಾತ್‌ಗೆ ಉಳಿದ ಬಾಲ್‌ಗಿಂತಲೂ ಕಡಿಮೆ ರನ್ ಬೇಕಿದ್ದವು. 11ನೇ ಓವರ್‌ವರೆಗೂ ಗುಜರಾತ್ ಗೆಲುವಿನತ್ತ ಸಾಗಿತ್ತು. 11ನೇ ಓವರ್ ಮಾಡಲು ಬಂದ ರೋಮಾರಿಯೊ ಶೇಫರ್ಡ್ ಸರಸರನೇ 2 ವಿಕೆಟ್ ಕಿತ್ತರು. ಮಧ್ಯಮ ಕ್ರಮಾಂಕದಲ್ಲಿ ವಾಷಿಂಗ್ಟನ್ ಸುಂದರ್ 12 ರನ್‌ಗೆ, ಶಾರುಖ್ ಖಾನ್ 8 ರನ್‌ಗೆ ವಿಕೆಟ್ ಒಪ್ಪಿಸಿದರು. ರಾಹುಲ್ ಟೇವಾಟಿಯ, ಜೇಸನ್ ಹೋಲ್ಡರ್ ಮೇಲೆ ಪಂದ್ಯ ಅವಲಂಬಿತವಾಯಿತು. 9 ಓವರ್‌ಗಳಲ್ಲಿ 34 ರನ್ ಮಾತ್ರ ಬೇಕಾಗಿದ್ದವು. ಮುಂದಿನ ಓವರ್‌ನಲ್ಲಿ ಮತ್ತೆರಡು ಬೌಂಡರಿ ಬಾರಿಸಿದ ಟೇವಾಟಿಯ(27*) ಪಂದ್ಯ ಕಸಿದರು. ಉಳಿದ ರನ್‌ಗಳನ್ನು ಬಾರಿಸಿ ಪಂದ್ಯ ಗೆಲ್ಲಿಸಿದರು.

ಕಿರುಸುದ್ದಿ

ಏಕದಿನ ತಂಡದಿಂದ ಪಂತ್ ಔಟ್?

ಮುಂಬೈ: ಬ್ಯಾಟಿಂಗ್ ಲಯಕ್ಕಾಗಿ ಪರದಾಡುತ್ತಿರುವ ಲಖನೌ ಸೂಪರ್ ಜೇಂಟ್ಸ್ ತಂಡದ ನಾಯಕ ರಿಷಭ್ ಪಂತ್‌ಗೆ ಭಾರೀ ಹಿನ್ನಡೆಯಾಗಿದೆ. ಮುಂಬರಲಿರುವ ಏಕದಿನ ಪಂದ್ಯಗಳಲ್ಲಿ ಅವರನ್ನು ಕೈಬಿಡಲು ಚಿಂತನೆ ನಡೆದಿದೆ. ಅಜಿತ್ ಅಗರ್ಕರ್ ಈ ಬಗ್ಗೆ ಚಿಂತನೆ ನಡೆಸುತ್ತಿದ್ದು, ಅವರ ಬದಲಿಗೆ ಸಂಜು ಸ್ಯಾಮ್ಸನ್ ಅವರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.



ಕಳೆದ ಎರಡು ಆವೃತ್ತಿಗಳಿಂದಲೂ ರಿಷಭ್ ಪಂತ್ ಅಷ್ಟೊಂದು ಪ್ರಭಾವಿ ಪ್ರದರ್ಶನ ನೀಡಿಲ್ಲ. ಈ ಆವೃತ್ತಿಯ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿರುವ ಅವರು, ಲಯದ ಹುಡುಕಾಟದಲ್ಲಿದ್ದಾರೆ. ಈ ನಿಟ್ಟಿನಲ್ಲಿ ಅವರ ಕೈಬಿಡಲಾಗುವುದು ಎಂದು ಹೇಳಲಾಗುತ್ತಿದೆ. ಅದೇ ಮತ್ತೊಂದು ಕಡೆ ಟಿ20 ವಿಶ್ವಕಪ್ ಹಾಗೂ ನಡೆಯುತ್ತಿರುವ ಐಪಿಎಲ್‌ನಲ್ಲಿ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಭರ್ಜರಿ ಪ್ರದರ್ಶನ ನೀಡುತ್ತಿದ್ದಾರೆ. ಪಂತ್ ಬದಲಿಗೆ ಸಂಜುಗೆ ಅವಕಾಶ ನೀಡುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ವಾಸ್ತವವಾಗಿ ಏಕದಿನ ತಂಡದಲ್ಲಿ ರಿಷಭ್ ಪಂತ್ ರಾಹುಲ್ ಅವರ ಬ್ಯಾಕಪ್ ಆಗಿದ್ದರು.

ಜೂಡೋದಲ್ಲಿ ಅಧಿಕ ಪದಕದ ಗುರಿ: ಯತೀಶ್

ಮಂಗಳೂರು: ಜೂಡೋ ಕ್ರೀಡೆಯ ಅಭಿವೃದ್ಧಿಗಾಗಿ ಕಾರ್ಯತಂತ್ರ ರೂಪಿಸಿ, ಅದನ್ನು ಸರಿಯಾದ ಹಾದಿಗೆ ಮರಳಿಸುವ ನಿಟ್ಟಿನಲ್ಲಿ ತಳಮಟ್ಟದಲ್ಲಿ ವಿವಿಧ ಉಪಕ್ರಮಗಳನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಅಲ್ಲದೆ ಜೂಡೋ ಸ್ಪೋರ್ಟ್ಸ್‌ನಲ್ಲಿ ಭಾರತಕ್ಕೆ ಗರಿಷ್ಠ ಪದಕ ಗೆಲ್ಲಿಸುವ ಗುರಿಯೊಂದಿಗೆ ಆಂದೋಲನ ಆರಂಭಿಸಲಾಗಿದೆ ಎಂದು ಅಂತಾರಾಷ್ಟ್ರೀಯ ರೆಫ್ರಿ ಮತ್ತು ಕರ್ನಾಟಕ ಸ್ಟೇಟ್ ಜೂಡೋ ಸ್ಪೋರ್ಟ್ಸ್ ಎಸೋಸಿಯೇಶನ್ ಅಧ್ಯಕ್ಷ ಯತೀಶ್ ನಾರಾಯಣ ಬಂಗೇರ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ 2030ರಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು 2036ರಲ್ಲಿ ನಡೆಯುವ ಒಲಂಪಿಕ್ಸ್‌ನಲ್ಲಿ ಭಾರತ ತಂಡ ಜೂಡೋ ಸ್ಪೋರ್ಟ್ಸ್‌ನಲ್ಲಿ ಪದಕ ಗೆಲ್ಲುವುದಕ್ಕೆ ಪೂರಕವಾಗಿ ಕರ್ನಾಟಕವನ್ನು ದೇಶದ ಜೂಡೋದ ಶಕ್ತಿಕೇಂದ್ರವಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರಕ್ಕೆ ಸಮಗ್ರ ಪ್ರಸ್ತಾವನೆಯೊಂದನ್ನು ಸಲ್ಲಿಸಲಾಗಿದೆ ಎಂದರು.

» ಕರ್ನಾಟಕ ಜೂಡೋ ಶಕ್ತಿಯಾಗಿಸಲು ಹೊಸ ಆಂದೋಲನ
» ಕ್ರೀಡಾಪಟುಗಳಿಗೆ ವಿಶೇಷ ತರಬೇತಿ ಯೋಜನೆ

ವಿವಿಧೆಡೆ ತರಬೇತಿ ಕೇಂದ್ರ: ಉಡುಪಿ-ಮಂಗಳೂರು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಅತ್ಯಾಧುನಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಹಾಲಿ ಕ್ರೀಡಾ ಪಟುಗಳ ಆ ವೇಳೆ ನಿವೃತ್ತಿ ಅಂಚಿಗೆ ಬರುವುದರಿಂದ ಹೊಸದಾಗಿ ಕ್ರೀಡಾಪಟುಗಳಿಗೆ ತರಬೇತಿ ನೀಡಿ ಸಿದ್ಧಪಡಿಸಲಾಗುವುದು ಎಂದರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಯುವ ಕ್ರೀಡಾಪಟುಗಳಿಗೆ ತರಬೇತಿ,, ಕಾರ್ಪೊರೇಟ್ ಪ್ರಾಯೋಜಕತ್ವ ಮತ್ತು ಕ್ರೀಡಾಪಟುಗಳ ಕಲ್ಯಾಣ, ಅಡಾಪ್ಟ್ ಎ ಚಾಂಪಿಯನ್, ಸಿಎಸ್‌ಆರ್ ಉಪಕ್ರಮಗಳ ಮೂಲಕ ಕ್ರೀಡಾಪಟುಗಳ ಪೋಷಣೆ, ಸಲಕರಣೆ ಮತ್ತು ಕ್ರೀಡಾಪಟುಗಳ ಉದ್ಯೋಗ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು. ಈ ನಿಟ್ಟಿನಲ್ಲಿ ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಲಾಗುವುದು ಎಂದವರು ತಿಳಿಸಿದರು.

ರಿಯಾನ್ ಪರಾಗ್‌ಗೆ ದಂಡ

ಮುಂಬೈ: ಪಂದ್ಯದ ವೇಳೆ ವ್ಯಾಪಿಂಗ್ ಮಾಡಿರುವ ರಿಯಾನ್ ಪರಾಗ್‌ಗೆ ಭಾರತೀಯ ಕ್ರಿಕೆಟ್ ಸಂಸ್ಥೆ ದಂಡ ವಿಧಿಸಿದೆ. ಇ-ಸಿಗರೇಟ್ ಸೇದಿದ ಬೆನ್ನಲ್ಲೇ ರಾಜಸ್ಥಾನ ರಾಯಲ್ಸ್ ತಂಡದ ನಾಯಕನಿಗೆ ಪಂದ್ಯದ ಶೇ. 25ರಷ್ಟು ಮ್ಯಾಚ್ ಶುಲ್ಕವನ್ನು ದಂಡವನ್ನಾಗಿ ವಿಧಿಸಿದೆ.



ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದ ವೇಳೆ ಅವರು ಡ್ರೆಸ್ಸಿಂಗ್ ರೂಮ್‌ನಲ್ಲಿ ಇ-ಸಿಗರೇಟ್ ಸೇದುವ ದೃಶ್ಯ ಸೆರೆಯಾಗಿತ್ತು. ಇದು ಐಪಿಎಲ್ ಮಾನದಂಡಗಳ ಆರ್ಟಿಕಲ್ 2.21ರ ಪ್ರಕಾರ ಅಪರಾಧವಾಗಿದೆ.

ಪಂದ್ಯ ವೀಕ್ಷಿಸಿದ ದಿಲ್ಲಿ ಅಭಿಮಾನಿಗಳು ಅಪಘಾತದಲ್ಲಿ ನಿಧನ

ಹೊಸದಿಲ್ಲಿ: ದಿಲ್ಲಿ ಹಾಗೂ ಬೆಂಗಳೂರು ನಡುವಿನ ಪಂದ್ಯ ವೀಕ್ಷಣೆ ಮಾಡಿಕೊಂಡು ಮನೆಗೆ ಹೊರಡುತ್ತಿದ್ದ ಕ್ಯಾಪಿಟಲ್ಸ್ ಅಭಿಮಾನಿಗಳಿಬ್ಬರು ಅಪಘಾತದಲ್ಲಿ ಮೃತಪಟ್ಟರು. ದಿಲ್ಲಿಯಲ್ಲಿ ನಡೆದಿದ್ದ ಬೆಂಗಳೂರು ವಿರುದ್ಧದ ಪಂದ್ಯವನ್ನು ದಿಲ್ಲಿ ಕ್ಯಾಪಿಟಲ್ಸ್ ತಂಡದ ಅಭಿಮಾನಿಗಳಾದ ಅಭವ್(14) ಹಾಗೂ ಯಾಗ್ಯಾ(20) ವೀಕ್ಷಣೆಗೆ ಬಂದಿದ್ದರು. ಮರಳಿ ಮನೆಗೆ ಹೋಗುವಾಗ ಬೈಕು ಮತ್ತು ಟ್ರಕ್ಕಿನ ನಡುವೆ ಅಪಘಾತವಾಗಿದೆ. ಇದೇ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿದೆ. ಚಿಕಿತ್ಸೆ ಫಲಿಸದೆ ಇಬ್ಬರೂ ಸಾವಿಗೀಡಾಗಿದ್ದಾರೆ. ದಿಲ್ಲಿ ಕ್ಯಾಪಿಟಲ್ಸ್ ಸೇರಿದಂತೆ ಎಲ್ಲಾ ಫ್ರಾಂಚೈಸಿಗಳೂ ಇಬ್ಬರ ಸಾವಿಗೆ ಸಂತಾಪ ಸಲ್ಲಿಸಿವೆ.

ಮುಂಬೈಗೆ ಹೆಡ್ ಏಕ್



ಸಂಕ್ಷಿಪ್ತ ಸ್ಕೋರ್

ಮುಂಬೈ 20 ಓವರ್‌ಗಳಲ್ಲಿ 243/5: ರಯಾನ್ 123★, ಪಾಂಡ್ಯ 31; ಪ್ರಫುಲ್ 54/2
ಹೈದರಾಬಾದ್ 18.4 ಓವರ್‌ಗಳಲ್ಲಿ 249/4: ಹೆಡ್ 76, ಕ್ಲಾಸೆನ್ 65★, ಸಲೀಲ್ 30★; ಫಜನ್‌ಫರ್ 51/2

ಮುಂಬೈ: ವಿಶ್ವದ ನಂಬರ್ 1 ಬೌಲರ್ ಜಸ್‌ಪ್ರೀತ್ ಬೂಮ್ರಾ, ಭರವಸೆಯ ವೇಗಿಗಳಾದ ಟ್ರೆಂಟ್ ಬೋಲ್ಟ್, ಹಾರ್ದಿಕ್ ಪಾಂಡ್ಯ ಅಂಥ ಮಹಾ ಬೌಲರ್‌ಗಳನ್ನು ಹೊಂದಿದ್ದ ಮುಂಬೈ ಇಂಡಿಯನ್ಸ್ ತಂಡವು 244 ರನ್‌ಗಳನ್ನು ಉಳಿಸಿಕೊಳ್ಳಲು ವಿಫಲವಾಗಿದ್ದು, ಸನ್‌ರೈಸರ್ಸ್ ಹೈದರಾಬಾದ್ ತಂಡ 6 ವಿಕೆಟ್‌ಗಳ ಜಯಭೇರಿ ಬಾರಿಸಿತು.

ಈ ಬಾರಿಯ ಐಪಿಎಲ್‌ನಲ್ಲಿ ತೀರಾ ಹಿನ್ನಡೆಯೊಂದಿಗೆ ಕಂಗೆಟ್ಟಿರುವ ಮುಂಬೈ ಇಂಡಿಯನ್ಸ್ ತಂಡವು ಆರನೇ ಸೋಲು ಕಂಡಿತು. ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 243 ರನ್ ಗಳಿಸಿತು. ರಯಾನ್ ರಿಕೆಲ್ಟನ್(123★) ಅಬ್ಬರದ ಶತಕ ಬಾರಿಸಿದರು. ಹಾರ್ದಿಕ್(31) ಮಿಂಚಿದ್ದರು. ಗುರಿ ಬೆನ್ನತ್ತಿದ ಹೈದರಾಬಾದ್ 18.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 249 ರನ್ ಗಳಿಸಿ ಗುರಿ ಮುಟ್ಟಿತು. ಟ್ರಾವಿಸ್ ಹೆಡ್ 76 ರನ್ ಗಳಿಸಿದರು. ಹೆನ್ರಿಕ್ ಕ್ಲಾಸೆನ್ 65★ ರನ್ ಬಾರಿಸಿದರು. ಸಲೀಲ್ ಅರೋರಾ(30★) ಪಂದ್ಯ ಮುಗಿಸಿದರು. ಟ್ರಾವಿಸ್ ಹೆಡ್ ಪಂದ್ಯದ ಹೀರೋ. ಕ್ಲಾಸೆನ್ ಗೆಲುವಿನಲ್ಲಿ ಮಿಂಚಿದರು. ಸಲೀಲ್ ಅರೋರಾ ಸ್ಫೋಟಕ ಬ್ಯಾಟಿಂಗ್ ಮಾಡಿ ಗೆಲುವಿನ ರೂವಾರಿಗಳಲ್ಲಿ ಒಬ್ಬರಾದರು. ಮುಂಬೈ ತಂಡದ ಪ್ರತಿಯೊಬ್ಬ ಬೌಲರ್ ಕೂಡ 10ಕ್ಕೂ ಹೆಚ್ಚು ಎಕನಾಮಿ ಹೊಂದಿದ್ದರು. ಫಜನ್‌ಫರ್ ಮಾತ್ರ 2 ವಿಕೆಟ್ ಪಡೆದರು. ಬ್ಯಾಟಿಂಗ್ ಮಾಡುವ ವೇಳೆ ಮುಂಬೈ ಪರ ರಯಾನ್ ಅಬ್ಬರಿಸಿದರು.

ರನ್ ಮಟ್ಟ


ಪವರ್‌ಪ್ಲೇನಲ್ಲಿ ಆಕಡೆ ರಯಾನ್ ಅಬ್ಬರಿಸಿದರು. ಅವರಿಗೆ ಜ್ಯಾಕ್ಸ್ ಸಾಥ್ ಸಿಕ್ಕ ನಂತರ ಮುಂಬೈ 78 ರನ್ ಗಳಿಸಿತ್ತು. ಇತ್ತ ಹೈದರಾಬಾದ್ ಪರ ಇಬ್ಬರೂ ಬ್ಯಾಟರ್‌ಗಳು ಬಿರುಸಿನ ಬ್ಯಾಟಿಂಗ್ ಮಾಡಿದರು. ಇಷ್ಟು ದಿನ ಮರೆ ಮಾಚಿದ್ದ ಹೆಡ್ ಅಸಲು ಆಟ ಬಯಲಾಯಿತು. ಹೈದರಾಬಾದ್ 92 ರನ್ ಗಳಿಸಿತು. ಇದರಲ್ಲಿ ಹೆಡ್ ಅರ್ಧಶತಕ ಪೂರೈಸಿಕೊಂಡರು. ಮಧ್ಯಮ ಓವರ್‌ಗಳಲ್ಲಿ ರಿಕೆಲ್ಟನ್ ಅವರದ್ದೇ ಅಬ್ಬರ. ಸಿಕ್ಸರ್ ಹಾಗೂ ಬೌಂಡರಿಗಳೊಂದಿಗೆ ಅಬ್ಬರಿಸಿ ಶತಕ ಪೂರೈಸಿದರು. ಮುಂಬೈ ಮಧ್ಯಮ ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡಿತಾದರೂ 124 ರನ್ ಗಳಿಸಿತು. ಹೈದರಾಬಾದ್‌ಗೆ ನಾಗಾಲೋಟ, ಹೆಡ್ 76, ಅಭಿ 46 ರನ್ ಗಳಿಸಿ ಅರ್ಧ ಕೆಲಸ ಮುಗಿಸಿದ್ದರು. ಇಬರೂ ವಿಕೆಟ್ ಒಪ್ಪಿಸಿದ ನಂತರ ಕಿಶನ್ ಹೆಚ್ಚಿನ ಕೊಡುಗೆ ನೀಡಲೇ ಇಲ್ಲ. ಆದರೆ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಹೈದರಾಬಾದ್ 18 ಸಿಕ್ಸರ್‌ಗಳನ್ನು ಸುರಿಯಿತು. ಮಧ್ಯಮ ಓವರ್‌ಗಳಲ್ಲಿ 123 ರನ್ ಆದವು. ಡೆತ್ ಓವರ್‌ಗಳಲ್ಲಿ ಮುಂಬೈ ಪರ ಹಾರ್ದಿಕ್ ಪಾಂಡ್ಯ ಅಬ್ಬರಿಸಿದರು. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸುವ ಕೆಲಸ ಮಾಡಿದರು. ರಯಾನ್ ಕೂಡ ಒಂದಿಷ್ಟು ಬೌಂಡರಿಗಳನ್ನು ಬಾರಿಸಿದ ನಂತರ ಮುಂಬೈ ಅಲ್ಲಿ 41 ರನ್ ಗಳಿಸಿತು. ಇತ್ತ ಹೈದರಾಬಾದ್ ಡೆತ್‌ನಲ್ಲಿ 37 ರನ್ ಗಳಿಸಬೇಕಿತ್ತು. ಕ್ಲಾಸೆನ್ ಅರ್ಧ ಶತಕ ಬಾರಿಸಿದ್ದರು. ಸಲೀಲ್ ಅರೋರಾ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. 30 ರನ್ ಬಾರಿಸಿದ ಅವರು, ಹೈದರಾಬಾದ್ ಮಡಿಲಿಗೆ ಪಂದ್ಯ ಹಾಕಿದರು. ಡೆತ್ ಮುಗಿಯುವ ಹೊತ್ತಿಗೆ ಹೈದರಾಬಾದ್ ಪಂದ್ಯ ಗೆದ್ದಿತು.

ಥಾಮಸ್: ಭಾರತಕ್ಕೆ ತೈವಾನ್ ಎದುರು

ಹೊಸದಿಲ್ಲಿ: ಥಾಮಸ್ ಕಪ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡವು ತೈವಾನ್ ವಿರುದ್ಧ ಮುಖಾಮುಖಿಯಾಗಲಿದೆ. ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಡ್ರಾ ಬಳಿಕ ಈ ಪೈಪೋಟಿ ನಿಗದಿಯಾಗಿದೆ. 2022ರ ಚಾಂಪಿಯನ್ ಭಾರತ ತಂಡವು ತನ್ನ ಅಭಿಯಾನವನ್ನು ಕೆನಡಾ ವಿರುದ್ಧ 4-1 ಗೆಲುವಿನಿಂದ ಆರಂಭಿಸಿ, ಆಸ್ಟ್ರೇಲಿಯಾ ವಿರುದ್ಧ 5-0 ಅಂತರದ ಭರ್ಜರಿ ಜಯ ಸಾಧಿಸಿತು. ಆದರೆ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಚೀನಾ ವಿರುದ್ಧ 2-3 ಅಂತರದಲ್ಲಿ ಸೋಲು ಕಂಡಿತು.

ಭಾರತ, ಗುಂಪು ಎ'ಯಲ್ಲಿ ಹಾಲಿ ಚಾಂಪಿಯನ್ ಚೀನಾ ಹಿಂದೆ ಎರಡನೇ ಸ್ಥಾನ ಪಡೆದರೆ, ಚೈನೀಸ್ ತೈಪೆ ಗುಂಪು ಸಿ'ಯಲ್ಲಿ ಅಗ್ರಸ್ಥಾನ ಪಡೆದಿದೆ. ಇತರೆ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಚೀನಾ ಮಲೇಷ್ಯಾ, ಥೈಲ್ಯಾಂಡ್ ಆತಿಥೇಯ ಡೆನ್ಮಾರ್ಕ್ ಮತ್ತು ಜಪಾನ್ ಫ್ರಾನ್ಸ್ ಮುಖಾಮುಖಿಯಾಗಲಿವೆ. ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ರನ್ನರ್‌ಅಪ್ ಆಗಿ ಬಂದಿರುವ ಆಯುಷ್ ಶೆಟ್ಟಿ ಉತ್ತಮ ಲಯದಲ್ಲಿದ್ದು, ಮೂರು ಸಿಂಗಲ್ಸ್ ಪಂದ್ಯಗಳನ್ನೂ ಗೆದ್ದಿದ್ದಾರೆ. ಆದರೆ ಭಾರತದ ಪ್ರಮುಖ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್, ಕೆನಡಾದ ವಿಕ್ಟರ್ ಲೈ ಹಾಗೂ ಚೀನಾದ ಲಿ ಶಿ ಫೆಂಗ್ ವಿರುದ್ಧ ಸೋಲು ಅನುಭವಿಸಿದ್ದಾರೆ.

ಯಾರು V/S ಯಾರು?: ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್-ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಚೀನಾದ ಲಿಯಾಂಗ್ ವೇಯ್ ಕೆಂಗ್ ವಾಂಗ್ ಚಾಂಗ್ ವಿರುದ್ಧ 13-21, 21-13, 24-26 ಅಂತರದಲ್ಲಿ ಹೋರಾಟದ ಸೋಲು ಕಂಡು ನಾಕೌಟ್ ಹಂತಕ್ಕೆ ಪ್ರವೇಶಿಸುತ್ತಿದೆ. ಅನುಭವಿಗಳಾದ ಕಿಡಂಬಿ ಶ್ರೀಕಾಂತ್ ಮತ್ತು ಎಚ್. ಎಸ್. ಪ್ರಣಯ್ ತಂಡದಲ್ಲಿದ್ದರೂ, ಕ್ವಾರ್ಟರ್ ಫೈನಲ್‌ನಲ್ಲಿ ಭಾರತವನ್ನು ಗೆಲುವಿನತ್ತ ಮುನ್ನಡೆಸುವ ಹೊಣೆ ಲಕ್ಷ್ಯ, ಆಯುಷ್ ಹಾಗೂ ಸಾತ್ವಿಕ್-ಚಿರಾಗ್ ಜೋಡಿಯ ಮೇಲಿದೆ. ಚೈನೀಸ್ ತೈಪೆ ತಂಡದಲ್ಲಿ ವಿಶ್ವ ಕ್ರಮಾಂಕ 6ರ ಚೌ ತಿಯೆನ್ ಚೆನ್, 8ರ ಲಿನ್ ಚುನ್-ಯಿ ಮತ್ತು 21ರ ಚಿ ಯು ಜೆನ್ ಪ್ರಮುಖ ಸಿಂಗಲ್ಸ್ ಆಟಗಾರರು. ಇತ್ತೀಚಿನ ಆಲ್ ಇಂಗ್ಲೆಂಡ್ ಓಪನ್‌ನಲ್ಲಿ ಚುನ್-ಯಿ, ಲಕ್ಷ್ಯ ಸೇನ್ ಅವರನ್ನು ಸೋಲಿಸಿದ್ದರು. ಇದಲ್ಲದೆ 2025ರ ಆಲ್ ಇಂಗ್ಲೆಂಡ್ ರನ್ನರ್‌ಅಪ್ ಚಿಯಾ ಹಾವೋ ಲೀ ಕೂಡ ಸಿಂಗಲ್ಸ್ ಆಯ್ಕೆಯಾಗಿ ಇದ್ದಾರೆ. ಡಬಲ್ಸ್‌ನಲ್ಲಿ ಚಿಯು ಹ್ಸಿಯಾಂಗ್ ಚಿಹ್ ವಾಂಗ್ ಚಿ-ಲಿನ್ ಮೊದಲ ಜೋಡಿ ಆಗಿದ್ದು, ಲಿಯು ಕ್ವಾಂಗ್ ಹೆಂಗ್ ಯಾಂಗ್ ಪೊ ಹಾನ್ ಎರಡನೇ ಜೋಡಿಯಾಗಿದ್ದಾರೆ.



ಚೀನಾ ವಿರುದ್ಧದ ಲೀಗ್ ಹಂತ ಪಂದ್ಯದಲ್ಲಿ ಸೋಲು

ಗುಂಪು ಹಂತದಲ್ಲಿ ಚೈನೀಸ್ ತೈಪೆ ಸ್ವೀಡನ್ ವಿರುದ್ಧ 5-0 ಅಂತರದ ಜಯ ಸಾಧಿಸಿತು. ಕೊರಿಯಾ ವಿರುದ್ಧ 2-0 ಮುನ್ನಡೆಯಿದ್ದರೂ ಸೋಲು ಕಂಡಿತು. ಆದರೆ ಕೊನೆಯ ಪಂದ್ಯದಲ್ಲಿ ಡೆನ್ಮಾರ್ಕ್ ವಿರುದ್ಧ 3-2 ಗೆದ್ದು ಗುಂಪಿನ ಅಗ್ರಸ್ಥಾನವನ್ನು ಕಾಪಾಡಿಕೊಂಡಿತು. ಆ ಪಂದ್ಯದಲ್ಲಿ ಚಿ ಯು ಜೆನ್ ಐದು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿಕೊಂಡು ಡಿಟ್ಲೆವ್ ಜೇಗರ್ ಹೋಮ್ ವಿರುದ್ಧ 21-11, 9-11, 27-25 ಅಂತರದಲ್ಲಿ ಗೆದ್ದು ತಂಡಕ್ಕೆ ನಿರ್ಣಾಯಕ ಜಯ ತಂದುಕೊಟ್ಟರು.

ಗೆಲುವಿನ ಲಯಕ್ಕೆ ಮರಳೀತೇ ದಿಲ್ಲಿ?

ಜೈಪುರ: ಯಾರೂ ಸೋಲಿಸಲಾಗದ ಪಂಜಾಬ್ ಕಿಂಗ್ಸ್ ತಂಡವನ್ನು ಸೋಲಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸಿ ಕೊಂಡಿರುವ ರಾಜಸ್ಥಾನ ರಾಯಲ್ಸ್ ತಂಡವು ಶುಕ್ರವಾರದ ಐಪಿಎಲ್ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲು ಸಿದ್ಧವಾಗಿದೆ. ಅರ್ಧಾವಧಿಯ ಐಪಿಎಲ್ ಮುಕ್ತಾಯಗೊಂಡಿರುವ ನಡುವೆ ತಂಡಗಳ ಪೈಪೋಟಿ ಈಗ ಹೆಚ್ಚಿದ್ದು, ಟೇಬಲ್ ಹೊಡೆದಾಟ ಶುರುವಾಗಿದೆ. ರಾಜಸ್ಥಾನಕ್ಕೆ ಹೆಡೆಮುರಿ ಕಟ್ಟುವರಿಲ್ಲ. ಗೆಲುವುಗಳೊಂದಿಗೆ ನಾಗಾಲೋಟ ಮುಂದುವರಿಸಿದೆ. ಕಳೆದ ಪಂದ್ಯದಲ್ಲಿ ಬಲಿಷ್ಠ ಪಂಜಾಬ್ ತಂಡವನ್ನು ಸೋಲಿಸಿ ಮೆರೆದಾಡಿದೆ. ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬೆಂಗಳೂರು ತಂಡದೊಂದಿಗೆ ಹೀನಾಯ ಸೋಲನುಭವಿಸಿದೆ. ಮುಖ್ಯವಾಗಿ ದಿಲ್ಲಿಗೆ ಪ್ಲೇಆಫ್‌ಗೇರಲು ಎಲ್ಲಾ ಪಂದ್ಯಗಳನ್ನು ಗೆಲ್ಲುವುದು ಅನಿವಾರ್ಯವಾಗಿದೆ. ಗೆಲುವಿನ ಹಳಿಗೆ ಮರಳುವ ತವಕ ದಿಲ್ಲಿಗಿದ್ದರೆ, ರಾಜಸ್ಥಾನಕ್ಕೆ ಗೆಲುವಿನೋಟದ ಸವಾಲಿದೆ.

ರಾಜಸ್ಥಾನಕ್ಕೆ ಭರವಸೆ: ತಂಡದಲ್ಲಿ ಬಲವಾದ ಬದಲಾವಣೆ ಮಾಡಿಕೊಂಡಿರುವ ರಾಜಸ್ಥಾನ ಈ ಬಾರಿ ಭರ್ಜರಿ ಪ್ರದರ್ಶನ ನೀಡುತ್ತಿದೆ. ಪ್ರತಿ ಬೌಲರ್ ಅನ್ನು ದಂಡಿಸುತ್ತಿರುವ ವೈಭವ್ ಸೂರ್ಯವಂಶಿಗೆ ಯಶಸ್ವಿ ಜೈಸ್ವಾಲ್ ಸಾಥ್ ಸಿಗುತ್ತಿದೆ. ಕಳೆದ ಪಂದ್ಯದಲ್ಲಿ ಫೆರೀರಾ ಕೂಡ ಮಿಂಚಿರುವುದು ವಿಶ್ವಾಸ ಹೆಚ್ಚಿಸಿದೆ. ಜಡೇಜಾ, ರಿಯಾನ್ ಇರುವುದು ತಂಡಕ್ಕೆ ಹೆಚ್ಚಿನ ಬಲ. ಬೌಲಿಂಗ್‌ನಲ್ಲಿ ಆರ್ಚರ್ ತಮ್ಮ ಪ್ರೈಮ್ ಮೋಡ್‌ಗೆ ಬಂದಿದ್ದಾರೆ. ನಾಂದ್ರೆ ಬರ್ಜರ್, ಬ್ರಿಜೇಶ್ ಶರ್ಮ ಕೂಡ ವಿಕೆಟ್ ಕಿತ್ತಿದ್ದಾರೆ. ಸ್ಪಿನ್ ವಿಭಾಗವನ್ನು ಜಡೇಜಾ, ರವಿ ಬಿಷ್ಣೋಯ್ ಗಟ್ಟಿಗೊಳಿಸಿದ್ದಾರೆ.



ಪಂದ್ಯದ ವಿವರ

ಯಾವಾಗ: ಶುಕ್ರವಾರ
ಎಲ್ಲಿ: ಜೈಪುರ
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಿಚ್: ಜೈಪುರದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರಿಗೆ ಲಾಭ. ಹಿಂದಿನ ಐಪಿಎಲ್ ಪಂದ್ಯಗಳಲ್ಲಿ ದೊಡ್ಡ ಸ್ಕೋರ್‌ಗಳು ಮೂಡಿಬಂದಿವೆ. ಸ್ಪಿನ್ನರ್‌ಗಳಿಗೆ ಕೊಂಚ ಸಹಾಯ ಸಿಗಲಿದೆ.

ದಿಲ್ಲಿಗೆ ಗೆಲ್ಲಬೇಕಾದ ಒತ್ತಡ

ದಿಲ್ಲಿ ಕ್ಯಾಪಿಟಲ್ಸ್ ತಂಡ ಭಾರೀ ಸೋಲನುಭವಿಸಿದೆ. ಆರ್‌ಸಿಬಿಯೊಂದಿಗಿನ ಸೋಲು ಬರೀ ಸೋಲಾಗಿರದೆ, ದೊಡ್ಡ ಹಿನ್ನಡೆಯಾಗಿದೆ. 75 ರನ್‌ಗಳಿಗೆ ಆಲೌಟ್ ಆಗಿರುವುದು ಬ್ಯಾಟರ್‌ಗಳ ವಿಶ್ವಾಸ ಕುಗ್ಗಿಸಿದ್ದಲ್ಲದೆ, ಅಂಕಪಟ್ಟಿಯಲ್ಲಿ ದೊಡ್ಡ ಹೊಡೆತ ಕೊಟ್ಟಿದೆ. ಹೀಗಿರುವಾಗ ದಿಲ್ಲಿಗೆ ಗೆಲ್ಲುವ ರಾಹುಲ್ ಹೊರತುಪಡಿಸಿ ಹೆಚ್ಚಿನ ಬ್ಯಾಟಿಗರು ಲಯದಲ್ಲಿಲ್ಲ. ಬೌಲಿಂಗ್ ವಿಭಾಗದಲ್ಲಿ ಎನ್‌ಗಿಡಿ ಹೊರಗಿರುವುದು ಸವಾಲು. ಸ್ಪಿನ್ನರ್‌ಗಳಲ್ಲಿ ಅಕ್ಷರ್ ಅಲ್ಲ ಉತ್ತಮ ಬೌಲಿಂಗ್ ಮಾಡಿದ್ದಾರೆ. ಇನ್ನುಳಿದಂತೆ ಸಮೀರ್ ರಿಜ್ವಿ, ಪೊರೆಲ್ ಮೊದಲಾದವರು ಲಯದ ಹುಡುಕಾಟದಲ್ಲಿದ್ದಾರೆ. ಮಿಲ್ಲರ್ ತಂಡಕ್ಕೆ ಬಲ ತಂದಿದ್ದಾರೆ.

ಇಪಿಎಲ್: ಫ್ರಾಂಚೈಸಿ ಖರೀದಿಸಿದ ಫಾಫ್, ಜಾಂಟಿ, ಹೆನ್ರಿಕ್ ಕ್ಲಾಸೆನ್


ರೊಟರ್ ಡ್ಯಾಮ್: ವಿಶ್ವ ಕ್ರಿಕೆಟ್ ಮೈದಾನದಲ್ಲಿ ಮಿಂಚಿದ್ದ ದಕ್ಷಿಣ ಆಫ್ರಿಕಾದ ದಿಗ್ಗಜ ಆಟಗಾರರು ಈಗ ಯುರೋಪಿಯನ್ ಕ್ರಿಕೆಟ್ ನಲ್ಲೂ ಹೊಸ ಇತಿಹಾಸ ಬರೆಯಲು ಸಜ್ಜಾಗಿದ್ದಾರೆ. ನೆದರ್ಲೆಂಡ್ಸ್‌ನ ರೊಟರ್ ಡ್ಯಾಮ್ ಮೂಲದ, ಐಸಿಸಿ ಅನುಮೋದಿತ ಯುರೋಪಿಯನ್ ಟಿ20 ಪ್ರೀಮಿಯರ್ ಲೀಗ್ (ಇಟಿಪಿಎಲ್)ನ ಐದನೇ ಫ್ರಾಂಚೈಸಿಯನ್ನು ಜಾಂಟಿ ರೋಡ್ಸ್, ಫಾಫ್ ಡು ಪ್ಲೆಸಿಸ್ ಮತ್ತು ಹೆನ್ರಿಕ್ ಕ್ಲಾಸೆನ್ ಅವರು ಜಂಟಿಯಾಗಿ ಖರೀದಿಸಿದರು.



ದಕ್ಷಿಣ ಆಫ್ರಿಕಾದ ಈ ಮೂವರು ತಾರೆಯರು ಒಂದು ಒಕ್ಕೂಟವನ್ನು ರಚಿಸಿಕೊಂಡು ತಂಡದ ಮಾಲೀಕತ್ವ ವಹಿಸಿಕೊಂಡಿದ್ದು, ಮಧುಕರ್ ಅವರು ಮ್ಯಾನೇಜಿಂಗ್ ಪಾರ್ಟ್‌ನರ್ ಆಗಿ ಈ ತಂಡವನ್ನು ಸೇರಿಕೊಂಡಿದ್ದಾರೆ. ಐಸಿಸಿ ಮಾನ್ಯತೆ ಪಡೆದ ಯುರೋಪಿನ ಮೊದಲ ಅಧಿಕೃತ ಟಿ20 ಲೀಗ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇಟಿಪಿಎಲ್, ಈ ಹಿರಿಯ ಆಟಗಾರರ ಪ್ರವೇಶದೊಂದಿಗೆ ಭಾರಿ ಕುತೂಹಲ ಮೂಡಿಸಿದೆ. ಯುರೋಪಿಯನ್ ಟಿ20 ಲೀಗ್‌ನ ಚೊಚ್ಚಲ ಸೀಸನ್ ಆಗಸ್ಟ್ 26 ರಿಂದ ಸೆಪ್ಟೆಂಬರ್ 20, 2026 ರವರೆಗೆ ನಡೆಯಲಿದೆ. ಈ ಪ್ರತಿಷ್ಠಿತ ಟೂರ್ನಿಯಲ್ಲಿ ರೊಟರ್ ಡ್ಯಾಮ್ ತಂಡವೂ ಸೇರಿದಂತೆ ಗ್ಲ್ಯಾಸ್ಗೋ, ಆಮ್ ಸ್ಟರ್ ಡ್ಯಾಮ್, ಎಡಿನ್ ಬರ್ಗ್, ಡಬ್ಲಿನ್ ಮತ್ತು ಬೆಲ್ ಫಾಸ್ಟ್ ಎಂಬ ಆರು ನಗರಗಳ ತಂಡಗಳು ಕಣಕ್ಕಿಳಿಯಲಿವೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5970

ಎಡದಿಂದ ಬಲಕ್ಕೆ
2. ಅಂದು ಬಡವಿಗೆ ತೋರಿಸಿದ ಕಾಡು (3)
5. ತಾನು ಪಡೆವ ಪ್ರಯೋಜನದ ಬಗ್ಗೆ ಮಾತ್ರ ಚಿಂತಿಸುವವ (4)
6. ವನದ ನಡುವೆ ಆದ ಅಭಿವೃದ್ಧಿ (4)
7. ಧಾರ್ಮಿಕ ಕಾರ್ಯದಲ್ಲಿ ನೀಡುವ ಕಾಣಿಕೆ (3)
8. ಆಭರಣ ಮೊದಲಿರುವ ರೋಖ ಹಣ (3)
10. ಐದು ಜನರಲ್ಲೀತ ತುಂಬ ಕಿಲಾಡಿ (3)
12. ಅಜಗಳ ನಡುವೆ ಕುಳಿತಿರುವ ತಮ್ಮ (3)
14. ಲಕ್ಷವೂ ಹೌದು-ನಡಗೆಯೂ ಹೌದು (3)
15. ಇಂಪಾದುದು ತಿರುಗಿ ಕೇಳುತ್ತಿದೆ (3)
16. ಈತ ಒಬ್ಬ ಯಾಚಕ (3)
17. ಆಮೇಲೆ ನನಗೆ ಕಾಣಿಸಿದ ಮುಖ (3)
18. ನೀರು ಮೊದಲಿರುವ ಸಂತೋಷಕೂಟ (3)

ಮೇಲಿನಿಂದ ಕೆಳಕ್ಕೆ
1. ಎಣ್ಣೆಯನ್ನು ಹಚ್ಚಿಕೊಂಡು ಮಾಡುವ ಸ್ನಾನ (5)
2. ನಿರ್ಮಲತೆ-ಪಾವಿತ್ರ್ಯದ ಸಂಕೇತವಾದ ಕಮಲ (4)
3. ವಿವರವಾಗಿ ನೀಡಿದ ಸ್ವಪ್ನ (4)
4. ಇದು ನಿವಾಸ ಪ್ರದೇಶ (5)
9. ಆನೆಯಂತಹ ಗಂಭೀರ ನಡಿಗೆಯನ್ನು ಹೀಗೆನ್ನುತ್ತೇವೆ (5)
11. ಸರ್ಪದೇವತೆಯ ಪ್ರೀತಿಗಾಗಿ ಮಾಡುವ ಹಬ್ಬ (5)
12. ಸ್ವಲ್ಪ-ಕೊಂಚ ಎಂಬರ್ಥದ ಶಬ್ದ (3)
13. ಉತ್ತರಕರ್ನಾಟಕದವರ ಸ್ನಾನ (3)

5969 ಉತ್ತರ

ಎಡದಿಂದ ಬಲಕ್ಕೆ:
1. ನಡುಹಗಲು
3. ಕಳಸ 6. ನಗೆಗೇಡಿ
8. ಉತ್ತರಪ್ರದೇಶ
10. ಮಾನವದಾನವ
13. ಕುರಿಗಾಹಿ 16. ಗುರುತು
17. ಪುರಸ್ಕರಿಸು

ಮೇಲಿನಿಂದ ಕೆಳಕ್ಕೆ:
1. ನಯನ 2. ಕಾಲು
3. ಪ್ರಯಾಣಿಕ
4. ಸಮಾವೇಶ 6. ಗೆಳೆತನ
7. ಉಡಿ 9. ದೇಶಾವರಿ
10. ಮಾಯವಾಗು
11. ವಸಾಹತು 12. ವಹಿ
14. ಕುಣಿಸು 15. ತೋಪು

ಕಿರುಸುದ್ದಿ

ಶಿಕ್ಷಕರ ಪರಿಶ್ರಮದಿಂದ ಉತ್ತಮ ಫಲಿತಾಂಶ

ಗದಗ: ವಿದ್ಯಾರ್ಥಿಗಳ ನಿರಂತರ ಅಧ್ಯಯನ ಹಾಗೂ ಶಿಕ್ಷಕರ ಪರಿಶ್ರಮದ ಗುಣಾತ್ಮಕ ಕಲಿಸುವಿಕೆಯಿಂದಾಗಿ ಈ ಸಲ ಎಸ್.ಎಸ್.ಎಲ್.ಸಿ ಫಲಿತಾಂಶವು ಉತ್ತಮಗೊಂಡಿದೆ ಎಂದು ಡಿಡಿಪಿಐ ಆರ್.ಎಸ್.ಬುರಡಿ ಹೇಳಿದರು.

ಬೆಟಗೇರಿಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ತಾರಾಲಯ ಸಂಸ್ಥೆಯಲ್ಲಿ ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ ಹಾಗೂ ಗದಗ ಐಎಂಎ ಶತಮಾನೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಖಗೋಳ ವಿಸ್ಮಯ ಉಚಿತ ಬೇಸಿಗೆ ಶಿಬಿರ 10ನೇ ದಿನದ 45ನೇ ಶೋ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಿಕ್ಷಕರಿಂದ ವಿದ್ಯಾರ್ಥಿಗಳ ಮನೆ ಭೇಟಿ, ಅಧಿಕಾರಿಗಳ ನಿರಂತರ ಭೇಟಿ ಹಾಗೂ ಮಾರ್ಗದರ್ಶನ, ವಿಶೇಷ ಕಾರ್ಯಾಗಾರ, ವಸತಿ ನಿಲಯದ ವಿದ್ಯಾರ್ಥಿಗಳಿಗೆ ಸಂಜೆ ವಿಶೇಷ ಮಾರ್ಗದರ್ಶನ, ಸಂಪನ್ಮೂಲ ಶಿಕ್ಷಕರಿಂದ ಸಂದೇಹ ನಿವಾರಣೆ, ವಿವಿಧ ತಾಲೂಕುಗಳಲ್ಲಿ ವಸತಿಯುತ ತರಬೇತಿಗಳು, ಪ್ರೇರಣ ಕಾರ್ಯಾಗಾರಗಳು, ನಿಧಾನ ಕಲಿಕೆ ಹಾಗೂ ಮೇಧಾವಿ ವಿದ್ಯಾರ್ಥಿಗಳಿಗಾಗಿ ವಿಶೇಷ ಶಿಬಿರಗಳ ಫಲಶ್ರುತಿಯೇ ಈ ಉತ್ತಮ ಫಲಿತಾಂಶವಾಗಿದೆ. ಗದಗ ಜಿಲ್ಲೆಯ ಎಲ್ಲ ಶಾಲೆಗಳ ಫಲಿತಾಂಶ ಉತ್ತಮಗೊಳ್ಳಲು ಶ್ರಮಿಸಿದವರು ಅಭಿನಂದನಾರ್ಹರು ಎಂದರು.

ನಿವೃತ್ತ ಡಿಡಿಪಿಐ ಎ.ಎನ್.ನಾಗರಳ್ಳಿ ಮಾತನಾಡಿ, ಸರ್ಕಾರಿ ಶಾಲೆಯ ಉನ್ನತೀಕರಣ – ನಮ್ಮ ಸಮೂಹದ ಜವಾಬ್ದಾರಿ. ಸರ್ಕಾರಿ ಶಾಲೆಗಳ ಉನ್ನತೀಕರಣಕ್ಕಾಗಿ ನಾವೆಲ್ಲರೂ ಕಂಕಣಬದ್ಧರಾಗುವುದು ಅಗತ್ಯ. ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಹಾಗೂ ಸಮುದಾಯ ಎಲ್ಲರ ಒಗ್ಗಟ್ಟಿನ ಪ್ರಯತ್ನದಿಂದ ಮಾತ್ರ ಶಿಕ್ಷಣದ ಗುಣಮಟ್ಟವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಸಾಧ್ಯ ಎಂದರು.

ನಿವೃತ್ತ ಡಿಡಿಪಿಐ ಐ.ಬಿ.ಬೆನಕೊಪ್ಪ ಮಾತನಾಡಿ, ವಿದ್ಯಾರ್ಥಿಗಳು ಯಾವಾಗಲೂ ಅಧ್ಯಯನಶೀಲರಾಗಬೇಕು. ವಿಸ್ಮಯಕರವಾದ ಖಗೋಳ ಲೋಕದಲ್ಲಿ ಕುತೂಹಲದಿಂದ ನೋಡುವುದಷ್ಟೇ ಸಾಕಾಗುವುದಿಲ್ಲ. ಬುದ್ಧಿವಂತ ವಿದ್ಯಾರ್ಥಿಗಳು ಶೋಧನೆ ಹಾಗೂ ಸಂಶೋಧನೆಗೆ ಮುಂದಾದಾಗ ಮಾತ್ರ ನಿಜವಾದ ಜ್ಞಾನವನ್ನು ಅರಿತುಕೊಳ್ಳಲು ಸಾಧ್ಯ. ಪ್ರಶ್ನಿಸುವ ಮನಸ್ಸು, ಪರಿಶೀಲನೆ ಹಾಗೂ ಅನ್ವೇಷಣೆ ಇವುಗಳೇ ವಿಜ್ಞಾನದ ಮೂಲಭೂತ ಅಂಶಗಳು ಎಂದರು.

ನಿವೃತ್ತ ಉಪನಿರ್ದೇಶಕ ಎಸ್.ಡಿ.ಗಾಂಜಿ, ಎ.ಎನ್.ನಾಗರಳ್ಳಿ, ಐ.ಬಿ.ಬೆನಕೊಪ್ಪ ಅವರನ್ನು ಡಿಡಿಪಿಐ ಆರ್.ಎಸ್.ಬುರಡಿ ಸನ್ಮಾನಿಸಿದರು. ಎಂ.ಎಚ್.ಸವದತ್ತಿ, ಎಂ.ಎ.ಯರಗುಡಿ, ಶಾಮ ಲಾಂಡೆ, ವಿಜಯ ಕುಮಾರ ಕಪ್ಲಿ, ಬಸವರಾಜ ಕಡಿವಾಲ, ಸಾಗರ ಅಂಗಡಿ, ಸದಾನಂದ ಇತರರಿದ್ದರು.

ಬುದ್ಧ ಜಯಂತಿ ಇಂದು

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಮೇ 1ರಂದು ಬೆಳಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಶಾಸಕ ಹಾಗೂ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್, ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್.ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಪಿ.ಸಿ.ಗದ್ದಿಗೌಡ್ರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಆಗಮಿಸುವರು. ವಿಶೇಷ ಆಹ್ವಾನಿತರಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ. ಆಗಮಿಸಲಿದ್ದಾರೆ. ನಿವೃತ್ತ ಉಪನ್ಯಾಸಕ ಪ್ರೊ. ಸತೀಶ ಪಾಸಿ ಹಾಗೂ ಕುವೆಂಪು ಶತಮಾನೋತ್ಸವ ಸರ್ಕಾರಿ ಮಾದರಿ ಶಾಲೆಯ ಮುಖ್ಯೋಪಾಧ್ಯಾಯ ಡಿ.ಎಚ್. ಪರಂಗಿ ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ ಭಾಗವಹಿಸುವರು.

ಕಾರ್ಯಕಾರಿಣಿ ಸಭೆ ನಾಳೆ

ರೋಣ: ಮೇ 2ರಂದು ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯನ್ನು ಪಟ್ಟಣ ಆರ್.ಎಸ್.ಪಾಟೀಲ ಜಿನ್ನಿಂಗ್ ಫ್ಯಾಕ್ಟರಿಯಲ್ಲಿರುವ ಪಕ್ಷದ ಕಾರ್ಯಾಲಯದಲ್ಲಿ ಬೆಳಗ್ಗೆ 11ಕ್ಕೆ ಹಮ್ಮಿಕೊಂಡಿದ್ದು, ಸಭೆಗೆ ರಾಜ್ಯ ಕಾರ್ಯದರ್ಶಿಗಳಾದ ಅಕ್ಷಯ ಪಾಟೀಲ, ಜಿಲ್ಲಾಧ್ಯಕ್ಷ ಕೃಷ್ಣಗೌಡ ಪಾಟೀಲ ಉಪಸ್ಥಿತರಿರುವರು ಎಂದು ರೋಣ ವಿಧಾನಸಭೆ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಮುತ್ತುರಾಜ ನವಲಗುಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗದಗ: ಬೆಟಗೇರಿಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ತಾರಾಲಯ ಸಂಸ್ಥೆಯಲ್ಲಿ ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ ಹಾಗೂ ಗದಗ ಐಎಂಎ ಶತಮಾನೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಖಗೋಳ ವಿಸ್ಮಯ ಉಚಿತ ಬೇಸಿಗೆ ಶಿಬಿರ 10ನೇ ದಿನದ 45ನೇ ಶೋ ಕಾರ್ಯಕ್ರಮ.

63 ತರಬೇತುದಾರರ ಅಪ್ರೆಂಟಿಸ್ ಆಯ್ಕೆ

ನರಗುಂದ: ತಾಲೂಕಿನ ಶಿರೋಳ ಗ್ರಾಮದ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಮಾದಾರ ಚೆನ್ನಯ್ಯ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಗುರುಬಸವ ಜನಕಲ್ಯಾಣ ಸಂಸ್ಥೆ ಇವರ ಆಶ್ರಯದಲ್ಲಿ ಬೆಂಗಳೂರಿನ ದ್ವಿಚಕ್ರ ವಾಹನ ಬಿಡಿ ಭಾಗಗಳ ತಯಾರಕ ಸನ್ಸೇರಾ ಕಂಪನಿ ಇವರಿಂದ ಅಪ್ರೆಂಟಿಸ್ ಸಂದರ್ಶನ ಏರ್ಪಡಿಸಲಾಗಿತ್ತು.

ಪ್ರಾಚಾರ್ಯ ಡಾ.ಮಲ್ಲೂರ ಬಸವರಾಜ, ಸನ್ಸೇರಾ ಕಂಪನಿಯ ಸಂಪನ್ಮೂಲ ಅಧಿಕಾರಿ ಸುನೀಲ ಶೆಟ್ಟಿ ಮತ್ತು ಜಗದೀಶ ಎಸ್. ಅವರು ತರಬೇತುದಾರರಿಗೆ ಅಪ್ರೇಂಟಿಸ್ ಸಂದರ್ಶನ ಮಾಡಿದರು. ಸುರೇಬಾನ ಐಟಿಐ ಕಾಲೇಜಿನ ಪ್ರಾಚಾರ್ಯ ಆನಂದ ಗಡೇದ ತಮ್ಮ 14 ತರಬೇತುದಾರರೊಂದಿಗೆ ಭಾಗಿಯಾಗಿದ್ದರು. ಶಿರೋಳ ಐಟಿಐನಿಂದ 64 ಸೇರಿದಂತೆ ಒಟ್ಟು 84 ತರಬೇತುದಾರರು ಸಂದರ್ಶನ ಎದುರಿಸಿದರು. 63 ತರಬೇತುದಾರರಿಗೆ ಅಪ್ರೆಂಟಿಸ್ ಆಯ್ಕೆ ಮಾಡಲಾಯಿತು. ಸಂಸ್ಥೆಯ ಪ್ರಾಚಾರ್ಯ ಬಸವರಾಜ ಸಾಲಿಮಠ ಪ್ರಾಸ್ತಾವಿಸಿದರು. ಎಸ್.ಬಿ. ಗೊರವರ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಪ್ಲೇಸ್ಮೆಂಟ್ ಅಧಿಕಾರಿ, ಎಸ್ ವಿ ಕುಪ್ಪಸ್ತ, ಶ್ರೀಧರ ಬೇವಿನಕಟ್ಟಿ, ವೀರನಗೌಡ, ಪ್ರಭುಲಿಂಗ ಶಿರಿಯಣ್ಣವರ, ಭೂಪತಿ ಧೋತರದ, ಪ್ರೀತಿ ಚಿಕ್ಕಮಠ, ಕಾಳಮ್ಮ ಕಮ್ಮಾರ, ಚಂದ್ರಕಾಂತ ಕಾಡದೇವರಮಠ, ಗಂಗಾಧರ ಘಾರಗೆ ಇದ್ದರು.



ನರಗುಂದ: ತಾಲೂಕಿನ ಶಿರೋಳ ಗ್ರಾಮದ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಮಾದಾರ ಚೆನ್ನಯ್ಯ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಗುರುಬಸವ ಜನಕಲ್ಯಾಣ ಸಂಸ್ಥೆ ಇವರ ಆಶ್ರಯದಲ್ಲಿ ಬೆಂಗಳೂರಿನ ದ್ವಿಚಕ್ರ ವಾಹನ ಬಿಡಿ ಭಾಗಗಳ ತಯಾರಕ ಸನ್ಸೇರಾ ಕಂಪನಿ ಇವರಿಂದ ಅಪ್ರೆಂಟಿಸ್ ಸಂದರ್ಶನ ಏರ್ಪಡಿಸಲಾಗಿತ್ತು.

ತರಬೇತಿ ಕಾರ್ಯಾಗಾರ ಉದ್ಘಾಟನೆ | ಸಿ.ಎಸ್. ಶಿವನಗೌಡರ ಅಭಿಮತ

ಮಹಿಳೆ ಮೇಲೆ ದೌರ್ಜನ್ಯ ನಿಲ್ಲಲಿ



- ಕೆಲಸದ ಸ್ಥಳದಲ್ಲಿ ಮಹಿಳೆಯರು ಜಾಗೃತರಾಗಿರಲಿ
- ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರಿಗೆ ಬಡ್ತಿ ಅಥವಾ ಇತರ ಆಮಿಷಗಳನ್ನು ಒಡ್ಡಿ ಅವರನ್ನು ದುರುಪಯೋಗಪಡಿಸಿಕೊಳ್ಳುವುದು ಗಂಭೀರ ಅಪರಾಧ
- ಯಾವುದೇ ತಪ್ಪು ಮಾಡದಿದ್ದರೆ ಮಹಿಳೆಯರು ಭಯಪಡುವ ಅಗತ್ಯವಿಲ್ಲ ಎಂದು ಧೈರ್ಯ ತುಂಬಿದ ದಿವಾನಿ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಸಿ.ಎಸ್. ಶಿವನಗೌಡರ

ಗದಗ: ಪೋಕ್ಸೊ ಕಾಯ್ದೆ ಉದ್ದೇಶ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯ ತಡೆ ಹಾಗೂ ವರದಕ್ಷಿಣೆ ಪದ್ಧತಿಯ ನಿರ್ಮೂಲನೆಯ ಕುರಿತು ಜಾಗೃತಿ ಮೂಡಿಸುವ ವಿಶೇಷ ಕಾರ್ಯಕ್ರಮದಲ್ಲಿ ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ನಡುವೆ ಸೌಹಾರ್ದಯುತ ವಾತಾವರಣ ಇರಬೇಕು ಎಂದು ದಿವಾನಿ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಸಿ.ಎಸ್. ಶಿವನಗೌಡರ ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರುಗಳ ಸಹಯೋಗದಲ್ಲಿ ಜರುಗಿದ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ 2013ರ ಕಾಯ್ದೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆ 1961, ಹಾಗೂ ವಧು-ವರದಕ್ಷಿಣೆ ನಿಷೇಧ ತಡೆಗಟ್ಟುವ ಕರ್ನಾಟಕ ನಿಯಮಗಳು 2004ರ ಹಿನ್ನೆಲೆಯಲ್ಲಿ ವರದಕ್ಷಿಣೆ ಪದ್ಧತಿಯನ್ನು ತಡೆಗಟ್ಟುವ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ವರದಕ್ಷಿಣೆ ಎಂಬ ಸಾಮಾಜಿಕ ಪಿಡುಗನ್ನು ಹೋಗಲಾಡಿಸುವುದು ನಮ್ಮ ಕರ್ತವ್ಯವಾಗಿದೆ. ವರದಕ್ಷಿಣೆ ನೀಡುವುದು ಮತ್ತು ಪಡೆಯುವುದು ಎರಡೂ ಅಪರಾಧ ಸಮಾಜದ ವಿವಿಧ ಹಂತಗಳಲ್ಲಿ ಇಂದಿಗೂ ಈ ಪದ್ಧತಿ ಜೀವಂತವಾಗಿದ್ದು, ಇದನ್ನು ಬೇರುಸಹಿತ ಕಿತ್ತೆಸೆಯಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ರಾಧಾ.ಜಿ. ಮಣ್ಣೂರು ಪ್ರಾಸ್ತಾವಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಜಯಶ್ರೀ ಆರ್. ಸ್ವಾಗತಿಸಿದರು. ವಿಜಯಲಕ್ಷ್ಮೀ ಗುರುಬಸವನಗೌಡರ ನಿರೂಪಿಸಿ, ವಂದಿಸಿದರು. ಡಿವೈಎಸ್‌ಪಿ ಮಹಾಂತೇಶ ಸಜ್ಜನ, ಯುನಿಸೆಫ್ ಮಕ್ಕಳ ಸಂರಕ್ಷಣಾ ಘಟಕದ ಪ್ರಾದೇಶಿಕ ಸಂಯೋಜಕ ಹರೀಶ ಜೋಗಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಹಾಯಕ ಕಾನೂನು ನೆರವು ಅಭಿಕ್ಷಕಿ ಮಂಜುಳಾ ಸ್ವಾಮಿ ಸೇರಿದಂತೆ ಇತರರಿದ್ದರು.

839 ಸಮಿತಿ ರಚಿಸುವ ಗುರಿ

ಜಿಲ್ಲೆಯಲ್ಲಿ ಲಿಂಗ ತಾರತಮ್ಯ ಮತ್ತು ದೌರ್ಜನ್ಯ ತಡೆಗೆ ಆಂತರಿಕ ಸಮಿತಿ ಹಾಗೂ ಸ್ಥಳೀಯ ಸಮಿತಿಗಳ ಪಾತ್ರ ಬಹಳ ದೊಡ್ಡದಿದೆ. ಜಿಲ್ಲೆಯಲ್ಲಿ ಒಟ್ಟು 839 ಸಮಿತಿಗಳನ್ನು ರಚಿಸುವ ಗುರಿ ಹೊಂದಲಾಗಿದೆ. ಪ್ರಸ್ತುತ 731 ಸಮಿತಿಗಳು ಈಗಾಗಲೇ ಅಸ್ತಿತ್ವಕ್ಕೆ ಬಂದಿವೆ. ಬಾಕಿ ಉಳಿದಿರುವ ಸಮಿತಿಗಳನ್ನು ಶೀಘ್ರದಲ್ಲೇ ರಚಿಸಿ, ಎಲ್ಲ ಸಮಿತಿಗಳು ಅತ್ಯಂತ ಸಕ್ರಿಯವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಲಾಗುವುದು ಎಂದು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ. ಆರ್. ಮುಂಡರಗಿ ಮಾಹಿತಿ ನೀಡಿದರು.

ಸುಳ್ಳು ದೂರು ನೀಡದಿರಿ

ತಾಲೂಕು ಮಟ್ಟ ಮತ್ತು ಗ್ರಾಮ ಮಟ್ಟದ ಕಚೇರಿಗಳಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಕೇವಲ ದ್ವೇಷ ಅಥವಾ ವೈಯಕ್ತಿಕ ಕಾರಣಗಳಿಗಾಗಿ ಅಧಿಕಾರಿಗಳ ಮೇಲೆ ಸುಳ್ಳು ದೂರು ನೀಡುವುದು ಸರಿಯಲ್ಲ. ಸುಳ್ಳು ದೂರು ನೀಡುವುದು ಸಾಬೀತಾದರೆ ದೂರುದಾರರ ಮೇಲೆಯೂ ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿದೆ ಎಂದು ಸಿ.ಎಸ್. ಶಿವನಗೌಡರ ಹೇಳಿದರು.

> ಸಮಾಜದಲ್ಲಿ ಹೆಣ್ಣು ಮಕ್ಕಳ ಮೇಲಾಗುತ್ತಿರುವ ಶೋಷಣೆ ಮತ್ತು ಲಿಂಗ ತಾರತಮ್ಯವನ್ನು ತಡೆಗಟ್ಟಲು ಜಿಲ್ಲಾ ಹಾಗೂ ಸ್ಥಳೀಯ ಮಟ್ಟದ ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು.
> ■ ಸಿ. ಆರ್. ಮುಂಡರಗಿ, ಜಿ.ಪಂ. ಉಪಕಾರ್ಯದರ್ಶಿ

ವಿಕಸಿತ ಭಾರತ ನಿರ್ಮಾಣಕ್ಕೆ ನಾರೀಶಕ್ತಿ ಆಧಾರ



ಗದಗ: ದೇಶದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಯುವಜನತೆ ಮತ್ತು ಮಹಿಳೆಯರಪಾತ್ರನಿರ್ಣಾಯಕವಾಗಿದೆ. ಪ್ರಸ್ತುತ ಭಾರತದ ಆರ್ಥಿಕತೆ ವೇಗವಾಗಿ ಬೆಳೆಯುತ್ತಿದ್ದು, ವಿಕಸಿತ ಭಾರತದ ಕನಸನ್ನು ನನಸು ಮಾಡಲು ನಾವೆಲ್ಲರೂ ಶ್ರಮಿಸಬೇಕಿದೆ ಎಂದು ಪುಣೆಯ ಗೋಖಲೆ ಸಂಸ್ಥೆಯ ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ. ಎಸ್.ಹರಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕೆಎಲ್‌ಇ ಸಂಸ್ಥೆಯ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯ ಸಮಾಜ ವಿಜ್ಞಾನ, ವಾಣಿಜ್ಯ ಹಾಗೂ ದೈಹಿಕ ಶಿಕ್ಷಣ ವಿಭಾಗಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಸಾಮಾಜಿಕ ವಿಜ್ಞಾನಗಳಲ್ಲಿ ಸಮಕಾಲೀನ ದೃಷ್ಟಿಕೋನಗಳು ಸಮಸ್ಯೆಗಳು, ಸವಾಲುಗಳು ಮತ್ತು ಭವಿಷ್ಯದ ದಿಕ್ಕು-ದಿಸೆಗಳು ಎಂಬ ವಿಷಯದ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಹಾವೇರಿ ಜಿ.ಹೆಚ್. ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ ಪ್ರೊ. ಎಸ್.ಬಿ.ನಾಡಗೌಡ್ರ ಮಾತನಾಡಿ, ಇಂದು ನಾವೆಲ್ಲರೂ ಮಣ್ಣಿನೊಂದಿಗಿನ ಒಡನಾಟದಿಂದ ದೂರ ಸರಿಯುತ್ತಿರುವ ಸಂದರ್ಭದಲ್ಲಿ ನಾವು ಹಿಂದಿರುಗಿ ನೋಡಿದಾಗ ನಮ್ಮ ಪೂರ್ವಜರು ಕಾಯಕ ಜೀವಿಗಳಾಗಿದ್ದರಿಂದ ಆರೋಗ್ಯವಂತರಾಗಿದ್ದರು. ಆದರೆ ಇಂದಿನ ಪೀಳಿಗೆಯಲ್ಲಿ ಅನಾರೋಗ್ಯ ಹೆಚ್ಚುತ್ತಿದ್ದು ಅವರಿಗೆ ಯೋಗ ಮತ್ತು ವ್ಯಾಯಾಮದ ಅಗತ್ಯವಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆಎಲ್‌ಇ ಸಂಸ್ಥೆ ನಿರ್ದೇಶಕ ಮಂಜುನಾಥ ಮುನವಳ್ಳಿ ಮಾತನಾಡಿ, ಇಂತಹ ಸಮ್ಮೇಳನಗಳು ವಿದ್ಯಾರ್ಥಿಗಳಲ್ಲಿ ಹೊಸ ಚಿಂತನೆಗಳನ್ನು ಮೂಡಿಸುತ್ತವೆ. ಅಧ್ಯಾಪಕರಲ್ಲಿ ವೃತ್ತಿ ನೈಪುಣ್ಯತೆ ಹೆಚ್ಚಲು ಕಾರಣವಾಗುತ್ತದೆ. ಜ್ಞಾನದ ವಿನಿಮಯ ನಡೆಯುತ್ತದೆ. ಸಂಶೋಧನಾ ಪ್ರಬಂಧಗಳ ಮಂಡನೆ ಮತ್ತು ಪ್ರಕಟಣೆಯು ಶೈಕ್ಷಣಿಕ ಕ್ಷೇತ್ರಕ್ಕೆ ಹೊಸ ದಾರಿದೀಪವಾಗಲಿದೆ ಎಂದರು.

ಒಟ್ಟು 90ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಮಂಡಣೆಯಾದವು. ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ ಎಸ್.ಪಿ. ಸಂಶಿಮಠ, ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯ ಅಶೋಕ ನಿಲುಗಲ್, ಶಲ್ಲಿಕೇರಿ, ಡಾ.ನಾಗರಾಜ ಒಬಯ್ಯ, ಡಾ.ಕಲ್ಯಾಣಿ ಹುಲಕುಂದ, ಸುಸ್ಮಿತಾ ಪೂಜಾರ, ಪ್ರೊ. ಸಂಜನಾ ಎಸ್.ಎಂ., ಪ್ರೊ.ಸಂಗೀತಾ ವಣಗೇರಿ, ಡಾ.ರಮೇಶ್ ಜಿ.ಕೆ., ಪ್ರೊ. ಜಗನ್ನಾಥ್ ಮಲಗೊಂಡ, ಪ್ರೊ. ಜಗನ್ನಾಥ್ ಆರ್., ಜಗದೀಶ ನಾಯಕ್, ಪ್ರೊ. ಮಲ್ಲನಗೌಡ ಚೆನ್ನಪ್ಪಗೌಡರ, ಡಾ.ನೇತ್ರಾವತಿ ಅಂಗಡಿ, ಮಂಜಪ್ಪ ಸಣ್ಣಬಸಪ್ಪನವರ ಇದ್ದರು.

ಕಾಂಗ್ರೆಸ್ ಮಹಿಳಾ ವಿರೋಧಿಯಲ್ಲ: ಸ್ವಾತಿ ಮಳಗಿ

ಗದಗ: ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಎಂದು ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಆದರೆ ಕಾಂಗ್ರೆಸ್ ಯಾವತ್ತೂ ಮಹಿಳಾ ವಿರೋಧಿಯಲ್ಲ, ಮಹಿಳೆಯರ ಮತ ಕಬಳಿಸುವ ಹುನ್ನಾರದಿಂದ ರಾಜಕೀಯದಲ್ಲಿ ಶೇ.33ರಷ್ಟು ಮೀಸಲಾತಿ ಜಾರಿಗೆ ತರಲು ಸಂಚು ರೂಪಿಸಿತ್ತು. ಈಗ ಅದು ವಿಫಲವಾಗಿದೆ. 2023 ರಲ್ಲಿ ಮಹಿಳಾ ಮೀಸಲಾತಿ ಕಾಯ್ದೆ ಕೇಂದ್ರದ ಬಿಜೆಪಿ ಸರ್ಕಾರ ಜಾರಿಗೊಳಿಸಿತ್ತು. ಆದರೆ ಈಗ ಮತ್ತೊಮ್ಮೆ ವಿಶೇಷ ಅಧಿವೇಶನ ಕರೆಯುವ ಅಗತ್ಯವೇನಿತ್ತು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸ್ವಾತಿ ಮಳಗಿ ಪ್ರಶ್ನಿಸಿದರು.

ನಗರದ ಪತ್ರಿಕಾಭವನದಲ್ಲಿ ನಡೆದ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರಕ್ಕೆ ಮಹಿಳೆಯರ ಬಗ್ಗೆ ಕಾಳಜಿ ಇದ್ದರೇ ಲೋಕಸಭೆಯ 543 ಸ್ಥಾನಗಳಲ್ಲಿ ಮೀಸಲಾತಿ ನೀಡಲಿ. ಬಿಹಾರ ರಾಜ್ಯದಲ್ಲಿ ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶೇ. 50 ಮೀಸಲಾತಿಯನ್ನು ನೀಡಲಾಗಿದೆ. ಮಹಿಳಾ ಮೀಸಲಾತಿಯನ್ನು ಜಾರಿಗಳಿಸಿದ್ದೇ ಕಾಂಗ್ರೆಸ್ ಪಕ್ಷ. ಕ್ಷೇತ್ರ ಮರುವಿಂಗಡಣೆ ಆಗಬೇಕಿದ್ದರೆ ಕನಿಷ್ಟ 8 ರಿಂದ 9 ವರ್ಷ ಸಮಯ ಬೇಕಾಗುತ್ತದೆ. 2023ರ ಬಿಲ್ ಪ್ರಕಾರ ಕ್ಷೇತ್ರ ಮರುವಿಂಗಡಣೆ ಮಾಡಲಿ. ಇಲ್ಲವಾದಲ್ಲಿ ಈಗಿರುವ ಸ್ಥಾನಗಳಲ್ಲೇ ಮೀಸಲಾತಿ ಘೋಷಿಸಲಿ. ಮೊದಲು ಜಾತಿ ಗಣತಿಯನ್ನು ಮಾಡಲಿ, ಜಾತಿ ಗಣತಿಯ ನಂತರ ಮೀಸಲಾತಿ ಯಾರಿಗೆ ಎಷ್ಟು ನೀಡಬೇಕು ಎನ್ನುವ ಬಗ್ಗೆ ಚರ್ಚಿಸಲಿ. ಗಣತಿ ಮಾಡದೇ ಮೀಸಲಾತಿ ಜಾರಿಗೊಳಿಸಿದರೇ ಉಪಯೋಗವಿಲ್ಲ, ಇದಕ್ಕೆ ನಮ್ಮ ವಿರೋಧವಿದೆ ಎಂದರು.

ಕಾಂಗ್ರೆಸ್ ಮುಖಂಡೆ ಸುಜಾತಾ ದೊಡ್ಡಮನಿ ಮಾತನಾಡಿ, ಬಿಜೆಪಿಗೆ ಮಹಿಳೆಯರ ಬಗ್ಗೆ ಕಾಳಜಿ ಇದ್ದರೆ ಈಗಿರುವ ಸ್ಥಾನಗಳಲ್ಲೇ ಮೀಸಲಾತಿ ನೀಡಲಿ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗಾಗಿ ಐದು ಗ್ಯಾರಂಟಿ ಯೋಜನೆ ನೀಡಿದೆ. ಇದರಿಂದ ಮಹಿಳೆಯರು ಖುಷಿಯಾಗಿದ್ದಾರೆ. ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಣೆ ಆಗಿದೆ ಎಂದರು.

ಮಹಿಳಾ ಕಾಂಗ್ರೆಸ್ ಘಟಕದ ಜಿಲ್ಲಾಧ್ಯಕ್ಷೆ ನೀಲಮ್ಮ ಬೋಳನವರ ಮಾತನಾಡಿ, ಕಾಂಗ್ರೆಸ್ ಪಕ್ಷ ರಾಜೀವ್ ಗಾಂಧಿ ಕಾಲದಲ್ಲೇ ಮಹಿಳೆಯರಿಗೆ ವಿಶೇಷ ಮೀಸಲಾತಿ ನೀಡಿದೆ. ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಏನೇನು ಕೊಡುಗೆ ನೀಡಿದೆ ಅಂತ ಜನರಿಗೆ ಗೊತ್ತಿದೆ. ಪಂಚ ಗ್ಯಾರಂಟಿ ಮೂಲಕ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಿಸಿದೆ ಎಂದರು.

ರುದ್ರಮ್ಮ ಕೆರಕಲಮಟ್ಟಿ, ಜಯಕ್ಕ ಕಳ್ಳಿ, ಸುರೇಖಾ, ನಾಜಬೇಗಂ ಯಲಿಗಾರ, ದಾನೇಶ್ವರಿ ಭಜಂತ್ರಿ, ಉಮಾ ದ್ಯಾವನೂರ, ಶೋಭಾ ದೇಸಳ್ಳಿ, ವೀಣಾ ಕಟ್ಟಳ್ಳಿ ಇದ್ದರು.



ಆದಿ ಶಂಕರಾಚಾರ್ಯರ ಜಯಂತ್ಯುತ್ಸವ

ನರಗುಂದ: ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಸನಾತನ ಧರ್ಮದ ಪುನರುತ್ಥಾನ ಮಾಡಿದ ಮಹಾಪುರುಷ ದೇವಾಂಶ ಸಂಭೂತ ಆದಿ ಶಂಕರಾಚಾರ್ಯರ 128ನೇ ಜಯಂತಿ ಉತ್ಸವ ಶೃಂಗೇರಿ ಶಂಕರ ಮಠದ ನವಲಗುಂದ ಶಾಖೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಪಟ್ಟಣದ ರಾಷ್ಟ್ರಪ್ರಶಸ್ತಿ ವಿಜೇತ ಯುವ ಕಲಾವಿದ ಪಂ.ಚಂದ್ರಕಾಂತ ಇನಾಮದಾರ ಇವರು ಆಯೋಜಿಸಿದ ಹಿಂದುಸ್ತಾನ ಶಾಸ್ತ್ರೀಯ ಹಾಗೂ ಭಕ್ತಿ ಸಂಗೀತ ಕಾರ್ಯಕ್ರಮ ಜರುಗಿತು. ಸಂಗೀತ ಸಭೆಯಲ್ಲಿ ಪಂ.ಚಂದ್ರಕಾಂತ ಇನಾಮದಾರ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಭಕ್ತಿಗೀತೆ, ದಾಸರ ಪದ್ಯ, ಭಾವಗೀತೆ, ಹಿಂದಿ ಭಜನೆ, ಮರಾಠಿ ಅಭಂಗ ಮುಂತಾದ ಗೀತೆ ಪ್ರಕಾರಗಳನ್ನು ಹಾಡಿ ಸಂಗೀತ ಆರಾಧಕರ ಮನ ಸೂರೆಗೊಂಡರು.

ಇವರಿಗೆ ಹಾರ್ಮೋನಿಯಂ ಸಾಥ್ ಸ್ಥಳೀಯ ಭಾರತೀಯ ಸಂಗೀತ ವಿದ್ಯಾಲಯದ ಪ್ರಾಚಾರ್ಯ ಪಂ. ಶ್ರೀನಿವಾಸ ಇನಾಮದಾರ ನೀಡಿದರು.



ನವಲಗುಂದದ ವಿಜಯೇಂದ್ರ ಕುಲಕರ್ಣಿ ತಬಲಾ ಸಾಥ್ ಉತ್ತಮವಾಗಿ ನೀಡಿದರು. ಶ್ರೀ ಶಂಕರಾಚಾರ್ಯ ಉತ್ಸವ ಸಮಿತಿಯ ಸದಸ್ಯರು ಮತ್ತು ಪದಾಧಿಕಾರಿಗಳು, ವಾಗ್ದೇವಿ ಭಜನಾ ಮಂಡಳದ ಸದಸ್ಯರು ಹಾಗೂ ಪದಾಧಿಕಾರಿಗಳು, ವೆಂಕಟೇಶ ಪದಕಿ, ಶ್ರೀಕಾಂತ ಪಾಟೀಲ, ಆರ್.ವಿ. ಕುಲಕರ್ಣಿ, ರಮೇಶ ಹಾವನೂರ, ವಿಶ್ವನಾಥ ಹೊಸೂರ, ಎನ್.ಪಿ. ಕುಲಕರ್ಣಿ, ದತ್ತಪ್ರಸನ್ ಪಾಟೀಲ, ಇನಾಮತಿ ಉಪಸ್ಥಿತರಿದ್ದರು. ಸತೀಶ ಕುಲಕರ್ಣಿ ನಿರ್ವಹಿಸಿದರು. ಮಂತ್ರಪುಷ್ಪ, ಮಂಗಳಾರತಿ, ಪ್ರಸಾದ ವಿನಿಯೋಗ ದೊಂದಿಗೆ ಕಾರ್ಯಕ್ರಮ ಸಮಾಪನಗೊಂಡಿತು.

ಸ್ವಯಂ ಸೇವಕ ಬೋಧಕರ ತರಬೇತಿ ಕಾರ್ಯಾಗಾರ ಉದ್ಘಾಟನೆ

ಲಕ್ಷ್ಮೇಶ್ವರ: ಕಲಿಕಾರ್ಥಿಯ (ಅನಕ್ಷರಸ್ಥರ) ಓದು, ಬರಹ, ಲೆಕ್ಕಾಚಾರ, ಅರಿವು ಮತ್ತು ಕ್ರಿಯಾಶೀಲತೆಯನ್ನು ನೋಡಿಕೊಳ್ಳಲು ಸ್ವಯಂ ಸೇವಕ ಬೋಧಕರ ನೆರವಿನೊಂದಿಗೆ ಕಲಿಕಾರ್ಥಿಗಳೇ ನಿರ್ವಹಿಸುವಂತೆ ಬಾಳಿಗೆ ಬೆಳಕು ಪುಸ್ತಕ ಸಿದ್ಧಪಡಿಸಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ನಾಣಕೀ ನಾಯ್ಕ ಹೇಳಿದರು.

ಅವರು ಜಿಲ್ಲಾ ಲೋಕ ಶಿಕ್ಷಣ ಸಮಿತಿ ಗದಗ ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಗದಗ ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಗದಗ, ತಾಲೂಕು ಪಂಚಾಯತ್ ಶಿರಹಟ್ಟಿ ಸಹಯೋಗದೊಂದಿಗೆ ಪಿಎಮ್ ಶ್ರೀ ಸ ಹಿ ಪ್ರಾ ಶಾಲೆ ನಂ 04 ಲಕ್ಷ್ಮೇಶ್ವರ ಶಾಲೆಯಲ್ಲಿ ಹಮ್ಮಿಕೊಂಡಿದ್ದ ನವ ಭಾರತ ಸಾಕ್ಷರತಾ ಕಾರ್ಯಕ್ರಮದ ಸ್ವಯಂ ಸೇವಕ ಬೋಧಕರ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಈ ಪ್ರಾಥಮಿಕೆಯನ್ನು ಆಧರಿಸಿ ಅನುಷ್ಠಾನಾಧಿಕಾರಿಗಳಿಗೆ, ಬೋಧಕರಿಗೆ ವಿಶೇಷ ಪರಿಣಿತ ತಂಡವನ್ನು ರಚಿಸಿ, ಅವರ ಮೂಲಕ ತರಬೇತಿಯನ್ನು ನೀಡಲಾಗುತ್ತಿದೆ ಎಂದರು.

ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜ ಎಂ. ಯರಗುಪ್ಪಿ ಮಾತನಾಡಿ , ಈ ನಾಡಿನ ವಿದ್ಯಾವಂತ ಸಮುದಾಯ, ಕಲಿಯದವರಿಗೆ ಕಲಿಸುವ ಹೊಣೆ ಹೊತ್ತು ಸಾಕ್ಷರತೆ ಸಾಧಿಸುವ ಜವಾಬ್ದಾರಿ ಸ್ವಯಂ ಸೇವಕ ಬೋಧಕರಿಗಿದೆ ಎಂದರು. ಲಕ್ಷ್ಮೇಶ್ವರ ಉತ್ತರ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಉಮೇಶ್ ನೇಕಾರ ಪ್ರಾಸ್ತಾವಿಸಿದರು. ಕ್ಷೇತ್ರ ಸಮನ್ವಯಾಧಿಕಾರಿ ಬಿ.ಎಸ್. ಭಜಂತ್ರಿ, ಬಿಆರ್‌ಪಿ ಬಿ.ಎಂ. ಯರಗುಪ್ಪಿ, ಪ್ರಧಾನ ಗುರುಗಳಾದ ಬಿ.ಎಂ. ಕುಂಬಾರ, ಕೆ.ಡಿ. ಕಗ್ಗಲಗೌಡರ, ಕೆ.ಬಿ. ಗೊಜನೂರ, ಎಸ್.ಸಿ. ಹುಲಿಕಂತಿಮಠ, ಎಸ್.ಕೆ. ಚಾಂದಖಾನವರ ಹಾಗೂ ತಾಲೂಕಿನ ಸಾಕ್ಷರತಾ ಪ್ರೇರಕರಿದ್ದರು. ಎನ್.ಪಿ. ಪ್ಯಾಟಿಗೌಡರ ಸ್ವಾಗತಿಸಿದರು. ಎನ್.ಎ. ಮುಲ್ಲಾ ವಂದಿಸಿದರು. ಶ್ರೀನಿವಾಸ್ ಮತ್ತೂರ ನಿರೂಪಿಸಿದರು.



ಇಂದಿನಿಂದ ಶ್ರೀ ಜ. ಫಕೀರೇಶ್ವರ ಜಾತ್ರಾ ಮಹೋತ್ಸವ

▶ ಶಿವಾನಂದ ಕುಳಗೇರಿ

ಶಿರಹಟ್ಟಿ: ಹಿಂದೂ-ಮುಸ್ಲಿಂ ಭಾವೈಕ್ಯತೆಯ ಹರಿಕಾರ ಕರ್ತೃ ಶ್ರೀ ಜ. ಫಕೀರೇಶ್ವರ ಜಾತ್ರಾ ಮಹೋತ್ಸವ ಮೇ 1ರಿಂದ ಪ್ರಾರಂಭವಾಗುತ್ತಿದ್ದು, ಹುಣ್ಣಿಮೆಯಂದು ಮಹಾರಥೋತ್ಸವ ಮತ್ತು ಮೇ 2ರಂದು ಅದ್ದೂರಿ ಕಡುಬಿನ ಕಾಳಗ ಅತ್ಯಂತ ಜರಗಲಿದೆ.

ದೇಶದಲ್ಲೇ ಮಠ ಹಾಗೂ ಮಸೀದಿ ಹೊಂದಿದ ಏಕೈಕ ಹಿಂದೂ ಮುಸ್ಲೀಂ ಧಾರ್ಮಿಕ ಪುಣ್ಯಕೇತ್ರವಾಗಿದೆ. 16ನೇ ಶತಮಾನದಲ್ಲಿ ಬಿಜಾಪೂರದ ಶಿವಯ್ಯ - ಗೌರಮ್ಮ ಎಂಬ ವೀರಶೈವ ದಂಪತಿಯ ಮಗನಾಗಿ ಜನಸಿ, ಚನ್ನವೀರ ಎಂಬ ಹೆಸರು ಪಡೆದು ಬಿಜಾಪುರದ ಮುಸ್ಲೀಂ ತತ್ವಜ್ಞಾನಿ ಖ್ವಾಜಾ ಅಮೀನುದ್ದಿನ್ ಅವರಿಂದ ಧರ್ಮ ಸಂಸ್ಕಾರ ಪಡೆದು ಫಕೀರೇಶ್ವರರಾದರು. ನಂತರ ಹಿಂದೂ ಮುಸ್ಲಿಂ ಉಭಯ ಧರ್ಮದವರಿಗೆ ಭಾವೈಕ್ಯತೆಯ ಕಣ್ಣು ತೆರಸಿ, ನಾಡಿನ ಉದ್ದಗಲಕ್ಕೂ ಸಂಚರಿಸಿ ಧರ್ಮ ಬೋಧನ ಗೈದರು ಎಂದರು.

ಶಿರಹಟ್ಟಿಯ ಶ್ರೀ ಜ. ಫಕೀರೇಶ್ವರ ಮಠದ 13ನೇ ಪಟ್ಟಾಧ್ಯಕ್ಷ ಫಕೀರಸಿದ್ಧರಾಮ ಸ್ವಾಮೀಜಿ ಅಧಿಕಾರ ವಹಿಸಿಕೊಂಡ ಅಲ್ಪ ಅವಧಿಯಲ್ಲಿಯೇ ಕರ್ತೃ ಗದ್ದುಗೆಯ ಕಟ್ಟಡ, ಉಗ್ರಾಣ, ಸುಂದರವಾದ ಗೋಶಾಲೆ, ಕಲ್ಯಾಣ ಮಂಟಪ, ಮಠದ ಅಂಗಳಕ್ಕೆ ಕಲ್ಲು ಹಾಸಿಗೆ, ದಾಸೋಹ ಮಂಟಪ, ಅತಿಥಿ ಗೃಹಗಳ ನಿರ್ಮಾಣ ಹಾಗೂ ಈ ಮಠಧ



ವ್ಯಾಪ್ತಿಗೆ ಬರುವ ಶಾಖಾಮಠಗಳ ಜೀರ್ಣೋದ್ಧಾರಕ್ಕೆ ಕೋಟ್ಯಾಂತರ ರೂ. ಖರ್ಚು ಮಾಡಿದ್ದಾರೆ. ಶ್ರೀಗಳು ಮಠದ ಕಟ್ಟಡಗಳನ್ನು ಕಟ್ಟಿರುವಂತೆ ಹಿಂದೂ ಮುಸ್ಲೀಂ ಜನತೆಯ ಮನಸ್ಸನ್ನೂ ಕಟ್ಟುವಂತ ಕೆಲಸ ಮಾಡಿದ್ದಾರೆ. ಅಂತರಂಗದ ತಂತುಗಳನ್ನು ಒಂದು ಗೂಡಿಸುವಂತಹ ಕಾರ್ಯ ಅವ್ಯಾಹತವಾಗಿ ನಡೆಯುತ್ತಿದೆ. ಮತ್ತು ಕರ್ತೃ ಗದ್ದುಗೆಯ ನಿತ್ಯ ಪೂಜೆಗೆ ಚಿರಸ್ಥಾಯಿ ಫಂಡನ್ನು ಸ್ಥಾಪಿಸಿದ್ದಾರೆ. ಗ್ರಂಥ ಪ್ರಕಟಣೆ, ಅನ್ನದಾಸೋಹ, ಜ್ಞಾನ ದಾಸೋಹ ನಡೆಸುತ್ತಿದ್ದಾರೆ. ನೂರಾರು ಹಳ್ಳಿಗಳಲ್ಲಿ ಪಾದಯಾತ್ರೆ ಮಾಡಿ, ಪ್ರವಚನ ನೀಡಿ, ಜನರಲ್ಲಿ ಸಾಮರಸ್ಯ ಬೆಳೆಸಿದ್ದಾರೆ ಎಂದರು.

ನಿತ್ಯ ಪೂಜೆ

ಕರ್ನಾಟಕದ ಚಿತ್ರದುರ್ಗ, ಬಿಜಾಪುರ, ಬೆಂಗಳೂರ, ಮಂಡ್ಯ, ಮೈಸೂರ, ರಾಯಚೂರ, ಗುಲಬರ್ಗ, ಬೆಳಗಾವಿ, ಧಾರವಾಡ ಸೇರಿದಂತೆ ರಾಜ್ಯದಲ್ಲಿ ಶಿರಹಟ್ಟಿಯ ಫಕೀರೇಶ್ವರ ಮಠವು 60 ಶಾಖಾಮಠ ಹಾಗೂ 40 ಮಸೀದಿಗಳನ್ನು ಹೊಂದಿದ್ದು, ಹಿಂದೂ-ಮುಸ್ಲೀಂ ಬಾಂಧವರ ಪರಂಪರೆಯಂತೆ ನಿತ್ಯ ಪೂಜಾ ಕೈಂಕರ್ಯಗಳು ಜರಗುತ್ತವೆ. ಪ್ರತಿ ಮಠ, ಮಸೀದಿಗಳ ಜಾತ್ರೆಯಲ್ಲಿ ಶ್ರೀಗಳು ರಾಜ ವೈಭವದ ಪರಂಪರೆಯಂತೆ ಭಾಗವಹಿಸಿ ಧಾರ್ಮಿಕ ಸತ್ಕಾರ್ಯಗಳನ್ನು ಮಾಡುತ್ತಾರೆ. ಹೀಗಾಗಿ ಉತ್ತರ ಕರ್ನಾಟಕದ ಜನತೆ ಅಪಾರವಾದ ಅಭಿಮಾನ ಹಾಗೂ ಅನುನ್ಯವಾದ, ಭಕ್ತಿಯನ್ನು ಹೊಂದಿ ತಮ್ಮ ಮಕ್ಕಳಿಗೆ ಫಕ್ಕೀರಪ್ಪ, ಫಕ್ಕೀರೇಶ, ಫಕೀರಸಾಬ, ಫಕ್ರುದ್ದಿನ, ಫಕೀರವ್ವ ಎಂದು ನಾಮಕರಣ ಮಾಡಿ ಮಹಾಮಹಿಮನನ್ನು ಸ್ಮರಿಸುತ್ತಾರೆ.

ಡಿಎಪಿ, ಯೂರಿಯಾ ಜೊತೆ ಬೇರೆ ಉತ್ಪನ್ನ ಲಿಂಕ್ ನಿಲ್ಲಿಸಲು ಆಗ್ರಹ

ಮುಂಡರಗಿ: ಡಿ.ಎ.ಪಿ. ಮತ್ತು ಯೂರಿಯಾ ಜತೆಗೆ ಒತ್ತಾಯವಾಗಿ ಬೇರೆ ಉತ್ಪನ್ನಗಳನ್ನು ಲಿಂಕ್ ಮಾಡುವುದನ್ನು ನಿಲ್ಲಿಸುವುದು ಸೇರಿ ವಿವಿಧ ಬೇಡಿಕೆಗೆ ಒತ್ತಾಯಿಸಿ ತಾಲೂಕು ಕೃಷಿ ಪರಿಕರಗಳ ಮಾರಾಟಗಾರರ ಸಂಘದಿಂದ ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಹಾಗೂ ತಾಲೂಕು ಸಹಾಯಕ ಕೃಷಿ ನಿರ್ದೇಶಕ ಪ್ರಾಣೇಶ ಅವರಿಗೆ ಪ್ರತ್ಯೇಕವಾಗಿ ಮನವಿ ಸಲ್ಲಿಸಲಾಯಿತು.

ಡಿ.ಎ.ಪಿ. ಮತ್ತು ಯೂರಿಯಾ ಜತೆಗೆ ಒತ್ತಾಯವಾಗಿ ಬೇರೆ ಉತ್ಪನ್ನಗಳನ್ನು ಲಿಂಕ್ ಮಾಡುವುದು ನಿಲ್ಲಿಸಬೇಕು. ಎಲ್ಲ ರಸಗೊಬ್ಬರಗಳ ಎಂಆರ್‌ಪಿ ಮೇಲೆ ಶೇ.8ರಷ್ಟು ಡೀಲರ್ ಲಾಭಾಂಶ ಇರುವಂತೆ ನೋಡಿಕೊಳ್ಳಬೇಕು. ಎಲ್ಲ ರಸಗೊಬ್ಬರಗಳನ್ನು ಎಫ್‌ಒಎಲ್ ಕೊಡುವ ಹಾಗೆ ಕ್ರಮ ಕೈಗೊಳ್ಳಬೇಕು. ಗೊಬ್ಬರ, ಬೀಜ, ಕೀಟನಾಶಕಗಳ ಶಾಂಪಲ್ ಕಳಪೆ ಬಂದಾಗ ಕಂಪನಿಯವರ ಮೇಲೆ ಮಾತ್ರ ಕೇಸ್ ಹಾಕಿ ಡೀಲರ್‌ಗಳನ್ನು ಸಾಕ್ಷಿಯಾಗಿ ಪರಿಗಣಿಸಬೇಕು. ಎಫ್.ಐ.ಡಿ. ಮುಖಾಂತರ ರಸಗೊಬ್ಬರ ಮಾರಾಟ ಮಾಡುವ ಆದೇಶ ಸ್ವಾಗತಿಸುತ್ತೇವೆ. ನೀರಾವರಿ ಮತ್ತು ಒಣಬೇಸಾಯಗಾರರಿಗೆ ಬೆಳೆಗಳ ಆಧಾರದ ಮೇಲೆ ರಸಗೊಬ್ಬರ ದೊರೆಯುವಂತೆ ನೋಡಿಕೊಳ್ಳಬೇಕು. ಈ ಎಲ್ಲ ಬೇಡಿಕೆ ಈಡೇರಿಸಿ ಎಂದು ಮನವಿಯಲ್ಲಿ ತಿಳಿಸಲಾಗಿದೆ.



ತಹಶೀಲ್ದಾರ್ ಪರವಾಗಿ ಗ್ರೇಡ್-2 ತಹಶೀಲ್ದಾರ್ ಕೆ.ರಾಧಾ, ಕೃಷಿ ಇಲಾಖೆ ಎಡಿ ಪರವಾಗಿ ಕೃಷಿ ಅಧಿಕಾರಿ ಶಿವಮೂರ್ತಿ ನಾಯಕ್ ಮನವಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ತಾಲೂಕಾಧ್ಯಕ್ಷ ಈರಣ್ಣ ತಂತ್ರಿ, ಸುರೇಶ ಮಾಳಗಿಮನಿ, ಅಜ್ಜಪ್ಪ ಲಿಂಬಿಕಾಯಿ, ನಾಗರಾಜ ಹೆಗ್ಗಡಾಳ, ಬಸವರಾಜ ಕೊರ್ಲಹಳ್ಳಿ, ರಾಘವೇಂದ್ರ ಕೊಂಬಳಿ, ಬಸವರಾಜ ಹಾರೋಗೇರಿ, ರುದ್ರೇಶ ಹುಬ್ಬಳ್ಳಿ, ಮಹೇಶ ಎಮ್ಮಿಯವರ, ಶರಣಪ್ಪ ಕುರಿ, ಎಂ.ಎಚ್.ದೊಡ್ಡಮನಿ, ಚಂದ್ರಶೇಖರ ನಂಜಪ್ಪನವರ, ಚಾಂದ್‌ಸಾಬ ನದಾಫ್, ಮುತ್ತಪ್ಪ ಬೆಟಗೇರಿ, ನಿಂಗಪ್ಪ, ಅಶೋಕ ತಂತ್ರಿ, ಪ್ರವೀಣ ಬುರ್ಜಿ, ದೇವೇಂದ್ರ ನಾಯ್ಕ್, ಈಶ್ವರ ದೇಸಾಯಿ ಇತರರಿದ್ದರು.

ಕಿರುಸುದ್ದಿ

ಕೆರೆಗಳಿಗೆ ನೀರು ತುಂಬಿಸಲು ಸೂಚನೆ

ಧಾರವಾಡ: ಜಿಲ್ಲೆಯ ನವಲಗುಂದ, ಅಣ್ಣಿಗೇರಿ, ಹುಬ್ಬಳ್ಳಿ ಹಾಗೂ ಕುಂದಗೋಳ ತಾಲೂಕಿನ ಗ್ರಾಮಗಳ ಕುಡಿಯುವ ನೀರಿನ ಕೆರೆಗಳನ್ನು ತುಂಬಿಸುವ ಉದ್ದೇಶಕ್ಕೆ ನವಿಲು ತೀರ್ಥ ಜಲಾಶಯದಿಂದ ಮಲಪ್ರಭಾ ಬಲದಂಡೆ ಕಾಲುವೆಗೆ, ನರಗುಂದ ಕಾಲುವೆಗೆ ಮೇ 1ರಿಂದ 10ರವರೆಗೆ ನೀರು ಬಿಡುಗಡೆ ಮಾಡಲು ಆದೇಶಿಸಿದ್ದಾಗಿ ಜಿಲ್ಲಾಧಿಕಾರಿ ಸ್ನೇಹಲ್ ಆರ್.ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಈ ನೀರು ಕುಡಿಯುವ ಉದ್ದೇಶಕ್ಕಾಗಿ ಮಾತ್ರವೇ ಬಿಡುಗಡೆ ಮಾಡಲಾಗಿದೆ. ಈ ಸಮಯದಲ್ಲಿ ಕಾಲುವೆಯ ಅಚ್ಚುಕಟ್ಟು ಪ್ರದೇಶದ ಸಾರ್ವಜನಿಕರು, ರೈತರು ಕೃಷಿ ಹಾಗೂ ಇತರೆ ಬೇರೆ ಯಾವುದೇ ಉದ್ದೇಶಕ್ಕೆ ಬಳಸದಂತೆ ಸೂಚಿಸಿದ್ದಾರೆ. ನಿರ್ಬಂಧ ಉಲ್ಲಂಘಿಸಿ, ಕುಡಿಯುವ ಉದ್ದೇಶ ಬಿಟ್ಟು ಬೇರೆ ಕಾರ್ಯಗಳಿಗೆ ನೀರು ಬಳಸಿದರೆ, ರೈತರ ಪಂಪ್ ಸೆಟ್ ಹಾಗೂ ಇತರೆ ಉಪಕರಣ ಜಪ್ತಿ ಮಾಡಲಿದೆ. ಜೊತೆಗೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸುವುದಾಗಿಯೂ ಜಿಲ್ಲಾಧಿಕಾರಿ ಸ್ನೇಹಲ್ ಎಚ್ಚರಿಕೆ ನೀಡಿದ್ದಾರೆ.

ಕಾಂಗ್ರೆಸ್ ಸರ್ಕಾರ ಐಸಿಯು ಸ್ಥಿತಿಯಲ್ಲಿದೆ: ಬಿ.ಸಿ.ಪಾಟೀಲ

ಹಾವೇರಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಐಸಿಯು ತಲುಪಿದ್ದು, ಐಸಿಯುಯಿಂದ ಹೊರಬಂದರೆ ಪ್ರಾಣ ಹೋಗುತ್ತೆ. ಮುಖ್ಯಮಂತ್ರಿ ಖುರ್ಚಿ ಕಚ್ಚಾಟದಲ್ಲಿ ಜನರು ತೊಂದರೆ ಅನುಭವಿಸುವಂತಾಗಿದೆ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ಹೇಳಿದರು.



ನಗರದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿಎಂ ಬದಲಾವಣೆ ವಿಚಾರದಲ್ಲಿ ಅವರೇ ನವೆಂಬರ್ ಕ್ರಾಂತಿ, ಸಂಕ್ರಾಂತಿ ಯುಗಾದಿ ಅಂತ ಹೇಳುತ್ತಾ ಬಂದಿದ್ದಾರೆ. ಇವರ ಕಚ್ಚಾಟದಲ್ಲಿ ಜನ ತೊಂದರೆ ಅನುಭವಿಸುತ್ತಿದ್ದಾರೆ. ಇಬ್ಬರ ಜಗಳದಲ್ಲಿ ಮೂರನೇಯವರಿಗೆ ಲಾಭ ಅನ್ನೋ ತರ ಆಗುತ್ತಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಮೊದಲ ಬಾರಿಗೆ ಸಿಎಂ ಆಗುವ ಆಸೆ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಕಾಂಗ್ರೆಸ್‌ನಲ್ಲಿ ಏನು ಬೇಕಾದ್ರೂ ಆಗಬಹುದು ಎಂದರು. ಡಿಸಿಎಂ ಡಿ.ಕೆ. ಶಿವಕುಮಾರ ಅವರು ಸಿಎಂ ಆಸೆ ಬಿಡಬೇಕಾಗುತ್ತೆ ಅಂತ ಮಾಧ್ಯಮಗಳಲ್ಲಿ ಚರ್ಚೆ ಆಗುತ್ತಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ಹಾಹಾಕಾರ

24 ಗ್ರಾಮಗಳಲ್ಲಿ ಜಲಸಂಕಷ್ಟ!

ರಾಚಪ್ಪಾ ಜಂಬಗಿ

ಕಲಬುರಗಿ: ಬೇಸಿಗೆಯ ತಾಪಮಾನ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಹಿನ್ನೆಲೆ, ಕುಡಿಯುವ ನೀರಿನ ಸಮಸ್ಯೆ ಗಂಭೀರ ರೂಪ ಪಡೆದುಕೊಂಡಿದೆ. ಜಿಲ್ಲೆಯ ಜೀವನಾಡಿ ಭೀಮಾ ನದಿ ನಿಧಾನವಾಗಿ ಬತ್ತಿ ಹೋಗುತ್ತಿರುವುದು ಪರಿಸ್ಥಿತಿ ಇನ್ನಷ್ಟು ಸಂಕೀರ್ಣಗೊಳಿಸಿದೆ. ವಿಶೇಷವಾಗಿ ಆಳಂದ (ಅಲ್ದಿ) ತಾಲೂಕಿನಲ್ಲಿ ಈ ಬಾರಿ ನೀರಿನ ಅಭಾವ ಅತ್ಯಂತ ತೀವ್ರವಾಗಿ ತಲೆದೋರಿದೆ.

ದಿಗಂತ ವಿಶೇಷ

ಜಿಲ್ಲಾಡಳಿತದ ಅಂಕಿಅಂಶಗಳ ಪ್ರಕಾರ, ಈ ಬೇಸಿಗೆಯಲ್ಲಿ ಜಿಲ್ಲೆಯಾದ್ಯಂತ ಸುಮಾರು 236 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗುವ ಸಾಧ್ಯತೆ ಇದೆ. ಆಳಂದ ತಾಲೂಕಿನೊಂದರಲ್ಲೇ 45 ಗ್ರಾಮಗಳಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಳ್ಳಲಿದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಈಗಾಗಲೇ 24 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿ ಉಂಟಾಗಿದ್ದು, ಜನ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಕುಡಿಯುವ ನೀರಿನ ಕೊರತೆಯನ್ನು ತಾತ್ಕಾಲಿಕವಾಗಿ ನಿವಾರಿಸಲು ಗ್ರಾಮ ಪಂಚಾಯಿತಿಗಳು ಹಾಗೂ ಆಡಳಿತವು ಜಮೀನಿನ ಮಾಲೀಕರಿಂದ ನೀರು ಖರೀದಿ ಮಾಡುವ ಮಾರ್ಗವನ್ನು ಅನುಸರಿಸುತ್ತಿವೆ. ಇದಕ್ಕಾಗಿ ತಿಂಗಳಿಗೆ ಸುಮಾರು 25 ಸಾವಿರ ವೆಚ್ಚ ಮಾಡಲಾಗುತ್ತಿದ್ದು, ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಆದರೆ, ಈ ವ್ಯವಸ್ಥೆ ದೀರ್ಘಕಾಲಿಕ ಪರಿಹಾರವಾಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳು

ಕವಲಗಾ,ಝುಳಕಿ (ಕೆ), ಗೋಳಾ (ಬಿ), ಖಾನಾಪುರ, ಚಾರನಳ್ಳಿ, ಕಣ್ಣೂರ, ದುತ್ತರಗಾಂವ್, ಕಡಗಂಚಿ ಎಸ್ಸಿ ವಾರ್ಡ್, ಹಾಲ್ ತಡಕಲ್, ವೈಜಾಪುರ, ಸಂಗೋಳಗಿ (ಜಿ), ಚಾಲಹಳ್ಳಿ, ಸಾವಳೇಶ್ವರ್, ನಿಂಬಾಳ, ಚಲಗೇರಿ, ಸರಸಂಭಾ, ಇಕ್ಕಳಕಿ, ಮೋಘಾ (ಬಿ), ಅಲ್ಲಾಪುರ, ನಿಂಗದಳ್ಳಿ, ಕೇರೂರ್, ತೀರ್ಥ ತಾಂಡಾ, ಖೇಡ್ ಉಮರಗಾ ಸೇರಿದಂತೆ ಹಲವು ಗ್ರಾಮಗಳಲ್ಲಿ ನೀರಿನ ಸಮಸ್ಯೆ ತೀವ್ರವಾಗಿದೆ.



ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸರ್ಕಾರದ 45 ಕೋಟಿ ರೂ.ಅನುದಾನ ಯಾವುದಕ್ಕೂ ಸಾಲದು. ಪ್ರತಿ ಗ್ರಾಮ ಪಂಚಾಯತ್‌ಗೆ ಆವರವರ ಬೇಡಿಕೆಗೆ ತಕ್ಕಂತೆ ಅನುದಾನ ನೀಡಬೇಕು. ಕುಡಿಯುವ ನೀರಿನ ಸಮಸ್ಯೆ ದಿನೇ ದಿನೇ ಭೀಕರ ಸ್ವರೂಪ ಪಡೆಯುತ್ತಿದ್ದು, ಜಿಲ್ಲಾಡಳಿತ ಹಾಗೂ ಸರ್ಕಾರ ತಕ್ಷಣವೇ ಎಚ್ಚೆತ್ತುಕೊಳ್ಳದಿದ್ದರೆ ಪರಿಸ್ಥಿತಿ ಕೈಮೀರಲಿದೆ. ಗ್ರಾಮೀಣ ಭಾಗದಲ್ಲಿ ನೀರಿನ ತೀವ್ರ ಸಂಕಷ್ಟ ಎದುರಾಗಿದೆ. ಆಳಂದ ತಾಲೂಕೊಂದಕ್ಕೇ ನೀರಿನ ತುರ್ತು ನಿರ್ವಹಣೆಗಾಗಿ 4.38 ಕೋಟಿ ರೂ.ಗಳ ಬೇಡಿಕೆಯಿದೆ.

■ ಬಿ.ಆರ್.ಪಾಟೀಲ್, ಶಾಸಕ

ಸರ್ಕಾರಕ್ಕೆ ಒತ್ತಾಯ

ಗ್ರಾಮಸ್ಥರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳಲಾಗಿದ್ದರೂ, ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವ ಮುನ್ನ ಸರ್ಕಾರ ಶಾಶ್ವತ ಪರಿಹಾರ ಒದಗಿಸಬೇಕೆಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಆಳಂದ ಶಾಸಕ ಬಿ.ಆರ್. ಪಾಟೀಲ್ ಸರ್ಕಾರದ ತಕ್ಷಣದ ಹಸ್ತಕ್ಷೇಪಕ್ಕೆ ಒತ್ತಾಯಿಸಿದ್ದಾರೆ.

2.0 ಟಿಎಂಸಿ ನೀರು ಬಿಡುಗಡೆಗೆ ಆಗ್ರಹ

ಆಳಂದ,ಅಫಜಲ್ಪುರ, ಅಲ್ಲೌಲ್ ಹಾಗೂ ಇಂಡಿ ತಾಲೂಕುಗಳಲ್ಲಿ ಉಂಟಾಗಿರುವ ತೀವ್ರ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ನಾರಾಯಣಪುರ ಅಣೆಕಟ್ಟಿನಿಂದ ಇಂಡಿ ಶಾಖಾ ಕಾಲುವೆಯ ಮೂಲಕ ಭೀಮಾ ನದಿಗೆ 2.0 ಟಿಎಂಸಿ ನೀರನ್ನು ತುರ್ತಾಗಿ ಬಿಡುಗಡೆ ಮಾಡುವಂತೆ ಒತ್ತಾಯಗಳು ಹೆಚ್ಚಾಗಿವೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ತೀವ್ರ ಉಷ್ಣ ತರಂಗದ ಪರಿಣಾಮ ಜಲ ಸಂಪನ್ಮೂಲಗಳ ಮೇಲೆ ಭಾರೀ ಒತ್ತಡ ಉಂಟಾಗಿದೆ. ಅಂತರಜಲ ಮಟ್ಟದ ಕುಸಿತ, ಬೋರ್‌ವೆಲ್‌ಗಳ ವೈಫಲ್ಯ ಮತ್ತು ಸ್ಥಳೀಯ ನೀರಿನ ಮೂಲಗಳ ಒಣಗುವಿಕೆಯಿಂದ ಪರಿಸ್ಥಿತಿ ಗಂಭೀರ ಹಂತ ತಲುಪಿದೆ.

ಅಂಕೋಲೆಯ ಸುಪ್ರಸಿದ್ದ ಬಂಡಿಹಬ್ಬ ಸಂಪನ್ನ



ಅಂಕೋಲಾ: ತಾಲೂಕಿನ ಶಕ್ತಿದೇವತೆ ಭೂಮ್ತಾಯಿ ಶ್ರೀ ಶಾಂತಾದುರ್ಗಾದೇವಿಯ ಕಳಸ ಉಲಿ ಚಪ್ಪರ ಏರುವುದರೊಂದಿಗೆ ಅಂಕೋಲೆಯ ಸುಪ್ರಸಿದ್ಧ ಬಂಡಿಹಬ್ಬ ಸಂಪನ್ನಗೊಂಡಿತು.

ಪಟ್ಟಣದ ಬಂಡಿಬಜಾರದಲ್ಲಿ ಜಮಾಯಿಸಿದ ಸಹಸ್ರಾರು ಜನರು ಚಪ್ಪಾಳೆ, ಹರ್ಷೋದ್ಗಾರದೊಂದಿಗೆ ತಾಯಿ ಶ್ರೀ ಶಾಂತಾದುರ್ಗೆ ಉಲಿ ಬಂಡಿಯೇರುವ ವೈಭವವನ್ನು ಕಣ್ತುಂಬಿಕೊಂಡರು.

ಭೂಮ್ತಾಯಿಗೆ ಜಯವಾಗಲಿ, ಶ್ರೀ ಶಾಂತಾದುರ್ಗಾ ಮಾತಾಕಿ ಜಯ್ ಎನ್ನುವ ಜಯಘೋಷ ಎಲ್ಲಡೆಯಿಂದ ಕೇಳಿ ಬಂತು.

ಕುಂಬಾರಕೇರಿಯ ಕಳಸ ದೇವಾಲಯದಿಂದ ವಾದ್ಯ ಘೋಷ, ಛತ್ರ, ಚಾಮರಗಳೊಂದಿಗೆ ಭಕ್ತ ಜನರ ಪೂಜೆ ಸ್ವೀಕರಿಸುತ್ತ ಅಡುಕಟ್ಟೆಗೆ ಬಂದು ಅಲ್ಲಿಂದ ಬಲಿಮಕ್ಕಳ ಜೊತೆಗೂಡಿ ಬಂಡಿಬಜಾರದ ಉಲಿ ಚಪ್ಪರಕ್ಕೆ ಆಗಮಿಸಿ ಸಾಂಪ್ರದಾಯಿಕ ಉಲಿ ಬಂಡಿ ತುತ್ತತುದಿಗೆ ತಲುಪಿ ದರ್ಶನ ನೀಡುವ ಮೂಲಕ ಭಕ್ತ ಜನರನ್ನು ಪುಳಕಿತಗೊಳಿಸಿತು. ಕಳಸದೊಂದಿಗೆ ಗುನಗರು ಬಂಡಿ ಏರಿ ಇಳಿದ ನಂತರ ಬಿಡಗುನಗರು, ಕಟಗಿದಾರರು, ಉಲಿ ಚಪ್ಪರಬಂಡಿ ಏರಿದರು.

ಪಟ್ಟಣದ ಕುಂಬಾರಕೇರಿ ರಸ್ತೆಯಲ್ಲಿ ಇರುವ ಬಂಡಿಕಟ್ಟೆ ಮತ್ತು ಬಂಡಿ ಬಜಾರದ ಬಂಡಿಕಟ್ಟೆ ಬಳಿ ಇಡಗಾಯಿ ಒಡೆಯುವ ಸಂಪ್ರದಾಯ ನಡೆಯಿತು.

ಬಂಡಿ ಹಬ್ಬದ ನಿಮಿತ್ತ ಸಂಪೂರ್ಣ ಅಂಕೋಲಾ ಪಟ್ಟಣ ಜನರಿಂದ ಕಿಕ್ಕಿರಿದು ತುಂಬಿತ್ತು ಸುಮಾರು 15 ಸಾವಿರಕ್ಕೂ ಹೆಚ್ಚು ಜನ ಜಮಾಯಿಸಿ ಬಂಡಿಹಬ್ಬದ ಸೊಬಗನ್ನು ಸವಿದರು.

ಬಂಡಿಹಬ್ಬದ ಪ್ರಯುಕ್ತ ಶಾಂತಾದುರ್ಗಾ ದೇವಾಲಯದಲ್ಲಿ ಹಣ್ಣುಕಾಯಿ,ಉಡಿಸೇವೆ,ತುಲಾಬಾರ, ಗಿಂಡಿ ತುಂಬುವ ಸೇವೆಗಳು ನಡೆದವು.

ನಸುಕಿನ ಜಾವ 5 ಗಂಟೆಯಿಂದಲೇ ಭಕ್ತಜನರು ಸರತಿ ಸಾಲಿನಲ್ಲಿ ನಿಂತು ವಿವಿಧ ಸೇವೆಗಳನ್ನು ಸಲ್ಲಿಸುತ್ತಿರುವುದು ಕಂಡು ಬಂತು.ದೇವಾಲಯದ ಸಿಬ್ಬಂದಿಗಳು, ಸ್ವಯಂಸೇವಕರು ಅಚ್ಚುಕಟ್ಟಾಗಿ ಸೇವೆ ಸಲ್ಲಿಸಿದರು.

ಆಸ್ತಿ ಪಾಲಿಗಾಗಿ ಅಣ್ಣನ ಮಗನನ್ನೇ ಕೊಂದ ಚಿಕ್ಕಪ್ಪ!

ಸಿಂಧನೂರು: ತಾಲೂಕಿನ ಅಲಬನೂರು ಗ್ರಾಮದಲ್ಲಿ ಆಸ್ತಿ ಪಾಲಿಗಾಗಿ ಜಗಳ ತೆಗೆದ ವ್ಯಕ್ತಿ ಸಹೋದರನ ಹೆಂಡತಿಗೆ ಹೊಡೆದು, ಚಾಕುವಿನಿಂದ ಇರಿದು, ಜಗಳ ಬಿಡಿಸಲು ಬಂದ ಅಣ್ಣನ ಮಗನ ಹೊಟ್ಟೆಗೆ ತಿವಿದು ಕೊಂದ ಪೈಶಾಚಿಕ ಘಟನೆ ಬುಧವಾರ ಬೆಳಗ್ಗೆ ನಡೆದಿದೆ.

ಬಸವರಾಜ ಎಂಬಾತ ಕೊಲೆ ಆರೋಪಿಯಾಗಿದ್ದು, ಘಟನೆಯಲ್ಲಿ ಅಮೃತಾ ಸಿದ್ದಪ್ಪ ತೀವ್ರವಾಗಿ ಗಾಯಗೊಂಡರೆ, ಬಾಲಕ ನಾಗರಾಜ ತಂದೆ ಸಿದ್ದಪ್ಪ (13) ಮೃತಪಟ್ಟಿದ್ದಾನೆ. ಗಾಯಾಳು ಅಮೃತಾ ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ.

ಪ್ರಕರಣದ ಹಿನ್ನೆಲೆ: ಅಲಬನೂರು ಗ್ರಾಮದ ಬಸವರಾಜ ಮತ್ತು ಸಿದ್ದಪ್ಪ ಎಂಬುವವರು ಸೋದರರಾಗಿದ್ದು, ಬಸವರಾಜ ಮದುವೆಯ ನಂತರ ಪತ್ನಿಯ ಊರಾದ ಸಿರುಗುಪ್ಪಾದ ಅಳ್ಳಿಗನೂರಿನಲ್ಲಿ ನೆಲೆಯೂರಿದ್ದಾರೆಂದು ತಿಳಿದು ಬಂದಿದೆ. ವಾರದ ಹಿಂದೆ ಅಲಬನೂರಿಗೆ ಆಗಮಿಸಿದ್ದ ಬಸವರಾಜ ಪಿತ್ರಾರ್ಜಿತ 4 ಎಕರೆ ಆಸ್ತಿಯಲ್ಲಿ ತನ್ನ ಪಾಲಿಗೆ ಬರುವ ಆಸ್ತಿಯನ್ನು ನೀಡುವಂತೆ ಸೋದರನಿಗೆ ಕೇಳಿದ್ದಾರೆಂದು ಹೇಳಲಾಗುತ್ತಿದೆ. ನಂತರ ಬುಧವಾರ ಬೆಳಗ್ಗೆ ಆಸ್ತಿಪಾಲು ಕೇಳಲು ತನ್ನ ಅಣ್ಣ ಸಿದ್ದಪ್ಪನ ಮನೆಗೆ ಹೋಗಿದ್ದಾನೆ. ಆ ವೇಳೆ ಸಿದ್ದಪ್ಪ ಕೆಲಸದ ನಿಮಿತ್ತ ಹೊರಗೆ ಹೋಗಿದ್ದಾರೆ.ಆ ವೇಳೆ ಅಣ್ಣನ ಹೆಂಡತಿಯೊಂದಿಗೆ ಬಸವರಾಜ ಆಸ್ತಿ ವಿಷಯ ಪ್ರಸ್ತಾಪಿಸಿ ಜಗಳ ತೆಗೆದಿದ್ದಾನೆ. ಪರಸ್ಪರ ಮಾತಿಗೆ ಮಾತು ಬೆಳೆದು ವಿಕೋಪಕ್ಕೆ ಹೋಗಿದೆ. ಇದರಿಂದ ಕುಪಿತನಾದ ಬಸವರಾಜ ಏಕಾಏಕಿ ಚಾಕುವಿನಿಂದ ಅತ್ತಿಗೆ ಅಮೃತಾ ಅವರ ಮೇಲೆ ದಾಳಿ ನಡೆಸಿದ್ದಾನೆ. ಇದನ್ನು ಗಮನಿಸಿದ ಅಣ್ಣ ಮಗ ನಾಗರಾಜ್ ತಡೆಯಲು ಬಂದಿದ್ದಾನೆ. ಇದರಿಂದ ಮತ್ತಷ್ಟು ರೊಚ್ಚಿಗೆದ್ದ ಬಸವರಾಜ ಆತನ ಹೊಟ್ಟೆಗೆ ಮನ ಬಂದಂತೆ ಚಾಕುವಿನಿಂದ ಇರಿದಿದ್ದಾನೆಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.



ಪೊಲೀಸರು ಆರೋಪಿಯನ್ನು ಬಂಧಿಸಿದ್ದು, ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಕುರಿತು ಪೊಲೀಸರು ತನಿಖೆ ನಡೆಸಿದ್ದಾರೆ. ಅಮಾಯಕ ಬಾಲಕನನ್ನು ಬಲಿ ತೆಗೆದುಕೊಂಡಿರುವುದಕ್ಕೆ ಗ್ರಾಮದ ಜನರು ಮಮ್ಮಲ ಮರುಗಿದರು. ಈ ಘಟನೆಯಿಂದ ಇಡೀ ಗ್ರಾಮದಲ್ಲಿ ಆತಂಕದ ವಾತಾವರಣದ ಜೊತೆಗೆ ನೀರವ ಮೌನ ಆವರಿಸಿದ್ದು ಕಂಡು ಬಂತು.

ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ: ಬಿ.ವೈ.ರಾಘವೇಂದ್ರ

ಹಾವೇರಿ: ಈಗಾಗಲೇ ಪಂಚ ರಾಜ್ಯ ಚುನಾವಣೆ ಎಕ್ಸಿಟ್ ಪೋಲ್ ನೋಡಿದ್ದೇವೆ. ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಸಂಸದ ಬಿ.ವೈ.ರಾಘವೇಂದ್ರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ನಗರದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದಿಂದ ಯಾವುದೇ ಅಭಿವೃದ್ಧಿ ಕಾರ್ಯ ಆಗುತ್ತಿಲ್ಲ. ಕರ್ನಾಟಕದಲ್ಲಿ ಯಾವಾಗ ಚುನಾವಣೆ ಬರುತ್ತೆ ಅಂತ ಜನ ಕಾಯ್ತಿದ್ದಾರೆ. ಅಮಿತ್ ಶಾ ಅವರ ಮುಂದಿನ ದೃಷ್ಟಿ ಕರ್ನಾಟಕ ರಾಜ್ಯವಾಗಲಿದೆ ಎಂದರು.ಹಾವೇರಿ ನಮ್ಮ ಪಕ್ಷಕ್ಕೆ ಶಕ್ತಿ ಕೊಟ್ಟ ಜಿಲ್ಲೆ, ಮೇ 9ರಂದು ಚಿತ್ರದುರ್ಗದಲ್ಲಿ ಯಡಿಯೂರಪ್ಪನವರ ರಾಜಕೀಯ ಜೀವನ 50 ವರ್ಷ ತುಂಬಿದ ಹಿನ್ನೆಲೆ ಅಭಿಮಾನೋತ್ಸವ ಮಾಡಲಾಗುತ್ತಿದೆ. ರಾಷ್ಟ್ರದಲ್ಲೇ ಮೊದಲ ಬಾರಿಗೆ ರೈತ ಬಜೆಟ್ ಕೊಟ್ಟವರು ಯಡಿಯೂರಪ್ಪನವರು. ಹುಟ್ಟಿನಿಂದ ಸಾವಿನವರೆಗೆ ಯೋಜನೆ, ಕಾರ್ಯಕ್ರಮ ಕೊಟ್ಟಿದ್ದಾರೆ. ಹೀಗಾಗಿ ಅವರ ಅಭಿಮಾನೋತ್ಸವ ಆಚರಿಸಲಾಗುತ್ತಿದ್ದು, ಈ ಕಾರ್ಯಕ್ರಮಕ್ಕೆ ಅಮಿತ್ ಶಾ ಆಗಮಿಸಲಿದ್ದಾರೆ. ಯುವಕರಿಗೆ ಇದು ದೊಡ್ಡ ಪ್ರೇರಣೆ ಆಗಲಿದ್ದು, ಜೊತೆಗೆ ಪಕ್ಷಕ್ಕೆ ಶಕ್ತಿ ತುಂಬುವ ಕೆಲಸ ಆಗಲಿದೆ ಎಂದರು.

ಪೊಲೀಸ್ ಆಯುಕ್ತರ ಕಚೇರಿ ಗೂಂಡಾಗಳ ಅಡ್ಡೆ: ಬೆಲ್ಲದ

ಧಾರವಾಡ: ಹುಬ್ಬಳ್ಳಿ-ಧಾರವಾಡದಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ. ಹು-ಧಾ ಪೊಲೀಸ್ ಆಯುಕ್ತರ ಕಚೇರಿ ಗೂಂಡಾಗಳ ಅಡ್ಡೆಯಾಗಿದೆ. ಆಯುಕ್ತರ ಎದುರೇ ಡೀಲ್‌ಗಳು ನಡೆಯುತ್ತಿವೆ ಎಂದು ಶಾಸಕ ಅರವಿಂದ ಬೆಲ್ಲದ ಗಂಭೀರ ಆರೋಪ ಮಾಡಿದರು.



ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಅಪರಾಧ ಚಟುವಟಿಕೆಗಳಲ್ಲಿ ತೊಡಗಿದವರು, ಗೂಂಡಾಗಳು ಆಯುಕ್ತರ ಕಚೇರಿ ಖುರ್ಚಿಗಳಲ್ಲಿ ಕೂರುತ್ತಿದ್ದು, ಪೊಲೀಸ್ ಅಧಿಕಾರಿಗಳ ಗುಂಡಾಗಳ ಎದುರಿಗೆ ಎದ್ದು ನಿಲ್ಲುವ ಸ್ಥಿತಿ ಇದೆ ಎಂದು ದೂರಿದರು.

ಇಸ್ಪೀಟ್ ಕ್ಲಬ್‌ಗೆ ಪೊಲೀಸ್ ಆಯುಕ್ತರೇ ಅನುಮತಿ ನೀಡಿದ್ದು, ಗೂಂಡಾಗಳ ಜೊತೆ ಫೋಟೋ ತೆಗೆಸಿಕೊಳ್ಳುವ ಕಾರ್ಯ ನಾಚಿಗೇಡು. ಅಪರಾಧ ಚಟುವಟಿಕೆ ಮಟ್ಟ ಹಾಕಬೇಕಾದ ಪೊಲೀಸರು ದಲ್ಲಾಳಿಗಳಾಗಿ ಕೆಲಸ ಮಾಡುತ್ತಿರುವುದಾಗಿ ಆಪಾದಿಸಿದರು. ಆಯುಕ್ತರ ಕಚೇರಿ ದಲ್ಲಾಳಿಗಳ ಕೇಂದ್ರವಾದ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಗೃಹ ಸಚಿವರ ಗಮನಕ್ಕೆ ಇದ್ದರೂ ಸಹ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದ ಬೆಲ್ಲದ, ರಕ್ಷಕರೇ ಭಕ್ಷಕರಾಗಿ ಲೂಟಿ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಡ್ರಗ್ಸ್ ಪೆಡ್ಲರ್ ಮೂಲಕ ವಿದ್ಯಾರ್ಥಿಗಳಿಗೆ ಗಾಂಜಾ, ಡ್ರಗ್ಸ್ ಪೂರೈಸಿದ ನಂತರ ಅವರ ಪಾಲಕರಿಂದ ಹಣ ಮಾಡುವ ಕಾರ್ಯಕ್ಕೂ ಪೊಲೀಸರು ಕೈ ಹಾಕಿದ್ದು, ಇಂತಹ ಕೃತ್ಯದಲ್ಲಿ ಆಗಲೇ ಬಡಪಾಯಿ ವಿದ್ಯಾರ್ಥಿ ಬಲಿಯಾದ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಮೃತಪಟ್ಟ ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜಕೀಯ ಮರುಜನ್ಮ ನೀಡಿದ ಬದಾಮಿ ತಾಲೂಕಿನ ಹುಡುಗ. ಆತನ ಸಾವಿಗೆ ನ್ಯಾಯ ಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಗೂ ಸಹ ಗುರಿಪಡಿಸಲು ಆಗ್ರಹ ಮಾಡಿದರು.

ಆಯುಕ್ತರ ದುರಾಡಳಿತ

ಉತ್ತರ ಕರ್ನಾಟಕದ ರಾಜಧಾನಿ ಹುಬ್ಬಳ್ಳಿ-ಧಾರವಾಡ ದುರುಳರ ಬೀಡಾಗುತ್ತಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದೆ. ಮಕ್ಕಳು ಕೂಡ ಡ್ರಗ್ಸ್ ಸೇವಿಸುತ್ತಿದ್ದಾರೆ. ಅಕ್ರಮ ಚಟುವಟಿಕೆಗೆ ಕಡಿವಾಣ ಹಾಕುವ ಬದಲಿಗೆ ಪೊಲೀಸ್ ಇಲಾಖೆ ಹಣ ಮಾಡುವ ದಂಧೆಗೆ ಇಳಿದಿದೆ. ಇದೆಲ್ಲದಕ್ಕೂ ಪೊಲೀಸ್ ಆಯುಕ್ತರ ದುರಾಡಳಿತ ಕಾರಣ ಎಂದ ಶಾಸಕ ಅರವಿಂದ ಬೆಲ್ಲದ ಗಂಭೀರವಾದ ಆಪಾದನೆ ಮಾಡಿದರು.

ಧಾರವಾಡ ಉಪನಗರ ಠಾಣೆಗೆ ಕಳೆದ ಐದು ತಿಂಗಳಿಂದ ಇನ್ಸಪೆಕ್ಟರ್ ಇಲ್ಲ. ಈ ಹುದ್ದೆಗೆ ವ್ಯವಹಾರ ಕುದರದ ಕಾರಣ ನೇಮಕಾತಿ ಆಗಿಲ್ಲ ಎನಿಸುತ್ತಿದೆ. ಇದೆಲ್ಲ ಸರ್ಕಾರದ ವೈಫಲ್ಯ. ನಿಯಮಗಳ ಪ್ರಕಾರ ಠಾಣಾ ವ್ಯಾಪ್ತಿ ವಿಭಜಿಸಬೇಕು. ಈ ಅಂಶಗಳ ಬಗ್ಗೆ ಗೃಹ ಸಚಿವರಿಗೆ ಪತ್ರ ಬರೆದಿದ್ದೇನೆ. ಕ್ರಮ ಯಾವಾಗ ಎಂಬುವುದೇ ಬೇಸರದ ಸಂಗತಿ.

■ ಅರವಿಂದ ಬೆಲ್ಲದ, ಶಾಸಕ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ



ಗೋಕರ್ಣ: ಪುರಾಣ ಪ್ರಸಿದ್ಧ ಕ್ಷೇತ್ರದಲ್ಲಿ ನರಸಿಂಹ ಜಯಂತಿಯನ್ನ ಗುರುವಾರ ಸಂಭ್ರಮದಿಂದ ಆಚರಿಸಲಾಯಿತು. ಇಲ್ಲಿನ ಕೋಟಿತೀರ್ಥಕಟ್ಟೆ ನರಸಿಂಹ ಮಂದಿರದಲ್ಲಿ ಬೆಳಗ್ಗೆಯಿಂದ ಭಕ್ತರು ಆಗಮಿಸಿ ದೇವರ ದರ್ಶನ, ಪೂಜೆ ನೆರವೇರಿಸಿದರು.

ತಡೆಗೋಡೆ ನಿರ್ಮಿಸಲು ಒತ್ತಾಯ

ಗೋಕರ್ಣ: ಇಲ್ಲಿನ ಮುಖ್ಯ ಕಡಲತೀರದಿಂದ ಊರಿನಿಂದ ಹೊರ ಹೋಗುವ ಮಾರ್ಗದ ಮೀನು ಮಾರುಕಟ್ಟೆ ಹತ್ತಿದರ ಕಿರು ಸೇತುವೆಗೆ ಅಂಚಿನ ತಡೆಗೋಡೆ ನಿರ್ಮಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ತೀರ ಇಕ್ಕಟ್ಟಾದ ರಸ್ತೆಯಲ್ಲಿ ಎರಡು ಕಡೆಯಿಂದ ಶರವೇಗದಲ್ಲಿ ವಾಹನ ಸಂಚರಿಸುತ್ತದೆ. ಸಣ್ಣ ಸೇತುವೆಗೆ ತಡೆಗೋಡೆ ಇಲ್ಲದಿರುವುದರಿಂದ ಎರಡು ವಾಹನಗಳ ಒಮ್ಮೆ ಬಂದರೆ ಜಾಗ ಬಿಟ್ಟುಕೊಡುವಾಗ ಸ್ವಲ್ಪ ಯಾಮಾರಿದರೂ ಅವಘಡ ಸಂಭವಿಸುವ ಅಪಾಯವಿದೆ. ಹಲವು ವರ್ಷಗಳಿಂದ ಸರಿಪಡಿಸದೆ ನಿರ್ಲಕ್ಷಿಸಿದ್ದು, ಈಗಾಗಲೇ ಹಲವು ಅವಘಡಗಳು ನಡೆದಿದ್ದು, ಜೀವಹಾನಿ ಮತ್ತಿತರ ಅನಾಹುತವಾಗುವ ಮುನ್ನ ಸಂಬಂಧಿಸಿದ ಇಲಾಖೆ ಕ್ರಮ ತೆಗೆದುಕೊಳ್ಳಬೇಕಿದೆ.

ಮೇ 24ರಂದು ಪದಾಧಿಕಾರಿಗಳ ಚುನಾವಣೆ

ಮುಂಡಗೋಡ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಪದಾಧಿಕಾರಿಗಳ ಚುನಾವಣೆ ಮೇ 24ರಂದು ನಡೆಯಲಿದೆ ಎಂದು ಜಿಲ್ಲಾ ಸಹಾಯಕ ಚುನಾವಣಾ ಅಧಿಕಾರಿ ಶಂಭುಲಿಂಗಪ್ಪ ಹೂಗಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಪಟ್ಟಣದ ಬಸವೇಶ್ವರ–ವೀರಭದ್ರೇಶ್ವರ ದೇವಸ್ಥಾನದಲ್ಲಿ ಏ.29ರಂದು ಬೆಳಗ್ಗೆ 10.30ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು, ಮೇ 6ರಂದು ಮಧ್ಯಾಹ್ನ 3 ಗಂಟೆಯೊಳಗೆ ನಾಮಪತ್ರ ಸಲ್ಲಿಸುವ ಅವಕಾಶವಿದೆ. ಮೇ 7ರಂದು ನಾಮಪತ್ರಗಳ ಪರಿಶೀಲನೆ ಮತ್ತು ಮೇ 10ರಂದು ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ಹಿಂಪಡೆಯಲು ಅವಕಾಶವಿದೆ. ಮೇ 24ರಂದು ಬೆಳಗ್ಗೆ 8ರಿಂದ 4 ಗಂಟೆವರೆಗೆ ಮತದಾನ ನಂತರ ಮತ ಎಣಿಕೆ ಕಾರ್ಯ ಜರುಗಲಿದೆ. ಹೆಚ್ಚಿನ ಮಾಹಿತಿಗಾಗಿ ತಮ್ಮನ್ನು ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ

ದಾಂಡೇಲಿ: ಮನೆಯಿಂದ ಹೇಳದೆ ಕೇಳದೆ ಹೊರ ಹೋದ ವ್ಯಕ್ತಿಯೊಬ್ಬರು ಈವರೆಗೆ ಮರಳಿ ಮನೆಗೆ ಬಾರದೆ ನಾಪತ್ತೆಯಾಗಿರುವ ಘಟನೆ ದಾಂಡೇಲಿ ನಗರದ ಟೌನಶಿಪ್‌ನಲ್ಲಿ ನಡೆದಿದೆ.ನಗರದ ಟೌನಶಿಪ್'ನ ನಿವಾಸಿ 62 ವರ್ಷ ವಯಸ್ಸಿನ ದಿವಾಕರ ಖಂಡೋಬರಾವ್ ಪಾಟೀಲ್ ಎಂಬವರೇ ನಾಪತ್ತೆಯಾದ ವ್ಯಕ್ತಿಯಾಗಿದ್ದಾರೆ. ಇವರು ಏಪ್ರಿಲ್ 19 ರಂದು ಬೆಳಗ್ಗೆ 5ಗಂಟೆಯಿಂದ 6 ಗಂಟೆಯ ನಡುವಿನ ಅವಧಿಯಲ್ಲಿ ಮನೆಯಿಂದ ಯಾರಿಗೂ ಹೇಳದೆ ಕೇಳದೆ ಎಲ್ಲಿಯೋ ಹೋದವರು ಈವರೆಗೆ ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಇವರನ್ನು ಹುಡುಕಿ ಕೊಡುವಂತೆ ಅವರ ಪುತ್ರ ಅಭಯ ದಿವಾಕರ ಪಾಟೀಲ್ ಅವರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60089	68599
ಬಿಳಿಗೋಟು	28499	37419
ಕೆಂಪುಗೋಟು	28800	37299
ಬೆಟ್ಟೆ	42899	50699
ರಾಶಿ	51099	54199
ಚಾಲಿ	43600	48515
ಬಿ.ಕಾಳುಮೆಣಸು	82099	82099

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	56821	56821
ರಾಶಿ	50189	56699
ಬೆಟ್ಟೆ	37169	49899
ಕೆಂಪುಗೋಟು	18899	37411
ಬಿಳಿಗೋಟು	22012	38299
ಚಾಲಿ	38300	49001
ಕೋಕಾ	15000	36112
ಕಾಳುಮೆಣಸು	54489	69519



ಸಿದ್ದಾಪುರ: ಸ್ಥಳೀಯ ಪ್ರಶಾಂತಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಹಂಸಿನಿ ಮೋಹನ ಹೆಗಡೆ ಇವಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 620 ಅಂಕ ಪಡೆದು (99.02) ರಾಜ್ಯಕ್ಕೆ 6ನೇ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಸೇವಾ ಸಂಕಲ್ಪ ಟ್ರಸ್ಟ್ ಹೊಸೂರು ಹಾಗೂ ಪ್ರಶಾಂತಿ ವಿದ್ಯಾ ಸಂಸ್ಥೆಯ ಟ್ರಸ್ಟನ ಪರವಾಗಿ ಗೌರವಿಸಿ ಅಭಿನಂದಿಸಲಾಯಿತು.

ಸಿಲಿಂಡರ್ ವಿತರಿಸಲು ಗ್ರಾಹಕರ ಒತ್ತಾಯ

ಮುಂಡಗೋಡ: ಗೃಹಬಳಕೆ ಸಿಲಿಂಡರ್ ವಿತರಣೆ ಮಾಡುವಂತೆ ಆಗ್ರಹಿಸಿ ಗ್ರಾಹಕರು ಇಲ್ಲಿನ ಪಟ್ಟಣದ ಯಲ್ಲಾಪುರ ರಸ್ತೆಯಲ್ಲಿರುವ ಎಚ್‌ಪಿ ಗ್ಯಾಸ್ ಗೋದಾಮಿನ ಮುಂದೆ ಖಾಲಿ ಸಿಲಿಂಡರ್ ಇಟ್ಟು ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ. ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದ ಪರಿಣಾಮ ಸಿಲಿಂಡರ್ ಕೊರತೆ ಎದುರಾಗಿದ್ದು, ಸಿಲಿಂಡರ್ ಪಡೆಯಲು ಪಟ್ಟಣದಲ್ಲಿ ಗ್ರಾಹಕರು ಹಲವಾರು ದಿನಗಳಿಂದ ಸಿಲಿಂಡರ್ ಪಡೆಯಲು ಗೋದಾಮಿನ ಮುಂದೆ ಸರತಿ ಸಾಲಿನಲ್ಲಿ ನಿಂತು ಕಾದು ಕಾದು ಮುರಳುವ ದೃಶ್ಯ ಸಾಮಾನ್ಯವಾಗಿದೆ. ಗ್ರಾಹಕರು ಗೃಹಬಳಕೆ ಸಿಲಿಂಡರ್ ಬುಕ್ ಮಾಡಿ ಕೆಲವರಿಗೆ ಒಟಿಪಿ ಬಂದು ಹದಿನೈದು ದಿನಗಳವಾದರು ಏಜೆನ್ಸಿಯವರು ಸಿಲಿಂಡರ ನೀಡುತ್ತಿಲ್ಲ. ಒಂದು ವಾರದಿಂದ ಕಾದರು ಸಿಲಿಂಡರ್ ಬಂದು ವಿತರಣೆ ಮಾಡಿಲ್ಲ. ಹೀಗಾಗಿ ನಾವೇ ಗೋದಾಮಿಗೆ ಬಂದಿದ್ದೇವೆ. ಇಲ್ಲೆಯೂ ಸಿಲಿಂಡರ್ ನೀಡುತ್ತಿಲ್ಲ ಎಂದು ನೂರಾರು ಸಂಖ್ಯೆಯಲ್ಲಿ ಗ್ರಾಹಕರು ಆಕ್ರೋಶ ವ್ಯಕ್ತಪಡಿಸಿ ಖಾಲಿ ಸಿಲಿಂಡರ್ ಇಟ್ಟು ಪ್ರತಿಭಟನೆಗೆ ಇಳಿದರು. ವಿಷಯ ತಿಳಿದು ಪೊಲೀಸರು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರನ್ನು ಸಮಾಧಾನ ಪಡೆಸಿದರು. ಕೆಲ ದಿನಗಳಿಂದ ಒಟಿಪಿ ಬಂದ ಗ್ರಾಹಕರು ಸಿಲಿಂಡರ್ ಪಡೆಯಲು ಬೆಳಗ್ಗೆಯಿಂದಲೇ ಗೋದಾಮಿನ ಮುಂದೆ ಸಿಲಿಂಡರ್ ಪಡೆಯಲು ಸರತಿ ಸಾಲಿನಲ್ಲಿ ಬೆಳಗ್ಗೆಯಿಂದಲೇ ನಿಲ್ಲುತ್ತಿದ್ದಾರೆ. ಇನ್ನು ಕೆಲ ಗ್ರಾಹಕರು ಇದನ್ನೇ ಉಪಯೋಗ ಮಾಡಿಕೊಂಡ ಹೆಚ್ಚಿನ ಹಣಕ್ಕೆ ಹೋಟೆಲಗಳಿಗೆ ಮಾರಾಟ ಮಾಡುತ್ತಿದ್ದಾರೆ ಎಂಬ ಮಾತು ಕೇಳಿಬಂದಿದೆ.



ಮುಂಡಗೋಡ: ಗೃಹಬಳಕೆ ಸಿಲಿಂಡರ್ ವಿತರಣೆ ಮಾಡುವಂತೆ ಆಗ್ರಹಿಸಿ ಗ್ರಾಹಕರು ಇಲ್ಲಿನ ಪಟ್ಟಣದ ಯಲ್ಲಾಪುರ ರಸ್ತೆಯಲ್ಲಿರುವ ಎಚ್‌ಪಿ ಗ್ಯಾಸ್ ಗೋದಾಮಿನ ಮುಂದೆ ಖಾಲಿ ಸಿಲಿಂಡರ್ ಇಟ್ಟು ಪ್ರತಿಭಟನೆ ನಡೆಸಿದರು.

ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಅನು ಸಿವರಾಮನ್ ಹೇಳಿಕೆ

'ಸಮಾಧಾನ ಸಮಾರೋಹ' ಆಯೋಜನೆ

ಕಾರವಾರ: ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳಲು ಭಾರತದ ಸರ್ವೋಚ್ಚ ನ್ಯಾಯಾಲಯ 'ಸಮಾಧಾನ ಸಮಾರೋಹ–2026' ಎಂಬ ವಿಶೇಷ ಲೋಕ ಅದಾಲತ್‌ನ್ನು ಆಗಸ್ಟ್ 21, 22 ಮತ್ತು 23ರಂದು ಮೂರು ದಿನಗಳ ಕಾಲ ಹಮ್ಮಿಕೊಂಡಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾದ ಅನು ಸಿವರಾಮನ್ ತಿಳಿಸಿದರು.

ಇಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸುಪ್ರೀಂ ಕೋರ್ಟ್ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಒಟ್ಟು 4,328 ವಿಚಾರಣೆಗೆ ಬಾಕಿ ಇರುವ ಪ್ರಕರಣಗಳನ್ನು ಸಂಧಾನಕ್ಕಾಗಿ ಗುರುತಿಸಿ ಈ ವಿಶೇಷ ಲೋಕ ಅದಾಲತ್ ಆಯೋಜಿಸಿದ್ದು, ಆಸಕ್ತಿವುಳ್ಳವರು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ನೋಂದಣಿಗೆ ಸಹ ಅವಕಾಶ ಕಲ್ಪಿಸಲಾಗಿದೆ.

ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸಂಪರ್ಕಿಸುವ ಮೂಲಕ ಸಾರ್ವಜನಿಕರು ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಇಂದಿನಿಂದಲೇ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಆಯ್ಕೆಯಾದ ವ್ಯಾಜ್ಯಗಳನ್ನು ನೋಂದಾಯಿತ ಕಾನೂನು ಸಮನ್ವಯಕರ ಮಧ್ಯಸ್ಥಿಕೆಯಲ್ಲಿ ತಾವಿರುವ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿಯೇ ಸಮಸ್ಯೆಯನ್ನು ಬಗೆಹರಿಸಿ ಕೊಳ್ಳಬಹುದಾಗಿದೆ.

ಪ್ರಸ್ತುತ ಸುಪ್ರೀಂ ಕೋರ್ಟ್ ಪ್ರಮುಖವಾಗಿ ಬ್ಯಾಂಕಿಂಗ್ ಮತ್ತು ವಿಮಾ ಸಂಬಂಧಿತ ಪ್ರಕರಣಗಳು, ನಾಗರೀಕ ಕಾನೂನು, ಮೋಟಾರು ಅಪಘಾತ ಪರಿಹಾರ ಪ್ರಕರಣಗಳು, ಗ್ರಾಹಕ ವ್ಯಾಜ್ಯಗಳು ಮತ್ತು ರೇರಾ, ಕ್ರಿಮಿನಲ್ ಪ್ರಕರಣಗಳು, ಕೌಟುಂಬಿಕ ವಿವಾದಗಳು, ಕಾರ್ಮಿಕ ಮತ್ತು ಕೈಗಾರಿಕಾ ಕಾನೂನುಗಳು ವಿವಾದಗಳು, ಭೂಸ್ವಾಧೀನ ಮತ್ತು ಪುನರ್ವಸತಿ, ಆಸ್ತಿ ತೆರಿಗೆ, ಬಾಡಿಗೆ ನಿಯಂತ್ರಣ ಮತ್ತು ಸಾರ್ವಜನಿಕ ಆವರಣ (ತೆರವುಗೊಳಿಸುವಿಕೆ) ಕಾಯ್ದೆ, ವರ್ಗಾವಣೆ ಅರ್ಜಿಗಳು ಮತ್ತು ಸೇವಾ ಕಾನೂನುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಕ್ಕೆ ಗುರುತಿಸಲಾಗಿದೆ.

ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಒಟ್ಟು 4,328 ವಿಚಾರಣೆಗೆ ಬಾಕಿ ಇರುವ ಪ್ರಕರಣಗಳನ್ನು ಸಂಧಾನಕ್ಕಾಗಿ ಗುರುತಿಸಲಾಗಿದ್ದು ಅದರಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 1,245, ಬೆಳಗಾವಿ 517, ಕಲಬುರಗಿ 269, ವಿಜಯಪುರ 213, ಧಾರವಾಡ 188, ಬಾಗಲಕೋಟೆ 159, ಗದಗದಲ್ಲಿ 125, ಬಳ್ಳಾರಿ 109, ತುಮಕೂರು 101, ಕೊಪ್ಪಳ 98, ಹಾವೇರಿ 81, ಉಡುಪಿ 78, ಬೀದರ್ 77, ದಕ್ಷಿಣ ಕನ್ನಡ 75, ಶಿವಮೊಗ್ಗ 69, ರಾಯಚೂರು 69, ಚಿತ್ರದುರ್ಗ 58, ಮೈಸೂರು 56, ದಾವಣಗೆರೆ 47, ಉತ್ತರ ಕನ್ನಡ 35 ಮಂಡ್ಯ 30, ಚಿಕ್ಕಮಗಳೂರು 27, ಹಾಸನ 24, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 18, ರಾಮನಗರ 17, ಚಿಕ್ಕಬಳ್ಳಾಪುರ 17, ಕೊಡಗು 15, ಯಾದಗಿರಿ 14 ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ 4 ಪ್ರಕರಣಗಳು ಒಳಗೊಂಡಿವೆ.

ಆಸಕ್ತ ಕಕ್ಷಿದಾರರು ಅಥವಾ ಅವರ ವಕೀಲರು ಸರ್ವೋಚ್ಚ ನ್ಯಾಯಾಲಯದ ವೆಬ್ ಸೈಟ್‌ನಲ್ಲಿ ನೀಡಲಾದ ಗೂಗಲ್ ಫಾರ್ಮ್ ಲಿಂಕ್ https://forms.gle/jqxefqF4BCWzukoP6 ಮೂಲಕ ಮೇ 31, 2026 ರೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.



> ಈ ವಿಶೇಷ ಲೋಕ ಅದಾಲತ್ ಜನಸಾಮಾನ್ಯರಿಗೆ ತಮ್ಮ ಕಾನೂನು ಹೋರಾಟವನ್ನು ತ್ವರಿತವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಮುಗಿಸಿಕೊಳ್ಳಲು ಸಿಕ್ಕಿರುವ ಮಹತ್ವದ ಅವಕಾಶವಾಗಿದೆ. ಸಾರ್ವಜನಿಕರು ಈ ಅದಾಲತ್ ಪ್ರಯೋಜನ ಪಡೆದುಕೊಳ್ಳಿ.
> ■ ಆರ್.ದೇವದಾಸ್, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ಕಾನೂನು ಸೇವೆಗಳ ಸಮಿತಿ ಅಧ್ಯಕ್ಷ

'ಬ ಖರಾಬ್' ಸಮಸ್ಯೆ ಶೀಘ್ರ ನಿವಾರಿಸಿ: ಶ್ರೀಗಳು

ಶಿರಸಿ: ರೈತ ಕೃಷಿಯನ್ನು ಗಟ್ಟಿಯಾಗಿ ನಂಬಿದರೆ ಮಾತ್ರ ಭಗವಂತ ಹಾಗೂ ಕೃಷಿಯ ಸಾಕ್ಷಾತ್ಕಾರ ಸಾಧ್ಯ ಎಂದು ಸ್ವರ್ಣವಲ್ಲೀ ಸಂಸ್ಥಾನದ ಶ್ರೀಗಂಗಾಧರೇಂದ್ರ ಸರಸ್ವತೀ ಶ್ರೀಗಳು ನುಡಿದರು.

ಸ್ವರ್ಣವಲ್ಲೀ ಮಠದಲ್ಲಿ ಎರಡು ದಿನಗಳ ಕಾಲ ನಡೆದ ಕೃಷಿ ಜಯಂತಿಯ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಅಧಿಕಾರಿಗಳ ದೋಷದಿಂದ ಸೃಷ್ಟಿಯಾದ ಬೆಟ್ಟದ 'ಬ ಖರಾಬ್' ಸಮಸ್ಯೆ ಶೀಘ್ರ ನಿವಾರಣೆಯಾಗಬೇಕು, ಇಲ್ಲವಾದಲ್ಲಿ ಸಂಘಟಿತ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು.

ಕಿರಿಯ ಶ್ರೀ ಆನಂದಬೋಧೇಂದ್ರ ಸರಸ್ವತೀ ಶ್ರೀಗಳು ಭಗವಂತನ ಮೇಲೆ ಭಕ್ತಿಯಿರಲಿ, ಅಧಿಕಾರದ ಮದ ಸಲ್ಲದು ಎಂದು ನುಡಿದರು.

ಸಮಾರಂಭದಲ್ಲಿ ಅತಿಥಿಯಾಗಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಬೆಟ್ಟದ ಕಾಯಿದೆ ಬದಲಾಗಿಲ್ಲ, ಆದರೆ ಅನುಷ್ಠಾನ ಮಾಡುವವರ ದೃಷ್ಟಿಕೋನ ಬದಲಾಗಿದೆ. ಬ ಖರಾಬ್ ಸಮಸ್ಯೆ ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದ ಅವರು, ಜಿಲ್ಲೆಯನ್ನು ಕಾಫಿ ಮಂಡಳಿ ವ್ಯಾಪ್ತಿಗೆ ಸೇರಿಸಲು ಹಾಗೂ ಹಲಸು ಸಂಸ್ಕರಣಾ ಘಟಕ ಸ್ಥಾಪಿಸಲು ಶ್ರಮಿಸುವುದಾಗಿ ಭರವಸೆ ನೀಡಿದರು.

ಟಿ.ಎಸ್.ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಮಾತನಾಡಿ, ಮೈಲುತುತ್ತದ ಬೆಲೆ ಏರಿಕೆಯಾಗಿದ್ದು, ಸರ್ಕಾರ ಸಬ್ಸಿಡಿ ನೀಡಬೇಕು ಎಂದು ಒತ್ತಾಯಿಸಿದರು.

ಸಂಬಾರ ಮಂಡಳಿ ನಿರ್ದೇಶಕ ಪ್ರಸನ್ನ ಕೆರೇಕೈ ಅವರು ಉಪಬೆಳೆಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು.

ಕೃಷಿ ಸಾಧಕರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ದತ್ತಾತ್ರೇಯ ಹೆಗಡೆ ಕೈಗಡಿ (ಕೃಷಿ ಕಂಠೀರವ), ಮಮತಾ ವಿನಾಯಕ ಭಟ್ಟ ಶಮೆಮನೆ (ಸಾಧಕ ಕೃಷಿ ಮಹಿಳೆ), ಸುಬ್ರಹ್ಮಣ್ಯ ಹೆಗಡೆ ಶಿರನಾಲ (ಉತ್ತಮ ಕೃಷಿ ಅವಿಭಕ್ತ ಕುಟುಂಬ) ಹಾಗೂ ವೆಂಕಟರಮಣ ಹೆಗಡೆ ಕಂಪ್ಲಿ ಕಲಾವನ (ಸಾಧಕ ಕೃಷಿ ಕುಶಲಕರ್ಮಿ) ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಮಠದ ಕಾರ್ಯಾಧ್ಯಕ್ಷ ವಿ.ಎನ್.ಹೆಗಡೆ ಬೊಮ್ಮನಳ್ಳಿ ಉಪಸ್ಥಿತರಿದ್ದರು. ಆರ್.ಎನ್. ಹೆಗಡೆ ಉಳ್ಳಿಕೊಪ್ಪ ಸ್ವಾಗತಿಸಿ, ಡಾ. ಜಿ.ವಿ.ಹೆಗಡೆ ನಿರ್ಣಯ ಮಂಡಿಸಿದರೆ, ಸುರೇಶ ಹಕ್ಕಿಮನೆ ಕಾರ್ಯಕ್ರಮ ನಿರ್ವಹಿಸಿದರು.



ಗ್ರಾಮೀಣಾಭಿವೃದ್ಧಿಗೆ 777.94 ಕೋಟಿ ರೂ. ಮೀಸಲು

ಶಿರಸಿ: ನಗರದ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಆಡಳಿತಾಧಿಕಾರಿ ಡಾ. ಬಿ.ಪಿ. ಸತೀಶ ಅಧ್ಯಕ್ಷತೆಯಲ್ಲಿ ನಡೆದ ತಾಪಂ ಮಾಸಿಕ ಕೆಡಿಪಿ ಹಾಗೂ ಸಾಮಾನ್ಯ ಸಭೆಯಲ್ಲಿ, 2026–27ನೇ ಸಾಲಿಗೆ ವಿವಿಧ ಇಲಾಖೆಗಳಿಗೆ ಒಟ್ಟು 13,580.08 ಲಕ್ಷ ರೂ. (135.80 ಕೋಟಿ ರೂ.) ಅನುದಾನದ ಬಜೆಟ್ ಹಂಚಿಕೆ ಮಾಡಲಾಯಿತು.

ಗರಿಷ್ಠ ಮೊತ್ತವನ್ನು ಶಿಕ್ಷಣ ಇಲಾಖೆಗೆ (11,942.30 ಲಕ್ಷ ರೂ.) ಮೀಸಲಿಡಲಾಗಿದ್ದು, ಗ್ರಾಮೀಣಾಭಿವೃದ್ಧಿಗೆ 777.94 ರೂ. ಶಿಶು ಅಭಿವೃದ್ಧಿ ಯೋಜನೆಗೆ 363.04 ರೂ., ಪಶುಸಂಗೋಪನೆಗೆ 270.68ರೂ. ಹಾಗೂ ಸಮಾಜ ಕಲ್ಯಾಣ ಇಲಾಖೆಗೆ 149.15 ರೂ. ಹಂಚಿಕೆ ಮಾಡಲಾಗಿದೆ. ಕೃಷಿ ಇಲಾಖೆಗೆ 33.93 ರೂ., ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ 21.82ರೂ. ಹಾಗೂ ಆರೋಗ್ಯ ಇಲಾಖೆಗೆ 21.22 ರೂ. ಅನುದಾನ ನೀಡಲಾಗಿದ್ದು, ತೋಟಗಾರಿಕೆ ಇಲಾಖೆಗೆ ಯಾವುದೇ ಹಂಚಿಕೆ ಮಾಡಲಾಗಿಲ್ಲ.

ಸಭೆಯಲ್ಲಿ ಅಧ್ಯಕ್ಷ ಡಾ. ಬಿ.ಪಿ. ಸತೀಶ ಮಾತನಾಡಿ, ಮಧ್ಯಪ್ರಾಚ್ಯದ ಯುದ್ಧದ ಸನ್ನಿವೇಶಗಳ ನಡುವೆಯೂ ಗೊಬ್ಬರದ ಕೊರತೆಯಿಲ್ಲ, ಬಾಕಿ ಇರುವ ನರೇಗಾ ಹಾಗೂ ಅರಣ್ಯ ಇಲಾಖೆಯ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಧುಕರ ನಾಯ್ಕ ಮಾತನಾಡಿ, ಬೆಳೆ ವಿಮೆಯಿಂದ ಕೈಬಿಡಲ್ಪಟ್ಟ ರೈತರು ತಹಶೀಲ್ದಾರ್ ಸಮಿತಿಯ ಮೂಲಕ ಹೆಸರು ಸೇರಿಸಲು ಅವಕಾಶವಿದೆ. ಮುಂಗಾರು ಹಿನ್ನೆಲೆಯಲ್ಲಿ ಕೃಷಿ ಹೊಂಡಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದರು.

ಹಿಂದುಳಿದ ವರ್ಗಗಳ ಇಲಾಖೆಯ ಪ್ರಸಾದ ಆಲದಕಟ್ಟೆ ವಸತಿ ನಿಲಯಗಳ ದುರಸ್ತಿಗೆ ಅನುದಾನ ಕೋರಿದರು. ಪಶುಸಂಗೋಪನಾ ಇಲಾಖೆಯ ಡಾ. ದಿನೇಶ್ ಚರ್ಮರೋಗ ಲಸಿಕಾ ಅಭಿಯಾನದ ಬಗ್ಗೆ ಮಾಹಿತಿ ನೀಡಿ, ರೈತರು ಒಟಿಪಿ ನೀಡಲು ಆತಂಕಪಡಬೇಡಿ ಎಂದು ಮನವಿ ಮಾಡಿದರು. ಲೆಕ್ಕಾಧಿಕಾರಿ ಸೀತಾರಾಮ ನಾಯ್ಕ ವಾರ್ಷಿಕ ಲೆಕ್ಕ ಮಂಡಿಸಿದರು.

> ಯೂರಿಯಾ ಖರೀದಿಗೆ ಎಫ್‌ಐಡಿ ಮೂಲಕ ಆ್ಯಪ್ ನೋಂದಣಿ ಕಡ್ಡಾಯ. ಈ ಬಾರಿ ಗೊಬ್ಬರದ ಸಮಸ್ಯೆ ಉದ್ಭವಿಸುವುದಿಲ್ಲ, ರೈತರು ಆತಂಕಪಡುವ ಅಗತ್ಯವಿಲ್ಲ.
> ■ ಮಧುಕರ ನಾಯ್ಕ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ



ಹೈಟೆಕ್ ಬೀದಿ ದೀಪ ಉದ್ಘಾಟಿಸಿದ ಶಾಸಕ

ಕುಮಟಾ: ಪಟ್ಟಣದ ಮೂರೂರು ಕ್ರಾಸ್‌ನಿಂದ ಬಿಇಒ ಕಚೇರಿ ಹಾಗೂ ಆಡಳಿತ ಸೌಧಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಅಳವಡಿಸಲಾದ ಹೈ ಮಾಸ್ಟ್ ಬೀದಿ ದೀಪವನ್ನು ಶಾಸಕ ದಿನಕರ ಶೆಟ್ಟಿ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 2018ರಿಂದ 2023ರವರೆಗೆ ತಮ್ಮ ಅವಧಿಯಲ್ಲಿ ಕುಮಟಾ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾಗಿ ತಿಳಿಸಿದರು. ಅದರಲ್ಲಿ ಆಡಳಿತ ಸೌಧ ನಿರ್ಮಾಣದ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಕೂಡ ಸೇರಿವೆ ಎಂದು ಹೇಳಿದರು. ಇದೀಗ ಹೈ ಮಾಸ್ಟ್ ಬೀದಿ ದೀಪವನ್ನು ಲೋಕಾರ್ಪಣೆಗೊಳಿಸಿರುವುದು ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ ಎಂದರು.

ಹೈ ಮಾಸ್ಟ್ ಬೀದಿ ದೀಪ ಹಾಗೂ ರಸ್ತೆ ಅಭಿವೃದ್ಧಿಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸುಮಾರು 1 ಕೋಟಿ ರೂ. ಅನುದಾನ ಮಂಜೂರಾಗಿ, ಟೆಂಡರ್ ಪ್ರಕ್ರಿಯೆಯೂ ಪೂರ್ಣಗೊಂಡಿತ್ತು. ಗುಣಮಟ್ಟದ ಕಾಮಗಾರಿ ನಡೆಸಿ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವುದನ್ನು ಅವರು ಶ್ಲಾಘಿಸಿದರು.ಕುಮಟಾದಲ್ಲಿ ಇದೇ ಮೊದಲ ಬಾರಿಗೆ ಹೈಟೆಕ್ ಬೀದಿ ದೀಪ ಅಳವಡಿಸಲಾಗಿದ್ದು, ಮುಂದಿನ ದಿನಗಳಲ್ಲಿ ಅಗತ್ಯವಿರುವ ಸ್ಥಳಗಳಲ್ಲಿ ಇಂತಹ ವ್ಯವಸ್ಥೆಗಳನ್ನು ಸ್ಥಾಪಿಸುವ ಯೋಜನೆ ಇದೆ ಎಂದು ಹೇಳಿದರು. ಗುತ್ತಿಗೆದಾರ ಧೀರೂ ಶಾನಭಾಗ, ಲೋಕೋಪಯೋಗಿ ಇಲಾಖೆಯ ಎಂ.ಪಿ. ನಾಯ್ಕ, ಉಪವಿಭಾಗಾಧಿಕಾರಿ ಪಿ. ಶ್ರವಣಕುಮಾರ್, ಪುರಸಭೆ ಮುಖ್ಯಾಧಿಕಾರಿ ಎಂ.ಆರ್. ಸ್ವಾಮಿ, ಹೆಸ್ಕಾಂ ಎಇಇ ರಾಜೇಶ ಮಡಿವಾಳ, ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ವೆಂಕಟೇಶ ನಾಯಕ, ತಾಲೂಕಾಧ್ಯಕ್ಷ ಜಿ.ಐ. ಹೆಗಡೆ, ಜಿಲ್ಲಾ ಉಪಾಧ್ಯಕ್ಷ ಜಿ.ಎಸ್. ಗುನಗಾ, ನಿಕಟಪೂರ್ವ ಅಧ್ಯಕ್ಷ ಹೇಮಂತಕುಮಾರ್ ಗಾಂವ್ಕರ್, ಪ್ರಮುಖರಾದ ಸುಧೀರ್ ಪಂಡಿತ್, ಗಣೇಶ ಅಂಬಿಗ, ಜಯಾ ಶೇಟ್, ದೀಪಾ ಹರಿಕಾಂತ, ಹರಿ ಶೇಟ್ ಉಪಸ್ಥಿತರಿದ್ದರು.



ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ

ಶಿರಸಿ: ತಾಲೂಕಿನ ನಗರ ಪ್ರದೇಶಗಳಿಗೆ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಮಧ್ಯಭಾಗದಲ್ಲಿರುವ ನಿರ್ಜನ ಪ್ರದೇಶದಲ್ಲಿ ನಿರಂತರವಾಗಿ ಕಸ ಎಸೆಯುತ್ತಿರುವ ಪರಿಣಾಮ, ಈ ಪ್ರದೇಶದಲ್ಲಿ ಅಸ್ವಚ್ಛತೆ ತೀವ್ರವಾಗಿ ಹೆಚ್ಚಿದ್ದು ಜನಸಾಮಾನ್ಯರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ದುರ್ವಾಸನೆ, ಹಾನಿಕಾರಕ ಕೀಟಗಳ ಹೆಚ್ಚಳ ಹಾಗೂ ಪರಿಸರ ಮಾಲಿನ್ಯದಿಂದ ಈ ರಸ್ತೆಯಲ್ಲಿ ಸಂಚರಿಸುವವರಿಗೂ,ಪ್ರತಿದಿನ ವಾಕಿಂಗ್ ಮಾಡುವ ಪಾದಚಾರಿಗಳಿಗೂ ಉಸಿರಾಡುವುದೇ ಕಷ್ಟವಾಗುವ ಸ್ಥಿತಿ ನಿರ್ಮಾಣವಾಗಿದೆ.

ಇಂತಹ ಪರಿಸ್ಥಿತಿಯನ್ನು ಮನಗಂಡು, ಸಮಾಜ ಸೇವಕರಾದ ಶ್ರೀನಿವಾಸ್ ಹೆಬ್ಬಾರ್ ಅವರು ಯಾವುದೇ ಸರ್ಕಾರಿ ನೆರವಿಲ್ಲದೆ ತಮ್ಮ ಸ್ವಂತ ವೆಚ್ಚದಲ್ಲಿ ಹಲವು ಬಾರಿ ಸ್ವಚ್ಛತಾ ಕಾರ್ಯವನ್ನು ಈಗಾಗಲೇ ಮಾಡುತ್ತಾ ಬಂದಿರುತ್ತಾರೆ. ಕಳೆದ ಎರಡು ದಿನಗಳಿಂದ ಮತ್ತೆ ಸ್ವಚ್ಛತಾ ಕಾರ್ಯವನ್ನು ನಡೆಸುತ್ತಿರುವುದು ಅವರ ಪರಿಸರ ಪ್ರೀತಿ ಮತ್ತು ಸಾಮಾಜಿಕ ಜವಾಬ್ದಾರಿಯ ಸ್ಪಷ್ಟ ಉದಾಹರಣೆಯಾಗಿದೆ. ಸಾರ್ವಜನಿಕರಿಗೆ ಮನವಿ: ಕಸವನ್ನು ನಿಗದಿತ ಸ್ಥಳದಲ್ಲೇ ಹಾಕಿ, ಸ್ವಚ್ಛತೆಯನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.ಪರಿಸರವನ್ನು ಹಾಳು ಮಾಡುವಂತಹ ಚಟುವಟಿಕೆಗಳನ್ನು ತೊರೆದು, ಸ್ವಚ್ಛ ಮತ್ತು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು.ಸ್ಥಳೀಯ ಆಡಳಿತವೂ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಕಸ ಎಸೆಯುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಹಾಗೂ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.ನವೀನ್ ಶೆಟ್ಟಿ, ಚಂದನ್ ಪೈ, ಡಾ. ಸತೀಶ್ ,ದೀಪಕ್ ದೊಡ್ಡೂರ, ನಾಗರಾಜ್ ಶೆಟ್ಟಿ, ನೀಲಕಂಠ ಹೆಗಡೆ , ರವಿ ಮತ್ತು ಊರ ನಾಗರಿಕರು ಉಪಸ್ಥಿತರಿದ್ದರು.



ಚೌಡೇಶ್ವರಿ, ವೀರಾಂಜನೇಯ ವರ್ಧಂತಿ ಉತ್ಸವ



ಅಂಕೋಲಾ: ತಾಲೂಕಿನ ಬಾಳೆಗುಳಿಯ ಬೊಗ್ರಿಬೈಲ್ ಬಳಿ ನೆಲೆ ನಿಂತು ಭಕ್ತರ ಇಷ್ಟಾರ್ಥಗನ್ನು ಈಡೇರಿಸುತ್ತಿರುವ ಶ್ರೀ ಉದ್ಭವ ಚೌಡೇಶ್ವರಿ ಅಮ್ಮನವರು ಮತ್ತು ವೀರಾಂಜನೇಯ ಸ್ವಾಮಿ ದೇವರ ಚತುರ್ಥ ವಾರ್ಷಿಕ ವರ್ಧಂತಿ ಉತ್ಸವ ಹಲವು ವಿಶೇಷತೆಗಳೊಂದಿಗೆ ನಡೆಯಿತು.

ಶ್ರೀ ಚೌಡೇಶ್ವರಿ ಮತ್ತು ಶ್ರೀ ವೀರಾಂಜನೇಯ ಸ್ವಾಮಿಯ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಬೃಹತ್ ಅಗ್ನಿಕುಂಡವನ್ನು ನಿರ್ಮಿಸಿ ಮಹಾಚಂಡಿಯಾಗವನ್ನು ನಡೆಸಲಾಯಿತು.

ರಾಮನಗರದಿಂದ ಕೆಂಡದ ಬಸವೇಶ್ವರ ಸ್ವಾಮಿ ಎಂದೇ ಕರೆಯಲ್ಪಡುವ ಬಸವ ಆಗಮಿಸಿ ದೇವರ ಧಾರ್ಮಿಕ ಪೂಜಾ ಕಾರ್ಯಕ್ರಮ ಮತ್ತು ಮಹಾಚಂಡಿ ಹವನದ ಪೂರ್ಣಾಹುತಿಯಲ್ಲಿ ಪಾಲ್ಗೊಂಡಿದ್ದು ಮತ್ತು ಭಕ್ತಜನರನ್ನು ಹರಸಿದ್ದು ವಿಶೇಷವಾಗಿತ್ತು.

ವಿಶೇಷ ಪಂಚವಾದ್ಯ ಮೇಳದೊಂದಿಗೆ ದೇವರ ಮಹಾಪೂಜೆಯ ನಂತರ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.ಉತ್ಸವದ ಅಂಗವಾಗಿ ಅಮ್ಮನವರ ಗದ್ದುಗೆ ಪೂಜೆ, ಉದ್ಭವ ನಾಗಚೌಡೇಶ್ವರಿ ವೀರಾಂಜನೇಯ ದೇವರುಗಳ ಪಲ್ಲಕ್ಕಿ ಉತ್ಸವ, ಅಗ್ನಿಪ್ರವೇಶ ಕಾರ್ಯಕ್ರಮ ನಡೆಯಿತು. ಕ್ಷೇತ್ರದ ಧರ್ಮದರ್ಶಿಗಳು ಮತ್ತು ಅರ್ಚಕರು ಮತ್ತು ಭಕ್ತಾದಿಗಳು ದೇವರ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ಕ್ರೀಡೆ ನಾಯಕತ್ವ ಗುಣ ಬೆಳವಣಿಗೆಗೆ ಸಹಾಯಕ

ಭಟ್ಕಳ: ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವ, ರಾಷ್ಟ್ರ ಪ್ರೇಮ ಮತ್ತು ಬಲವಾದ ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸುತ್ತದೆ ಎಂದು ಕರ್ನಾಟಕ ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಅಧ್ಯಕ್ಷ ರಮೇಶ್ ಕೆ ಮೇಸ್ತ ಹೇಳಿದರು.

ಅವರು ಗುರು ಸುಧೀಂದ್ರ ಪದವಿ ಮಹಾವಿದ್ಯಾಲಯದಲ್ಲಿ ಆಯೋಜಿಸಲ್ಪಟ್ಟ ಕರ್ನಾಟಕ ವಿಶ್ವವಿದ್ಯಾಲಯ ಅಂತರ ಮಹಾವಿದ್ಯಾಲಯಗಳ ತೃತೀಯ ವಲಯ ಮಟ್ಟದ ಪುರುಷರ ಕಬ್ಬಡಿ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು. ಜಡ ಜೀವನಶೈಲಿ ಹೆಚ್ಚು ಸಾಮಾನ್ಯವಾಗುತ್ತಿರುವ ಇಂದಿನ ಯುಗದಲ್ಲಿ, ಕ್ರೀಡೆಗಳಲ್ಲಿ ನಿಯಮಿತವಾಗಿ ಭಾಗವಹಿಸುವಿಕೆಯು ಬೊಜ್ಜು, ಹೃದ್ರೋಗ ಮತ್ತು ಮಧುಮೇಹದಂತಹ ಗಂಭೀರ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಭಟ್ಕಳ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ. ಸುರೇಶ ವಿ ನಾಯಕ್ ಮಾತನಾಡಿದರು.ಮಹಾವಿದ್ಯಾಲಯದ ಪ್ರಾಂಶುಪಾಲ ಶ್ರೀನಾಥ್ ಪೈ ಸ್ವಾಗತಿಸಿದರು. ವಾಣಿಜ್ಯ ವಿಭಾಗದ ಉಪ ಪ್ರಾಂಶುಪಾಲ ಫಣಿಯಪ್ಪಯ್ಯ ಹೆಬ್ಬಾರ್ ವಂದಿಸಿರು. ಬಿಎ ದ್ವಿತೀಯ ವರ್ಷದ ವಿದ್ಯಾರ್ಥಿನಿ ನಿಶ್ಚಿತ ವಂದಿಸಿದರು. ಪಂದ್ಯಾವಳಿಯಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಶಿರಸಿ ತಂಡ ಪ್ರಥಮ ಸ್ಥಾನ, ಸರಕಾರಿ ಪ್ರಥಮ ದರ್ಜೆ ಕಾಲೇಜು ಸಿದ್ದಾಪುರ ತಂಡ ದ್ವಿತೀಯ ಸ್ಥಾನ, ಆತಿಥೇಯ ಗುರು ಸುಧೀಂದ್ರ ಮಹಾವಿದ್ಯಾಲಯದ ತಂಡ ತೃತೀಯ ಸ್ಥಾನವನ್ನು ಪಡೆಯಿತು.



ನರಸಿಂಹ ಜಯಂತಿ ಆಚರಣೆ

ಯಲ್ಲಾಪುರ: ತಾಲೂಕಿನ ತಟಗಾರ ಜೋಡಳ್ಳ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ನರಸಿಂಹ ಜಯಂತಿಯ ಅಂಗವಾಗಿ ತಾಂತ್ರಿಕರಾದ ಕಟ್ಟೆ ಶಂಕರ ಭಟ್ಟ ಆಚಾರ್ಯತ್ವದಲ್ಲಿ

ನರಸಿಂಹ ಮೂಲಮಂತ್ರ ಹೋಮ, ಪುರಷಸೂಕ್ತ, ಶ್ರೀ ಸೂಕ್ತಹವನ, ನೂತನ ಶಿಲಾಮಯ ಧ್ವಜಸ್ತಂಭ ಪ್ರತಿಷ್ಠೆ ನಡೆಯಿತು.

ನೂತನ ಶಿಲಾಮಯ ಧ್ವಜಸ್ತಂಭವನ್ನು ನೀಡಿದ ಮಂಚಿಕೇರಿ ಹೊಕ್ಕಳ ಜಡ್ಡಿಯ ಎನ್‌ಎಸ್‌ಭಟ್ಟ ಹಾಗೂ ಸಮಾ.ಎನ್.ಭಟ್ಟರನ್ನು ಕಟ್ಟೆಗೆ ಪ್ರಭಾವಳಿ ನೀಡಿದ ವಿಶ್ವನಾಥ ಭಟ್ಟಹಂಗಾರಿ ಅವರನ್ನು ಸಮಿತಿಯ ವತಿಯಿಂದ ಗೌರವಿಸಲಾಯಿತು.

ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯಕ್ಕೆ ನಾಲ್ಕನೇಯ ಸ್ಥಾನ ಪಡೆದ ಗ್ರಾಮದ ಸಮೃದ್ಧಿ ಭಾಗ್ವತ್ ಹಾಗೂ ಗಣೇಶಭಟ್ ಅವರನ್ನು ಪುರಸ್ಕರಿಸಲಾಯಿತು. ಸಮಿತಿಯ ಪರವಾಗಿ ಅಧ್ಯಕ್ಷ

ಗೋಪಾಲ ಹಂಗಾರಿ, ಕಾರ್ಯದರ್ಶಿ ನರಸಿಂಹಬೋಳ ಪಾಲ್ದಾರರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು. ಮಧ್ಯಾಹ ಅನ್ನ ಸಂತರ್ಪಣೆ ನಡೆಯಿತು. ಸುತ್ತಮುತ್ತಲಿನ ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿಸಿದರು.



ಇಂದು ಬ್ರಹ್ಮಾಂಡ ಕವನ ಸಂಕಲನ ಲೋಕಾರ್ಪಣೆ

ಯಲ್ಲಾಪುರ: ಪ್ರಣವ ಪ್ರತಿಷ್ಠಾನ ಹಂಡ್ರಮನೆ, ಸಹ್ಯಾದ್ರಿ ಸಂಚಯ ಟ್ರಸ್ಟ್ ಮಂಗಳೂರು ಇವರ ಆಶ್ರಯದಲ್ಲಿ ಯುವ ಲೇಖಕ ಶ್ರೀಕಾಂತ ನಾಯ್ಕ ಅವರ ಭಾವಗಳ ಬ್ರಹ್ಮಾಂಡ ಕವನ ಸಂಕಲನ ಮೇ 1ರಂದು ಮಧ್ಯಾಹ 3.30 ಕ್ಕೆ ಪಟ್ಟಣದ ಅಡಿಕೆ ಭವನದಲ್ಲಿ ಲೋಕಾರ್ಪಣೆ ಗೊಳ್ಳಲಿದೆ ಎಂದು ನಿವೃತ್ತ ಶಿಕ್ಷಕಿ ಸಾಹಿತಿ ಯಮುನಾ ನಾಯ್ಕ ಹೇಳಿದರು.ಅವರು ಪಟ್ಟಣದಲ್ಲಿ ಸುದ್ದಿ ಗೋಷ್ಠಿಯಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾಹಿತಿ ನೀಡಿ, ಶಾಸಕ ಶಿವರಾಮ ಹೆಬ್ಬಾರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪ್ರಣವ ಪ್ರತಿಷ್ಠಾನದ ಅಧ್ಯಕ್ಷ ಗೋಪಾಲಕೃಷ್ಣ ಭಟ್ಟ ಹಂಡ್ರಮನೆ ಅಧ್ಯಕ್ಷತೆ ವಹಿಸಲಿದ್ದಾರೆ. ಸಹ್ಯಾದ್ರಿ ಸಂಚಯದ ಸಂಚಾಲಕ ದಿನೇಶ ಹೊಳ್ಳ ಕೃತಿ ಲೋಕಾರ್ಪಣೆ ಗೊಳಿಸಲಿದ್ದಾರೆ.ಸಂಕಲ್ಪ ಅಧ್ಯಕ್ಷ ಪ್ರಮೋದ ಹೆಗಡೆ,ಡಿಎಫ್ ಓ ಹರ್ಷಬಾನು,ಪ್ರಾಂಶುಪಾಲ ಆರ್ ಡಿ ಜನಾರ್ಧನ, ಮುಂತಾದವರು ಭಾಗವಹಿಸಲಿದ್ದಾರೆ ಎಂದರು.

ಕೃತಿಕಾರ ಶ್ರೀಕಾಂತ ನಾಯ್ಕ ಮಾತನಾಡಿ, ಸಾಹಿತ್ಯದಲ್ಲಿ ತಂತ್ರಜ್ಞಾನ ಬಳಸಿದ್ದು, ಇದೊಂದು ಎಐ ತಂತ್ರಜ್ಞಾನದಲ್ಲಿ ರಚಿಸಿದ ಕವಿತೆಗಳಾಗಿವೆ ಎಂದರು.ಕಸಾಪ ನಿಕಟ ಪೂರ್ವ ಅಧ್ಯಕ್ಷ ವೇಣುಗೋಪಾಲ ಮದ್ಗುಣಿ ಮಾತನಾಡಿ, ಈ ಸಂದರ್ಭದಲ್ಲಿ ವಿನಾಯಕ ನಾಯ್ಕ ಅವರ ಶಿಷ್ಯರಿಂದ ಯಕ್ಷಗಾನ, ನಾಟ್ಯ ನಿಕೇತನ ಉಮ್ಮಚಗಿ ಅವರಿಂದ ಭರತನಾಟ್ಯ ಹಾಗೂ ಕವಿಗೋಷ್ಠಿ ನಡೆಯಲಿದೆ ಎಂದರು.



ಕಿರುಸುದ್ದಿ

ಮನೆಯಲ್ಲಿ ಮಹಾಮನೆ ಕಾರ್ಯಕ್ರಮ

ಹಾವೇರಿ: ಹಾವೇರಿ ಬಸವ ಬಳಗದವರಿಂದ ಬಸವಾದಿ ಶಿವಶರಣರ ತತ್ವಗಳನ್ನು ಮನೆ ಮನಕ್ಕೆ ಮುಟ್ಟಿಸುವ ಹಿನ್ನಲೆಯಲ್ಲಿ ನಗರದಲ್ಲಿ ಮನೆಯಲ್ಲಿ ಮಹಾಮನೆ ಕಾರ್ಯಕ್ರಮ ಜರುಗಿತು. ಬಸವ ಬಳಗದ ಅಧ್ಯಕ್ಷ ವಿ.ಜಿ. ಯಳಗೇರಿ, ಶಿವಬಸಪ್ಪ ಮುದ್ದಿ, ಪವನ ಪಂಪಣ್ಣವರ ಮತ್ತು ಜಗದೀಶ ಹತ್ತಿಕೋಟಿ ಶರಣರ ವಚನ ಸಾಹಿತ್ಯ ಮತ್ತು ಶರಣರ ತತ್ವಗಳಲ್ಲಿರುವ ವೈಚಾರಿಕ ಅಂಶಗಳ ಕುರಿತಾಗಿ ಅನುಭಾವ ನೀಡಿದರು. ಪುಟ್ಟ ಮಕ್ಕಳಾದ ಮಾನ್ಯಾ ಪಂಪಣ್ಣವರ, ಸಿದ್ದಲಿಂಗೇಶ ಮಾಸೂರ ವಚನಗಳನ್ನು ಹೇಳಿದರು. ಕಾರ್ಯಕ್ರಮದಲ್ಲಿ ಮುರಿಗೆಪ್ಪ ಕಡೇಕೊಪ್ಪ, ಶಾಂತಪ್ಪ ಪಂಪಣ್ಣವರ, ಎನ್.ಬಿ. ಕಾಳೆ, ಮಾಲತೇಶ ಕರೆಮಣ್ಣವರ, ಶಿವಯೋಗಿ ಬೆನ್ನೂರ, ಶಿವಬಸಪ್ಪ ಪಟ್ಟಣಶೆಟ್ಟಿ, ಶಿವಾಜಿ ಅಂಗಡಿ, ಗಂಗಾಧರ ಮಾಸೂರ, ಕೆ.ಎಂ. ಬಿಜಾಪುರ, ಶಿವಾನಂದ ಹೊಸಮನಿ, ಹನುಮಂತಪ್ಪ ಮಡಿವಾಳರ, ಪುಟ್ಟಪ್ಪ ಮಲಕಣ್ಣನವರ, ಶೋಭಾ ಪಂಪಣ್ಣನವರ, ನಿಶಾ ಪಂಪಣ್ಣನವರ ಇತರರು ಇದ್ದರು. ಕಾವ್ಯಾ ಅಂಗಡಿ ವಚನ ಪ್ರಾರ್ಥನೆ ಮಾಡಿದರು. ಉಳಿವೆಪ್ಪ ಪಂಪಣ್ಣವರ ಸ್ವಾಗತಿಸಿದರು. ಮಲ್ಲಿಕಾರ್ಜುನ ಹಿಂಚಿಗೇರಿ ನಿರೂಪಿಸಿದರು.

ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸಹಾಯವಾಣಿ

ಹಾವೇರಿ: ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ಜಲ ಮೂಲಗಳು ಬತ್ತಿಹೋಗಿ, ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಂಭವವಿರುವ ಹಿನ್ನೆಲೆಯಲ್ಲಿ, ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ, ಕುಡಿಯುವ ನೀರಿನ ಅಗತ್ಯ ವ್ಯವಸ್ಥೆ ಕಲ್ಪಿಸಲು ಹಾಗೂ ಸಾರ್ವಜನಿಕರಿಗೆ ನೀರಿನ ಸಮಸ್ಯೆ ನಿವಾರಿಸಲು ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಸಹಾಯವಾಣಿ 08375-232522 ಸ್ಥಾಪಿಸಲಾಗಿದೆ. ಹಾವೇರಿ ತಾಲೂಕಿನ ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆಯಾದಲ್ಲಿ ಸಹಾಯವಾಣಿಗೆ ಕರೆ ಮಾಡಿ ದೂರು ಸಲ್ಲಿಸಬಹುದು. ಜೂ.15ರವರೆಗೆ ಈ ಸಹಾಯವಾಣಿ ಕಾರ್ಯನಿರ್ವಹಿಸಲಿದ್ದು, ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2ಗಂಟೆಗೆ ಪ್ರ.ದ.ಸ ಸುಪ್ರಿಯಾ ಪಾಟೀಲ ಹಾಗೂ ಮಧ್ಯಾಹ್ನ 2 ಗಂಟೆಯಿಂದ ಸಂಜೆ 6ಗಂಟೆವರೆಗೆ ಸಪೋರ್ಟ ಇಂಜನೀಯರ್ ಶಿವಕುಮಾರ ಹಳ್ಳಿಕೇರಿ ಅವರನ್ನು ನಿಯೋಜಿಸಲಾಗಿದೆ ಎಂದು ಹಾವೇರಿ ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗಡಿ ಬಂದ್‌ಗೆ ಸೂಚನೆ

ಹುಬ್ಬಳ್ಳಿ: ಬುದ್ಧ ಪೂರ್ಣಿಮಾ ಅಂಗವಾಗಿ ಮೇ 1 ರಂದು ಪಾಲಿಕೆ ಹು-ಧಾ ವಧಾಲಯಗಳು ಹಾಗೂ ಎಲ್ಲ ಮಾಂಸದ ಅಂಗಡಿಗಳನ್ನು ಬಂದ್ ಮಾಡಲು ಸೂಚಿಸಲಾಗಿದೆ. ಮಾಂಸದ ಅಂಗಡಿಗಳನ್ನು ತೆರೆದಿದ್ದಲ್ಲಿ ಪಾಲಿಕೆಯಿಂದ ಅವರ ಲೈಸನ್ಸ್ ರದ್ದುಪಡಿಸಿ, ಸರ್ಕಾರದ ನಿಯಮಗಳನ್ವಯ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮುಖ್ಯ ಪಶು ವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಹಾವೇರಿ: ಬ್ಯಾಡಗಿ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ 2026-27 ನೇ ಸಾಲಿನ ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಕೋರ್ಸುಗಳು ಮತ್ತು ಸೀಟುಗಳ ವಿವರ: ಸಿವಿಲ್ ಇಂಜಿನಿಯರಿಂಗ್, ಕ್ಲೌಡ್ ಕಂಪ್ಯೂಟಿಂಗ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ಇಂಜನಿಯರಿಂಗ್ ಕೋರ್ಸ್‌ಗಳ ತಲಾ 63 ಸೀಟುಗಳು ಲಭ್ಯವಿರುತ್ತವೆ. ಪ್ರವೇಶ ಬಯಸುವ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಆಸಕ್ತ ವಿದ್ಯಾರ್ಥಿಗಳು ಬ್ಯಾಡಗಿ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಅರ್ಜಿಯನ್ನು ಪಡೆದು, ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ ಬ್ಯಾಡಗಿ ಇವರಿಗೆ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯ ಸಿ.ಜಿ.ಗಂಟಿಸಿದ್ದಪ್ಪನವರ ಸಂಪರ್ಕಿಸಬಹುದು.

ವ್ಯಕ್ತಿ ಶವ ಪತ್ತೆ

ಹಾವೇರಿ: ಬ್ಯಾಡಗಿ ಪಟ್ಟಣದ ಸುಭಾಸ ಮೃತ್ತದಲ್ಲಿ 50ರಿಂದ 60ವರ್ಷದ ಅಪರಿಚಿತ ಪುರುಷ ಶವ ಪತ್ತೆಯಾಗಿದೆ. ಮೃತ ವ್ಯಕ್ತಿಯ ಕುರಿತು ಯಾವುದೇ ಮಾಹಿತಿ ಲಭ್ಯವಾಗಿದಿಲ್ಲ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಬಾಡಗಿ ಪೊಲೀಸ್ ಠಾಣೆ ಅಧಿಕಾರಿಗಳು ತಿಳಿಸಿದ್ದಾರೆ. ಮೃತ ವ್ಯಕ್ತಿಯ 5.4 ಅಡಿ ಎತ್ತರ, ಕೋಲು ಮುಖ, ತೆಳುವಾದಮೈ ಕಟ್ಟು, ಹಾಗೂ ಬಿಳಿಮೈ ಬಣ್ಣ ಹೊಂದಿದ್ದು, ಪರ್ಪಲ್ ಕಲರ್ ತುಂಬು ತೋಳಿನ ಶರ್ಟ್, ತಿಳಿ ಹಸಿರು ಬಣ್ಣದ ಬಿಯನ್ ಧರಿಸಿದದ್ದು, ಸೊಂಟದಲ್ಲಿ ಕೆಂಪುದಾರ ಇರುತ್ತದೆ. ಮೃತನ ವಾರಸುದಾರರಿದ್ದಲ್ಲಿ ಬ್ಯಾಡಗಿ ಪೊಲೀಸ್ ಠಾಣೆ ಸಂಪರ್ಕಿಸಲು ಕೋರಲಾಗಿದೆ.



ಹಾವೇರಿ: ಹಾವೇರಿ ಬಸವ ಬಳಗದವರಿಂದ ಬಸವಾದಿ ಶಿವಶರಣರ ತತ್ವಗಳನ್ನು ಮನೆ ಮನಕ್ಕೆ ಮುಟ್ಟಿಸುವ ಹಿನ್ನಲೆಯಲ್ಲಿ ನಗರದಲ್ಲಿ ಮನೆಯಲ್ಲಿ ಮಹಾಮನೆ ಕಾರ್ಯಕ್ರಮ ಜರುಗಿತು.

ಮಕ್ಕಳ ಆಧಾರ್ ಅಪ್‌ಡೇಟ್ ಕಡ್ಡಾಯ

ಹಾವೇರಿ: ಜಿಲ್ಲೆಯಲ್ಲಿ 5ರಿಂದ 7 ವರ್ಷ ಮತ್ತು 15ವರ್ಷ ವಯಸ್ಸಿನ ಮೇಲ್ಪಟ್ಟ ವಿದ್ಯಾರ್ಥಿಗಳ ಆಧಾರ್ ಕಾರ್ಡ್‌ನಲ್ಲಿ ಬಯೋಮೆಟ್ರಿಕ್ (ಬೆರಳಚ್ಚು) ಅಪ್‌ಡೇಟ್ (ಐಆಖಿ)ಮಾಡುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ. ಬಯೋಮೆಟ್ರಿಕ್ ಅಪ್‌ಡೇಟ್ ಮಾಡದೇ ಇರುವ ಪ್ರಕರಣಗಳು ಸಾಕಷ್ಟು ಇರುವ ಹಿನ್ನಲೆಯಲ್ಲಿ ಯುಐಡಿಎಐ ಮತ್ತು ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಶಾಲೆಗಳ ಮೂಲಕ ವಿಶೇಷ ಕಾರ್ಯಕ್ರಮ ಆಯೋಜಿಸಿ ಬಾಕಿ ಇರುವ ಎಂಬಿಯು-1 ಹಾಗೂ ಎಂಬಿಯು-2 ಕಾರ್ಯಗಳನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಸರ್ಕಾರದ ವಿವಿಧ ಯೋಜನೆಗಳಿಗೆ ಆಧಾರ್ ಕಡ್ಡಾಯವಾಗಿದ್ದು ಪ್ರತಿ 5ರಿಂದ 7ವರ್ಷ ಮತ್ತು 15ವರ್ಷ ವಯಸ್ಸಿನ ಮೇಲ್ಪಟ್ಟ ವಿದ್ಯಾರ್ಥಿಗಳ ಆಜಿಟಖಟಿಛಿಕ್ಷಿ ಆಧಾರ್ ನವೀಕರಣ ಮಾಡಿಸಿಕೊಳ್ಳಲು ಕೋರಲಾಗಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರು ತಮ್ಮ ಸಮೀಪದ, ಬ್ಯಾಂಕ್, ಪೋಸ್ಟ್ ಆಫೀಸ್, ಅಟಲ್ ಜೀ ಕೇಂದ್ರಗಳು ಹಾಗೂ ಸಿಎಸ್‌ಸಿ ಕೇಂದ್ರಗಳಿಗೆ ಭೇಟಿ ನೀಡಿ, ಎಂಬಿಯು ಅಪ್‌ಡೇಟ್ ಮಾಡಿಸಬೇಕು. ಸಮಯಕ್ಕೆ ಸರಿಯಾಗಿ ಅಪ್‌ಡೇಟ್ ಮಾಡಿಸದಿದ್ದರೆ ಭವಿಷ್ಯದಲ್ಲಿ ಸಮಸ್ಯೆಗಳು ಎದುರಾಗಬಹುದು (ಉದಾ: ಪರೀಕ್ಷೆ, ವಿದ್ಯಾರ್ಥಿ ಸೇವೆಗಳು). ಆದ್ದರಿಂದ ಸಾರ್ವಜನಿಕರು ಈ ಕುರಿತು ತಕ್ಷಣ ಆಧಾರ್ Mandatory Biometric Updates (MBU) ಕಾರ್ಯಾಚರಣೆ ನವೀಕರಣಗಳ ಸದುಪಯೋಗ ಪಡೆದುಕೊಳ್ಳುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಳ್ನಾವರ: ತಾಲೂಕಿನ ಕಡಬಗಟ್ಟಿ ಗ್ರಾಮದ ಅರಿವು ಕೇಂದ್ರ, ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದಲ್ಲಿ ಆಯೋಜಿಸಿದ್ದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ | ಸಿಇಒ ಬಿಂದಲ್ ಹೇಳಿಕೆ

ಅಭಿವೃದ್ಧಿಯ ಮೂಲ ಪಂಚಾಯತ್ ವ್ಯವಸ್ಥೆ

ಹಾವೇರಿ: ಪಂಚಾಯತ್ ವ್ಯವಸ್ಥೆಯು ದೇಶದ ಅಭಿವೃದ್ಧಿಗೆ ಮೂಲ ಸ್ತಂಭವಾಗಿದ್ದು, ಗ್ರಾಮ ಮಟ್ಟದಲ್ಲಿ ಜನರ ಅಗತ್ಯಗಳಿಗೆ ಸ್ಪಂದಿಸುವ ಆಡಳಿತವೇ ನಿಜವಾದ ಪ್ರಜಾಪ್ರಭುತ್ವದ ಸಾರ್ಥಕತೆಯಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರುಚಿ ಬಿಂದಲ್ ಅವರು ಹೇಳಿದರು.

ಜಿಪಂ ಸಭಾಂಗಣದಲ್ಲಿ ಗುರುವಾರ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಂಚಾಯತ್‌ಗಳ ಮೂಲಕ ಸರ್ಕಾರಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಅಧಿಕಾರಿಗಳು ಇನ್ನಷ್ಟು ಹೊಣೆಗಾರಿಕೆಯಿಂದ ಕೆಲಸ ಮಾಡಬೇಕಿದೆ. ಗ್ರಾಮೀಣ ಆಡಳಿತ ವ್ಯವಸ್ಥೆಗೆ ಸಾಂವಿಧಾನಿಕ ಸ್ಥಾನಮಾನ ನೀಡಿದ 73ನೇ ಸಂವಿಧಾನ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ದಿನವನ್ನು ಸ್ಮರಿಸುವುದಾಗಿದೆ. ಇದರಿಂದ ಗ್ರಾಮ, ತಾಲೂಕು (ಮಧ್ಯಂತರ) ಮತ್ತು ಜಿಲ್ಲಾಮಟ್ಟಗಳಲ್ಲಿ ಮೂರು ಹಂತಗಳ ಪಂಚಾಯತ್ ವ್ಯವಸ್ಥೆಯನ್ನು ರೂಪಿಸಲಾಯಿತು. ಗ್ರಾಪಂ, ತಾಪಂ ಮತ್ತು ಜಿಪಂಗಳು ಗ್ರಾಮೀಣ ಆಡಳಿತದ ಮೂಲ ಘಟಕಗಳಾಗಿ ಕಾರ್ಯನಿರ್ವಹಿಸುತ್ತಿವೆ. ಈ ತಿದ್ದುಪಡಿಯಿಂದ ಜನರಿಗೆ ಆಡಳಿತದಲ್ಲಿ ನೇರ ಪಾಲ್ಗೊಳ್ಳುವ ಅವಕಾಶ ದೊರೆತಿದೆ, ಪ್ರಜಾಪ್ರಭುತ್ವವನ್ನು ತಳಮಟ್ಟದವರೆಗೆ ತಲುಪಿಸುವ ಮಹತ್ವದ ಕಾರ್ಯ ಸಾಧ್ಯವಾಗಿದೆ.

ಸಮಾಜದ ಎಲ್ಲಾ ವರ್ಗಗಳ ಪ್ರತಿನಿಧಿತ್ವ ಮಹಿಳೆಯರು, ಪರಿಶಿಷ್ಟರಿಗೆ ಮೀಸಲಾತಿಯನ್ನು ನೀಡುವ ಮೂಲಕ ಸಮಾನ ಅವಕಾಶಗಳನ್ನು ಕಲ್ಪಿಸಲಾಗಿದೆ. ವಿಶೇಷವಾಗಿ ಮಹಿಳೆಯರಿಗೆ ಕನಿಷ್ಠ ಶೇ.33 ಮೀಸಲಾತಿ ನೀಡಿರುವುದು. ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಮಹತ್ತರ ಉತ್ತೇಜನ ನೀಡಿದೆ. ಅನೇಕ ರಾಜ್ಯಗಳಲ್ಲಿ ಈ ಮೀಸಲಾತಿಯನ್ನು ಶೇ.50ರವರೆಗೆ ವಿಸ್ತರಿಸಲಾಗಿದೆ. ಈ ಕಾಯ್ದೆಯ ಪ್ರಮುಖ ವೈಶಿಷ್ಟ್ಯಗಳಲ್ಲಿ ಇದು ಒಂದು ಎಂದರು. ಪಂಚಾಯತ್‌ಗಳಿಗೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಹಸ್ತಾಂತರಿಸಲಾಗಿದೆ. ಕೃಷಿ, ನೀರು ನಿರ್ವಹಣೆ, ಗ್ರಾಮೀಣ ರಸ್ತೆ, ಆರೋಗ್ಯ, ಶಿಕ್ಷಣ, ಕುಡಿಯುವ ನೀರು, ಸ್ವಚ್ಛತೆ ಮುಂತಾದ 29 ವಿಷಯಗಳನ್ನು ಪಂಚಾಯತ್‌ಗಳಿಗೆ ನೀಡಲಾಗಿದೆ. ಇದರಿಂದ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಜಾರಿಗೆ ತರಲು ಪಂಚಾಯತ್‌ಗಳು ಸಬಲವಾಗಿವೆ. ಇಂದು ಪಂಚಾಯತ್ ವ್ಯವಸ್ಥೆಯು ಗ್ರಾಮೀಣ ಅಭಿವೃದ್ಧಿಗೆ ಪ್ರಮುಖ ಚಾಲಕ ಶಕ್ತಿಯಾಗಿದೆ. ಮಹಾತ್ಮಾಜಿ ಕನಸು 'ಗ್ರಾಮ ಸ್ವರಾಜ್ಯ'ದ ದಿಕ್ಕಿನಲ್ಲಿ ಈ ವ್ಯವಸ್ಥೆ ಮಹತ್ತರ ಪಾತ್ರ ವಹಿಸುತ್ತಿದೆ. ಡಿಜಿಟಲ್ ತಂತ್ರಜ್ಞಾನಗಳ ಬಳಕೆ, ಪಾರದರ್ಶಕ ಆಡಳಿತ ಮತ್ತು ಜನಸಹಭಾಗಿತ್ವದ ಮೂಲಕ ಪಂಚಾಯತ್‌ಗಳು ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವುದು ಗಮನಾರ್ಹ ಎಂದರು.ಜಿಪಂ ಉಪ ಕಾರ್ಯದರ್ಶಿ ಡಾ.ಪುನೀತ್, ಯೋಜನಾ ನಿರ್ದೇಶಕಿ ರೇಖಾ ಡೊಳ್ಳಿನ ಸೇರಿದಂತೆ ಜಿಲ್ಲೆಯ ಎಲ್ಲಾ ಇಒಗಳು, ಸಹಾಯಕ ನಿರ್ದೇಶಕರು ಹಾಗೂ ಪಿಡಿಒಗಳು ಇದ್ದರು.



ಅತ್ಯುತ್ತಮ ಸೇವಾ ಪುರಸ್ಕಾರ

ಸರ್ಕಾರದ ನಿರ್ದೇಶನದಂತೆ, 2025-26ನೇ ಸಾಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗೈದ ತಾಪಂಗಳು, ಗ್ರಾಪಂಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ 'ಅತ್ಯುತ್ತಮ ಸೇವಾ ಪುರಸ್ಕಾರ'ಪ್ರದಾನ ಮಾಡಲಾಯಿತು. ಅತೀ ಹೆಚ್ಚು ತೆರಿಗೆ ವಸೂಲಿ ಮಾಡಿದ ರಟ್ಟಿಹಳ್ಳಿ ತಾಪಂಯ ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಶಿಗ್ಗಾಂವ ತಾಲೂಕಿನ ನಾರಾಯಣಪುರ ಗ್ರಾಪಂ ಅತೀ ಹೆಚ್ಚು ತೆರಿಗೆ ವಸೂಲಿ ಮಾಡಿ ಗೌರವಕ್ಕೆ ಪಾತ್ರವಾಗಿದೆ. ಈ ಸಾಧನೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ನಾಗರಾಜ ತರವಂದ ಹಾಗೂ ಬಿಲ್ ಕಲೆಕ್ಟರ್ ಕೃಷ್ಣಕುಲಕರ್ಣಿ, ಹಾವೇರಿ ತಾಲೂಕಿನ ಹಾವನೂರ ಗ್ರಾಪಂ ಪಿಡಿಒ ಬಸವರಾಜ ಮುಂಡವಾಡ ಹಾಗೂ ಗ್ರಂಥಾಲಯ ಮೇಲ್ವಿಚಾರಕ ಕೋಟಪ್ಪ ಪುಟ್ಟಪ್ಪ ಕೆಂಗನಿಂಗಪ್ಪನವರ ಅವರ ಶ್ರಮ ಪ್ರಮುಖವಾಗಿದೆ ಎಂದು ಜಿಪಂ ಸಿಇಒ ರುಚಿ ಬಿಂದಲ್ ಶ್ಲಾಘಿಸಿದರು.

ಇಂದು ಭಗವಾನ್ ಬುದ್ಧರ ಜಯಂತಿ

ಹಾವೇರಿ: ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಗವಾನ್ ಬುದ್ಧರ ಜಯಂತಿಯನ್ನು ಮೇ 1ರಂದು ಬೆಳಗ್ಗೆ 11ಗಂಟೆಗೆ ಹಾವೇರಿ ನಗರದ ಪ್ರವಾಸಿತಾಣ ಗಾಂಧಿ ಭವನದಲ್ಲಿ ಜರುಗಲಿದೆ.

ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಮಾಜಿ ಮುಖ್ಯ ಮಂತ್ರಿಗಳು ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರ ಗೌರವ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹೆಸ್ಕಾಂ ಅಧ್ಯಕ್ಷ ಅಜೀಮಪೀರ್ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ.ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ ಅವರು ಭಾಗವಹಿಸಲಿದ್ದಾರೆ.

ಗೊಟಗೋಡಿ ಜಾನಪದ ವಿವಿ ಕುಲಪತಿ ಡಾ.ಟಿ.ಎಂ.ಭಾಸ್ಕರ್ ವಿಶೇಷಉಪನ್ಯಾಸಕರಾಗಿ ಭಾಗವಹಿಸಲಿದ್ದಾರೆ.ಡಾ.ಗುರು ಚಲವಾದಿ ಅವರಿಂದ ಸಂಗೀತ ಗಾಯನ ಜರುಗಲಿದೆ.

ಅರ್ಜಿ ಅವಧಿ ವಿಸ್ತರಣೆ

ಹಾವೇರಿ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಹಾವೇರಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜುಗಳಿಗೆ 2026-27ನೇ ಸಾಲಿಗೆ ಪ್ರಥಮ ಪಿಯುಸಿ (ವಿಜ್ಞಾನ ವಿಭಾಗ) ಪ್ರವೇಶಾತಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಅವಧಿ ವಿಸ್ತರಿಸಲಾಗಿದೆ. ಆಸಕ್ತ ಪ್ರತಿಭಾನ್ವಿತ ವಿದ್ಯಾರ್ಥಿಗಳು ಅವಶ್ಯಕ ದಾಖಲಾತಿಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೇ 2ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವಾಗ ಎಸ್ಸೆಸ್ಸೆಲ್ಸಿ ತರಗತಿಯಲ್ಲಿ ಪಡೆದ ಅಂಕ ಹಾಗೂ ಇತರೇ ಎಲ್ಲಾ ಮಾಹಿತಿಯನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು. ಹೆಚ್ಚಿನ ಮಾಹಿತಗಾಗಿ ಸಮೀಪದ ವಸತಿ ಶಾಲಾ/ಕಾಲೇಜಿನ ಪ್ರಾಂಶುಪಾಲರನ್ನು ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಣಿ-ಪಕ್ಷಿ ಸಂಕುಲದ ರಕ್ಷಣೆ ನಮ್ಮೆಲ್ಲರ ಕರ್ತವ್ಯ

ಹಾವೇರಿ: ಮನುಷ್ಯನ ದೇಹದಲ್ಲಿ ಶೇ.70ರಷ್ಟು ನೀರಿನಂಶವಿರುವಂತೆಪ್ರಕೃತಿಯಸಮತೋಲನಕ್ಕೂ ನೀರು ಅತಿ ಅಗತ್ಯ. ಬೇಸಿಗೆಯ ಈ ಕಠಿಣ ಸಮಯದಲ್ಲಿ ಬಾಯಾರಿದ ಪ್ರಾಣಿ-ಪಕ್ಷಿಗಳಿಗೆ ನೀರುಣಿಸುವ ಮೂಲಕ ಜೀವ ಸಂಕುಲವನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಬಿರಾದಾರ ದೇವೇಂದ್ರಪ್ಪ ಅವರು ಹೇಳಿದರು.

ಜಿಲ್ಲಾ ನ್ಯಾಯಾಂಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ವಾಟರ್ ಫಾರ್ ವಾಯ್ಸ್‌ಲೆಸ್ ಬೆಂಗಳೂರು ಹಾಗೂ ಜಿಲ್ಲಾ ಅಭಿಯೋಜನಾ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ವಾಟರ್ ಫಾರ್ ವಾಯ್ಸ್‌ಲೆಸ್- ಪ್ರಾಣಿ-ಪಕ್ಷಿಗಳಿಗೆ ನೀರಿನ ಮಹತ್ವ (ನೀರು ನೀಡಿ ಜೀವ ಉಳಿಸಿ ಅಭಿಯಾನದಲ್ಲಿ ತೊಡಗಿಸಿಕೊಳ್ಳಲು) ಹಾಗೂ ಬಾಲ್ಯ ವಿವಾಹ ನಿಷೇಧ, ಪೋಕ್ಸೋ ಕಾಯ್ದೆ ಮತ್ತು ವರದಕ್ಷಿಣೆ ನಿಷೇಧ ಕುರಿತ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವ ಜಲ ದಿನಾಚರಣೆಯ ಮಹತ್ವವನ್ನು ವಿವರಿಸಿದ ನ್ಯಾಯಾಧೀಶರು ಹಿಂದಿನ ದಿನಗಳಲ್ಲಿ ಕುಡಿಯುವ ನೀರಿಗಾಗಿ ಜನರು ದೂರದೂರಿಗೆ ಹೋಗುತ್ತಿದ್ದ ಪರಿಸ್ಥಿತಿಯನ್ನು ಸ್ಮರಿಸಿದ ಅವರು ಇಂದಿನ ದಿನಗಳಲ್ಲಿ ನೀರಿನ ಕೊರತೆ ಮತ್ತೊಮ್ಮೆ ಹೆಚ್ಚುತ್ತಿರುವುದರಿಂದ ಸಂಗ್ರಹಣೆ ಮರುಬಳಕೆ ಮತ್ತು ಸಮರ್ಪಕ ಉಪಯೋಗಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಹೆಚ್.ಸಿ. ಸಿದ್ದನಗೌಡ ಮಾತನಾಡಿದರು.

ವಾಟರ್ ಫಾರ್ ವಾಯ್ಸ್‌ಲೆಸ್ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ರಂಜನಾ ಚಂದ್ರಶೇಖರ ಅವರು ಪ್ರಾಣಿ-ಪಕ್ಷಿಗಳಿಗೆ ನೀರಿನ ಅಗತ್ಯತೆ ಹಾಗೂ ನೀರಿನ ತೊಟ್ಟಿಗಳನ್ನು ಇಡುವ ಕುರಿತು ಉಪನ್ಯಾಸ ನೀಡಿದರು. ಕಾನೂನು ನೆರವು ಸಹಾಯಕ ಅಭಿರಕ್ಷಣಾ ವಕೀಲರಾದ ಎನ್.ಎಸ್. ಡಿಳ್ಳೆಪ್ಪನವರ ಅವರು ಬಾಲ್ಯ ವಿವಾಹ ನಿಷೇಧ, ಪೋಕ್ಸೋ ಮತ್ತು ವರದಕ್ಷಿಣೆ ನಿಷೇದ ಕಾಯ್ದೆಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ದಿವಾಣಿ ನ್ಯಾಯಾಧೀಶರಾದ ಶ್ರೀಶೈಲಜಾ ಹೆಚ್.ವಿ. ಅವರು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಸರ್ಕಾರಿ ಅಭಿಯೋಜಕರಾದ ಸರೋಜಾ ಕೂಡ್ಲಗಿಮಠ, ಮುಖ್ಯ ಕಾನೂನು ನೆರವು ಅಭಿರಕ್ಷಣಾ ವಕೀಲರು, ಎಲ್.ಎ.ಡಿ.ಸಿ.ಎಸ್ ವಿ.ಜಿ. ದೊಡ್ಡಗೌಡರ, ವಕೀಲರು, ನ್ಯಾಯಾಲಯದ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.



ದೇವಸ್ಥಾನ ನಿರ್ಮಾಣ ಕಾರ್ಯ ಶ್ಲಾಘನೀಯ: ಶ್ರೀಗಳು

ರಟ್ಟೀಹಳ್ಳಿ : ಹಿಂದೂ ಪುರಾಣಗಳಲ್ಲಿ ಗಂಗಾ ನದಿಯನ್ನು ಸ್ವರ್ಗದಿಂದ ಭೂಮಿಗೆ ತಂದ ಮಹಾನ್ ರಾಜರ್ಷಿ ಭಗೀರಥನ ಜನ್ಮ ದಿನವನ್ನು ಅದ್ದೂರಿಯಿಂದ ಆಚರಣೆ ಮತ್ತು ದೇವಸ್ಥಾನ ನಿರ್ಮಾಣ ಮಾಡಿರುವುದು ಶ್ಲಾಘನೀಯವಾಗಿದೆ. ಈ ದಿನವು ಕಠಿಣ ತಪಸ್ಸು, ಛಲ ಬಿಡದ ಪ್ರಯತ್ನ ಮತ್ತು ಲೋಕ ಕಲ್ಯಾಣದ ಸಂಕೇತವಾಗಿದೆ ಎಂದು ಹೊಸ ದುರ್ಗದ ಚಿನ್ಮೂಲಾದ್ರಿ ಶಿಲಾಪುರಿ ಸೂರ್ಯ ಸಿಂಹಾಸನ ಭಗಿರಥಗುರು ಪೀಠದ ಡಾ.ಪುರುಷೋತ್ತಮಾನಮದಪುರಿ ಶ್ರೀಗಳು ಹೇಳಿದರು.

ಪಟ್ಟಣದ ಕೋಟೆ ಪ್ರದೇಶದಲ್ಲಿ ರಾಜರ್ಷಿ ಭಗೀರಥ ಸ್ವಾಮಿಯ ದೇವಸ್ಥಾನ ಉದ್ಘಾಟನೆ, ದೇವತಾ ಮೂರ್ತಿಗಳ ಪ್ರತಿಷ್ಠಾಪನೆ, ರಾಜರ್ಷಿ ಭಗೀರಥ, ದುರ್ಗಾದೇವಿ, ನಾಗದೇವತೆ, ಪಾದಗಟ್ಟೆದೇವತಾ ವಿಗ್ರಹಗಳ ಪ್ರತಿಷ್ಠಾಪನಾ ಸಮಾರಂಭದಲ್ಲಿ ಮಾತನಾಡಿದರು.

ರಟ್ಟೀಹಳ್ಳಿ ಕಬ್ಬಿಣ ಕಂತಿಮಠದ ಶಿವಲಿಂಗ ಶಿವಾಚರ್ಯ ಶ್ರೀಗಳು , ತಿಪ್ಪಾಯಿಕೊಪ್ಪದ ಮಹಾಂತ ಸ್ವಾಮಿಗಳು, ಮಾವಿನತೋಪಗ್ರಾಮದ ಸತ್ಯಪ್ರಮೋದೇಂಧ್ರ ಸರಸ್ವತಿ ಶ್ರೀಗಳು ಮಾತನಾಡಿದರು. ಕಾನಿಪ ಧ್ವನಿ ಸಂಘಟನೆಯ ರಾಜ್ಯಾಧ್ಯಕ್ಷ ಬಂಗ್ಲೇ ಮಲ್ಲಿಕಾರ್ಜುನ ಮಾತನಾಡಿದರು.

ಗೌರವಾಧ್ಯಕ್ಷ ನಾಗರಾಜ ಉಪ್ಪಾರ, ಅಧ್ಯಕ್ಷ ಶಿವಕುಮಾರ ಉಪ್ಪಾರ, ಶಂಕ್ರಪ್ಪ ಉಪ್ಪಾರ, ಈರಪ್ಪ ಬಳ್ಳೇಶ್ವರ, ಸಂತೋಷ ಪವಾರ, ರಾಮಪ್ಪಉಪ್ಪಾರ, ಲಕ್ಷಪ್ಪ ಬಳ್ಳೇಶ್ವರ, ದೇವರಾಜ ನಾಗಣ್ಣನವರ, ಸುರೇಶ ಮಲ್ಲಾಡದ, ರಾಜುಉಪ್ಪಾರ, ರಮೇಶಉಪ್ಪಾರ, ತಿರಕಪ್ಪ ಉಪ್ಪಾರ, ಮಂಜಪ್ಪ ಉಪ್ಪಾರ, ಅಡಿವೆಪ್ಪ ಉಪ್ಪಾರ, ಮರಡೆಪ್ಪ ಉಪ್ಪಾರ,ಈರಪ್ಪ ಉಪ್ಪಾರ,ಪರಶುರಮಪ್ಪ ಉಪ್ಪಾರ, ರಮೇಶ ಉಪ್ಪಾರ, ಸಾವಿತ್ರಮ್ಮ ಉಪ್ಪಾರ ಉಪಸ್ಥಿತರಿದ್ದರು. ದೇವಸ್ಥಾನದಅಭಿವೃದ್ಧಿಗೆ ಶ್ರಮಿಸಿದ ಎಲ್ಲ ಸಾಧಕರನ್ನು ಸನ್ಮಾನಿಸಲಾಯಿತು.



ಮೇ 10ಕ್ಕೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ

ಹಾವೇರಿ: ಜಿಲ್ಲಾಡಳಿತದಿಂದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮ ಅರ್ಥಪೂರ್ಣ ಹಾಗೂ ವಿಜೃಂಭಣೆ ಆಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ್ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಸಮಾಜದ ಮುಖಂಡರೊಂದಿಗೆ ಚರ್ಚಿಸಿ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಮೇ 10ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ಗಾಂಧೀ ಭವನದಲ್ಲಿ ಆಚರಣೆಗೆ ಹಾಗೂ ಜಯಂತಿ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಅಧಿಕ ಪಡೆದ ಸಮಾಜದ ವಿದ್ಯಾಥಿಗಳಿಗೆ ಸನ್ಮಾನ ಮಾಡಲು ತೀರ್ಮಾನಿಸಲಾಯಿತು. ಜಿಲ್ಲಾಮಟ್ಟದಲ್ಲಿ ಆಯೋಜಿಸುವಂತೆ ತಾಲೂಕುಮಟ್ಟದಲ್ಲಿ ಜಯಂತಿ ಆಚರಣೆಗೆ ಆಯಾ ತಾಲೂಕು ತಹಶೀಲ್ದಾರ ನಿರ್ದೇಶನ ನೀಡುವಂತೆ ಸಮಾಜದ ಮುಖಂಡರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಕಾರ್ಯಕ್ರಮದ ಆಮಂತ್ರಣ ಪತ್ರಿಕೆ, ಮೆರಣಿಗೆಗೆ ಕಲಾ ತಂಡ, ಉಪನ್ಯಾಸಕರು, ವೇದಿಕೆ, ಧ್ವನಿ-ಬೆಳಕು, ಆಸನ, ಕುಡಿಯುವ ನೀರು, ಉಪಹಾರ, ವ್ಯವಸ್ಥೆಯನ್ನು ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಮನ್ವಯದಿಂದ ಮಾಡಬೇಕೆಂದು ಸಲಹೆ ನೀಡಿದರು. ಸಭೆಯಲ್ಲಿ ತಾಲೂಕು ಮಟ್ಟದ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ, ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹಾಜರಿದ್ದರು.



ಬದುಕಿನಲ್ಲಿ ಸಂಸ್ಕಾರ ಅವಶ್ಯ: ಶ್ರೀಗಳು

ರಟ್ಟೀಹಳ್ಳಿ: ಸಂಸ್ಕಾರ ಎಂದರೆ ಸದ್ಗುಣಗಳ ಗುಣಾಕಾರ, ಮತ್ತು ವ್ಯಕ್ತಿತ್ವ ದೋಷಗಳ ವಿಭಜನೆ. ಸಂಸ್ಕಾರವಿಲ್ಲದ ಜೀವನ ಸಾರವಿಲ್ಲದ ಜೀವನವಿದ್ದಂತೆ ಎಂದು ರಟ್ಟೀಹಳ್ಳಿ ಕಬ್ಬಿಣ ಕಂತಿಮಠದ ಶಿವಲಿಂಗ ಶಿವಾಚಾರ್ಯ ಶ್ರೀಗಳು ಹೇಳಿದರು.

ತಾಲೂಕಿನ ಇಂಗಳಗೊಂದಿ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಗೋಪುರದ ಉದ್ಘಾಟನೆ ಹಾಗೂ ಕಳಸಾರೋಹಣ ಉದ್ಘಾಟಿಸಿ ಮಾತನಾಡಿದರು. ತಿಪ್ಪಾಯಿಕೊಪ್ಪದ ಮೂಕಪ್ಪಸ್ವಾಮಿ ಮಠದ ಶ್ರೀ ಮಹಾಂತ ಶ್ರೀಗಳು, ವೀರಬಸಯ್ಯ ಮಠದ, ಗಂಗಾಧರ ಮಠದ ಮಾತನಾಡಿದರು. ಅಧ್ಯಕ್ಷ ಸಿದ್ದನಗೌಡ ಹಲಗೇರಿ, ಕೆಸಿಸಿ ಬ್ಯಾಂಕ ನಿರ್ದೇಶಕ ಲಿಂಗರಾಜ ಚಪ್ಪರದಹಳ್ಳಿ, ಕಾರ್ಯದರ್ಶಿ ಕುಮಾರ ತಂಬಾಕದ, ಏಕೇಶಣ್ಣ ಕೋಣನತಲಿ, ರಾಮನಗೌಡ ದಿಗ್ಗಿಗೌಡ್ರ, ಶಂಕ್ರಪ್ಪ ಗಿಡ್ಡಪ್ಪನವರ, ಶಂಕ್ರಪ್ಪ ಮುಟ್ಟಕ್ಕಳವರ, ಆನಂದಪ್ಪ ಹುಲ್ಲತ್ತಿ, ಮಹದೇವಕ್ಕಕಡೂರು, ಈಶ್ವರಪ್ಪ ಹಿತ್ಲಳ್ಳಿ, ವಿಜಯ ಪೂಜಾರ, ಮೋಹನ ಕೆಂಚಿಕೊಪ್ಪದ, ಮಂಜಪ್ಪ ಹರಿಜನ, ಸಿದ್ದನಗೌಡ ಪಾಟೀಲ, ಬಸವರಾಜ ಮಳಗಿ, ಹನುಮಂತಪ್ಪ ಉಜನೀಪುರ, ಜ್ಯೋತಿ ಹಲಗೇರಿ, ಶಿವಯೋಗಿ ನಾಗಪ್ಪನವರ, ಸತೀಶ ಚಪ್ಪರದಹಳ್ಳಿ, ಕುಸುಮಾವತಿ ಹಿತ್ಲಳ್ಳಿ, ಶಿವನಂದ ಪೂಜಾರ, ಹನುಮಂತಪ್ಪಕಡೂರು, ಈರಪ್ಪಉಜನೀಪುರ, ಹಾಲಪ್ಪಕುರುಬರ, ನಾಗರಾಜತುಮ್ಮಿನಕಟ್ಟಿ, ನಾಗರಾಜಗಿಡ್ಡಪ್ಪನವರ, ಶಿದ್ದಲಿಂಗ ಪೂಜಾರ, ಕರಬಸಪ್ಪಗಿಡ್ಡಪ್ಪನವರ ಉಪಸ್ಥಿತರಿದ್ದರು.



ಹೆಸ್ಕಾಂ ತಾಲೂಕು ಸಹಾಯಕ ಎಂಜಿನಿಯರ್‌ಗೆ ತರಾಟೆ

ಬ್ಯಾಡಗಿ: ಹೆಸ್ಕಾಂ ತಾಲೂಕು ಸಹಾಯಕ ಇಂಜನೀಯರ ರಾಜು ಅರಳಿಕಟ್ಟಿ ಅವರನ್ನು ತಾಲೂಕಾ ಗ್ಯಾರಂಟಿ ಸಭೆಯಲ್ಲಿ ಸದಸ್ಯರು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.

ಗುರುವಾರ ತಾಪಂ ಸಭಾಭವನದಲ್ಲಿ ಅಧ್ಯಕ್ಷ ಶಂಭಣ್ಣ ಪಾಟೀಲ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸದಸ್ಯ ರಾಮಣ್ಣ ಕೋಟಿಯವರ ಮಾತನಾಡಿ, ಪಟ್ಟಣ ಹಾಗೂ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆ ಹೆಚ್ಚಿದ್ದು, ಪದೇ ಪದೇ ವಿದ್ಯುತ್ ಕಣ್ಣಾಮುಚ್ಚಾಲೆ ಆಟವಾಡುತ್ತಿದೆ. ಲೈನ್ ಮನ್‌ಗಳು ಒಂದೇ ಕಡೆ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಸಾರ್ವಜನಿಕ ದೂರಿನ ಬಗ್ಗೆ ಕ್ಯಾರೇ ಎನ್ನುವುದಿಲ್ಲ, ಲೈನ್ ಮನಗಳು ತಾವು ಮಾಡುವ ಕೆಲಸವನ್ನು ಖಾಸಗಿ ಜನರಿಂದ ಮಾಡಿಸುತ್ತಿದ್ದಾರೆ.ಇದರಿಂದ ವಿದ್ಯುತ್ ಅವಘಡಗಳು ಸಂಭವಿಸಿ ವಿದ್ಯುತ್ ಪ್ರವಹಿಸಿ ಸಾವು ನೋವಾದರೇ ಯಾರು ಹೊಣೆ! ಆದ್ದರಿಂದ ಲೈನ್ ಮನ್‌ಗಳ ಮೇಲೆ ಕ್ರಮ ಕೈಗೊಳ್ಳಿ ಇಲ್ಲವಾದಲ್ಲಿ ಬೇರೆಡೆ ವರ್ಗಾವಣೆ ಮಾಡಿ ಎಂದು ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಹೆಸ್ಕಾಂ ಇಂಜಿನೀಯರ ರಾಜು ಅರಳಿಕಟ್ಟಿ ಮಾತನಾಡಿ, ಯಾವುದೇ ಲೈನ್‌ಮನಗಳ ಮೇಲೆ ಕ್ರಮ ಕೈಗೊಳ್ಳುವ ಅಥವಾ ಅವರಿಗೆ ಏನು ಹೇಳುವ ಅಧಿಕಾರ ನನಗಿಲ್ಲವೆಂದು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಶಂಭಣ್ಣ ಪಾಟೀಲ ಸಭೆ ದಾರಿ ತಪ್ಪುತ್ತಿರುವುದನ್ನು ಹಾಗೂ ಅಧಿಕಾರಿ ವಿರುದ್ಧ ಸಾಕಷ್ಟು ದೂರುಗಳು ಬಂದ್ ಹಿನ್ನೆಲೆಯಲ್ಲಿ ಸಭೆಯಲ್ಲಿ ಹೆಸ್ಕಾಂ ಅಧಿಕಾರಿಗಳು ಬೇಜವಾಬ್ದಾರಿಯಿಂದ ಮಾತನಾಡಿದ್ದನ್ನು ಖಂಡಿಸಿದ ಅವರು ಸಾರ್ವಜನಿಕ ಅಧಿಕಾರಿಯಾದ ತಾವು ಈ ರೀತಿ ಉಡಾಫೆ ಹೇಳಿಕೆ ಕೊಡುತ್ತಿರುವುದು ನಿಮ್ಮ ಇಲಾಖೆಗೆ ಮಾಡಿದ ಅವಮಾನ, ಹೆಸ್ಕಾಂ ಸಿಬ್ಬಂದಿಯನ್ನು ಹತೋಟಿಯಲ್ಲಿಟ್ಟುಕೊಂಡು, ಸಮಸ್ಯೆ ಸರಿಪಡಿಸಿಕೊಂಡು ಹೋಗುಬೇಕು. ಇದೇ ಪ್ರವ ತ್ತಿ ಮುಂದುವರಿಸಿದಲ್ಲಿ ನಮ್ಮ ಶಾಸಕರಾದ ಬಸವರಾಜ ಶಿವಣ್ಣನವರ ಗಮನಕ್ಕೆ ತಂದು ತಮ್ಮ ಅಮಾನತಿಗೆ ಒತ್ತಾಯ ಮಾಡಲಾಗುವುದು ಎಂದರು.

ಹೆಸ್ಕಾಂ ಅಧಿಕಾರಿ ಅರಳಿಕಟ್ಟಿ ತಡಬಡಾಯಿಸುತ್ತ ತಮ್ಮ ತಪ್ಪಿನ ಅರಿವಾಗಿ, ತಪ್ಪು ಮಾಡಿದ ಲೈನ್‌ಮನ್‌ಗಳ ಮೇಲೆ ಕ್ರಮ ಕೈಗೊಂಡು ಬೇರೆಡೆ ವರ್ಗಾವಣೆ ಮಾಡುವುದಾಗಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಸದಸ್ಯರಾದ ಸುಶೀಲಾ ಲಮಾಣಿ, ಪಿರಾಂಬಿ ವರ್ದಿ, ಗಣೇಶ ತುಮರಿಕೊಪ್ಪ, ವಿ.ಎಮ್.ಪಾಟೀಲ, ವಿರೇಶ ಲಮಾಣಿ, ಹೈದರಾಲಿ ಬೆಂಗಳೂರಿ, ಬಾಬಣ್ಣ ಓಲೇಕಾರ, ಹನುಮಂತಪ್ಪ ಕಾಟೇನಹಳ್ಳಿ ಸೇರಿದಂತೆ ಎಂ.ಎ.ಅಗಸರ, ಪ್ರಕಾಶ ಹಿರೇಮಠ ಸೇರಿದಂತೆ ಇತರರಿದ್ದರು.



ಕನ್ನಡ ಸಾಹಿತ್ಯಕ್ಕೆ ನವ್ಯಸ್ವರೂಪ ನೀಡಿದ ಗೋಕಾಕ್

ಹಾವೇರಿ: ಕನ್ನಡ ಸಾಹಿತ್ಯಕ್ಕೆ ನವ್ಯಸ್ವರೂಪ ನೀಡಿದ ಗೋಕಾಕರು, ನಮ್ಮ ನೆಲದ ಹೆಮ್ಮೆ. ಅವರ ಸ್ಮರಣೆ ಎಂದರೆ ಆಧುನಿಕ ಕನ್ನಡ ಸಾಹಿತ್ಯದ ಸ್ಮರಣೆ ಮಾಡಿದಂತೆ. ಕನ್ನಡಕ್ಕೆ ಕೆಲವು ಜ್ಞಾನಪೀಠ ಪ್ರಶಸ್ತಿ ಬರುವಲ್ಲಿ ಅವರ ಪಾತ್ರ ಬಹಳ ದೊಡ್ಡದು. ಗೋಕಾಕ ಎಂದರೆ ಕನ್ನಡ ಚೈತನ್ಯ ಎಂದು ಗೋಕಾಕ ಟ್ರಸ್ಟಿನ ನೂತನ ಅಧ್ಯಕ್ಷ ಡಾ.ಸತೀಶ ಕುಲಕರ್ಣಿ ನುಡಿದರು. ಸವಣೂರ ಪಟ್ಟಣದ ಲಲಿತಾ ಗುರುಸಿದ್ಧಪ್ಪ ಸಿಂಧೂರ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಡಾ.ವಿ.ಕೃ. ಗೋಕಾಕ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನಿಂದ ಗೋಕಾಕ ಅವರ 35ನೇ ಪುಣ್ಯಸ್ಮರಣೆ ಅಂಗವಾಗಿ 'ಗೋಕಾಕರಿಗೆ ನುಡಿ ನಮನ' ಕಾರ್ಯಕ್ರಮದಲ್ಲಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸಿಂಧೂರ ಕಾಲೇಜಿನ ಪ್ರಾ. ಪ್ರವೀಣ ಆನಂದಕಂದ ಮಾತನಾಡಿದರು. ನಮ್ಮ ಕಾಲೇಜಿನಲ್ಲಿ ಗೋಕಾಕರ ಸ್ಮರಣೆ ನಡೆಯುವುದು ಹೊಸ ಪೀಳಿಗೆಗೆ ಅವರನ್ನು ಪರಿಚ ಯಿಸಿದಂತೆ ಎಂದರು. ಟ್ರಸ್ಟಿನ ಸದಸ್ಯರಾದ ಸಾಹಿತಿ ಮಾರುತಿ ಶಿಡ್ಲಾಪೂರ ಅವರು ಗೋಕಾಕರನ್ನು ಓದುವುದೆಂದರೆ ಹೊಸಗನ್ನಡದ ಸಾಹಿತ್ಯವನ್ನು ಓದಿದಂತೆ. ಅವರ ಕನ್ನಡ ಕಾಳಜಿ ಬಹಳ ದೊಡ್ಡದು ಎಂದರು. ಡಾ.ಜಗನ್ನಾಥ ಗೇನಣ್ಣವರ, ತಾಲೂಕಾ ಕಸಾಪ ಅಧ್ಯಕ್ಷ ಸಿ.ಎನ್. ಪಾಟೀಲರು ಮಾತನಾಡಿದರು. ಕನ್ನಡ ಉಪನ್ಯಾಸಕ ಎಸ್.ಎಸ್. ಉಪ್ಪಿನ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ಪ್ರಾಧ್ಯಾಪಕ ಎಂ.ಎಚ್.ಹೆಬ್ಬಾಳ, ಎಫ್.ಬಿ. ಸಾಯ್ಕರ್, ಐಕ್ಯೂಎಸಿ ಘಟಕದ ವಿಶ್ವನಾಥ ಯತ್ತಿನಹಳ್ಳಿ, ವಿಶ್ವನಾಥ ಹಾವಣಗಿ ಲೇಖಕಿ ಲತಾ ವಾಲಿ, ಪೂರ್ಣಿಮಾ ಬೆಣ್ಣಿ, ಶಿವಲೀಲಾ ಕಲ್ಮಠ, ಸುನಂದಾ ಚೆನ್ನಾಪೂರ, ಪುಷ್ಪಾ ಗಾಣಿಗೇರ, ಬಸವರಾಜ ಬಿ, ಕೆ.ಎನ್. ಜಾನ್ವೇಕರ ಉಪಸ್ಥಿತರಿದ್ದರು.



ಕಿರುಸುದ್ದಿ

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಗಡಗಿ ಪ್ರೌಢ ಶಾಲೆ ಉತ್ತಮ ಸಾಧನೆ



ಚನ್ನಮ್ಮನ ಕಿತ್ತೂರು: ಎಸ್ ಎಸ್ ಎಲ್ ಸಿ ಪ್ರಸಕ್ತ ವರ್ಷದ ಫಲಿತಾಂಶದಲ್ಲಿ ಪಟ್ಟಣದ ಎಸ್‌ಎನ್‌ಸಿ ಶಿಕ್ಷಣ ಸಂಸ್ಥೆಯ ವ್ಹಿ.ಎಸ್. ಬಿ ಮೋಮೋರಿಯಲ್ ಸೆಂಟ್ರಲ್ ಹಿಂದೂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ (ಗಡಗಿ ಪ್ರೌಢ ಶಾಲೆಯ) ಫಲಿತಾಂಶ ಶೇ.100ರಷ್ಟಾಗಿದೆ. ರೋಷಿಣಿ ಎಮ್ಮಿ 625ಕ್ಕೆ 623 (99.68) ಅಂಕ ಪಡೆದು ರಾಜ್ಯಕ್ಕೆ ಮೂರನೆಯ ರ್‍ಯಾಂಕ್, ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಅನು ಮೂಲಿಮನಿ 625ಕ್ಕೆ 620 (99.2) ಅಂಕಗಳಿಸಿ ದ್ವಿತೀಯ ಸ್ಥಾನ, ಅಕ್ಷತಾ ಬಣಜಗಿ 625ಕ್ಕೆ 612 (97.92) ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಅಮೋಘ ಸಾಧನೆಗೆ ಶಾಸಕ ಬಾಬಾಸಾಹೇಬ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ವೈ. ತುಬಾಕದ, ಶಾಲಾ ಆಡಳಿತ ಮಂಡಳಿ, ಶಿಕ್ಷಕ ವೃಂದವು ಅಭಿನಂದಿಸಿದ್ದಾರೆ. ಕಿತ್ತೂರು ತಾಲೂಕಿನಲ್ಲಿ 600ಕ್ಕಿಂತ ಹೆಚ್ಚಿನ ಅಂಕಗಳನ್ನು 66 ವಿದ್ಯಾರ್ಥಿಗಳು ಪಡೆದಿದ್ದು ಅದರಲ್ಲಿ ಇದೇ ಶಾಲೆಯ 19 ವಿದ್ಯಾರ್ಥಿಗಳು 600 ಕ್ಕೂ ಹೆಚ್ಚು ಅಂಕ ಪಡೆದಿರುವುದು ಈ ಶಾಲೆಯ ವಿಶೇಷವಾಗಿದೆ.

20,805 ರೂ. ದಂಡ ವಸೂಲಿ

ಬೆಳಗಾವಿ : ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಟಿಕೇಟ ರಹಿತವಾಗಿ ಪ್ರಯಾಣಿಸುವ ಪ್ರಯಾಣಿಕರನ್ನು ಪತ್ತೆ ಹಚ್ಚಿ ಫೆಬ್ರುವರಿ-2026 ಮಾಹೆಯಲ್ಲಿ ಅಧಿಕೃತ ಟಿಕೆಟ್ ಪಡೆಯದೆ ಪ್ರಯಾಣಿಸಿದ 93 ಜನ ಪ್ರಯಾಣಿಕರಿಂದ ರೂ. 20805 ದಂಡದ ಮೊತ್ತ ಹಾಗೂ ಮಾರ್ಚ್ ಮಾಹೆಯಲ್ಲಿ 110 ಜನ ರೂ.27860 ದಂಡದ ಮೊತ್ತ ವಸೂಲಿ ಮಾಡಲಾಗಿದೆ. ಸಾರ್ವಜನಿಕ ಪ್ರಯಾಣಿಕರು ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸುವಾಗ ಕಡ್ಡಾಯವಾಗಿ ಅಧಿಕೃತ ಟಿಕೇಟ್ ಪಡೆದು ಪ್ರಯಾಣಿಸುವಂತೆ ವಾಕರಸಾ ಸಂಸ್ಥೆ ಬೆಳಗಾವಿ ವಿಭಾಗ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ : ಸನ್ 2026-2027ನೇ ಶೈಕ್ಷಣಿಕ ವರ್ಷಕ್ಕೆ ಯುದ್ಧ ಸಂತ್ರಸ್ಥರು ಮತ್ತು ಮಾಜಿ ಸೈನಿಕರ ಮಕ್ಕಳಿಗೆ ನಗರದ ರೈಲು ನಿಲ್ದಾಣದ ಎದುರಿಗಿರುವ ಮಿಲಿಟರಿ ಬಾಲಕರ ವಸತಿ ನಿಲಯದ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಬೆಳಗಾವಿ ನಗರದ ಯಾವುದೇ ಶೈಕ್ಷಣಿಕ ಸಂಸ್ಥೆಗಳಲ್ಲಿ 5ನೇ ತರಗತಿಯಿಂದ ಪಿಯುಸಿ, ಡಿಪ್ಲೋಮಾ ಹಾಗೂ ಐಟಿಐದಲ್ಲಿ ವ್ಯಾಸಾಂಗಕ್ಕಾಗಿ ಪ್ರವೇಶವನ್ನು ಪಡೆದಿರಬೇಕು. ನಿಲಯದಲ್ಲಿ ಉಪಹಾರ, ಊಟ ಹಾಗೂ ವಸತಿ ಉಚಿತವಾಗಿದೆ. ಆಸಕ್ತ ಮಾಜಿ ಸೈನಿಕರು ಮತ್ತು ಯುದ್ಧ ಸಂತ್ರಸ್ಥರು ತಮ್ಮ ಮಕ್ಕಳ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿ ನಮೂನೆಯನ್ನು ಬೆಳಗಾವಿಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರ ಕಾರ್ಯಾಲಯದಿಂದ ಉಚಿತವಾಗಿ ಪಡೆಯಬಹುದಾಗಿದೆ. ಮೇ.10 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರ ಕಾರ್ಯಾಲಯಕ್ಕೆ ವೈಯಕ್ತಿಕವಾಗಿ ಭೇಟಿ ನೀಡಿ ಅಥವಾ ನಿಲಯದ ಅಧೀಕ್ಷಕರನ್ನು ಸಂಪರ್ಕಿಸಬಹುದು ಎಂದು ಬೆಳಗಾವಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ : ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಅಗಸ್ಟ 2026 ನೇ ಸಾಲಿಗೆ ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಗೆ ಇಲೇಕ್ಟ್ರಿಷಿಯನ್, ಫಿಟ್ಟರ್, ಟರ್ನರ್,ಇಲೇಕ್ಟ್ರಾನಿಕ್, ಮೆಕ್ಯಾನಿಕ್, ಐ.ಸಿ.ಟಿ.ಎಸ್.ಎಂ, ಎಂ.ಆರ್.ಎ.ಸಿ, ಮೋಟಾರ್ ಮೆಕ್ಯಾನಿಕಲ್ ವೆಹಿಕಲ್, ಮೆಕ್ಯಾನಿಕಲ್ ಡಿಸೇಲ್ ವೃತ್ತಿಗಳಿಗೆ ಪ್ರವೇಶಾತಿ ಪಡೆಯಲು ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಇಲಾಖೆ ವೆಬ್ಸೈಟ್ www.cite.karnataka.gov.in ಮೂಲಕ ಮೇ. 8 2026ರ ವರೆಗೆ ಅರ್ಜಿ ಸಲ್ಲಿಸಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗೋಕಾಕ (ಧುಪದಾಳ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಬೆಳಗಾವಿ: ಹುಕ್ಕೇರಿ ತಾಲೂಕಿನ ಮೋದಗಾ ಗ್ರಾಮದ 80 ವರ್ಷದ ಪುಂಡಲಿಕ ಎಂಬ ವೃದ್ಧನಿಗೆ ಹಲವು ವರ್ಷಗಳಿಂದ ನಿಂತುಹೋಗಿದ್ದ ಪಿಂಚಣಿಯನ್ನು ಮರು ಪ್ರಾರಂಭಗೊಳಿಸಲು ಪೊಲೀಸರು ನೇರವಾಗಿ ಮಾನವಿಯತೆಯನ್ನು ಮೆರೆದಿದ್ದಾರೆ. ಯಮಕನಮರಡಿ ಪೊಲೀಸ್ ಠಾಣೆಯ ಸಿಪಿಐ ಜಾವೇದ ಮುಷಾಪುರೆ ಅವರ ನೇತೃತ್ವದ ತಂಡ ತಕ್ಷಣ ಸ್ಪಂದಿಸಿ, ಸಂಬಂಧಿಸಿದ ಇಲಾಖೆ ಅಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸಿ ಅಗತ್ಯ ದಾಖಲೆಗಳನ್ನು ಸರಿಪಡಿಸಿ, ಪುಂಡಲಿಕ ಅವರಿಗೆ ಪಿಂಚಣಿ ಸಿಗುವಂತೆ ವ್ಯವಸ್ಥೆ ಮಾಡಿದರು.

ಜ್ಞಾನವಿಕಾಸದಿಂದ ಸಮಾಜಮುಖಿ ಕಾರ್ಯ

ಚನ್ನಮ್ಮನ ಕಿತ್ತೂರು: ಇಂದಿನ ದಿನಮಾನಗಳಲ್ಲಿ ಯುವ ಪೀಳಿಗೆಯು ಮೊಬೈಲ್, ಟಿವಿ ಧಾರಾವಾಹಿಗಳ ದಾಸರಾಗಿ ಇಡಿ ಕುಟುಂಬಗಳೇ ಹಾಳಾಗಿ ಹೊರಟಿವೆ. ಅವುಗಳಿಗೆ ಕಡಿವಾಣ ಹಾಕಲು ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯಿಂದ ಜ್ಞಾನ ವಿಕಾಸ ಕಾರ್ಯಕ್ರಮ ಪ್ರಾರಂಭಿಸಲಾಗಿದೆ ಎಂದು ಯೋಜನಾಧಿಕಾರಿ ಯೋಗೀಶ ಬಿ.ಆರ್. ಹೇಳಿದರು.

ಸಮೀಪದ ಬಸಾಪುರ ಗ್ರಾಮದ ವಿಶ್ವಕರ್ಮ ದೇವಸ್ಥಾನದಲ್ಲಿ ನಡೆದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಜ್ಞಾನ ವಿಕಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈ ಯೋಜನೆ ಉದ್ದೇಶ ಪ್ರತಿ ತಿಂಗಳು ನಾಲ್ಕು ಸಂಘಗಳು ಒಂದೇ ಸ್ಥಳದಲ್ಲಿ ಸೇರಿ ಉತ್ತಮ ಕುಟುಂಬ ನಿರ್ವಹಣೆಯ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ತಿಳಿದುಕೊಳ್ಳುವುದಾಗಿದೆ ಎಲ್ಲರೂ ತಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕಾದ ಬಗ್ಗೆ ಮಾಹಿತಿ ಪಡೆಯುವುದು ಮತ್ತು ಕುಟುಂಬ ನಿರ್ವಹಣೆಗೆ ತಾವು ಅನುಭವಿಸಿದ ಕಷ್ಟಗಳ ಬಗ್ಗೆ ಮಕ್ಕಳಿಗೆ ತಿಳಿಸುವ ಬಗೆ ಮುಂತಾದವುಗಳ ಬಗ್ಗೆ ತಿಳಿಸಲಾಗುತ್ತದೆ ಇದರ ಪ್ರಯೋಜನವನ್ನು ಎಲ್ಲರೂ ಪಡೆಯಬೇಕೆಂದರು.

ಒಕ್ಕೂಟದ ಅಧ್ಯಕ್ಷೆ ಅನಸೂಯಾ ಹೊಂಗಲ, ಮೇಲ್ವಿಚಾರಕ ದಯಾನಂದ, ಉಳವಯ್ಯ ಹಿರೇಮಠ, ಶಿವಪ್ರಸಾದ ಬಬ್ಲಿ, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಸವಿತಾ ಸೇರಿದಂತೆ ಒಕ್ಕೂಟದ ಸದಸ್ಯರು ಉಪಸ್ಥಿತರಿದ್ದರು.



ಚನ್ನಮ್ಮನ ಕಿತ್ತೂರು: ಸಮೀಪದ ಬಸಾಪುರ ಗ್ರಾಮದ ವಿಶ್ವಕರ್ಮ ದೇವಸ್ಥಾನದಲ್ಲಿ ನಡೆದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಜ್ಞಾನ ವಿಕಾಸ ಕಾರ್ಯಕ್ರಮವನ್ನು ಯೋಜನಾಧಿಕಾರಿ ಯೋಗೀಶ ಬಿ.ಆರ್. ಉದ್ಘಾಟಿಸಿದರು.

ಬೆಳಗಾವಿ ಜಿಲ್ಲಾ ಆರೋಗ್ಯ ಸಂಘದ ತ್ರೈಮಾಸಿಕ ಸಭೆ | ಜಿಪಂ ಸಿಇಒ ಸೂಚನೆ

ಔಷಧಿಗಳ ಸಮರ್ಪಕ ಬಳಕೆ ಮಾಡಿ

ಬೆಳಗಾವಿ: ಜಿಲ್ಲಾ ಮತ್ತು ತಾಲೂಕು ಮಟ್ಟದ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಎಬಿಎಆರ್ಕೆ (ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ) ಕಾರ್ಯಕ್ರಮದಡಿ ಎಲ್ಲ ಸಂಸ್ಥೆಗಳಲ್ಲಿ ಅನುದಾನ ಲಭ್ಯವಿದ್ದು, ಅದರಂತೆ ಜಿಲ್ಲೆಯಲ್ಲಿ ಔಷಧಿಗಳ ಕೊರತೆ ಇಲ್ಲ, ಖರೀದಿಸಿದ ಔಷಧಿಗಳನ್ನು ಇ-ಪೋರ್ಟಲ್ ಮೂಲಕ ಸರಿಯಾಗಿ ದಾಖಲಿಸಿ ಹಾಗೂ ಸಾರ್ವಜನಿಕರಿಗೆ ಔಷಧಿಯ ಕೊರತೆ ಆಗದಂತೆ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳಿಗೆ ಜಿಪಂ ಸಿಇಒ ರಾಹುಲ್ ಶಿಂಧೆ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ದಡಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಆರೋಗ್ಯ ಸಂಘದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮ : ಪ್ರಸ್ತುತ ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಖಾಲಿ ಇರುವ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು 3 ದಿನಗಳ ಒಳಗಾಗಿ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಿದರು.

ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ : ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮದಡಿಯಲ್ಲಿ ರಾಮದುರ್ಗ, ಸವದತ್ತಿ ಹಾಗೂ ಹುಕ್ಕೇರಿ ತಾಲೂಕುಗಳಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯ ಪ್ರಗತಿ ಕಡಿಮೆ ದಾಖಲಾಗಿದ್ದು, ಕಾರಣ ಖಾಸಗಿ ಸಂಘ-ಸಂಸ್ಥೆಗಳಿಗೆ ಕಡಿಮೆ ಗುರಿ ನಿಗಡಿಪಡಿಸಿರುವುದರಿಂದ ಮತ್ತು ತಾಲೂಕಿನಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ಮಾಡುವ ಆಸ್ಪತ್ರೆಗಳ ಇಲ್ಲದೇ ಇರುವುದರಿಂದ ಕಡಿಮೆ ಪ್ರಗತಿ ದಾಖಲಾತಿ ಆಗಿರುತ್ತದೆ ಎಂದು ಸಂಬಂಧಿಸಿದ ತಾಲೂಕು ಆರೋಗ್ಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಐ.ಪಿ ಗಡಾದ, ಚಿಕ್ಕೋಡಿ ಅಪರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್.ಎಸ್.ಗಡೇದ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಶ್ರೀಕಾಂತ ಸುಣಧೋಳಿ, ಜಿಲ್ಲಾ ಆಸ್ಪತ್ರೆ ಶಸ್ತ್ರ ಚಿಕಿತ್ಸಕರಾದ ಡಾ. ಜಗದೀಶ ಗಾಣಗಿ, ಜಿಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ ಡಾ. ಸಂಜಯ ದೊಡಮನಿ, ಡಾ. ಎಸ್.ಎಸ್.ಸಾಯನ್ನವರ, ಡಾ. ವಿಶ್ವನಾಥ ಭೋವಿ, ಡಾ. ಚಾಂದನಿ ದೇವಡಿ, ಡಾ. ವಿವೇಕ ಹೊನ್ನಳ್ಳಿ ಹಾಗೂ ಜಿಲ್ಲೆಯ ಎಲ್ಲ ತಾಲೂಕು ಆರೋಗ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಸಭೆಯಲ್ಲಿ ಉಪಸ್ಥಿತರಿದ್ದರು.



ಕುಡಿಯುವ ನೀರಿನ ಮಾದರಿ ಪರೀಕ್ಷೆ

ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್. ಬಿ. ಎಸ್.ಕೆ ತಂಡ(ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ) ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಪ್ರತಿ 2 ತಿಂಗಳಿಗೊಮ್ಮೆ ತಮ್ಮ ತಾಲೂಕಿನಲ್ಲಿರುವ ಎಲ್ಲ ವಸತಿ ನಿಲಯಗಳಿಗೆ ಭೇಟಿ ನೀಡಿ, ಕುಡಿಯುವ ನೀರಿನ ಮಾದರಿ ಪರೀಕ್ಷೆ ಮತ್ತು ಮಕ್ಕಳ ಮಾನಸಿಕ ಆರೋಗ್ಯ ಕುರಿತು ತಪಾಸಣೆ ಮತ್ತು ಅರಿವು ಮೂಡಿಸಿ, ವಸತಿ ನಿಲಯಗಳಿಗೆ ಭೇಟಿ ನೀಡಿದ ಬಗ್ಗೆ ಸಂದರ್ಶಕರ ಪುಸ್ತಕ ಮತ್ತು ತಮ್ಮ ದೈನಂದಿನ ದಿನಚರಿ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಸದರಿ ವಿಷಯದ ಕುರಿತು ಜಿಲ್ಲಾ ಸಮೀಕ್ಷಣಾಧಿಕಾರಿಗಳಿಗೆ ವರದಿ ಸಲ್ಲಿಸಲು ಜಿಪಂ ಸಿಇಒ ರಾಹುಲ್ ಶಿಂಧೆ ನಿರ್ದೇಶನ ನೀಡಿದರು.

ರೌಡಿಶೀಟರ್ 6 ತಿಂಗಳು ಗಡಿಪಾರು

ಮುರಗೋಡ/ಯರಗಟ್ಟಿ: ಸಮೀಪದ ನುಗ್ಗಾನಟ್ಟಿ ಗ್ರಾಮದ ರೌಡಿಶೀಟರ್ ನೀಲಕಂಠ ಮುದಕಪ್ಪ ಮನವಾಡಕರ (26) ಎಂಬಾತನನ್ನು 6 ತಿಂಗಳ ಕಾಲ ಬೆಳಗಾವಿ ಜಿಲ್ಲೆಯಿಂದ ಗಡಿಪಾರು ಮಾಡಿ ಬೆಳಗಾವಿ ಪೊಲೀಸ್ ಅಧೀಕ್ಷಕ ಮತ್ತು ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಬೆಳಗಾವಿ ಆದೇಶ ಹೊರಡಿಸಿದ್ದಾರೆ.

ಆರೋಪಿತನು ಮಾಡಮಗೇರಿ ಗ್ರಾಮದ ಒಬ್ಬ ಮುಗ್ಧ ದಲಿತ ಮಹಿಳೆಗೆ ಹೆದರಿಸಿ ಜಮೀನು ಕಬಳಿಸಲು ಯತ್ನ, ನುಗ್ಗಾನಟ್ಟಿ ಗ್ರಾಮದ ಅಮಾಯಕ ಯುವಕ ರಾಜು ಮುದ್ದನ್ನವರನನ್ನು ರೌಡಿ ಸಹಚರರೊಂದಿಗೆ ಸೇರಿ ಕೊಲೆ ಮಾಡಿದ ಪ್ರಕರಣ ಮತ್ತು ಯರಝರ್ವಿ ಗ್ರಾಮದ ನಡು ರಸ್ತೆಯಲ್ಲಿ ಕುಟರನಟ್ಟಿ ಗ್ರಾಮದ ವ್ಯಕ್ತಿಯ ಮೇಲೆ ಹಲ್ಲೆ ಸೇರಿದಂತೆ ಅನೇಕರು ಕೃತ್ಯಗಳು ಆಧರಿಸಿ ಇತನನ್ನು ಆರು ತಿಂಗಳು ವರೆಗೆ ಜಿಲ್ಲೆಯಿಂದ ಗಡಿಪಾರು ಮಾಡಿದ್ದಾರೆ.

ಈತನ ದೌರ್ಜನ್ಯದಿಂದ ನುಗ್ಗಾನಟ್ಟಿ, ಯರಗಟ್ಟಿ, ಬೂದಿಗೊಪ್ಪ, ಯರಝರ್ವಿ, ಕುಟರನಟ್ಟಿ, ಮಾಡಮಗೇರಿ, ಗೋಕಾಕ, ಖಾನಗಾಂವ, ಬೆಣಚಿನಮರಡಿ ಮತ್ತು ಗುಧಟ್ಟಿ ಗ್ರಾಮಸ್ಥರು ನೆಮ್ಮದಿಯಿಂದ ಜೀವನ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಈತನ ಉಪಟಳ, ಸಾಮಾಜಿಕ ಜಾಲತಾಣದಲ್ಲಿ ಪೋಟೋ-ವಿಡಿಯೋ ಹರಿಬಿಟ್ಟು ಸಾರ್ವಜನಿಕರಲ್ಲಿ ಭಯ ಹುಟ್ಟಿಸುತ್ತಿದ್ದನು.

ಸಾಕ್ಷಿದಾರರಿಗೂ ಬೆದರಿಕೆ ಹಾಕುತ್ತಿದ್ದ ಪೊಲೀಸ್ ಇನ್ಸ್ಪೆಕ್ಟರ್ ಮುರಗೋಡ ರವರ ವರದಿ ಆದರಿಸಿ ಮಾನ್ಯ ಪೊಲೀಸ್ ಅಧೀಕ್ಷಕರು ಬೆಳಗಾವಿ ಜಿಲ್ಲೆ ಮತ್ತು ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಬೆಳಗಾವಿ ರವರು ಈತನನ್ನು 6 ತಿಂಗಳ ಕಾಲ ಜಿಲ್ಲೆಯಿಂದ ಗಡಿಪಾರು ಮಾಡಿದ್ದಾರೆ. ಮುರಗೋಡ ಪೊಲೀಸರು ಆರೋಪಿಯನ್ನು ಧಾರವಾಡ ಜಿಲ್ಲೆಗೆ ಕರೆದೊಯ್ದು ಹಾಜರುಪಡಿಸಿದ್ದಾರೆ.



- ರೌಡಿ ವ್ಯಕ್ತಿ ಗಡಿಪಾರು ಆದೇಶ
- ಎಲ್ಲಾ ರೌಡಿಗಳಿಗೆ ಎಚ್ಚರಿಕೆ ಘಂಟೆ: ಪೋಲಿಸ್ ಇಲಾಖೆ ದಿಟ್ಟ ಹೆಜ್ಜೆ
- ರೌಡಿ ಶೀಟರ್ ಗಳಿಗೆ ನಡುಕ ಹುಟ್ಟಿಸಿದ ಪೊಲೀಸರ ನಡೆ

ಕೃಷಿ ವಿವಿಗೆ ಬಸವಣ್ಣನವರ ಹೆಸರಿಡಿ

ಯಮಕನಮರಡಿ: ಕೃಷಿ ವಿಶ್ವವಿದ್ಯಾಲಯಗಳಿಗೆ ಬಸವಣ್ಣನವರ ಹೆಸರಿಡುವಂತೆ ಮಾಜಿ ಸಚಿವ ಶಶಿಕಾಂತ್ ನಾಯಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಕುರಿತಂತೆ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ತಿಳಿಸಿದ್ದಾರೆ. ಶೂನ್ಯ ಸಂಪಾದನ ಹುಣಸಿಕುಳ್ಳ ಮಠಕ್ಕೆ ಭೇಟಿ ನೀಡಿ ಶ್ರೀಗಳ ದರ್ಶನ ಪಡೆದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮನುಷ್ಯನಿಗೆ ಕಾಯಕದ ಅರಿವನ್ನು ಮೂಡಿಸಿದವರು ಬಸವಣ್ಣನವರು ಕಾಯಕವೇ ಕೈಲಾಸ ಎಂಬ ವಚನದ ಮೂಲಕ ಕಾಯಕದ ಬಗ್ಗೆ ತಿಳಿಸಿದವರು ಬಸವಣ್ಣನವರು ಕೃಷಿ ವಿಶ್ವವಿದ್ಯಾಲಯಗಳಲ್ಲೂ ಸಹಿತ ಕೃಷಿ ಕಾಯಕದ ಬಗ್ಗೆ ಅಧ್ಯಯನ ಮಾಡಲಾಗುತ್ತದೆ. ಅದಕ್ಕಾಗಿ ರಾಜ್ಯದಲ್ಲಿ ನಾಲ್ಕು ಕೃಷಿ ವಿಶ್ವ ವಿದ್ಯಾಲಯಗಳಿವೆ. ಅದರಲ್ಲಿ ಒಂದಾದರೂ ವಿಶ್ವವಿದ್ಯಾಲಯಕ್ಕೆ ಜಗಜ್ಯೋತಿ ಬಸವಣ್ಣನವರ ಹೆಸರನ್ನು ಇಡಬೇಕೆಂದು ಮಾಜಿ ಮಂತ್ರಿ ನಾಯಕ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.



ಡಾ.ರಾಜಕುಮಾರ ಸರಳ ಜೀವನ ಸಮಾಜಕ್ಕೆ ಮಾದರಿ

ಗೋಕಾಕ: ಶ್ರೀಮಂತಿಕೆ ಇದ್ದರೂ ತುಂಬಾ ಸರಳತೆಯಿಂದ ಜೀವನ ನಡೆಸಿದ ಚಿತ್ರತಾರೆಗಳಲ್ಲಿಯೇ ಸೌಮ್ಯಶೀಲ ವ್ಯಕ್ತಿಯಾದ ಏಕೈಕ ನಟ ಡಾ.ರಾಜಕುಮಾರ ಎಂದು ಕನ್ನಡ ಸಾಹಿತ್ಯ ಪರಿಷತ್ತು ಗೋಕಾಕ ಘಟಕದ ಅಧ್ಯಕ್ಷೆ ಭಾರತಿ ಮದಭಾವಿ ಅಭಿಪ್ರಾಯಿಸಿದರು.


ನಗರದ ಸೋಮವಾರ ಪೇಟೆಯಲ್ಲಿನ ಲಿಟಲ್ ಫ್ಲಾವರ್ ಆಂಗ್ಲ ಮಾಧ್ಯಮ ಶಾಲೆ ಸಭಾಂಗಣದಲ್ಲಿ ಗುಂಪು ಕಲಾವಿದರ ಬಳಗ ಆಯೋಜಿಸಿದ ಕನ್ನಡದ ಮೇರುನಟ ಡಾ.ರಾಜಕುಮಾರ ಅವರ 97ನೇ ಜನ್ಮ ದಿನಾಚರಣೆ ನಿಮಿತ್ತ ಹಮ್ಮಿಕೊಂಡ ಸುಮಧುರ ಚಲನಚಿತ್ರ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡಕ್ಕಾಗಿ ಹೋರಾಡಿದ ಕೀರ್ತಿ ಡಾ.ರಾಜಕುಮಾರ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಜರುಗಿದ ಸಂಗೀತ ಕಾರ್ಯಕ್ರಮದಲ್ಲಿ ಡಾ.ಸುಶ್ರೂತ ಕಡಲಗಿಕರ, ಮಹಾಂತೇಶ ತಾಂವಶಿ, ಶಂಕರ ಮಠಪತಿ, ಸುಭಾಷ ಹಂಜಿ, ಕಾಡೇಶಕುಮಾರ, ಸ್ನೇಹಾ ಕಲ್ಯಾಣಶೆಟ್ಟಿ, ಪುಷ್ಪಾ ಚನ್ನಿ ಸೇರಿದಂತೆ ಮುಂತದವರು ರಾಜಕುಮಾರರ ಚಲನಚಿತ್ರಗೀತೆಗಳನ್ನು ಮಧುರವಾಗಿ ಪ್ರಸ್ತುತಪಡಿಸಿದರು. ರೋಟರಿ ಸಂಸ್ಥೆಯ ಅಧ್ಯಕ್ಷ ಗಿರೀಶ ಝುಂವರ, ರಾಜೇಂದ್ರ ಹಿಡಕಲ್, ಮಲ್ಲಿಕಾರ್ಜುನ ಎಂಡಿಗೇರಿ, ಜಯಶ್ರೀ ದಲಾಲ ಉಪಸ್ಥಿತರಿದ್ದರು. ಶಿಕ್ಷಕ ಚಂದ್ರಪ್ಪಾ ಶೀಗಿಹಳ್ಳಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.



ಸಿದ್ಧಾರೂಢರ ಮೂರ್ತಿಯ ಭವ್ಯ ಮೆರವಣಿಗೆ

ಚನ್ನಮ್ಮನ ಕಿತ್ತೂರ: ಸಮೀಪದ ಹುಲಿಕೊತ್ತಲ ಗ್ರಾಮದಲ್ಲಿ ಶ್ರೀ ಸಿದ್ಧಾರೂಢರ ನೂತನ ಮಠದ ಉದ್ಘಾಟನೆ ನಿಮಿತ್ತ ಸಿದ್ಧಾರೂಢರ ಮೂರ್ತಿಯ ಭವ್ಯ ಮೆರವಣಿಗೆ ಶುಕ್ರವಾರ ಜರುಗಿತು. ಶೃಂಗರಿಸಿದ ವಾಹನದಲ್ಲಿ ಸಿದ್ಧಾರೂಢರ ಮೂರ್ತಿಯನ್ನಿಟ್ಟು ಪೂಜೆ ಸಲ್ಲಿಸಲಾಯಿತು. ತಳಿರು ತೋರಣಗಳಿಂದ ಶೃಂಗಾರಗೊಂಡ ಗ್ರಾಮ ಪ್ರತಿ ಮನೆಯ ಮುಂದೆ ಚಿತ್ತಾಕಾರದ ರಂಗೋಲಿ ಹಾಕಿದ್ದರು. ಪ್ರತಿ ಮನೆಮನೆಯವರು ನೀರು ಹಾಕಿ ಆರತಿ ಬೆಳಗಿ ಭಕ್ತಿ ಸಮರ್ಪಿಸಿದರು. ಸಿದ್ಧಾರೂಢರ ಜಯ ಘೋಷಗಳ ಮಧ್ಯೆ ಪ್ರಾರಂಭವಾದ ಮೆರವಣಿಗೆಗೆ ಡೊಳ್ಳು, ಕರಡಿ, ಮಜಲು, ಭಜನಾ ತಂಡಗಳು ಮೆರುಗು ನೀಡಿದವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶ್ರೀ ಸಿದ್ಧಾರೂಢ ಮಠವನ್ನು ತಲುಪಿತು. ನಂತರ ಮಹಾಪ್ರಸಾದ ನಡೆಯಿತು ಮೆರವಣಿಗೆಯಲ್ಲಿ ನಾಗನಗೌಡ ಬೈಲೂರ, ಮಹೇಶ ಕಂಬಳಿ, ಗಂಗಾಧರ ಸರದಾರ, ರವೀಂದ್ರ ಪಾಟೀಲ, ಡಾ.ಮಹಾಂತೇಶ ಹಿರೇಮಠ, ಅದೃಶ ಮೂಲಿಮನಿ, ಬಾಬು ನರೇಂದ್ರ ಹಾಗೂ ಇತರರು ಇದ್ದರು.



ಉಜ್ವಲ ಭವಿಷ್ಯಕ್ಕಾಗಿ ಶಿಕ್ಷಣ ಅತೀ ಅವಶ್ಯಕ

ಗೋಕಾಕ: ಪಾಲಕರು ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸಬೇಕು ಎಂದು ಶಿಕ್ಷಕ ಮಹಾಂತೇಶ ಬೆಳಗಲಿ ಹೇಳಿದರು.

ತಾಲೂಕಿನ ಶಿಂದಿಕುರಬೇಟ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಸಮತಾ ಶಿಕ್ಷಣ ಸಮಿತಿ ಮಾಧ್ಯಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ 2006-2007 ಸಾಲಿನ ವಿದ್ಯಾರ್ಥಿಗಳ ಗುರು ವಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿಗಳ ಪ್ರೀತಿ, ವಿಶ್ವಾಸ ಎಂದೂ ಮರೆಯಲಾಗದು. ಮಕ್ಕಳ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಶಿಕ್ಷಣ ಅತೀ ಅವಶ್ಯಕವಾಗಿದೆ ಎಂದು ಹೇಳಿದರು.

ಮಾಧ್ಯಮಿಕ ಶಾಲೆ ಮುಖ್ಯೋಪಾಧ್ಯಾಯ ಪಿ.ಎಚ್.ಗೋಸಬಾಳ ಮಾತನಾಡಿ, ಕಳೆದ ಹಲವಾರು ವರ್ಷಗಳ ಹಿಂದೆ ನಮ್ಮ ಶಾಲೆಯಲ್ಲಿ ಶಿಕ್ಷಣ ಕಲಿತು, ಇಂದು ವಿದ್ಯೆ ಹಾಗೂ ಜ್ಞಾನ ನೀಡಿದ ಗುರುಗಳನ್ನು ಒಂದೇ ವೇದಿಕೆಯಲ್ಲಿ ಅವರನ್ನು ಅಭಿಮಾನ ಹಾಗೂ ಗೌರವದಿಂದ ಸನ್ಮಾನಿಸಿದ ಕ್ಷಣ ನಮ್ಮ ಜೀವನದಲ್ಲಿ ಮರೆಯಲಾಗದ ಸಂಗತಿಯಾಗಿದೆ. ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಹಲವಾರು ಯೋಜನೆಗಳು ಜಾರಿಗೆ ತಂದಿದ್ದು, ಅದನ್ನು ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಶಿಕ್ಷಕರಾದ ಕೆ.ವಿ.ಕಡ್ಡಿ, ಎಸ್.ಎನ್.ವಡರಟ್ಟಿ, ಆರ್.ಬಿ.ಕರೆಪ್ಪಗೋಳ, ಹಿರೇಮಠ, ಕೃಷ್ಣ ತಡವಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರು ಶಾಲೆಯ ದಿನಗಳನ್ನು ಸ್ಮರಿಸಿಕೊಂಡರು. ವಿದ್ಯೆ ಕಲಿಸಿದ ಮಾಧ್ಯಮಿಕ ಶಾಲೆ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಿದರು. ಮಾಹಂತೇಶ್ವರಿ ಹಿರೇಮಠ ಪ್ರಾರ್ಥಿಸಿದರು. ಜ್ಯೋತಿ ನಿಲಗಾರ ಸ್ವಾಗತಿಸಿದರು.ಪ್ರಿಯಾ ಕಬಾಡಗಿ ಮತ್ತು ಶೋಭಾ ಕೊತ್ತಲ ನಿರೂಪಿಸಿದರು. ಆರತಿ ಹೊಸಪೇಟೆ ವಂದಿಸಿದರು.



ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಹಳ್ಳೂರ: ಅವರಾದಿ ಗ್ರಾಮದ ಶ್ರೀ ಬಿ.ವ್ಹಿ.ಕುಲಕರ್ಣಿ ಸರ್ಕಾರಿ ಪ್ರೌಢ ಶಾಲೆಯ ಸನ್ 2025-26 ನೇ ಸಾಲಿನ ಪ್ರೌಢ ಶಾಲೆಯ ಎಸ್ ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ 1 ರ ಫಲಿತಾಂಶವು ಶೇ 97.80% ಆಗಿದೆ ಎಂದು ಅವರಾದಿಯ ಬಿ.ವ್ಹಿ. ಕುಲಕರ್ಣಿ ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಎಸ್.ಆರ್.ಬಿದರಿ ತಿಳಿಸಿದರು. ಶಾಲೆಗೆ ಪ್ರಿಯಂಕಾ ಕುಕ್ಕಡಿ 599 ಅಂಕ ಪಡೆದು ಶೇ 95.84% ಪ್ರಥಮ ಸ್ಥಾನ, ಸೌಮ್ಯಾ ನಂದೆಪ್ಪನವರ 583 ಅಂಕ ಪಡೆದು ಶೇ 93.28% ದ್ವಿತೀಯ ಸ್ಥಾನ, ಬಸವ್ವ ಸಂಗಾನಟ್ಟಿ 578 ಅಂಕ ಪಡೆದು ಶೇ 92.48% ತೃತೀಯ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಎಸ್‌ಡಿಎಮ್‌ಸಿ ಅಧ್ಯಕ್ಷರು, ಸರ್ವ ಸದಸ್ಯರು, ಗ್ರಾಮ ಪಂಚಾಯತ ಸದಸ್ಯರು, ಗ್ರಾಮದ ಶಿಕ್ಷಣ ಪ್ರೇಮಿಗಳು, ಶಾಲಾ ಶಿಕ್ಷಕರ ವೃಂಧ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಶಾಲೆಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸತ್ಕರಿಸಿದರು.



ಮೇ 4ರಂದು ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ, ರಥೋತ್ಸವ



ಹಳ್ಳೂರ: ಸಮೀಪದ ಖಾನಟ್ಟಿ ಗ್ರಾಮದ ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವವು ಸಾವಳಗಿಯ ಸಿದ್ದ ಸಂಸ್ಥಾನ ಪೀಠದ ಶಿವಲಿಂಗೇಶ್ವರ ಕುಮಾರೇಂದ್ರ ಮಹಾಸನ್ನಿಧಿ ಸಾನ್ನಿಧ್ಯದಲ್ಲಿ ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವವು ಮೇ 4ರಂದು ನಡೆಯಲಿದೆ. ಬೆಳಿಗ್ಗೆ 6 ಗಂಟೆಗೆ ಶ್ರೀ ಶಿವಲಿಂಗೇಶ್ವರ ಕೃತ್ತು ಗದ್ದುಗೆಗೆ ವಿಶೇಷ ಪೂಜೆ, ಮಹಾ ರುದ್ರಾಭಿಷೇಕ ಜರುಗುವುದು. ನಂತರ 10 ಗಂಟೆಗೆ ಸಕಲ ವಾದ್ಯ ಮೇಳಗಳೊಂದಿಗೆ ರಥೋತ್ಸವಕ್ಕೆ ಕಳಸಾರೋಹಣ, ಬೆಳಿಗ್ಗೆ 11 ಗಂಟೆಗೆ ವಿವಿಧ ಗ್ರಾಮಗಳಿಂದ ಆಗಮಿಸುವ ಪಲ್ಲಕ್ಕಿಗಳನ್ನು ಬರಮಾಡಿಕೊಳ್ಳುವುದು. ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ, ಸಂಜೆ 5.30 ಗಂಟೆಗೆ ಶಿವಲಿಂಗೇಶ್ವರ ಪಲ್ಲಕ್ಕಿ ಉತ್ಸವದೊಂದಿಗೆ ರಥೋತ್ಸವ ನೆರವೇರುವುದು.

ಸೋಮವಾರ ರಾತ್ರಿ 9.30 ಗಂಟೆಗೆ ಹಳ್ಳಿ ಹುಡುಗಿ ಮೊಸರ ಗಡಗಿ ಎಂಬ ಸುಂದರ ಸಾಮಾಜಿಕ ನಾಟಕ ಜರುಗುವುದು ಎಂದು ಶ್ರೀ ಶಿವಲಿಂಗೇಶ್ವರ ಜಾತ್ರಾ ಕಮಿಟಿ ಸಂಘಟಿಕರು ತಿಳಿಸಿದ್ದಾರೆ.

ಹಳೆಯ ದೇವರ ಫೋಟೋ ಶಾಸ್ತ್ರೋಕ್ತವಾಗಿ ವಿಸರ್ಜನೆ



ಬೆಳಗಾವಿ : ಮನೆಗಳಲ್ಲಿ ಹಳೆಯದಾದ ದೇವರ ಫೋಟೋಗಳನ್ನು ಎಲ್ಲೆಂದರಲ್ಲಿ ಎಸೆಯುವ ಮೂಲಕ ದೈವನಿಂದನೆ ಮಾಡುವುದನ್ನು ತಡೆಯಲು ಬೆಳಗಾವಿಯ ಸರ್ವ ಲೋಕ ಸೇವಾ ಫೌಂಡೇಶನ್ ಮಹತ್ವದ ಕಾರ್ಯಕ್ಕೆ ಮುಂದಾಗಿದೆ.

ಶಿವಬಸವ ನಗರದಲ್ಲಿ ರಾಶಿಗಟ್ಟಲೆ ಬಿದ್ದಿದ್ದ ದೇವರ ಭಾವಚಿತ್ರಗಳನ್ನು ಸಂಗ್ರಹಿಸಿ, ಹುಕ್ಕೇರಿ ಶ್ರೀಗಳ ಸಾನ್ನಿಧ್ಯದಲ್ಲಿ ಶಾಸ್ತ್ರೋಕ್ತವಾಗಿ ವಿಸರ್ಜಿಸುವ ಮೂಲಕ ವಿರೇಶ್ ಹಿರೇಮಠ ತಂಡ ಮಾದರಿಯಾಗಿದೆ. ಗುರುವಾರರಂದು ಬೆಳಗಾವಿಯ ಶಿವಬಸವ ನಗರದ ಶ್ರೀ ಜ್ಯೋತಿರ್ಲಿಂಗ ದೇವಸ್ಥಾನದ ಆವರಣದಲ್ಲಿ ಸಾರ್ವಜನಿಕರು ತಂದು ಹಾಕಿದ್ದ ರಾಶಿಗಟ್ಟಲೆ ದೇವರ ಹಳೆಯ ಫೋಟೋಗಳನ್ನು ಸರ್ವ ಲೋಕ ಸೇವಾ ಫೌಂಡೇಶನ್ ವತಿಯಿಂದ ಸಂಗ್ರಹಿಸಲಾಯಿತು.ಪ್ರಶಾಂತ್ ದೇವನ, ಸುಭಾಷ್ ಪಾಟೀಲ್, ದೇವಪ್ಪ ಕಾಂಬಳೆ ಸೇರಿದಂತೆ ಫೌಂಡೇಶನ್ನ ಹಲವು ಪದಾಧಿಕಾರಿಗಳು ಸೇರಿದಂತೆ ಇತರರು ಇದ್ದರು.

ನೊಣಗಳ ಹಾವಳಿಗೆ ಕಡಿವಾಣ ಹಾಕಿ

ಚನ್ನಮ್ಮನ ಕಿತ್ತೂರು: ಕೋಳಿ ಫಾರ್ಮ್‌ನ ನೊಣಗಳ ಹಾವಳಿಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಅಧಿಕಾರಿಗಳು ಕೂಡಲೇ ಕ್ರಮ ಜರುಗಿಸಬೇಕೆಂದು ಸಮಾಜ ಸೇವಕ, ಕಾಂಗ್ರೆಸ್ ಮುಖಂಡ ಹಬೀಬ ಶಿಲೇದಾರ ಆಗ್ರಹಪಡಿಸಿದರು.



ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಅಂಬಡಗಟ್ಟಿ ಕ್ರಾಸ್ ಹತ್ತಿರ ಇರುವ ರಿ.ಸ ನಂ.32ರಲ್ಲಿ ತತ್ತಿ ಕೋಳಿ ಫಾರ್ಮು ಇದ್ದು, ಕೋಳಿ ಫಾರ್ಮಿನ ಸಮೀಪ ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ ಮತ್ತು ಹೋಟೆಲ್, ಕಲ್ಯಾಣ ಮಂಟಪ ಮುಂತಾದವುಗಳು ಇರುವುದರಿಂದ ಜನಸಂದಣಿ ಇರುವ ಪ್ರದೇಶವಾಗಿದೆ. ಇಲ್ಲಿ ಅತೀಯಾದ ನೊಣಗಳಿಂದ ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆಂದು ಈ ಕುರಿತು ಹಿಂದೆ ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಯವರು ಗ್ರಾಮ ಪಂಚಾಯತಗೆ ಮನವಿಯನ್ನು ಸಲ್ಲಿಸಿದ್ದಾರೆ. ತಾಲೂಕಿನ ಆರೋಗ್ಯ ಇಲಾಖೆಯವರು ಸ್ವಚ್ಚತೆ ಬಗ್ಗೆ ಹಲವಾರು ಬಾರಿ ತಿಳಿಸಿದರೂ ಪ್ರಯೋಜನವಾಗದ ಕಾರಣ ಆರೋಗ್ಯದ ಹಿತ ದೃಷ್ಟಿಯಿಂದ ಈ ಫಾರ್ಮನ್ನು ಸ್ಥಗಿತಗೊಳಿಸಬೇಕೆಂದು ತಿಳಿಸಿದ್ದು ಆದರೂ ಯಾವುದೇ ಪ್ರಯೋಜನವಾಗಿಲ್ಲ, ಈ ಕೋಳಿ ಫಾರ್ಮ್‌ನ ನೊಣಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಈ ವಿಷಯವನ್ನು ತಹಶೀಲ್ದಾರ ಅವರು ಗಂಭೀರವಾಗಿ ಪರಿಗಣಿಸಿ ಕ್ರಮ ಜರುಗಿಸಬೇಕೆಂದರು.ಈ ವಿಷಯದ ಕುರಿತು ತಹಶೀಲ್ದಾರ ಕೆ. ಆರ್. ಪಾಟೀಲ ಅವರನ್ನು ದೂರವಾಣಿಯಲ್ಲಿ ಸಂಪರ್ಕಿಸಿ ಮಾತನಾಡಿದಾಗ ಈ ಕೋಳಿ ಫಾರ್ಮಿನ ನೊಣಗಳ ಹಾವಳಿ ಬಗ್ಗೆ ಪರಿಶೀಲಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವದೆಂದು ತಿಳಿಸಿದ್ದಾರೆ.

ಕಿರುಸುದ್ದಿ

ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಳಗಾವಿ: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಆಗಸ್ಟ್ 2026ನೇ ಸಾಲಿಗೆ ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಗೆ ಇಲೆಕ್ಟ್ರಿಷಿಯನ್, ಫಿಟ್ಟರ್, ಟರ್ನಲ್,ಇಲೆಕ್ಟ್ರಾನಿಕ್, ಮೆಕ್ಯಾನಿಕ್, ಐಸಿಟಿಎಸ್‌ಎಂ, ಎಂಆರ್‌ಎಸಿ, ಮೋಟಾರ್ ಮೆಕ್ಯಾನಿಕಲ್ ವೆಹಿಕಲ್, ಮೆಕ್ಯಾನಿಕಲ್ ಡಿಸೇಲ್ ವೃತ್ತಿಗಳಿಗೆ ಪ್ರವೇಶಾತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಇಲಾಖೆ ವೆಬ್‌ಸೈಟ್ www.cite.kamataka.gov.in ಮೂಲಕ ಮೇ 8ರವರೆಗೆ ಅರ್ಜಿ ಸಲ್ಲಿಸಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗೋಕಾಕ(ಧುಪದಾಳ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ಅವಘಡ: ಅಪಾರ ಹಾನಿ



ಚಿಕ್ಕೋಡಿ: ಪಟ್ಟಣದ ಭೀಮ ನಗರ ಬಡಾವಣೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಫರ್ನಿಚರ್ ಅಂಗಡಿ ಹೊತ್ತಿ ಉರಿದು ಅಪಾರ ಪ್ರಮಾಣ ಹಾನಿಯಾದ ಘಟನೆ ಬುಧವಾರ ಸಂಭವಿಸಿದೆ.ಆಕಸ್ಮಿಕವಾಗಿ ಹೊತ್ತಿಕೊಂಡ ಬೆಂಕಿಯಿಂದ ಅಂಗಡಿ ಹೊತ್ತಿ ಉರಿದಿದ್ದು, ವಿಲಾಸ ಸಾತಪ್ಪ ಸಾಲಿಮನಿ ಎಂಬುವವರಿಗೆ ಸೇರಿದ ಅಂಗಡಿ ಇದಾಗಿದೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕದಳದ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದರು. ಬೆಂಕಿ ಅವಘಡದಲ್ಲಿ 4 ಲಕ್ಷ ಮೌಲ್ಯದ ವಸ್ತುಗಳು ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣಾ ಅಧಿಕಾರಿ ಅನುರಾಗ ಬಿ ಎಲ್, ರಾಚಯ್ಯ ಮಠಪತಿ, ಬಸವರಾಜ ಹಿರೇಗೌಡರ, ಮಲ್ಲಿಕಾರ್ಜುನ ಕುಂಬಾರ, ಹೈದರ್ ಮುಲ್ತಾನಿ, ಉಮೇಶ ನೇರ್ಲೆಕರ ಇದ್ದರು.

ಅಪಘಾತ ಅಪರಾಧಿಗೆ ಶಿಕ್ಷೆ

ಬೆಳಗಾವಿ: ನಗರದ ಕೆಪಿಟಿಸಿಎಲ್ ಸಭಾಭವನದ ಹತ್ತಿರ 2016ರಲ್ಲಿ ಕಾರು ಡಿಕ್ಕಿ ಹೊಡೆಸಿ ಬಾಲಕಿ ಸಾವಿಗೆ ಕಾರಣವಾದ ಅಪರಾಧಿ ಡಾ.ಮೊಹಮ್ಮದ್ ಸಲ್ಮಾನ್ ಸಲೀಂ ಪಟೇಲಗೆ ಇಲ್ಲಿನ 2ನೇ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾದೀಶರಾದ ಗುರುಪ್ರಸಾದ ಅವರು 6 ತಿಂಗಳು ಜೈಲು ಶಿಕ್ಷೆ ಹಾಗೂ ಆರು ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಮಹಾಂತೇಶ ಚಳಕೊಪ್ಪ ವಾದ ಮಂಡಿಸಿದ್ದರು.

ಉಚಿತ ಕುಡಿಯುವ ನೀರಿನ ಅರವಟ್ಟಿಗೆ ಆರಂಭ

ಖಾನಾಪುರ: ಸದ್ಯ ಬೇಸಿಗೆಯ ತಾಪಮಾನ ದಿನದಿಂದ ದಿನಕ್ಕೆ ಏರುತ್ತಿರುವ ಕಾರಣ ಪಟ್ಟಣದ ಶಿವಸ್ಮಾರಕ ವೃತ್ತದಲ್ಲಿ ಪಟ್ಟಣ ಪಂಚಾಯತಿ ವತಿಯಿಂದ ಮಣ್ಣಿನ ಮಡಿಕೆಯಲ್ಲಿ ಶುದ್ಧ ಕುಡಿಯುವ ನೀರಿನ ಅರವಟಿಗೆಯನ್ನು ಆರಂಭಿಸಲಾಗಿದೆ. ಸಾರ್ವಜನಿಕರು ಈ ಸೇವೆಯ ಸದುಪಯೋಗ ಪಡೆಯಬೇಕು'' ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸಂತೋಷ ಕುರಬೆಟ್ ಹೇಳಿದರು.ಶಿವಸ್ಮಾರಕ ವೃತ್ತದಲ್ಲಿ ಗುರುವಾರ ಈ ವ್ಯವಸ್ಥೆಗೆ ಚಾಲನೆ ನೀಡಿ ಮಾತನಾಡಿದ ಅವರು, ''ಪಟ್ಟಣ ಪಂಚಾಯತಿ ವತಿಯಿಂದ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಉಚಿತ ಸೇವೆಯನ್ನು ಆರಂಭಿಸಲಾಗಿದೆ. ಬೇಸಿಗೆ ಕಾಲ ಮುಗಿದು ಮಳೆ ಆರಂಭವಾಗುವವರೆಗೆ ಈ ಸೇವೆ ಮುಂದುವರೆಯಲಿದೆ'' ಎಂದು ವಿವರಿಸಿದರು.ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಸಮುದಾಯ ಅಭಿವೃದ್ಧಿ ಅಧಿಕಾರಿ ರಾಜೇಶ್ವರಿ ವೇರ್ಣೇಕರ, ಸಿಬ್ಬಂದಿ ರಾಜೇಶ ಜಾಂಬೋಟಿ, ಪ್ರೇಮಾನಂದ ನಾಯ್ಕ, ವಿನೋದ ಸನದಿ, ಶೋಭಾ ಪತ್ತಾರ ಸೇರಿದಂತೆ ಸ್ಥಳೀಯರು ಇದ್ದರು.

ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಳಗಾವಿ: ಸರ್ಕಾರಿ ಪಾಲಿಟೆಕ್ನಿಕ್ ಪ್ರಥಮ ವರ್ಷದ ಇಂಜಿನಿಯರಿಂಗ್ ಹಾಗೂ ನಾನ್ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸ್‌ಗಳಿಗೆ ಮೆರಿಟ್ ಹಾಗೂ ರೋಷ್ಟರ್ ಅನುಗುಣವಾಗಿ ಪ್ರವೇಶಕ್ಕೆ ಎಸ್‌ಎಸ್‌ಎಲ್‌ಸಿ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಭರ್ತಿ ಮಾಡಿರುವ ಅರ್ಜಿಗಳನ್ನು ಮೇ 16ರೊಳಗೆ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬಹುದು.ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೈಬ್‌ಸೈಟ್‌ಗೆ ಭೇಟಿ ನೀಡಿ ಹಾಗೂ ಸಂಸ್ಥೆಗೆ ಖುದ್ದಾಗಿ ಭೇಟಿಯಾಗಬಹುದು ಅಥವಾ ಪ್ರಾಚಾರ್ಯರಾದ ವಾಸುದೇವ ಅಪ್ಪಾಜಿಗೋಳ ಅಥವಾ ವಿಷಯ ನಿರ್ವಾಹಕ ಸುದರ್ಶನ ರೊಡ್ಡಣ್ಣವರ ಅವರನ್ನು ಸಂಪರ್ಕಿಸಬಹುದು ಎಂದು ಬೆಳಗಾವಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಖಾನಾಪುರ: ಸದ್ಯ ಬೇಸಿಗೆಯ ತಾಪಮಾನ ದಿನದಿಂದ ದಿನಕ್ಕೆ ಏರುತ್ತಿರುವ ಕಾರಣ ಪಟ್ಟಣದ ಶಿವಸ್ಮಾರಕ ವೃತ್ತದಲ್ಲಿ ಗುರುವಾರ ಪಟ್ಟಣ ಪಂಚಾಯತಿ ವತಿಯಿಂದ ಮಣ್ಣಿನ ಮಡಿಕೆಯಲ್ಲಿ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಯನ್ನು ಆರಂಭಿಸಲಾಗಿದೆ. ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸಂತೋಷ ಕುರಬೆಟ್ ಚಾಲನೆ ನೀಡಿದರು.

ಬಿಸಿಲು: ಆರೋಗ್ಯ ರಕ್ಷಣೆಯತ್ತ ಕಾಳಜಿವಹಿಸಿ

ಗೋಕಾಕ: ಮೇ ತಿಂಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಲಿರುವ ಹಿನ್ನೆಲೆ ಸಾರ್ವಜನಿಕರು ಮಧ್ಯಾಹ್ನ 12 ಗಂಟೆಯಿಂದ 3 ಗಂಟೆವರೆಗೆ ಮನೆಯಿಂದ ಹೊರಗಡೆ ಹೋಗುವುದನ್ನು ತಪ್ಪಿಸಬೇಕು ಎಂದು ತಹಶೀಲ್ದಾರ್ ಡಾ.ಮೋಹನ ಭಸ್ಮೆ ಹೇಳಿದರು. ಗುರುವಾರದಂದು ನಗರದಲ್ಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊರಗಡೆ ಗರಿಷ್ಠ ತಾಪಮಾನ ಇರುವುದರಿಂದ ಬಿಸಿಲಿನಲ್ಲಿ ಏನಾದರು ತೊಂದರೆ ಉಂಟಾದರೆ, ಶಾಖಾಘಾತ ಉಂಟಾದರೆ ತಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಬೇಕು. ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಬೇಕು. ಬಿಸಿಲಿನಲ್ಲಿ ಹೋಗುವಾಗ ರಕ್ಷಣೆಗಾಗಿ ಕನ್ನಡಕ, ಛತ್ರಿ, ಟೋಪಿ ಬಳಸಬೇಕು. ಹೊರಗಿನ ಉಷ್ಣತೆ ಅಧಿಕವಾಗಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸವುದು ಮಧ್ಯಾಹ್ನ 12 ರಿಂದ 3 ಗಂಟೆಯವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಕಾರ್ಬೋನೇಡ್ ತಂಪು ಪಾನೀಯಗಳನ್ನು ಕುಡಿಯುವುದನ್ನು ತಪ್ಪಿಸಬೇಕು ಒಟ್ಟಾರೆ ಅವಶ್ಯಕತೆ ಅನುಗುಣವಾಗಿ ಹೊರಗಡೆ ಹೋಗಬೇಕು ಹೋಗುವ ಸಂಧರ್ಭದಲ್ಲಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.ಮುಖ್ಯ ವೈದ್ಯಾಧಿಕಾರಿ ಡಾ.ರವೀಂದ್ರ ಅಂಟಿನ ಮಾತನಾಡಿ, ಹಣ್ಣು ಹಾಗೂ ತರಕಾರಿ ಹೆಚ್ಚಾಗಿ ತಿನ್ನಿ. ನಿಂಬೆ ನೀರು, ಮಜ್ಜಿಗೆ ಮುಂತಾದ ಮನೆಯಲ್ಲಿ ತಯಾರಿಸಿದ ಪಾನೀಯಗಳು ಮತ್ತು ಓ.ಆರ್.ಎಸ್ ಅನ್ನು ಬಳಸಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ತಾಲೂಕು ವೈದ್ಯಾಧಿಕಾರಿ ಡಾ.ಎಂ.ಎಸ್.ಕೊಪ್ಪದ ಇದ್ದರು.



ಯಮಕನಮರಡಿ : ಸಮೀಪದ ದಾದಬಾನಹಟ್ಟಿ ಗ್ರಾಮದ ಶ್ರೀ ಲಕ್ಷ್ಮಿ ದೇವಿ ಮಂದಿರದ ನೂತನ ಶಿಖರ ಮತ್ತು ಕಳಸರೋಹಣ ಸಮಾರಂಭ ಮೇ 17 18 ರಂದು ಜರುಗಲಿದ್ದು, ದೇವಸ್ಥಾನದ ಉಸ್ತುವಾರಿ ಕಮಿಟಿಯ ಅಧ್ಯಕ್ಷರಾದ ಶೆಟ್ಟೆಪ್ಪ ಜಮಕೋಳಿ ಅವರು ತಮ್ಮ ಭಕ್ತಿ ದೇಣಿಗೆ ಸಲ್ಲಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಜನಿವಾರ ತೆಗೆಸಿದ ಘಟನೆ

ಬ್ರಾಹ್ಮಣ ಮಹಾಸಂಘದಿಂದ ಆಕ್ರೋಶ

ಬೆಳಗಾವಿ : ಬೆಂಗಳೂರಿನ ಮಡಿವಾಳದ ಕೃಪಾನಿಧಿ ಕಾಲೇಜು ಹಾಗೂ ಚಿಕ್ಕಬಳ್ಳಾಪುರದ ನಾಗಾರ್ಜುನ ಕಾಲೇಜಿನ ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ 'ಜನಿವಾರ'ವನ್ನು ಬಲವಂತವಾಗಿ ತೆಗೆಸಿದ ಘಟನೆ ಈಗ ರಾಜ್ಯವ್ಯಾಪಿ ಚರ್ಚೆಗೆ ಹಾಗೂ ಆಕ್ರೋಶಕ್ಕೆ ಕಾರಣವಾಗಿದೆ. ಈ ಕುರಿತು ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘವು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದೆ.

ಗುರುವಾರ ಬೆಳಗಾವಿ ಜಿಲ್ಲಾಧಿಕಾರಿ ಕಚೇರಿಯ ಎದುರು ಬ್ರಾಹ್ಮಣ ಸಮಾಜದ ಮುಖಂಡರು ಪರೀಕ್ಷಾ ಕೇಂದ್ರಗಳಲ್ಲಿ ಜನಿವಾರ ತೆಗೆಸಿ ಪರೀಕ್ಷೆ ಬರೆಸಿದವರ ವಿರುದ್ಧ ಆಕ್ರೋಶವನ್ನು ಹೊರ ಹಾಕಿ ಪ್ರತಿಭಟನೆಯನ್ನು ನಡೆಸಿದರು.

ಧಾರ್ಮಿಕ ಭಾವನೆಗೆ ಧಕ್ಕೆ: ಸಂಘಟನೆಯ ಆಕ್ಷೇಪ ಜನಿವಾರವು ಕೇವಲ ಒಂದು ದಾರವಲ್ಲ, ಅದು ಬ್ರಾಹ್ಮಣ ಸಮುದಾಯದ ಸಂಸ್ಕೃತಿ, ಸಂಪ್ರದಾಯ ಹಾಗೂ ಧಾರ್ಮಿಕ ಅಸ್ಮಿತೆಯ ಪ್ರತೀಕವಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಸುರಕ್ಷತೆಯ ಹೆಸರಿನಲ್ಲಿ ವಿದ್ಯಾರ್ಥಿಗಳ ಈ ಧಾರ್ಮಿಕ ಗುರುತನ್ನು ಬಲವಂತವಾಗಿ ತೆಗೆಸಿರುವುದು ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆಯಾಗಿದೆ ಎಂದು ಮಹಾಸಂಘ ತೀವ್ರವಾಗಿ ಪ್ರತಿಭಟನೆಯ ವೇಳೆ ಖಂಡಿಸಿದೆ.

ಪರೀಕ್ಷೆಯ ಅತೀವ ಒತ್ತಡದಲ್ಲಿರುವ ವಿದ್ಯಾರ್ಥಿಗಳಿಗೆ ಇಂತಹ ಘಟನೆಗಳಿಂದ ತೀವ್ರ ಮಾನಸಿಕ ಹಿಂಸೆಯಾಗಿದೆ. ಇದರಿಂದಾಗಿ ಹಲವು ವಿದ್ಯಾರ್ಥಿಗಳು ಪರೀಕ್ಷೆಯನ್ನು ಸರಿಯಾಗಿ ಬರೆಯಲು ಸಾಧ್ಯವಾಗದೆ ಕಂಗಾಲಾಗಿದ್ದಾರೆ.



> » ತನಿಖೆಗೆ ಆಗ್ರಹ
>
> » ಬ್ರಾಹ್ಮಣ ಸಮಾಜವನ್ನು ಕೀಳು ಮಟ್ಟದಲ್ಲಿ ನೋಡಿರುವುದಕ್ಕೆ ಕ್ಷಮೆ ಕೇಳಬೇಕು. ಘಟನೆ ನಡೆದ ಪರೀಕ್ಷಾ ಕೇಂದ್ರಗಳ ವಿರುದ್ಧ ತಕ್ಷಣವೇ ಉನ್ನತ ಮಟ್ಟದ ತನಿಖೆ ನಡೆಸಬೇಕು. ಘಟನೆಗೆ ನೇರ ಕಾರಣರಾದ ಪ್ರಾಂಶುಪಾಲರು, ಪರೀಕ್ಷಾ ಮೇಲ್ವಿಚಾರಕರು ಹಾಗೂ ಭದ್ರತಾ ಸಿಬ್ಬಂದಿಯನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು.

ಇದು ಅವರ ಶೈಕ್ಷಣಿಕ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಸಂಘಟನೆಯು ಕಳವಳ ವ್ಯಕ್ತಪಡಿಸಿದೆ.

ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಿ ನಿಷ್ಪಕ್ಷಪಾತ ವಿಚಾರಣೆ ನಡೆಸಬೇಕು. ಮುಂದಿನ ದಿನಗಳಲ್ಲಿ ಯಾವುದೇ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಧಾರ್ಮಿಕ ಹಕ್ಕುಗಳಿಗೆ ಚ್ಯುತಿ ಬಾರದಂತೆ ಸರ್ಕಾರ ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸಬೇಕು.

ಮಾನಸಿಕ ಹಿಂಸೆ ಅನುಭವಿಸಿದ ವಿದ್ಯಾರ್ಥಿಗಳಿಗೆ ಸೂಕ್ತ ನ್ಯಾಯ ಹಾಗೂ ವಿಶೇಷ ಪರಿಹಾರ ಒದಗಿಸಬೇಕು. ಮತ್ತು ವಿದ್ಯಾರ್ಥಿಗಳ ಭವಿಷ್ಯ ಮತ್ತು ಧಾರ್ಮಿಕ ಹಕ್ಕುಗಳ ವಿಷಯದಲ್ಲಿ ಸರ್ಕಾರ ಯಾವುದೇ ನಿರ್ಲಕ್ಷ್ಯ ತೋರಬಾರದು. ಕೂಡಲೇ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಿ ಪೀಡಿತ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕೆಂದು ಅಧ್ಯಕ್ಷರಾದ ಜಯತೀರ್ಥ ವೆಂ. ಸವದತ್ತಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡರು.

ಈ ವೇಳೆ ಬ್ರಾಹ್ಮಣ ಸಮಾಜದ ಪ್ರಮುಖ ಮುಖಂಡರುಗಳು ಸಂಘದ ಕಾರ್ಯದರ್ಶಿಗಳು ಅಧ್ಯಕ್ಷರು ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.

ಸಂವಿಧಾನದಡಿ ನಾವೆಲ್ಲರೂ ಒಂದೇ

ಬೆಳಗಾವಿ: ಬಾಬಾಸಾಹೇಬರು ನೀಡಿದ ಹಕ್ಕುಗಳು ಇಡೀ ಮಾನವಕುಲಕ್ಕೆ ಸೇರಿವೆ. ಅಂಬೇಡ್ಕರ್ ಸಂವಿಧಾನದಡಿ ನಾವೆಲ್ಲರೂ ಒಂದೇ ಎಂದು ಸಮತಾ ಸೈನಿಕ ದಳದ ಬೃಹತ್ ಸಮಾವೇಶದಲ್ಲಿ ರಾಜ್ಯಾಧ್ಯಕ್ಷ ಜಿ.ಸಿ. ವೆಂಕಟರಮಣಪ್ಪ ಹೇಳಿದರು.

ಗುರುವಾರ ಶಾಹುನಗರದಲ್ಲಿ ಸಮತಾ ಸೈನಿಕ ದಳದ ಜಿಲ್ಲಾ ಹಾಗೂ ಉತ್ತರ ಕರ್ನಾಟಕ ಮಟ್ಟದ ಪದಾಧಿಕಾರಿಗಳ ಮಹತ್ವದ ಸಮಾವೇಶ ಮತ್ತು ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯ ಅಧ್ಯಕ್ಷರಾದ ಜಿ.ಸಿ. ವೆಂಕಟರಮಣಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾವೇಶವನ್ನು ರಾಜ್ಯ ಉಪಾಧ್ಯಕ್ಷ ಪ್ರವೀಣ ಹಿರೇಮಠ ಅವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕಾರ್ಯಾಧ್ಯಕ್ಷರಾದ ಡಾ. ಜಿ. ಗೋವಿಂದಯ್ಯ ಹಾಗೂ ಗೌರವಾಧ್ಯಕ್ಷ ವಿನೋದ ಜಾಕೂ, ರಾಜ್ಯ ಪ್ರಧಾನ ಕಾರ್ಯದರ್ಶಿ ಶಾಸ್ತ್ರಿ ಹೊಸಮನಿ, ಯುವ ಘಟಕದ ರಾಜ್ಯಾಧ್ಯಕ್ಷ ದಲಿತ ಚಳುವಳಿ ನಾಗೇಶ್, ರಾಜ್ಯ ಮಹಿಳಾ ಅಧ್ಯಕ್ಷ ದಿಲಶಾದ ಶಾಕೀಲದಾರೆ, ರಾಜ್ಯ ಖಜಾಂಚಿ ಕೆಂಚಯ್ಯ, ಮಹಾದೇವ ದಿಗಿ, ಗುಲುಕಮ್ಮಲೈ ಗೋಪಾಲ, ವೆಂಕಟೇಶಪ್ಪ, ಮುನಿರಾಜು, ಅರ್ಜುನ ಗೋಪಾಲಯ್ಯ, ಅಜೀತ ಕಟ್ಟಿ ಇನ್ನುಳಿದ ಗಣ್ಯರು ಸಮಾರಂಭವನ್ನು ಉದ್ಘಾಟಿಸಿದರು.

ಈ ವೇಳೆ ರಾಜ್ಯಾಧ್ಯಕ್ಷರಾಗಿ ಜಿ.ಸಿ.ವೆಂಕಟರಮಣಪ್ಪ, ರಾಜ್ಯ ಉಪಾಧ್ಯಕ್ಷರಾಗಿ ಪ್ರವೀಣ್ ಹಿರೇಮಠ, ಬೆಳಗಾವಿ ಜಿಲ್ಲಾಧ್ಯಕ್ಷರಾಗಿ ಹಸೀನಾ ಶೇಖ್ ಸೇರಿದಂತೆ ಇನ್ನುಳಿದವರು ಪದಗ್ರಹಣ ಮಾಡಿದರು.

ರಾಜ್ಯಾಧ್ಯಕ್ಷ ಜಿ.ಸಿ.ವೆಂಕಟರಮಣಪ್ಪ, ರಾಜ್ಯ ಉಪಾಧ್ಯಕ್ಷ ಪ್ರವೀಣ್ ಹಿರೇಮಠ ಮಾತನಾಡಿದರು.

ಮಲ್ಲಿಕಾರ್ಜುನ ಬಿಳೂರ, ಎನ್. ಎನ್.ಗಾಳೆಮ್ಮನವರ, ಪರಶುರಾಮ್ ಶಿಂಧೆ, ಮುನಿಸ್ವಾಮಿ, ಸುರೇಖಾ ಹುಬ್ಬಳ್ಳಿ, ಕವಿತಾ ಛಲವಾದಿ, ಉಮೇಶ್ ಛಲವಾದಿ, ಖಾಝಾಸಾಬ್ ಬಿಜಾಪೂರ, ಆದಿಲಬಾಷಾಮ ತಬರೇಜ್ ಶೇಖ್, ಸಮೀರ ಹಜರತ್ ಭಾಯಿ, ನಿಯಾಝು ಬೇಪಾಟಿ, ಸುನೀಲ್ ಸಿದ್ದಾಪುರ ಸೇರಿದಂತೆ ಇತರರು ಇದ್ದರು.



ಶ್ರೀ ಬಸವೇಶ್ವರ ಸೊಸೈಟಿಗೆ 5.35 ಕೋಟಿ ಲಾಭ

ಮೂಡಲಗಿ: ತಾಲೂಕಿನ ಪ್ರತಿಷ್ಠಿತ ಹಣಕಾಸು ಸಂಸ್ಥೆಗಳಲ್ಲಿ ಒಂದಾದ ಶ್ರೀ ಬಸವೇಶ್ವರ ಅರ್ಬನ್ ಕೋ-ಆಫ್.ಕ್ರೆಡಿಟ್ ಸೊಸೈಟಿಯು ಮಾರ್ಚ್ ಅಂತ್ಯಕ್ಕೆ 5.35 ಕೋಟಿ ಲಾಭಗಳಿಸಿ ಪ್ರಗತಿ ಪಥದತ್ತ ಸಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಮಲ್ಲಿಕಾರ್ಜುನ ಡವಳೇಶ್ವರ ತಿಳಿಸಿದ್ದಾರೆ.

ಗುರುವಾರ ಸಂಘದ ಸಭಾಭವನದಲ್ಲಿ 26ನೇ ಸಾಲಿನ ಆರ್ಥಿಕ ವರ್ಷದ ಲಾಭಾಂಶ ವಿವರಿಸಲು ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು.

> » 18 ಶಾಖೆಗಳು ಪ್ರಗತಿ,
>
> » ಶೀಘ್ರದಲ್ಲಿ ಬೆಳಗಾವಿ ಹಾಗೂ ಕಡಕೋಳದಲ್ಲಿ ನೂತನ ಶಾಖೆಗಳನ್ನು ಪ್ರಾರಂಭ
>
> » ಶೇರುದಾರರಿಗೆ ಶೇ 15 ದರಷ್ಟು ಲಾಭಾಂಶ ವಿತರಣೆ
>
> » ಸಿಬ್ಬಂದಿಗಳಿಗೆ ಆರೋಗ್ಯ ವಿಮೆ

ಸಂಘವು ಶೇರು ಬಂಡವಾಳ 6.90 ಕೋಟಿ, 27.21 ಕೋಟಿ ನಿಧಿಗಳು, 274.36 ಕೋಟಿ ಠೇವುಗಳು, 81.34 ಕೋಟಿ ಗುಂತಾವಣೆಗಳು, 208. 34 ಕೋಟಿ ಸಾಲ ವಿತರಣೆ 321.67 ಕೋಟಿ ದುಡಿಯುವ ಬಂಡವಾಳ ಹೊಂದಿ ಮಾರ್ಚ್ ಅಂತ್ಯಕ್ಕೆ 5.35 ಕೋಟಿ ಲಾಭ ಹೊಂದಿದೆ, 18 ಶಾಖೆಗಳು ಪ್ರಗತಿಯಲ್ಲಿದ್ದು ಇನ್ನು ಎರಡು ಬೆಳಗಾವಿ ಹಾಗೂ ಕಡಕೋಳದಲ್ಲಿ ನೂತನ ಶಾಖೆಗಳನ್ನು ಪ್ರಾರಂಭಿಸಲಾಗುವದು, ಶೇರುದಾರರಿಗೆ ಶೇ 15 ದರಷ್ಟು ಲಾಭಾಂಶ ವಿತರಿಸಲಾಗುತ್ತಿದೆ, ಸೊಸೈಟಿಯ ಸರ್ವ ಸಿಬ್ಬಂದಿಗಳಿಗೂ ಆರೋಗ್ಯ ವಿಮೆ ಸೌಲಭ್ಯ ಒದಗಿಸಲಾಗಿದೆ ಎಂದರು.

ಸಂಘದ ಉಪಾಧ್ಯಕ್ಷ ರವೀಂದ್ರ ಭಾಗೋಜಿ ಮಾತನಾಡಿ, ಸದ್ಯ ಬೇಟಗೇರಿಯಲ್ಲಿ ಸಂಘದ ಶಾಖೆಯು ತನ್ನ ಸ್ವತ ಕಟ್ಟಡ ಹೊಂದಿದ್ದು ವಡೆರಹಟ್ಟಿ ಮತ್ತು ಹುಣಶ್ಯಾಳ ಗ್ರಾಮದ ಶಾಖೆಗಳು ಕಟ್ಟಡ ಪ್ರಗತಿಯಲ್ಲಿವೇ, ಯರಗಟ್ಟಿಯಲ್ಲಿ ನಿವೇಶನ ಖರೀದಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕರಾದ ಬಸವರಾಜ ತೇಲಿ, ಗಿರೀಶ ಡವಳೇಶ್ವರ, ಚನ್ನಬಸು ಬಡ್ಡಿ, ಶ್ರೀಕಾಂತ ಹಿರೇಮಠ, ಶ್ರೀಶೈಲ ಮದಗಣ್ಣವರ, ದೇವಪ್ಪ ಕೌಜಲಗಿ, ಕುಸುಮಾ ತೇಲಿ, ಸುಮಿತ್ರಾ ಶೇಡಬಾಳ, ಮಹಾದೇವಿ ಹಿರೇಮಠ, ಮತ್ತು ಲಕ್ಷ್ಮಣ ತೆಳಗಡೆ, ರಾಘವೇಂದ್ರ ಕೆಸಪನಟ್ಟಿ ಉಪಸ್ಥಿತರಿದ್ದರು. ಸೊಸಾಯಿಟಿಯ ಪ್ರಧಾನ ವ್ಯವಸ್ಥಾಪಕ ಬಸವರಾಜ ಬಡಿಗೇರ ಸ್ವಾಗತಿಸಿ ವಂದಿಸಿದರು.



ಅರ್ಹರಿಗೆ ಗ್ಯಾರಂಟಿ ಯೋಜನೆ ತಲುಪಿಸಿ: ನಿಂಗಪ್ಪ

ಚನ್ನಮ್ಮನ ಕಿತ್ತೂರು: ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಿಗೆ ಸಮಯಕ್ಕೆ ಸರಿಯಾಗಿ ಸೌಲಭ್ಯಗಳು ದೊರಕುವಂತೆ ಮಾಡಲು ಕ್ಷೇತ್ರ ಮಟ್ಟದ ಅಧಿಕಾರಿಗಳು ಹೆಚ್ಚು ಚುರುಕಾಗಿ ಕಾರ್ಯನಿರ್ವಹಿಸುವುದು ಅವಶ್ಯಕವಾಗಿದೆ ಎಂದು ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ನಿಂಗಪ್ಪ ಮಸಳಿ ಹೇಳಿದರು.

ತಾಲೂಕು ಪಂಚಾಯತಿ ಸಭಾಭವನದಲ್ಲಿ ಮಂಗಳವಾರ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರದ ಯೋಜನೆಗಳ ಪ್ರಯೋಜನಗಳು ಕಾಗದದಲ್ಲೇ ಉಳಿಯದೆ ನೈಜವಾಗಿ ಜನರಿಗೆ ತಲುಪಬೇಕು. ಈ ನಿಟ್ಟಿನಲ್ಲಿ ಅರ್ಜಿಗಳ ಸ್ವೀಕೃತಿ, ಪರಿಶೀಲನೆ ಮತ್ತು ಮಂಜೂರಾತಿ ಹಂತಗಳಲ್ಲಿ ವೇಗ ಹೆಚ್ಚಿಸುವುದು ಮುಖ್ಯವಾಗಿದೆ. ಯಾವುದೇ ಅರ್ಹ ವ್ಯಕ್ತಿ ಸೌಲಭ್ಯದಿಂದ ವಂಚಿತರಾಗದಂತೆ



ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾ ವಹಿಸಬೇಕು ಎಂದು ಅವರು ಸೂಚಿಸಿದರು.

ಗ್ರಾಮ ಮಟ್ಟದಲ್ಲಿ ಜನರಿಂದ ಬರುತ್ತಿರುವ ಸಮಸ್ಯೆಗಳು ಹಾಗೂ ಅಸಮಾಧಾನಗಳನ್ನು ಗಂಭೀರವಾಗಿ ಪರಿಗಣಿಸಿ, ಸ್ಥಳದಲ್ಲಿಯೇ ಪರಿಹಾರ ಕಂಡುಹಿಡಿಯುವ ಮೂಲಕ ಆಡಳಿತದ ಮೇಲೆ ಜನರಲ್ಲಿ ನಂಬಿಕೆ ಮೂಡಿಸಬೇಕು ಎಂದು ಅವರು ಹೇಳಿದರು.

ತಾಲೂಕು ಗ್ಯಾರಂಟಿ ಸಮಿತಿಯ ಅಧ್ಯಕ್ಷ ಗಂಗಪ್ಪ ಹುರಕಡ್ಲಿ ಅವರು ಮಾತನಾಡಿ, ಗ್ಯಾರಂಟಿ ಯೋಜನೆಗಳು ಜನಜೀವನಕ್ಕೆ ನೇರವಾಗಿ ಸ್ಪರ್ಶಿಸುವುದರಿಂದ ಅವುಗಳ ಅನುಷ್ಠಾನದಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶ ಇರಬಾರದು. ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ಸಮರ್ಪಕವಾಗಿ ಸೌಲಭ್ಯ ತಲುಪುವಂತೆ ಎಲ್ಲಾ ಅಧಿಕಾರಿಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಾಪಂ ಸಹಾಯಕ ನಿರ್ದೇಶಕರು ಮಹಮ್ಮದ್ ಗೌಸ್ ರಿಸಲ್ದಾರ್, ವಿಜಯ್ ಪಾಟೀಲ್, ತಾಲೂಕ ಯೋಜನಾಧಿಕಾರಿ ಗೌಡಪ್ಪ ಗಿರಿಮಲ್ಲನವರ, ತಾಪಂ ಸಿಬ್ಬಂದಿ ಸಂಗನಗೌಡ ಹಂದ್ರಾಳ, ಲಿಂಗರಾಜ ಹಲಕರ್ಣಿಮಠ, ನಾಗಪ್ಪ ಕಳ್ಳಿಮನಿ, ಯಲ್ಲಪ್ಪ ಹುಲಿಮನಿ, ಮಡಿವಾಳಪ್ಪ ಚಿಣ್ಣನವರು ಸೇರಿದಂತೆ ಸಮಿತಿಯ ಸದಸ್ಯರು, ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಪಡಿತರ ಚೀಟಿಯಲ್ಲಿ ಹೆಸರು ಸೇರ್ಪಡೆಗೆ ಒತ್ತಾಯ

ಚಿಕ್ಕೋಡಿ: ವೈದ್ಯಕೀಯ ಚಿಕಿತ್ಸೆ ಪಡೆಯಲು ಅನುಕೂಲವಾಗುವಂತೆ ಪಡಿತರ ಚೀಟಿಗಳಲ್ಲಿ ಹೆಸರು ಸೇರ್ಪಡೆಗೆ ಅವಕಾಶ ಕಲ್ಪಿಸಿಕೊಡುವಂತೆ ಒತ್ತಾಯಿಸಿ ಕಿತ್ತೂರ ಕರ್ನಾಟಕ ಸೇನೆ ವತಿಯಿಂದ ಬುಧವಾರ ಪಟ್ಟಣದ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಮನವಿ ಸಲ್ಲಿಸಲಾಯಿತು.

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ವ್ಯಾಪ್ತಿಯ ಗ್ರಾಮ, ಪಟ್ಟಣಗಳ ನಿವಾಸಿಗಳು ವೈದ್ಯಕೀಯ ಸೌಲಭ್ಯ ಸೇರಿದಂತೆ ಸರ್ಕಾರದ ವಿವಿಧ ಸೌಕರ್ಯಗಳನ್ನು ಪಡೆದುಕೊಳ್ಳಲು ಪಡಿತರ ಚೀಟಿ ಅವಶ್ಯಕವಾಗಿದೆ. ಹಳೆಯ ಹಾಗೂ ಹೊಸ ಪಡಿತರ ಚೀಟಿಗಳಲ್ಲಿ ಹೆಸರು ಸೇರ್ಪಡೆ ಮಾಡಲು ಅಂತರ್ಜಾಲ ತಾತ್ಕಾಲಿಕವಾಗಿ ಸ್ಥಗಿತವಾಗಿದ್ದು, ಇದರಿಂದ ಸಾಮಾನ್ಯ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಇದನ್ನು ಸರಿಪಡಿಸಿ ಹೆಸರು ಸೇರ್ಪಡೆಗೆ ಅವಕಾಶ ಮಾಡಿಕೊಡುವಂತೆ ಗ್ರೇಡ್ 1 ತಹಶೀಲ್ದಾರ ಪರಿಮಳಾ ದೇಶಪಾಂಡೆ ಅವರಿಗೆ ಕಿತ್ತೂರ ಕರ್ನಾಟಕ ಸೇನೆಯ ಪದಾಧಿಕಾರಿಗಳು ಮನವಿ ನೀಡಿದರು. ಈ ಸಂದರ್ಭದಲ್ಲಿ ಕಿತ್ತೂರ ಕರ್ನಾಟಕ ಸೇನೆಯ ಚಿಕ್ಕೋಡಿ ಜಿಲ್ಲಾಧ್ಯಕ್ಷ ನಾಗೇಶ ಮಾಳಿ, ವಿಶಾಲ ಕುಡಚೆ, ಸುರೇಶ ಬ್ಯಾಕೂಡೆ, ರಾಜೇಂದ್ರ ಪಾಟೀಲ, ಬಸವರಾಜ ಸಾಜನೆ, ರಾಹುಲ ವಾಳಕೆ, ಸಂತೋಷ ಕಟ್ಟಿಮನಿ, ಅನಿಲ ಮಗದುಮ್, ಮುಬಾರಕ್ ಗಡಕರೆ ಇತರರು ಇದ್ದರು.



ತಾಂತ್ರಿಕ ಜ್ಞಾನ, ಸಂವಹನ ಸಾಮರ್ಥ್ಯ ಅವಶ್ಯ: ಪಾಟೀಲ

ಬೈಲಹೊಂಗಲ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ತಾಂತ್ರಿಕ ಜ್ಞಾನ, ಸಂವಹನ ಸಾಮರ್ಥ್ಯ ಹಾಗೂ ಪ್ರಾಯೋಗಿಕ ಅನುಭವ ಅತ್ಯವಶ್ಯಕವೆಂದು ಕೆಎಲ್‌ಇ ನಿರ್ದೇಶಕ ಹಾಗೂ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಹೇಳಿದರು.

ಅವರು ನಗರದ ನಗರದ ಕೆಎಲ್‌ಇ ಸಂಸ್ಥೆಯ ಪಾಲಿಟೆಕ್ನಿಕ್ (ಡಿಪ್ಲೋಮಾ) ಮತ್ತು ಐಟಿಐ ಕಾಲೇಜಿನಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಪದವಿ ಪಡೆಯುವುದಷ್ಟೇ ಸಾಕಾಗುವುದಿಲ್ಲ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಉದ್ಯೋಗಕ್ಕೆ ಅಗತ್ಯವಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಐಪಿಎಸ್ ಅಧಿಕಾರಿ ಡಾ. ಭಾನುಪ್ರಕಾಶ ಅವರು, ವಿದ್ಯಾರ್ಥಿಗಳು ಕೇವಲ ಪುಸ್ತಕ ಜ್ಞಾನಕ್ಕೆ ಸೀಮಿತವಾಗದೆ ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳಬೇಕು ಹಾಗೂ ನೈತಿಕ ಮೌಲ್ಯಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕೆಎಲ್‌ಇ ಸಂಸ್ಥೆಯ ಉಪಾಧ್ಯಕ್ಷ ಬಸವರಾಜ ತಟವಾಟಿ



ವಹಿಸಿದ್ದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾಲೇಜಿನ ಅಭಿವೃದ್ಧಿಗೆ ಕೊಡುಗೆ ನೀಡಿದ ಆಡಳಿತ ಮಂಡಳಿ ಹಾಗೂ ಶಿಕ್ಷಕರ ಸೇವೆಯನ್ನು ಸ್ಮರಿಸಲಾಯಿತು.

ಬೇವಿನಕೊಪ್ಪ ಆನಂದಾಶ್ರಮದ ವಿಜಯಾನಂದ ಸ್ವಾಮೀಜಿ ಸಾನಿಧ್ಯವಹಿಸಿ ಮಾತನಾಡಿ, ಕೆಎಲ್‌ಇ ಸಂಸ್ಥೆಯು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದರು.

ಅತಿಥಿಗಳಾಗಿ ತಾ.ಪಂ. ಇಒ ಸಂಜೀವ ಜುನ್ನೂರ ಹಾಗೂ ಗಣಾಚಾರಿ ಎಕ್ಸಲೆಂಟ್ ಎಜ್ಯುಕೇಶನ್ ಸಂಸ್ಥೆಯ ಅಧ್ಯಕ್ಷ ಬಿ.ಬಿ. ಗಣಾಚಾರಿ ಮಾತನಾಡಿ, ಆಧುನಿಕ ಸೌಲಭ್ಯಗಳೊಂದಿಗೆ ಕಾಲೇಜು ಅಭಿವೃದ್ಧಿ ಹೊಂದಿರುವುದರಿಂದ ವಿದ್ಯಾರ್ಥಿಗಳು ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು. ರಸ್ತೆ ಸುರಕ್ಷತೆ ಮತ್ತು ಕಾನೂನು ಅರಿವು ಕುರಿತು ಮಾಹಿತಿ ನೀಡಿದರು.

ಪ್ರಾಚಾರ್ಯ ಪ್ರೋ. ಶ್ರೀಧರ ನಿರಡಿ ಅವರು ವಾರ್ಷಿಕ ವರದಿ ಮಂಡಿಸಿ, ವಿದ್ಯಾರ್ಥಿಗಳ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಹಾಗೂ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾದ ವಿಷಯಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಅನೇಕ ಗಣ್ಯರು, ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕೀರ್ತಿ ಕಟ್ಟಿ ನಿರೂಪಿಸಿದರು, ವೀಣಾ ಪಾಟೀಲ ವಂದಿಸಿದರು.

ಸರ್ಕಾರಿ ಪದವಿ ಕಾಲೇಜಿನಲ್ಲಿ ರಕ್ತದಾನ ಶಿಬಿರ | 53 ಯೂನಿಟ್ ರಕ್ತ ಸಂಗ್ರಹ

ಎಲ್ಲಕ್ಕಿಂತ ರಕ್ತದಾನ ಶ್ರೇಷ್ಠ: ಡಾ.ಜವಳಕರ

ಖಾನಾಪುರ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜಿನಲ್ಲಿ ಗುರುವಾರ ಕಾಲೇಜಿನ ಎನ್.ಎಸ್.ಎಸ್ ಮತ್ತು ಸ್ಕೌಟ್ಸ್, ಗೈಡ್ಸ್, ರೆಡ್ ಕ್ರಾಸ್ ವತಿಯಿಂದ ಆರೋಗ್ಯ ಇಲಾಖೆ ಮತ್ತು ಜಿಲ್ಲಾ ರಕ್ತಭಂಡಾರಗಳ ಸಹಯೋಗದಲ್ಲಿ ರಕ್ತದಾನ ಶಿಬಿರ ಜರುಗಿತು. ಶಿಬಿರದಲ್ಲಿ ಭಾಗವಹಿಸಿದ್ದ ಕಾಲೇಜಿನ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸಿಬ್ಬಂದಿ ಮತ್ತು ಹೊರಗಿನಿಂದ ಆಗಮಿಸಿದ ದಾನಿಗಳು ಸೇರಿದಂತೆ 53 ಜನರು ರಕ್ತದಾನ ಮಾಡಿದರು.

ರಕ್ತದಾನ ಶಿಬಿರದಲ್ಲಿ ಭಾಗವಹಿಸಿದ್ದ ತಾಲೂಕು ಆರೋಗ್ಯಾಧಿಕಾರಿ ಡಾ.ಮಹೇಶ ಕಿವಡಸಣ್ಣವರ ದಾನಿಗಳಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿ, ''ಈ ಶಿಬಿರದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ರಕ್ತದಾನಕ್ಕೆ ಮುಂದಾಗಿದ್ದು ಮತ್ತು ತಮ್ಮದೇ ಆದ ವಿಶೇಷ ರೀತಿಯಿಂದ



ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಿದ್ದು ಬಹಳ ಖುಷಿಯ ಸಂಗತಿ. ಕಾಲೇಜಿನ ಇತಿಹಾಸದಲ್ಲೇ ಇದು ದಾಖಲೆಯ ಸಂಗ್ರಹವಾಗಿದೆ'' ಎಂದು ಹೇಳಿದರು.

ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಮಲ್ಲಪ್ಪ ಬಾಳಿಕಾಯಿ ಮಾತನಾಡಿ, ''ಇಂದಿನ ಶಿಬಿರದ ಯಶಸ್ಸಿನ ಹಿಂದೆ ವಿದ್ಯಾರ್ಥಿಗಳ ಶ್ರಮ ಬಹಳಷ್ಟಿದೆ. ಶಿಬಿರದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾಲೇಜಿನ ಎನ್.ಎಸ್.ಎಸ್ ಮತ್ತು ಸ್ಕೌಟ್ಸ್ ಗೈಡ್ಸ್, ರೆಡ್ ಕ್ರಾಸ್ ಘಟಕಗಳ ಸ್ವಯಂಸೇವಕರು ಬಹಳಷ್ಟು ಶ್ರಮಿಸಿದ್ದಾರೆ. ರೀಲ್ಸ್‌ಗಳ ಮೂಲಕ, ಸಾಮಾಜಿಕ ಜಾಲತಾಣಗಳ ಮೂಲಕ ಮತ್ತು ವಿದ್ಯಾರ್ಥಿಗಳನ್ನು ಖುದ್ದು ಭೇಟಿಯಾಗಿ ಮನವೊಲಿಸುವ ಮೂಲಕ ಶಿಬಿರವನ್ನು ಯಶಸ್ವಿಗೊಳಿಸಿದ್ದಾರೆ. ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನಕ್ಕೆ ಮುಂದೆ ಬಂದಿದ್ದಾರೆ'' ಎಂದು ವಿವರಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ.ಡಿ.ಎಂ ಜವಳಕರ, ''ಇಂದು ದಾನವಾಗಿ ನೀಡಿದ ರಕ್ತ ಮುಂದಿನ ದಿನಗಳಲ್ಲಿ ರೋಗಿಯೊಬ್ಬರ ಜೀವ ಉಳಿಸಲು ನೆರವಾಗಲಿದೆ. ಹೀಗಾಗಿ ರಕ್ತದಾನ ಶ್ರೇಷ್ಠದಾನ ಎಂಬುದನ್ನು ಎಲ್ಲರೂ ಅರಿಯಬೇಕು. ಇಂದಿನ ಶಿಬಿರದಲ್ಲಿ ವಿದ್ಯಾರ್ಥಿಗಳ ಜೊತೆಯಲ್ಲಿ ದಾನಿಗಳ ಈ ಉದಾರ ಮನೋಭಾವವನ್ನು ಕಾಲೇಜು ಸ್ಮರಿಸಲಿದೆ'' ಎಂದರು.

ಕಾರ್ಯಕ್ರಮದಲ್ಲಿ ರೆಡ್ ಕ್ರಾಸ್ ಸಂಚಾಲಕ ಜೆ.ಎನ್ ಮುಚಾವರ, ಸ್ಕೌಟ್ಸ್ ಗೈಡ್ಸ್ ಘಟಕದ ಸಂಯೋಜಕರಾದ ಡಾ.ವಿದ್ಯಾ ಜೀರಗೆ, ಸಾಗರ ಮೋಟಣಕರ, ಹಿರಿಯ ಪ್ರಾಧ್ಯಾಪಕ ಡಾ.ಸಿ.ಬಿ.ತಬೋಜಿ, ಆರೋಗ್ಯ ಶಿಕ್ಷಣಾಧಿಕಾರಿ ಮಹಾನಂದಾ ಪಾರಿಶ್ವಾಡ, ಸರ್ಕಾರಿ ಪಿಯು ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಸನ್ನ ಕುಲಕರ್ಣಿ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು, ಆರೋಗ್ಯ ಇಲಾಖೆಯ ಸಿಬ್ಬಂದಿ, ರಕ್ತಭಂಡಾರದ ವೈದ್ಯರು, ಸಿಬ್ಬಂದಿ ಮತ್ತು ದಾನಿಗಳು ಇದ್ದರು.

ಕಿರುಸುದ್ದಿ

ಮರು ಮೌಲ್ಯಮಾಪನ: ಪಿಯುಸಿಯಲ್ಲಿ ರಾಜ್ಯಕ್ಕೆ 7ನೇ ಸ್ಥಾನ



ರಬಕವಿ-ಬನಹಟ್ಟಿ: ತಾಲೂಕಿನ ಹೊಸೂರಿನ ಹಜಾರೆ ಫೌಂಡೇಶನ್‌ನ ಪದ್ಮಾವತಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದ ವಿಜ್ಞಾನ ವಿಭಾಗದ ವಿದ್ಯಾರ್ಥಿ ರವಿ ತುಕ್ಕಣ್ಣವರ 2025-26 ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 600 ಕ್ಕೆ 591 ಅಂಕಗಳನ್ನು ಪಡೆದು 98.50%ನಲ್ಲಿ ರಾಜ್ಯಕ್ಕೆ 9 ನೇ ಸ್ಥಾನ ಪಡೆದಿದ್ದನು. ಮುಂದುವರೆದು ಕನ್ನಡ ವಿಷಯಕ್ಕೆ ಪಡೆದಿದ್ದ 98 ಅಂಕಗಳಿಗೆ ಮರುಮೌಲ್ಯಮಾಪನದಲ್ಲಿ ಮತ್ತೆ 2 ಅಂಕ ಪಡೆದು 100 ಪ್ರತಿಶತ ಸಾಧಿಸಿ ತಾಲೂಕಿಗೆ ಪ್ರಥಮ ಹಾಗೂ ರಾಜ್ಯಕ್ಕೆ 7ನೇ ಸ್ಥಾನ ಗಳಿಸಿರುತ್ತಾನೆ. ಸಾಧನೆಗೈದ ವಿದ್ಯಾರ್ಥಿಗೆ ಮಹಾವಿದ್ಯಾಲಯ ಸಂಸ್ಥಾಪಕ ಚೇರಮನ್ ಸತೀಶ ವಿ ಹಜಾರೆ, ಆಡಳಿತಾಧಿಕಾರಿ ಭಾರತಿ ತಾಳಿಕೋಟಿ ಹಾಗೂ ಪ್ರಾಚಾರ್ಯ ಶ್ರೀಶೈಲ ಕುಂಬಾರ, ಆಡಳಿತ ಮಂಡಳಿಯ ಸದಸ್ಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಶುಭ ಹಾರೈಸಿದರು.

ಬನ್ನೆಮ್ಮ ದೇವಿ ರಥೋತ್ಸವ ಇಂದು



ಮಹಾಲಿಂಗಪುರ: ಸಮೀಪದ ಬಿಸನಾಳ ಗ್ರಾಮದಲ್ಲಿ ಮೇ 1ರಂದು ಹುಣ್ಣಿಮೆ ದಿನ ಬನ್ನೆಮ್ಮ ದೇವಿ ರಥೋತ್ಸವ, ಮಾರುತಿ ದೇವರ ಓಕಳಿ, ಜಾತ್ರೆ ಜರುಗುವುದು ಎಂದು ಗ್ರಾಪಂ ಮಾಜಿ ಅಧ್ಯಕ್ಷ ಬಸವರಾಜ ಶಿರೋಳ ತಿಳಿಸಿದ್ದಾರೆ. ಬೆಳಗ್ಗೆ ದೇವಿಯ ಉಡಿ ತುಂಬುವ ಕಾರ್ಯಕ್ರಮ ಸಂಜೆ 4ರಿಂದ ಓಕಳಿ, ಕುಸ್ತಿ , ರಥೋತ್ಸವ, ಕರಡಿಮಜಲು, ಡೊಳ್ಳು ಕುಣಿತ ಹಾಗೂ ಸ್ಥಳೀಯ ಕಲಾವಿದರಿಂದ ಧರ್ಮದ ನುಡಿ, ಕ್ರಾಂತಿಯ ಕಿಡಿ ಎಂಬ ನಾಟಕ ಪ್ರದರ್ಶನಗೊಳ್ಳಲಿದೆ. ಮೇ 2 ರಂದು ರಾಜ್ಯ ಮಟ್ಟದ ತೆರೆ ಬಂಡಿ ಜರುಗಿಸುವುದಾಗಿ ತಿಳಿಸಿದ್ದಾರೆ.

ಶ್ರದ್ಧಾ ಭಕ್ತಿಯಿಂದ ನಡೆದ ಲಕ್ಷ್ಮೀ ನರಸಿಂಹ ಜಯಂತಿ



ಗಲಗಲಿ: ಸ್ಥಳೀಯ ಪ್ರಸಿದ್ಧ ಲಕ್ಷ್ಮಿ ನರಸಿಂಹ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಲಕ್ಷ್ಮಿ ನರಸಿಂಹದೇವರ ಉತ್ಸವ ಪ್ರಾರಂಭಗೊಂಡಿದ್ದು, ಉತ್ಸವದ ನಿಮಿತ್ತ ಗುರುವಾರ ಅಭಿಷೇಕ, ಅಲಂಕಾರ, ವಿಶೇಷ ಪೂಜೆ, ಹೋಮ ಹವನ ಮೂಲಕ ನರಸಿಂಹ ಜಯಂತಿ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ಜರುಗಿತು. ಬಿಂದುಮಾಧವಾಚಾರ್ಯ ನಾಗಸಂಪಿಗೆ ಅವರಿಂದ ಪ್ರವಚನ ನಡೆಯಿತು. ಭಕ್ತರಿಗೆ ಅನ್ನ ಸಂತರ್ಪಣೆ ಜರಗಿತು. ಗೋಪಿನಾಥಾಚಾರ ಗಲಗಲಿ, ನರಸಿಂಹಾಚಾರ್ಯ ಗಲಗಲಿ, ಶ್ರೀ ನಿವಾಸ ಆಚಾರ್ಯ ಗಲಗಲಿ, ಯದುನಂದನಾಚಾರ್ಯ ಗಲಗಲಿ, ಶ್ರೀ ಗಲಗಲಿ ಸೇರಿದಂತೆ ದೇವಸ್ಥಾನದ ಟ್ರಸ್ಟ್ ಕಮಿಟಿ ಸದಸ್ಯರು ಹಾಗೂ ಗ್ರಾಮದ ಬ್ರಾಹ್ಮಣ ಸಮಾಜದವರಿದ್ದರು. ನೂರಾರು ಭಕ್ತರು ಪಾಲ್ಗೊಂಡಿದ್ದರು.

ಜೆಡಿಎಸ್‌ದಿಂದ ಬಿಎಲ್‌ಎ ಕಾರ್ಯಾಗಾರ ಇಂದು



ಬಾದಾಮಿ: ಬಾದಾಮಿ ಮತಕ್ಷೇತ್ರದ ಜನತಾದಳ(ಜಾತ್ಯತೀತ) ಪಕ್ಷದ ವತಿಯಿಂದ ಕೇಂದ್ರ ಚುನಾವಣಾ ಆಯೋಗವು ದೇಶಾದ್ಯಂತ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಕಾರ್ಯಾಗಾರ ಮೇ 1 ರಂದು ಬೆಳಗ್ಗೆ 10.30ಕ್ಕೆ ಬಾದಾಮಿ ವೀರಪುಲಕೇಶಿ ವಿದ್ಯಾವರ್ಧಕ ಸಂಘದ ಒಳಾಂಗಣ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದು, ಸದರಿ ಕಾರ್ಯಾಗಾರಕ್ಕೆ ಮತಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ಮುಖಂಡರು, ಆಗಮಿಸಬೇಕು ಎಂದು ಜಿಲ್ಲಾ ಜೆಡಿಎಸ್ ಪಕ್ಷದ ಅಧ್ಯಕ್ಷ ಹನಮಂತ ಮಾವಿನಮರದ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.



ಕಲಾದಗಿ: ತುಳಸಿಗೇರಿ ಮಾರುತೇಶ್ವರ ಓಕಳಿ ನಿಮಿತ್ಯ ಹಮ್ಮಿಕೊಂಡಿದ್ದ ರಾಜ್ಯ, ಅಂತರಾಜ್ಯ ಮಟ್ಟದ ಮುಕ್ತ ಕಬಡ್ಡಿ ಕಾರ್ಯಕ್ರಮವನ್ನು ವಿಧಾನ ಪರಿಷತ ಸದಸ್ಯ ಪಿ.ಎಚ್.ಪೂಜಾರ, ಮಾಜಿ ಸಚಿವ ಅಜಯಕುಮಾರ ಸರನಾಯಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅನೇಕ ಗಣ್ಯರು ಉಪಸ್ಥಿತರಿದ್ದರು.

ಸಾಹಿತ್ಯ ಪರಂಪರೆ, ಭಕ್ತಿ ಸಾಹಿತ್ಯಗಳ ಗೋಷ್ಠಿ ನಾಳೆ

ಬಾಗಲಕೋಟೆ: ಸಾಹಿತ್ಯ ವೇದಿಕೆ ಡಾ. ರಾಜಕುಮಾರ ಅವರ ಚಲನಚಿತ್ರಗಳ ಸಾಹಿತ್ಯಾನುಸಂಧಾನ ವಿವಿಧ ಗೋಷ್ಠಿ ಮೇ 2ರಂದು ಶನಿವಾರ ಜರುಗಲಿವೆ.

ಸಾಹಿತ್ಯ ಅಕಾಡೆಮಿ ಹಾಗೂ ಧಾರವಾಡ ಕಟ್ಟೆ ಮತ್ತು ಬಸವೇಶ್ವರ ಕಲಾ ಮಹಾವಿದ್ಯಾಲಯದ ಕನ್ನಡ ಸ್ನಾತಕೋತ್ತರ ವಿಭಾಗದಿಂದ ಮೇ 2ರಂದು ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಭಾ ಭವನದಲ್ಲಿ ಡಾ.ರಾಜಕುಮಾರ ಚಲನಚಿತ್ರಗಳು ಸಾಹಿತ್ಯಾನುಸಂಧಾನ ಹಾಗೂ ವಿವಿಧ ಗೋಷ್ಠಿ ಜರುಗಲಿದ್ದು, ಕನ್ನಡ ಸಲಹಾ ಮಂಡಳಿ ಸಾಹಿತ್ಯ ಅಕಾಡೆಮಿ ಸದಸ್ಯ ವಿಜಯಕುಮಾರ ಕಟಗಿಹಳ್ಳಿಮಠ ಪ್ರಸ್ತಾವಿಕ ನುಡಿಯನ್ನಾಡುವರು. ಪ್ರಾಚಾರ್ಯ ಎಸ್.ಆರ್. ಮೂಗನೂರಮಠ ಅಧ್ಯಕ್ಷತೆ ವಹಿಸುವರು. ಗೋಷ್ಠಿ 1ರಲ್ಲಿ ಡಾ. ರಾಜಕುಮಾರ ಚಲಚಿತ್ರಗಳು ಮತ್ತು ಐತಿಹಾಸಿಕತೆ ಕುರಿತು ವಿಶೇಷ ಉಪನ್ಯಾಸ ಹಿರಿಯ ಸಾಹಿತಿ ಬಾಳಾಸಾಹೇಬ ಲೋಕಾಪುರ ನೀಡುವರು. ಡಾ.ರಾಜಕುಮಾರ ಚಲನಚಿತ್ರಗಳು ಮತ್ತು ಕನ್ನಡ ಸಾಹಿತ್ಯ ಪರಂಪರೆ ಕುರಿತು ಸಾಹಿತಿ ಬಸವರಾಜ ಡೋಣುರು ಮಾತನಾಡುವರು. 2ನೇ ಗೋಷ್ಠಿಯಲ್ಲಿ ಡಾ.ರಾಜಕುಮಾರ ಚಲಚಿತ್ರಗಳು, ಪೌರಾಣಿಕತೆ ಕುರಿತು ಉಜಿರೆಯ ಡಾ.ರಾಜಶೇಖರ ಹಳೆಮನೆ ಮಾತನಾಡುವರು. ಡಾ.ರಾಜಕುಮಾರ ಮತ್ತು ಭಕ್ತಿ ಸಾಹಿತ್ಯ ಕುರಿತು ರಂಗಕರ್ಮಿ ಶ್ರೀಹರಿ ಧೂಪದ ಮಾತನಾಡುವರು. ಇಡಾ. ರಾಜಕುಮಾರ ಅವರ ಚಲನಚಿತ್ರಗಳ ಕುರಿತು ಸಾಹಿತ್ಯಾನುಸಂಧಾನ ಕಾರ್ಯಕ್ರಮ ಜರುಗಲಿದ್ದು ಎಲ್ಲ ಸಾಹಿತ್ಯಾಭಿಮಾನಿಗಳು ಭಾಗವಹಿಸಿ ಯಶಸ್ವಿಗೊಳಿಸಲು ಪ್ರಕಣೆಯಲ್ಲಿ ತಿಳಿಸಿದ್ದಾರೆ.



ಬಾಗಲಕೋಟೆ: ಸಮಿಪದ ಹೊಸ ಮುರನಾಳದಲ್ಲಿ ಕಡೆಯ ಮಂಗಳವಾರ ವೈಭವಯುತವಾಗಿ ಶ್ರದ್ಧಾಭಕ್ತಿಯಿಂದ ಗ್ರಾಮಸ್ಥರು ಗ್ರಾಮದೇವಿಗೆ ಊಡಿ ತುಂಬಿ ಸಂಪೂರ್ಣ ಮಳೆಯಾಗಿ ಚೆನ್ನಾಗಿ ಬೆಳೆ ಬಂದು ಲೋಕವೆಲ್ಲ ಸಮೃದ್ಧಿಯಾಗಲಿ, ಗ್ರಾಮದಲ್ಲಿ ರೋಗರುಜಿಗಳು ಬಾರದೆ ಇರಲಿ ಎಂದು ಪ್ರಾರ್ಥಿಸಿದರು.

ನೀಟ್ ಪರೀಕ್ಷೆ-2026 ಪೂರ್ವಭಾವಿ ಸಭೆ ; 10 ಪರೀಕ್ಷಾ ಕೇಂದ್ರಗಳ ಸ್ಥಾಪನೆ

ಪರೀಕ್ಷೆಗೆ ಸಲಕ ಸಿದ್ಧತೆ ಮಾಡಿಕೊಳ್ಳಿ: ಡಿಸಿ

ಬಾಗಲಕೋಟೆ: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-2026) ಇದೆ ಮೇ 3ರಂದು ನಡೆಯಲಿದ್ದು, ಜಿಲ್ಲಾ ಕೇಂದ್ರವಾದ ಬಾಗಲಕೋಟ ಮತ್ತು ನವನಗರದಲ್ಲಿ 10 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ, ಒಟ್ಟು 3727 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಸಂಜೆ ಆಯೋಜಿಸಲಾಗಿದ ನೀಟ್ ಪರೀಕ್ಷೆ-2026 ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಸೂಕ್ತವಾದ ಡೆಸ್ಕ್ ವ್ಯವಸ್ಥೆ, ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆ ಕಲ್ಪಿಸಬೇಕು. ಬೇಸಿಗೆಯ ತಾಪ ಹೆಚ್ಚಿರುವುದರಿಂದ ಪರೀಕ್ಷೆಯ ಅವಧಿಯಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಲಾದ ಎಲ್ಲ ಸಿಬ್ಬಂದಿ ಮತ್ತು ಅಧಿಕಾರಿಗಳು ಕಡ್ಡಾಯವಾಗಿ ತರಬೇತಿಗೆ ಹಾಜರಾಗಬೇಕು. ಯಾವುದೇ ಸಿಬ್ಬಂದಿ ಗೈರುಹಾಜರಾದಲ್ಲಿ ಅಥವಾ ಕರ್ತವ್ಯದಲ್ಲಿ ಲೋಪವೆಸಗಿದಲ್ಲಿ ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಿಯಮಗಳಂತೆ, ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದ ಒಳಗೆ ಯಾವುದೇ ವಸ್ತು ತೆಗೆದುಕೊಂಡು ಹೋಗುವಂತಿಲ್ಲ, ಯಾವುದೇ ರೀತಿಯ ಪತ್ರ, ವಿಷಯಗಳು, ಕಾಗದದ ಚೂರುಗಳು, ಪೆನ್ಸಿಲ್ ಬಾಕ್ಸ್, ಪ್ಲಾಸ್ಟಿಕ್ ಪೌಚ್ ಒಟ್ಟಾರೆ ಎಲ್ಲ ರೀತಿ ಎಲೆಕ್ಟ್ರಾನಿಕ್ ವಸ್ತುವಾಲೆಟ್, ಗಾಗಲ್ಸ್, ಹ್ಯಾಂಡ್ ಬ್ಯಾಗ್, ಬೆಲ್ಟ್, ಕ್ಯಾಪ್, ಸ್ಮಾರ್ಟ್ ವಾಚ್, ಮೈಕ್ರೋಚಿಪ್, ಕ್ಯಾಮೆರಾ, ಬ್ಲೂಟೂತ್ ನಿಷೇಧಿಸಲಾಗಿದೆ. ಪರೀಕ್ಷಾ ದಿನದಂದು ಓಎಂಆರ್ ಭರ್ತಿ ಮಾಡಲು, ಉತ್ತರ ತುಂಬಲು ವಿದ್ಯಾಥಿಗಳಿಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ವತಿಯಿಂದ ಕಪ್ಪು ಬಾಲ್ ಪೆನ್ ನೀಡಲಾಗುತ್ತಿದ್ದು, ಜೆಲ್ ಪೆನ್ ಬಳಕೆಗೆ ಅವಕಾಶವಿಲ್ಲ, ಒಂದು ವೇಳೆ ವಸ್ತು ಅಭ್ಯರ್ಥಿ ಬಳಿ ಕಂಡು ಬಂದಲ್ಲಿ, ಅದನ್ನು ಅಕ್ರಮ ಮಾರ್ಗಗಳ ಬಳಕೆ ಎಂದು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

> ಪರೀಕ್ಷೆ ಪಾರದರ್ಶಕ ಹಾಗೂ ಸುವ್ಯವಸ್ಥಿತವಾಗಿ ನಡೆಯಲು, ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆ ತಡೆಯುವ ದೃಷ್ಟಿಯಿಂದ ಪರೀಕ್ಷೆ ನಡೆಯುವ ದಿನ, ಪರೀಕ್ಷೆ ಕೇಂದ್ರದ ಸುತ್ತಮುತ್ತಲಿನ 200 ಮೀಟರ್ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿ. ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಜೆರಾಕ್ಸ್, ಕಂಪ್ಯೂಟರ್ ಸೆಂಟರ್ ನಿಷೇಧಾಜ್ಞೆ ಸಮಯದಲ್ಲಿ ಕಾರ್ಯನಿರ್ವಹಿಸುವಂತಿಲ್ಲ.
>
> ■ ಸಂಗಪ್ಪ, ಜಿಲ್ಲಾಧಿಕಾರಿ

10 ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರನ್ನಾಗಿ ನೇಮಿಸಲಾಗಿದೆ. ಪರೀಕ್ಷೆ ಪಾರದರ್ಶಕ, ಸುವ್ಯವಸ್ಥಿತವಾಗಿ ನಡೆಯಲು ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆ ತಡೆಯುವ ದೃಷ್ಟಿಯಿಂದ ಪರೀಕ್ಷೆ ನಡೆಯುವ ದಿನ, ಪರೀಕ್ಷೆ ಕೇಂದ್ರದ ಸುತ್ತಮುತ್ತಲಿನ 200ಮೀ. ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿ. ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಜೆರಾಕ್ಸ್, ಕಂಪ್ಯೂಟರ್ ಸೆಂಟರ್‌ಗಳು ನಿಷೇಧಾಜ್ಞೆ ಸಮಯದಲ್ಲಿ ಕಾರ್ಯನಿರ್ವಹಿಸುವಂತಿಲ್ಲ ಎಂದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ, ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಪೋಲೀಸ್ ಬಂದೋಬಸ್ತ್, ತುರ್ತು ವೈದ್ಯಕೀಯ ತಂಡ ನಿಯೋಜಿಸಿದೆ. ಪರೀಕ್ಷಾ ಕೇಂದ್ರಕ್ಕೆ ಎಲೆಕ್ಟ್ರಾನಿಕ್ ಉಪಕರಣ ನಿಷೇಧ. ಪರೀಕ್ಷಾ ದಿನದಂದು ನಿರಂತರ ವಿದ್ಯುತ್ ಸರಬರಾಜು ನೀಡಬೇಕು. ಪರೀಕ್ಷಾ ಕೇಂದ್ರಗಳಿಗೆ ಒಂದು ಸ್ಥಳದಲ್ಲಿ ಮಾತ್ರ ಪ್ರವೇಶ ಅವಕಾಶ ಕಲ್ಪಿಸಿಕೊಡಲಾಗುವುದು. ಬಯೋಮೆಟ್ರಿಕ್ ದೃಢೀಕರಣದನಂತರವೇ ಪರೀಕ್ಷಾ ಕೇಂದ್ರ ಪ್ರವೇಶಿಸಲು ಅವಕಾಶ ನೀಡಲಾಗುತ್ತದೆ. ಪ್ರತಿ ಕೊಠಡಿಯಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ. ಪ್ರತಿ ಕೇಂದ್ರಕ್ಕೆ ರೂ.5 ಸಾವಿರ ಅನುದಾನದಲ್ಲಿ ಜನರೇಟರ್ ವ್ಯವಸ್ಥೆಗೆ ಅನುಮತಿ ನೀಡಲಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಗುರಿ ತಲುಪುವವರೆಗೂ ಪ್ರಯತ್ನ ಬಿಡಬೇಡಿ

ಬಾದಾಮಿ: ಈ ಬಾರಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಫಲಿತಾಂಶ ಕ್ಷೇತ್ರದ ಎರಡು ತಾಲೂಕಿನ ವಿದ್ಯಾರ್ಥಿಗಳ ಸಾಧನೆ ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಬಿತ್ತರಿಸಿದೆ. ಆ ಮೂಲಕ ಈ ವರ್ಷದ ಶೈಕ್ಷಣಿಕ ಸಾಧಕ ವಿದ್ಯಾರ್ಥಿಗಳು ಭವಿಷ್ಯದಲ್ಲೂ ತಮ್ಮ ಗುರಿ ತಲುಪುವವರೆಗೆ ಟಾಪ್ ಲಿಸ್ಟನಲ್ಲೇ ಬರಬೇಕು ಈ ನಿಟ್ಟಿನಲ್ಲಿ ಸಾಧಕರಾಗಿ ಹೊರಹೊಮ್ಮುವ ಪ್ರಯತ್ನ ನಿಮ್ಮದಾಗಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಪಟ್ಟಣದ ಕಾಳಿದಾಸ ಶಿಕ್ಷಣ ಸಂಸ್ಥೆ ಸಭಾಭವನದಲ್ಲಿ ಗುರುವಾರ ಹಮ್ಮಿಕೊಂಡಿದ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿಗೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಮಾತನಾಡಿ, ನೀವು ಕಲಿಯುವ ಶಾಲೆ ಯಾವುದೇ ಆಗಿರಲಿ ಅಲ್ಲಿಯೇ ಸಾಧನೆ ಮಾಡಬಹುದು. ಈ ಸನ್ಮಾನ ತಮ್ಮ ಪ್ರತಿಭೆ ಮುಂದಿನ ಪುರಸ್ಕಾರಗಳು ನಿಮ್ಮದಾಗಲಿ. ಅವರು ನಿಮ್ಮ ಶೈಕ್ಷಣಿಕ ಭವಿಷ್ಯದಲ್ಲೂ ನಿಮ್ಮ ಗುರಿ ತಲುಪುವ ವರೆಗೂ ನೀವು ಟಾಪ್ ಇರಬೇಕು.ಪಾಲಕರ ಮತ್ತು ಶಿಕ್ಷಕರ ಪ್ರೋತ್ಸಾಹ ದಿಂದ ಈ ವರ್ಷದ ಫಲಿತಾಂಶ ಉತ್ತಮವಾಗಲು ಕಾರಣವಾಗಿದೆ.

> ನೀವು ಕಲಿಯುವ ಶಾಲೆ ಯಾವುದೇ ಆಗಿರಲಿ ಅಲ್ಲಿಯೇ ಸಾಧನೆ ಮಾಡಬಹುದು. ಈ ಸನ್ಮಾನ ತಮ್ಮ ಪ್ರತಿಭೆ ಮುಂದಿನ ಪುರಸ್ಕಾರಗಳು ನಿಮ್ಮದಾಗಲಿ. ಅವರು ನಿಮ್ಮ ಶೈಕ್ಷಣಿಕ ಭವಿಷ್ಯದಲ್ಲೂ ನಿಮ್ಮ ಗುರಿ ತಲುಪುವ ವರೆಗೂ ನೀವು ಟಾಪ್ ಇರಬೇಕು.
>
> ■ ಭೀಮಸೇನ ಚಿಮ್ಮನಕಟ್ಟಿ, ಶಾಸಕ

ಶೈಕ್ಷಣಿಕವಾಗಿ ಅಭಿವೃದ್ಧಿಗೆ ಸರಕಾರದಿಂದ ಸರಕಾರಿ ಎಲ್ಲ ವರ್ಗದವರಿಗೆ ವಸತಿ ನಿಲಯ ಹಾಸ್ಟೆಲ್ ನಿರ್ಮಾಣಕ್ಕೆ ತಕ್ಕಂತೆ ಜಿಲ್ಲೆಯಲ್ಲಿ ನಮ್ಮ ತಾಲೂಕಿನ ಹೆಚ್ಚಿನ ಅಂಕ ಪಡೆದಿರುವುದು ಹೆಮ್ಮೆಯಾಗಿದೆ.ಮೊಬೈಲ್ ಬಳಕೆ ಕಡಿತಗೊಳಿಸಿ ಮುಂದೆ ಐಎಎಸ್ ಹುದ್ದೆಗೆ ನಿಮ್ಮ ದೃಷ್ಟಿ ಸಾಕಾರಗೊಳ್ಳಲಿ ಎಂದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಅಶೋಕ ಕೋಟನಕರ, ಅವಳಿ ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷ ಈರನಗೌಡ ಕರಿಗೌಡ್ರ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವುಕುಮಾರ ಹಿರೇಮಠ, ಪುರಸಭೆ ಮಾಜಿ ಸದಸ್ಯ ಮಂಜುನಾಥ ಹೊಸಮನಿ, ಕಾನಿಪ ತಾಲೂಕಾಧ್ಯಕ್ಷ ಆಡವೇಂದ್ರ ಇನಾಮದಾರ ಉಪಸ್ಥಿತರಿದ್ದರು.



ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ: ಕಡ್ಲಿಮಟ್ಟಿ



ಕಮತಗಿ: ನನ್ನ ವಿರುದ್ಧ ರಾಜಕೀಯ ಷಡ್ಯಂತ್ರ ನಡೆಯುತ್ತಿದೆ. ನಾವು ಈಗಾಗಲೇ ನೋಟಿಸ್‌ಗೆ ಸೂಕ್ತ ಉತ್ತರ ನೀಡಿದ್ದರೂ ಸಹ ಅಮಾನತು ಕ್ರಮ ಕೈಗೊಳ್ಳಲಾಗಿದೆ ಎಂದು ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹಾಗೂ ಕಾಂಗ್ರೆಸ್ ಹಿರಿಯ ಮುಖಂಡ ಮುರುಗೇಶ ಕಡ್ಲಿಮಟ್ಟಿ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷ ವಿರೋಧಿ ಚಟುವಟಿಕೆ ಆರೋಪದ ಹಿನ್ನೆಲೆಯಲ್ಲಿ ಜಿಲ್ಲಾ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಅವರು ನೀಡಿದ ನೋಟಿಸ್‌ಗೆ ಸಷ್ಟನೆ ಸಲ್ಲಿಸಿದ್ದೇವೆ. ಆದರೂ ಸಹ ನಮ್ಮ ಮೂರು ಜನರನ್ನು ಅಮಾನತ್ತಿನಲ್ಲಿ ಇಟ್ಟಿದ್ದು, ನ್ಯಾಯಸಮ್ಮತವಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ನಾನು ಯಾವುದೇ ರೀತಿಯ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿ ಕೊಂಡಿಲ್ಲ. ಪಕ್ಷವೇ ನಮ್ಮನ್ನು ನಿರ್ಲಕ್ಷ್ಯ ಮಾಡಿದ್ದು, ಯಾವುದೇ ರೀತಿ ಪಕ್ಷದ ಚಟುವಟಿಕೆಗಳಲ್ಲಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಈ ಕಾರಣದಿಂದಲೇ ನಾನು ಮೌನವಾಗಿದ್ದೆ, ಅದನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ ಎಂದರು. ಬೇರೆ ಪಕ್ಷದವರನ್ನು ನಾನು ಯಾರನ್ನೂ ಸಂಪರ್ಕಿಸಿಲ್ಲ, ಯಾರನ್ನೂ ಭೇಟಿ ಮಾಡಿಲ್ಲ. ಜಿಲ್ಲಾ ಮಟ್ಟದ ನಾಯಕರು ಈ ಸಮಸ್ಯೆ ಪರಿಹರಿಸಬೇಕು. ಪಟ್ಟಣದ ಕೆಲವು ಮುಖಂಡರು ಇದನ್ನು ಉದ್ದೇಶಪೂರ್ವಕವಾಗಿ ಬಗೆಹರಿಸದಂತೆ ನೋಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಗ್ರಾಮದೇವಿಗೆ ಉಡಿ ತುಂಬುವ ಕಾರ್ಯಕ್ರಮ

ಬಾಗಲಕೋಟೆ: ಸಮಿಪದ ಹೊಸ ಮುರನಾಳದಲ್ಲಿ ಕಡೆಯ ಮಂಗಳವಾರ ವೈಭವಯುತವಾಗಿ ಶ್ರದ್ಧಾಭಕ್ತಿಯಿಂದ ಗ್ರಾಮಸ್ಥರು ಗ್ರಾಮದೇವಿಗೆ ಉಡಿ ತುಂಬಿ ಸಂಪೂರ್ಣ ಮಳೆಯಾಗಿ ಚೆನ್ನಾಗಿ ಬೆಳೆ ಬಂದು ಲೋಕವೆಲ್ಲ ಸಮೃದ್ಧಿಯಾಗಲಿ, ಗ್ರಾಮದಲ್ಲಿ ರೋಗರುಜಿಗಳು ಬಾರದೆ ಇರಲಿ ಎಂದು ಪ್ರಾರ್ಥಿಸಿದರು.

ವಾರದ ವ್ರತದ ಕಡೆಯ 5ನೇ ಬೆಳಗಿನ ಜಾವ ದೇವಿಗೆ ಪಂಚಾಮೃತ ಅಭಿಷೇಕ, ಶ್ರೀಸೂಕ್ತ ಪಠಣ, ಶ್ರೀಚಕ್ರಕ್ಕೆ ಕುಂಕುಮಾರ್ಚನೆ, ಎಲಿ ಪೂಜೆ, ಪುಷ್ಪಾಲಂಕಾರ ಮಾಡಿ ಮಹಾಮಂಗಳಾರುತಿ ಮಾಡಲಾಯಿತು, ಮದ್ಯಾಹ್ನ 12 ಗಂಟೆಗೆ ತವರು ಮನೆಯ ಸೀರೆ ಹಾಗೂ ಊಡಿ ತುಂಬುವ ಕಾರ್ಯ ಜರುಗಿತು. ಮಾರುತೇಶ್ವರ ದೇವಸ್ಥಾನದಲ್ಲಿ ದೇವಿಯ ಘಳಿಗೆಗೆ ವಿಶೇಷ ಪೂಜೆ ಸಲ್ಲಿಸಿ ಅಲ್ಲಿಂದ ಗ್ರಾಮದ ವಿವಿಧ ರಸ್ತೆಗಳ ಮೂಲಕ ಭವ್ಯ ಮೆರವಣಿಗೆ ಮೂಲಕ ಗ್ರಾಮದೇವಿ ದೇವಸ್ಥಾನ ತಲುಪಲಾಯಿತು, ಮೆರವಣಿಗೆಯಲ್ಲಿ ಛತ್ರಿ, ಚಾಮರ, ಡೋಳ್ಳು, ಪೋತುರಾಜ, ವೀರಗಾರ್ಕಿಯವರ ಸೇವೆ ಎಲ್ಲರನ್ನು ಚಕಿತಗೊಳಿಸಿತು, ಗೊಂಬೆಗಳ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ದೇವಸ್ಥಾನದಲ್ಲಿ ಶ್ರೀದೇವಿಗೆ ಘಳಿಗೆ ಉಡಿಸಿ, ಪುಷ್ಪಗಳಿಂದ ಅಲಂಕರಿಸಿ ಮಳೆರಾಜೇಂದ್ರಸ್ವಾಮಿ ಮಠ ಗಂಗಾಧರಸ್ವಾಮಿಗಳು, ಹೊಳೆ ಆಲೂರಿನ ಯಚ್ಚರೇಶ್ವರ ಶ್ರೀಗಳು, ಮೌನೇಶ್ವರ ಶ್ರೀಗಳು ಸಾನ್ನಿಧ್ಯದಲ್ಲಿ ಗ್ರಾಮದ ಹಿರಿಯರು, ಮಹಿಳೆಯರು ಗ್ರಾಮದೇವಿಗೆ ಊಡಿ ತುಂಬಿದರು ನಂತರ ಮಹಾಮಂಗಳಾರುತಿ ಮಾಡಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕರು ಗ್ರಾಮದ ಹಿರಿಯರು, ಮುಖಂಡರು, ಯುವಕರು, ಮಹಿಳೆಯರು, ರೈತರು, ಬಾಬದವರು ಸೇರಿದಂತೆ ಸಾವರಾರು ಸಂಖ್ಯೆಯಲ್ಲಿ ಜನ ಭಾಗವಹಿಸಿದ್ದರು.

ಗ್ರಾಮ ದೇವತೆ ದರ್ಶನ ಪಡೆದ ಶಾಸಕ ಚಿಮ್ಮನಕಟ್ಟಿ

ಕೆರೂರ: ಗ್ರಾಮ ದೇವತೆಗಳ ರಥೋತ್ಸವವು ಬಹಳಷ್ಟು ಅದ್ದೂರಿಯಾಗಿ ನೇರವೇರಿದ್ದು, ದೇವಿಯ ದರ್ಶನದಿಂದ ಪುನೀತನಾಗಿದ್ದೇನೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಸಂತಸ ವ್ಯಕ್ತ ಪಡಿಸಿದರು.

ಪಟ್ಟಣದಲ್ಲಿ ಇತ್ತೀಚಿಗೆ ನಡೆದ ಗ್ರಾಮ ದೇವತೆಗಳ ಅದ್ದೂರಿ ರಥೋತ್ಸವದಲ್ಲಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಭಾಗಿಯಾಗಿ ದೇವಿ ದರ್ಶನವನ್ನು ಪಡೆದು ಮಾತನಾಡಿದರು.

ಜಾತ್ರೆಯಲ್ಲಿ ಶಾಸಕರ ಕುಟುಂಬದ ವತಿಯಿಂದ ಜಾತ್ರೆಯ ದಿವಸ ದೇವಿಯ ದರ್ಶನಕ್ಕೆ ಬಂದ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು. ಪಟ್ಟಣ ಪಂಚಾಯಿತಿ ವತಿಯಿಂದ ಕೈಗೊಂಡ ಸ್ವಚ್ಚತ ಕಾರ್ಯ,ಕುಡಿಯುವ ನೀರಿನ ವ್ಯವಸ್ಥೆ,ವಿದ್ಯುತ್ ದೀಪಗಳ ನಿರ್ವಹಣೆ ಮಾಡಿದ ಸಿಬ್ಬಂದಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿದರು.



ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಡಾ.ಎಮ್.ಜಿ.ಕಿತ್ತಲಿ, ಅವಳಿ ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷ ಈರಣ್ಣ ಕರಿಗೌಡರ,ಮುಖ್ಯಾಧಿಕಾರಿ ರಮೇಶ ಮಾಡಬಾಳ ಇತರರು ಇದ್ದರು.

ನನ್ನ ಸೇವೆ ತೃಪ್ತಿ ನೀಡಿದೆ: ಪೌರಾಯುಕ್ತ ರಮೇಶ ಜಾಧವ

ರಬಕವಿ-ಬನಹಟ್ಟಿ: ಹಲವಾರು ಪುರಸಭೆ ಹಾಗೂ ನಗರಸಭೆಗಳಲ್ಲಿ ಸುಮಾರು ಮೂರು ದಶಕಗಳ ಕಾಲ ನಗರ ಸೇವಕನಾಗಿ ಕಾರ್ಯನಿರ್ವಹಿಸಿದ ನನಗೆ ತೃಪ್ತಿ ತಂದಿದೆ. ಇಂದಿಗೂ ಜನಸೇವೆಯಿಂದ ಮನಸ್ಸು ಹಾತೊರೆಯುತ್ತಿರುವದು ನಿಜಕ್ಕೂ ಜನರು ನನ್ನ ಮೇಲೆ ಇಟ್ಟ ಪ್ರೀತಿ, ವಿಶ್ವಾಸವೆಂದು ನಗರಸಭಾ ಪೌರಾಯುಕ್ತ ರಮೇಶ ಜಾಧವ ಹೇಳಿದರು.



ಗುರುವಾರ ಸ್ಥಳೀಯ ನಗರಸಭೆ ಸಭಾಭವನದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನ್ನ ಸೇವಾವಽಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ನಗರಸಭಾ ಸದಸ್ಯರು ಹಾಗೂ ಸಿಬ್ಬಂದಿ ಉತ್ತಮ ಬಾಂಧವ್ಯ ಹಾಗೂ ಸ್ಪಂದನೆ ಎಂದಿಗೂ ಅವಿಸ್ಮರಣೀಯವಾದೆ. ಭಾವನಾತ್ಮಕ ಕಾರ್ಯಗಳಿಂದ ಸೇವೆ ಸಲ್ಲಿಸುವ ಮೂಲಕ ಜನಸಾಮಾನ್ಯರ ಹಿತ ಕಾಪಾಡುವಲ್ಲಿ ನೆಮ್ಮದಿ ಕಂಡಿದ್ದೇನೆಂದರು.

ಈ ವೇಳೆ ಮಾಜಿ ನಗರಾಧ್ಯಕ್ಷ ಸಂಜಯ ತೆಗ್ಗಿ ಮಾತನಾಡಿ, ಇವರ ಅವಽಯಲ್ಲಿನ ಸ್ವಚ್ಚತಾ ಅಭಿಯಾನ ಹಾಗೂ ನಾಗರಿಕ ಸ್ನೇಹಿ ಆಡಳಿತ ಸ್ಮರಿಸಿದರು. ನಾಗರಿಕರು ಹಾಗೂ ಪೌರ ಕಾರ್ಮಿಕರ ಸಂಘವು ನಿವೃತ್ತಿ ಹೊಂದಿದೆ ಪೌರಾಯುಕ್ತ ರಮೇಶ ಜಾಧವ ಹಾಗೂ ವೆಂಕೋಜಿರಾವ್ ಕೋರೆನ್ನವರನ್ನು ಶಾಲು ಹೊದಿಸಿ ಸನ್ಮಾನಿಸಿದರು.

ಜಮಖಂಡಿ ನಗರಸಭಾ ಪೌರಾಯುಕ್ತ ಜ್ಯೋತಿಗಿರೀಶ, ಸುಶೀಲಾ ರಮೇಶ ಜಾಧವ, ಪದ್ಮಾ ಕೋರೆನ್ನವರ, ಅಮೀರ ಖಲೀಫಾ, ಬಾಬುರಾವ್ ಕಮತಗಿ, ದೈಗೊಂಡ, ಅಭಿನಂದನ ಸೋನಾರ, ಶ್ರೀಶೈಲ ಬೀಳಗಿ, ನಂದು ಗಾಯಕವಾಡ, ಅಶೋಕ ರಾವಳ, ಅರುಣ ಬುದ್ನಿ, ಗೌರಿ ಮಿಳ್ಳಿ, ದುರ್ಗವ್ವ ಹರಿಜನ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಇದ್ದರು.

ಜನಿವಾರ ತೆಗೆಸಿದ ಪ್ರಕರಣ: ಬ್ರಾಹ್ಮಣ ಮಹಾಸಂಘ ಆಕ್ರೋಶ

ಬಾಗಲಕೋಟೆ: ಸಿಇಟಿ ಪರೀಕ್ಷೆ ವೇಳೆ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಽಸಿದಂತೆ ಎಸ್‌ಐಟಿ ರಚಿಸಿ ಸೂಕ್ತ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದಿಂದ ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.



ನವನಗರದ ಜಿಲ್ಲಾಡಳಿತ ಭವನ ಮುಂಭಾಗ ಬ್ರಾಹ್ಮಣ ವಿದ್ಯಾರ್ಥಿಗಳನ್ನು ಗುರಿಯಾಗಿಸಿ ನಡೆದಿರುವ ಕೃತ್ಯ ಖಂಡಿಸಿದ ಮುಖಂಡರು ಬೆಂಗಳೂರಿನ ಮಡಿವಾಳದಲ್ಲಿರುವ ಕೃಪಾನಿಽ ಕಾಲೇಜು ಹಾಗೂ ಚಿಕ್ಕಬಳ್ಳಾಪುರದಲ್ಲಿರುವ ನಾಗಾರ್ಜುನ ಕಾಲೇಜಿನ ಪರೀಕ್ಷಾ ಕೇಂದ್ರಗಳಲ್ಲಿ ಕೃತ್ಯ ನಡೆದಿರುವುದರಿಂದ ತಪ್ಪಿತಸ್ಥರ ವಿರುದ್ಧ ಕ್ರಮವಾಗಬೇಕು. ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಯಬೇಕೆಂದು ಒತ್ತಾಯಿಸಿದರು.

ಮಹಾಸಂಘದ ರಾಜ್ಯ ಉಪಾಧ್ಯಕ್ಷ ನಾರಾಯಣ ದೇಸಾಯಿ ಮಾತನಾಡಿ, ಬ್ರಾಹ್ಮಣರು ಜನಸಂಖ್ಯೆಯಲ್ಲಿ ಕಡಿಮೆ ಇರಬಹುದು ಆದರೆ ಹಿಂದೂ ಸಮಾಜದ ಸಂಘಟನೆಯಲ್ಲಿ ಸಮಾಜದ ಪಾತ್ರ ದೊಡ್ಡದಾಗಿದೆ. ಸಿಇಟಿ ಪರೀಕ್ಷೆಯಲ್ಲಿ ಕಳೆದ ವರ್ಷವೂ ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರವನ್ನು ಕಳಚಲಾಗಿತ್ತು. ಈ ಬಾರಿಯೂ ಈ ಸಂಪ್ರದಾಯ ಮುಂದವರಿದಿರುವುದು ಸರಿಯಲ್ಲ. ಘಟನೆಗೆ ಸಂಬಂಽಸಿದಂತೆ ಒಂದು ಕಡೆ ಮಾತ್ರವೇ ಪ್ರಕರಣ ದಾಖಲಾಗಿದೆ. ಮತ್ತೊಂದರಲ್ಲಿ ದಾಖಲಾಗಿಲ್ಲ, ಕೂಡಲೇ ಎಫ್‌ಐಆರ್ ದಾಖಲಿಸಬೇಕು. ಇಂಥ ಕೃತ್ಯಗಳು ಪುನರಾವರ್ತನೆ ಆಗದಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸಿದರು.

ಪಂ.ಬಿಂದುಮಾಧವಾಚಾರ್ಯ ನಾಗಸಂಪಿಗೆ ಮಾತನಾಡಿ,ಈರೀತಿಯಘಟನೆಗಳುಪುನರಾವರ್ತನೆ ಆಗುತ್ತಿದೆ. ಮೂಗುಬೊಟ್ಟು, ಮಂಗಳಸೂತ್ರ, ಜನಿವಾರ ತೆಗೆಸಿ ಹಿಂದೂ ಸಂಪ್ರದಾಯಗಳಿಗೆ ಅಪಚಾರವೆಸೆಗುವ ಕೆಲಸ ಮಾಡಲಾಗುತ್ತಿದೆ. ಕಳೆದ ವರ್ಷ ಇಂಥ ಘಟನೆ ನಡೆದಂತೆ ಮತ್ತೆಂದೂ ಪುನರಾವರ್ತನೆ ಆಗಬಾರದಿತ್ತು. ಆದರೆ ಈ ವರ್ಷವೂ ಕೆಲವು ಕಡೆಗಳಲ್ಲಿ ಜನಿವಾರ ತೆಗೆಸಿರುವುದು ನಾಚಿಗೇಡಿನ ಸಂಗತಿ ಎಂದರು.

ಪಂ.ಭೀಮಸೇನಾಚಾರ್ಯ ಪಾಂಡುರಂಗಿ ಮಾತನಾಡಿ, ಪರೀಕ್ಷೆ ನೆಪದಲ್ಲಿ ಪರಿವೀಕ್ಷಕರಾದವರು ಹೇಯಕೃತ್ಯವೆಸಗಿದ್ದಾರೆ. ಭಾರತದ ಪರಂಪರೆ, ಸಂಸ್ಕೃತಿ ಅರಿಯದಷ್ಟು ಹೀನಬುದ್ಧಿ ಜನಿವಾರ ತೆಗೆಸಿದವರು ಹೊಂದಿದ್ದರೆ ಎಂದು ಪ್ರಶ್ನಿಸಿದರು.

ಮಹಾಸಂಘದ ಜಿಲ್ಲಾಧ್ಯಕ್ಷ ನರಸಿಂಹ(ನವೀನ) ದೇಶಪಾಂಡೆ ಮಾತನಾಡಿ, ಮಡಿವಾಳದ ಕೃಪಾನಿಧಿ ಕಾಲೇಜು ಹಾಗೂ ಚಿಕ್ಕಬಳ್ಳಾಪುರದ ನಾಗರಾರ್ಜುನ ಕಾಲೇಜಿನ ಸಿಇಟಿ ಪರೀಕ್ಷಾ ಕೇಂದ್ರಗಳ ವಿರುದ್ಧ ಸಮಗ್ರ ತನಿಖೆ ನಡೆಯಬೇಕು. ಘಟನೆಯಲ್ಲಿ ಹೊಣೆಗಾರರಾದ ಪ್ರಾಚಾರ್ಯರು, ಪರೀಕ್ಷಾ ಮೇಲ್ವಿಚಾರಕರು, ಭದ್ರತಾ ಸಿಬ್ಬಂದಿ ಹಾಗೂ ಅಧಿಕಾರಿಗಳ ಅಮಾನತು ಆಗಬೇಕು. ತಪ್ಪಿತಸ್ಥರ ವಿರುದ್ಧ ಕಾನೂನುಬದ್ಧ ಕ್ರಮಕೈಗೊಳ್ಳಲಿ ಎಂದರು.

ಪಂ.ವಿಜಯೇಂದ್ರಾಚಾರ್ಯ ಯತ್ನಟ್ಟಿ ಪ್ರಧಾನ ಕಾರ್ಯದರ್ಶಿ ಗುರುರಾಜ ಕುಲಕರ್ಣಿ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಮೋಹಿನಿ ಗಾಂವಕರ, ದ.ರಾ.ಪುರೋಹಿತ, ಪ್ರಹ್ಲಾದ ಹುಯಿಲಗೋಳ, ಸತ್ಯನಾರಾಯಣ ಗುಡಿ, ಅರುಣ ದೇಸಾಯಿ, ಕೆ.ಬಿ.ದೇಸಾಯಿ, ಅನಂತಮಳಗಿ, ಬದರಿಆಚಾರ್ಯ ಗುಡಿ, ಶ್ರೀಹರಿ ಡಂಬಳ, ಅರುಣ ಕುಲಕರ್ಣಿ, ಅಕ್ಷರಾ ಕುಲಕರ್ಣಿ, ಆನಂದ ಕಲಕೇರಿ ಮತ್ತಿತರರು ಇದ್ದರು.

ಎಸೆಸ್ಸೆಲ್ಸಿ ಫಲಿತಾಂಶ: ಆದರ್ಶ ಜಿಲ್ಲೆಗೆ ಪ್ರಥಮ

ಜಮಖಂಡಿ: ಹಿಂದುಳಿದ ವರ್ಗ ಕಲ್ಯಾಣ ಇಲಾಖೆ ಸ್ಥಳಖೀಯ ಮೆಟ್ರಿಕ ಪೂರ್ವ ವಸತಿ ನಿಲಯದ ವಿದ್ಯಾರ್ಥಿ ಆದರ್ಶ ಬಸಗೊಂಡನವರ ಶೇ.98.56 ಅಂಕ, ರಬಕವಿ ಬನಹಟ್ಟಿಯ ರಾಮಪ್ಪ ಪ್ರಕಾಶ ಮರಿಗೊಂಡ ಶೇ.96.64%ರಂದು ವಿದ್ಯಾರ್ಥಿಗಳು ಶಾಲೆ, ಇಲಾಖೆಗೆ ಕೀರ್ತಿ ತಂದಿದ್ದಾರೆ.

ನಗರದ ಉಪವಿಭಾಗಾಽಕಾರಿ ಕಚೇರಿಯಲ್ಲಿ ಎಸಿ ಶ್ವೇತಾ ಬೀಡಿಕರ, ತಹಶೀಲ್ದಾರ್ ಅನೀಲ ಬಡಿಗೇರ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ಜಿಲ್ಲೆಗೆ ಪ್ರಥಮ ಬಂದ ಆದರ್ಶ ಬಸಗೊಂಡನವರ ವಿದ್ಯಾರ್ಥಿಗೆ 5000 ರೂ. ನಿಲಯ ಪಾಲಕ ಬಸವರಾಜ ಆಲಗೂರ ವೈಯಕ್ತಿಕವಾಗಿ ಮುಂದಿನ ವ್ಯಾಸಂಗದ ಪುಸ್ತಕ ಖರೀದಿಸಲು ಧನಸಹಾಯ ಮಾಡಿದರು.

ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮಹೇಶ್ ನಾಯಿಕ, ಮಾರುತಿ ದೊಡಮನಿ, ಕಲ್ಮೇಶ ಮರನೂರ, ಅಪ್ಪಾಜಿ ಜಾಧವ, ಅನಿತಾ ಶಿರಗೊಂಡ, ಭಾಗ್ಯಶ್ರೀ ಕದಮ ಹಾಗೂ ಪ್ರಥಮ ದರ್ಜೆ ಸಹಾಯಕರಾದ ವೀರೇಶ ಬಡಿಗೇರ ಇದ್ದರು.



ಬಿರುಗಾಳಿ ಮಳೆಗೆ ಮದುವೆ ಪೆಂಡಾಲ್‌ಗಳು ಧರೆಗೆ

ಅಮೀನಗಡ: ಇಲ್ಲಿನ ಸುತ್ತಮುತ್ತಲಿನ ಗ್ರಾಮಗಳಾದ ಅಮೀನಗಡ ಹಾಗೂ ಹುಲಗಿನಾಳ ಭಾಗದಲ್ಲಿ ಬುಧವಾರ ಸಂಜೆ ಅನಿರೀಕ್ಷಿತವಾಗಿ ಸುರಿದ ಗುಡುಗು ಸಿಡಿಲು ಸಹಿತ ದಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಸಂಜೆ 5 ಗಂಟೆ ಸುಮಾರಿಗೆ ಆರಂಭವಾದ ಬಿರುಗಾಳಿ ಸಹಿತ ಮಳೆ ವ್ಯಾಪಕ ಹಾನಿ ಉಂಟುಮಾಡಿದೆ.

ತಪ್ಪಿದ ಭೀಕರ ಅನಾಹುತ: ಗ್ರಾಮದಲ್ಲಿ ಆಯೋಜಿಸಲಾಗಿದ್ದ ಮದುವೆ ಸಮಾರಂಭವೊಂದರ ಅದ್ದೂರಿ ಪೆಂಡಾಲ್‌ಗಳು ಬಿರುಗಾಳಿಯ ರಭಸಕ್ಕೆ ಸಿಲುಕಿ ನೆಲಸಮವಾಗಿವೆ. ಮದುವೆಶಾಸ್ತ್ರಗಳುಮುಗಿದು ಅತಿಥಿಗಳು ತೆರಳಿದ ಬಳಿಕ ಈ ಘಟನೆ ಸಂಭವಿಸಿದೆ. ಒಂದು ವೇಳೆ ಮದುವೆಯ ಮುಹೂರ್ತದ ಸಮಯದಲ್ಲಿ ಅಥವಾ ಜನರಿರುವಾಗ ಈ ಅನಾಹುತ ಸಂಭವಿಸಿದ್ದರೆ ನೂರಾರು ಪ್ರಾಣಾಪಾಯವಾಗುವ ಸಾಧ್ಯತೆಯಿತ್ತು. ದೈವಬಲದಿಂದ ದೊಡ್ಡ ಅನಾಹುತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದಂತಾಗಿದೆ' ಎಂದು ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದಾರೆ.

ಬಿರುಗಾಳಿಯ ಅರ್ಭಟಕ್ಕೆ ಅಮೀನಗಡ ಮತ್ತು ಹುಲಗಿನಾಳ ಭಾಗದಲ್ಲಿ ಹಲವಾರು ವಿದ್ಯುತ್ ಕಂಬಗಳು ನೆಲಕ್ಕಚ್ಚಿವೆ. ಇದರಿಂದಾಗಿ ಅಮೀನಗಡ ಸೇರಿದಂತೆ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ವಿದ್ಯುತ್ ಸಂಪರ್ಕ ಸಂಪೂರ್ಣ ಕಡಿತಗೊಂಡಿದ್ದು, ಇಡೀ ಪ್ರದೇಶ ಕತ್ತಲಲ್ಲಿ ಮುಳುಗಿದೆ. ವಿದ್ಯುತ್ ಇಲಾಖೆಯ ಸಿಬ್ಬಂದಿಗಳು ದುರಸ್ತಿ ಕಾರ್ಯಕ್ಕೆ ಮುಂದಾಗಬೇಕಿದೆ. ರಸ್ತೆ ಬದಿಯಲ್ಲಿದ್ದ ಬೃಹತ್ ಮರಗಳು ಬಿರುಗಾಳಿಗೆ ಸಿಲುಕಿ ರಸ್ತೆಗೆ ಉರುಳಿ ಬಿದ್ದಿವೆ. ಇದರಿಂದಾಗಿ ಮುಖ್ಯ ರಸ್ತೆಗಳಲ್ಲಿ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದು, ಪ್ರಯಾಣಿಕರು ಗಂಟೆಗಟ್ಟಲೆ ರಸ್ತೆಯಲ್ಲೇ ಸಿಲುಕುವಂತಾಯಿತು. ಮಳೆ ನಿಂತ ನಂತರ ಸ್ಥಳೀಯರು ಮರಗಳನ್ನು ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಧಾರಾಕಾರ ಮಳೆಯಿಂದಾಗಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಹಠಾತ್ ಬಂದ ಈ ಮಳೆಯಿಂದಾಗಿ ರೈತರು ಮತ್ತು ಸಾರ್ವಜನಿಕರು ಆತಂಕಕ್ಕೊಳಗಾಗಿದ್ದಾರೆ.

ಕಿರುಸುದ್ದಿ

ಧರ್ಮ ಸಭೆ ಇಂದು

◆**ಬಸವನಬಾಗೇವಾಡಿ:** ತಾಲೂಕಿನ ಇಂಗಳೇಶ್ವರ ಹಿರೇಮಠದ ಶಿವಬಸವ ಶಿವಾಚಾರ್ಯರ ಜನ್ಮ ಶತಮಾನೋತ್ಸವ ಸಮಾರಂಭದ ನಿಮಿತ್ತ ಮೇ. 1ರಂದು ಸಂಜೆ 4ಗಂಟೆಗೆ ಸುಮಂಗಲೆಯರಿಂದ ಕುಂಭ ಉತ್ಸವ ವಾದ್ಯ ವೈಭವಗಳೊಂದಿಗೆ ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಸಂಜೆ 6 ಗಂಟೆಗೆ ಧರ್ಮ ಸಭೆ ನಡೆಯಲಿದೆ. ಉತ್ತರ ಪ್ರದೇಶ ವಾರಾಣಸಿ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ದಿವ್ಯಸಾನಿಧ್ಯ ವಹಿಸುವರು, ಸಿಂದಗಿ ಸಾರಂಗಮಠದ ಪ್ರಭು ಸಾರಂಗದೇವ ಶಿವಾಚಾರ್ಯರು ಅಧ್ಯಕ್ಷತೆವಹಿಸುವರು, ಸಚಿವ ಶಿವಾನಂದ ಪಾಟೀಲ ಉದ್ಘಾಟಿಸುವರು, ಶಾಸಕ ರಾಜುಗೌಡ ಪಾಟೀಲ, ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಸೋಮನಗೌಡ ಪಾಟೀಲ(ಮನಗೂಳಿ) ಸೇರಿದಂತೆ ವಿವಿಧ ಮಠಾಽಶರು, ಮುಖಂಡರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಬಾಗೇವಾಡಿಗೆ ಪ್ರಶಸ್ತಿ

◆**ವಿಜಯಪುರ:** ಇತ್ತೀಚೆಗೆ ಬೆಂಗಳೂರಿನಲ್ಲಿ ವಿಶ್ವ ಮಾನವ ಕರ್ನಾಟಕ ಕಲಾ ವೇದಿಕೆ ವತಿಯಿಂದ, ವಿಶ್ವ ನೃತ್ಯ ದಿನದ



ಅಂಗವಾಗಿ ಸಾಧನೆ ಗೈದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ದೇಸೀಯ, ವಿದೇಶಿ ವಿವಿಧ ಕ್ರೀಡೆಗಳ ತರಬೇತಿದಾರರಾದ ಬಸವರಾಜ ನಂ ಬಾಗೇವಾಡಿಗೆ (ಅಂತರಜಾಲ) ಈ ವರ್ಷ ಕೊಡುಮಾಡುವ, ಸಮಾಜ ಸೇವಾ ಭೂಷಣ ರಾಜ್ಯ ಪ್ರಶಸ್ತಿಗೆ ನೀಡಿ ಗೌರವಿಸಲಾಯಿತು ಎಂದು ಸಂಸ್ಥೆಯ ಅಧ್ಯಕ್ಷ ರಾಧಾ ಪ್ರಕಾಶ ಎಸ್ ಚೇನಿವಾಲರವರು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

◆**ವಿಜಯಪುರ:** ಕರ್ನಾಟಕ ರಾಜ್ಯ ಹಡಪದ ನೌಕರರ ಸಂಘ (ಎಸ್‌ಎಚ್‌ಇಎ) ಬೆಂಗಳೂರು. ವಿಜಯಪುರ ಜಿಲ್ಲಾ ಘಟಕದ ನೇತೃತ್ವದಲ್ಲಿ 2025-26 ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.80ರಷ್ಟು ಅಂಕ ಗಳಿಸಿದ ಹಡಪದ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸನ್ಮಾನ ಮಾಡಲು ಕ.ರಾ.ಹ.ನೌ.ಸಂಘ ವಿಜಯಪುರ ಜಿಲ್ಲಾ ಘಟಕ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಮಕ್ಕಳು ಅಂಕಪಟ್ಟಿ (ಮಾರ್ಕ್ಸ್ ಕಾರ್ಡ್) ಆಧಾರ ಕಾರ್ಡ ಇತ್ತೀಚಿನ 1ಭಾವಚಿತ್ರವನ್ನು ಹಾಗೂ ಅರ್ಜಿ ಫಾರ್ಮ ಭರ್ತಿ ಮಾಡಿ ಮಂಜುನಾಥ ಕೃಪಾ ನಿವಾಸ ಏಕತಾನಗರ ಸಾಯಿ ಪಾರ್ಕ್ ರಸ್ತೆ ವಿಜಯಪೂರ 586109. ಈ ವಿಳಾಸಕ್ಕೆ ಅಂಚೆ ಮೂಲಕ ಅಥವಾ ಕೋರಿಯರ್ ಮೂಲಕ ಅಥವಾ ಜಿಲ್ಲಾ ಅಧ್ಯಕ್ಷರಿಗೆ ನೇರವಾಗಿ ಮೇ.20ನೇ ತಾರಿಖಿನೊಳಗಾಗಿ ತಲುಪಿಸಲು ಕೋರಲಾಗಿದೆ ಹೆಚ್ಚಿನ ಮಾಹಿತಿಗಾಗಿ ಮೊ.ನಂ 9986091374 ಸಂಖ್ಯೆಗೆ ಸಂಪರ್ಕಿಸಬೇಕೆಂದು ಜಿಲ್ಲಾ ಅಧ್ಯಕ್ಷರಾದ ದಶರಥ ನಾವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 4ರಿಂದ ಉಚಿತ ತಪಾಸಣೆ ಶಿಬಿರ

◆**ವಿಜಯಪುರ:** ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸೆ ವಿಭಾಗದ ವತಿಯಿಂದ ಮೇ 4 ರಿಂದ ಮೇ 9ರವರೆಗೆ ಹಿರಿಯ ನಾಗರಿಕರಲ್ಲಿ ಕಂಡುಬರುವ ವಯೋಸಹಜವಾದ ನೆನಪಿನ ಶಕ್ತಿ ಸಮಸ್ಯೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ನಡೆಯಲಿದೆ. ಈ ಶಿಬಿರದಲ್ಲಿ ನೆನೆಪಿನ ಶಕ್ತಿ ಕ್ಷೀಣಿಸುವಿಕೆ, ಆಲೋಚನೆ ಮತ್ತು ನಿರ್ಧಾರದ ಸಮಸ್ಯೆ, ಸ್ಥಳ ಮತ್ತು ಸಮಯದ ಅರಿವು ಕಡಿಮೆಯಾಗುವುದು, ವರ್ತನೆ ಮತ್ತು ಮನಸ್ಥಿತಿಯಲ್ಲಿನ ಬದಲಾವಣೆ ಸಮಸ್ಯೆ ಎದುರಿಸುತ್ತಿರುವ 60 ರಿಂದ 75 ವರ್ಷದೊಳಗಿನ ಹಿರಿಯ ನಾಗರಿಕರು ಚಿಕಿತ್ಸೆ ಪಡೆಯಬಹುದಾಗಿದೆ. ಇಂಥ ಸಮಸ್ಯೆ ಎದುರಿಸುತ್ತಿರುವ ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

◆**ವಿಜಯಪುರ:** ತಿಕೋಟಾ ಪಟ್ಟಣದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಐಟಿಐಯಲ್ಲಿ ಪ್ರವೇಶಕ್ಕಾಗಿ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. 08-04-2026 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಟಾಟಾ ಯೋಜನೆ ಅಡಿಯಲ್ಲಿ ಮೆಕ್ಯಾನಿಕ್ ಎಲೆಕ್ಟ್ರಿಕ್ ವಾಹನ, ಇಂಡಸ್ಟ್ರಿಯಲ್ ರೋಬೋಟಿಕ್ ಡಿಸೈನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್, ಸಿಎನ್‌ಸಿ ಮ್ಯಾನುಫ್ಯಾಕ್ಚರಿಂಗ್ ಪ್ರೊಸೆಸ್, ಆಟೋನಾಮಸ್, ವರ್ಚುವಲ್ ಅನಾಲಿಸಿಸ್ ಅಂಡ್ ಡಿಸೈನರ್ ಹಾಗೂ ಎಂಜಿನಿಯರಿಂಗ್ ಡಿಸೈನ್ ಟೆಕ್ನಿಷಿಯನ್ ಸೇರಿದಂತೆ ಒಟ್ಟು 06 ವೃತ್ತಿಗಳಲ್ಲೂ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು www.emptrg.kar.nic.in ಹಾಗೂ www.detkarnataka.org.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸರ್ಕಾರಿ ಕೈಗರಿಕಾ ತರಬೇತಿ ಸಂಸ್ಥೆ ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ವಿಜಯಪುರ: ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಜಯಂತಿ ನಿಮಿತ್ತ ಬಬಲೇಶ್ವರ ತಾಲೂಕಿನ ಜಂಬಗಿ ಎಚ್. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಹಾಗೂ ಸಂತೋಧನ ಕೇಂದ್ರ ಹಾಗೂ ಜಂಬಗಿಯ ಡಾ. ಬಾಬಾಸಾಹೇಬ ಅಂಬೇಡ್ಕರ್ ತರುಣ ಸಂಘ ಜಂಬಗಿ ಎಚ್. ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಬೃಹತ್ ಶಿಬಿರ ನಡೆಯಿತು.

ಸಡಗರದಿಂದ ನರಸಿಂಹ ಜಯಂತಿ ಆಚರಣೆ

◆**ವಿಜಯಪುರ:** ನಗರದ ಗಾಯಿ ಚಾಳ್ ಹಳಕೇರಿ ಗಲ್ಲಿಯಲ್ಲಿರುವ ಪುರಾತನ ಪ್ರಸನ್ನೇಶ್ವರ ಹಾಗೂ ಪ್ರಸನ್ನಾಂಜನೇಯವ ಹಾಗೂ ನೀಲಕಂಠೇಶ್ವರ ದೇವಾಲಯದಲ್ಲಿ ಗುರುವಾರ ನರಸಿಂಹ ಜಯಂತಿ ಅತ್ಯಂತ ಭಕ್ತಿ ಸಡಗರಗಳಿಂದ ಆಚರಿಸಲಾಯಿತು.

ಸುಪ್ರಭಾತ, ಪಂಚಾಮೃತ ಅಭಿಷೇಕ, ಅಲಂಕಾರ ಪೂಜೆ, ಸತ್ಯನಾರಾಯಣ ಪೂಜೆ, ಪಲ್ಲಕ್ಕಿ ಉತ್ಸವದ ಕಾಲಕ್ಕೆ ಭಕ್ತರ ವೃಂದದ ಸಂಗೀತ ಸೇವೆ ನಡೆದವು. ಮಹಿಳಾ ಭಕ್ತರು ಬಾಲ ನರಸಿಂಹನನ್ನು ತೊಟ್ಟಿಲಲ್ಲಿ ಹಾಕಿ ನಾಮಕರಣ ಮಾಡುವ ಮೂಲಕ ಸಂಭ್ರಮಿಸಿದರು. ನರಸಿಂಹ ದೇವರ ಕುರಿತಾದ ಹಾಡುಗಳನ್ನು ಅನಿತಾ ಗಾಯಿ ಸುಶ್ರಾವ್ಯವಾಗಿ ಹಾಡಿದರು. ಬಳಿಕ ಯುವ ಪಂಡಿತ ಜಯತೀರ್ಥ ಪಂಢರಿ ಪ್ರವಚನ ಹೇಳುತ್ತ, ಬಾಲಕ ಪ್ರಲ್ಹಾದ ಉತ್ತಮ ಸಂಸ್ಕೃತಿ ಸಂಸ್ಕಾರಗಳನ್ನು ಅಳವಡಿಸಿಕೊಂಡು ಜೀವನ ಸಾಗಿಸಿದ್ದನ್ನು ವಿವರಿಸಿದರು. ನರಸಿಂಹ ದೇವರಲ್ಲಿ ನಮ್ಮೆಲ್ಲ ತೊಂದರೆಗಳನ್ನು ನಿವೇದಿಸಿಕೊಂಡರೆ ಅವುಗಳೆಲ್ಲ ತನ್ನಿಂದ ತಾನೇ ಪರಿಹಾರ ಕಂಡುಕೊಳ್ಳುವವು ಎಂದು ನುಡಿದರು. ಮಂತ್ರಪುಷ್ಪ, ಮಹಾ ನೈವೇದ್ಯ, ಮಹಾ ಮಂಗಳಾರತಿ, ತೀರ್ಥ ಪ್ರಸಾದ ಜರುಗಿತು. ಹುಬ್ಬಳ್ಳಿಯ ಸುಧೀಂದ್ರಾಚಾರ್ಯ ವ ಉಮರ್ಜಿ ಜಯಂತಿ ಉತ್ಸವದ ಸೇವಾಕರ್ತರಾಗಿದ್ದರು. ದೇವಾಲಯದ ಅರ್ಚಕ ವೇ ಮೂ ಪ್ರಕಾಶಾಚಾರ್ಯ ಮದಭಾವಿ, ಸಮಿತಿ ಪದಾಽಕಾರಿಗಳಾದ ನಾಗೇಶ ಕುಲಕರ್ಣಿ, ಅಪ್ಪಣ್ಣ ಗಾಯಿ, ಆನಂದ ಗಾಯಿ ಮುಂತಾದವರು ಅತ್ಯುತ್ಸಾಹದಿಂದ ಜಯಂತಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು.



ವಿಜಯಪುರ: ನಗರದ ಗಾಯಿ ಚಾಳ್ ಹಳಕೇರಿ ಗಲ್ಲಿಯಲ್ಲಿರುವ ಪುರಾತನ ಪ್ರಸನ್ನೇಶ್ವರ ಹಾಗೂ ಪ್ರಸನ್ನಾಂಜನೇಯವ ಹಾಗೂ ನೀಲಕಂಠೇಶ್ವರ ದೇವಾಲಯದಲ್ಲಿ ಗುರುವಾರ ನರಸಿಂಹ ಜಯಂತಿ ಅತ್ಯಂತ ಭಕ್ತಿ ಸಡಗರಗಳಿಂದ ಆಚರಿಸಲಾಯಿತು.

ಕೃಷಿಯಲ್ಲಿ ಹಸಿವಿರಲಿ: ಪಾಟೀಲ

◆**ವಿಜಯಪುರ:** ಒಕ್ಕಲುತನದ ಬಗ್ಗೆ ಹಸಿವು ಬೇಕು. ಹಸಿವು ಇದ್ದಾಗ ಒಕ್ಕಲುತನದಲ್ಲಿ ಪ್ರಗತಿ ಸಾಧ್ಯ ಎಂದು ಕೃಷಿ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಹೇಳಿದರು.

ಜಿಲ್ಲಾಡಳಿತ, ಜಿಪಂ, ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯ ಹಾಗೂ ಜಿಲ್ಲಾ ಕೃಷಿಕ ಸಮಾಜದ ಸಹಯೋಗದಲ್ಲಿ ಗುರುವಾರ ಕೃಷಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ನಡೆದ ಪ್ರತಿ ಎಕರೆಗೆ 100 ಟನ್ ಕಬ್ಬು ಬೆಳೆಯುವುದು ಹೇಗೆ? ಎಂಬ ವಿಚಾರ ಸಂಕಿರಣದಲ್ಲಿ ಮಾತನಾಡಿ, ಮಣ್ಣು ರೈತನ ಕಣ್ಣು ಹಾಗಾಗಿ ರೈತರು ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳಬೇಕು. ಮಣ್ಣಿನ ಪೋಷಕಾಂಶಗಳ ಹೇರಳವಾಗಿರುವಂತೆ ನೋಡಿಕೊಳ್ಳಬೇಕು ಎಂದರು.

ಕಬ್ಬಿನ ಹೆಚ್ಚಿನ ಇಳುವರಿಗಾಗಿ ನಮ್ಮದು ಕಬ್ಬು ಬೆಳೆಯಲು ನಮ್ಮಲ್ಲಿನ ಮಣ್ಣು ಬಹು ಸೂಕ್ತವಾಗಿದೆ. ಮಣ್ಣಿನ ಸತ್ವ ನೋಡಿಕೊಂಡು ಕಬ್ಬಿನ ಸಾಲಿನಿಂದ ಸಾಲಿಗೆ ಇರುವ ಅಗಲ ಖಚಿತಗೊಳಿಸಿಕೊಳ್ಳಬೇಕು. ಕಬ್ಬಿಗೆ ಆವಶ್ಯಕತೆ ಇರುವಷ್ಟು ನೀರು ನೀಡಬೇಕು. ಕಬ್ಬಿನ ಇಳುವರಿಯಲ್ಲಿ ನೀರಿನ ಪಾತ್ರ ಬಹು ಮುಖ್ಯವಾಗಿದೆ. ಹನಿ ನೀರಾವರಿ ಅಳವಡಿಸಿಕೊಂಡು ಇಳುವರಿ ಹೆಚ್ಚಿಸಿಕೊಳ್ಳಬೇಕು. ಈ ಕಾರ್ಯಾಗಾರಕ್ಕೆ ಬಹಳಷ್ಟು ಜನ ರೈತರು ಆಗಮಿಸಿ, ಇಲ್ಲಿನ ವಿಷಯ ತಜ್ಞರು ಮಂಡಿಸಿದ ವಿಷಯ ಕಬ್ಬು ಕೃಷಿಯಲ್ಲಿ ಬಳಕೆ ಮಾಡಿಕೊಂಡು ಕೃಷಿಯಲ್ಲಿ ಯಶಸ್ಸು ಕಾಣಬೇಕು ಎಂದರು.

ಪ್ರಗತಿಪರ ರೈತರಾದ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಕಲ್ಲೋಳಿ ಗ್ರಾಮದ ಬಾಳಪ್ಪ ಬೆಳಕೋಡ, ಇಂಡಿ ತಾಲೂಕಿನ ಶ್ರೀಮಂತ ಇಂಡಿ ಹಾಗೂ ಗೋಳಸಂಗಿಯ ನಾರಾಯಣ ಸಾಲುಂಕೆ ಅವರು ಪ್ರತಿ ಎಕರೆಗೆ 100 ಟನ್ ಕಬ್ಬು ಬೆಳೆಯುವುದು ಹೇಗೆ? ಎಂಬ ವಿಷಯದ ಕುರಿತು ಅನುಭವ ಹಂಚಿಕೊಂಡರು. ಕೃಷಿ ಮಹಾವಿದ್ಯಾಲಯದ ಮುಖ್ಯ ಕೀಟ ತಜ್ಞ ಎ.ಪಿ.ಬಿರಾದಾರ ಅವರು ಕಬ್ಬು ಬೆಳೆಯಲ್ಲಿ ಕೀಟ ನಿರ್ವಹಣೆ ಕುರಿತು ಬಹು ಸೊಗಸಾಗಿ ರೈತರೊಂದಿಗೆ ವಿಷಯ ವಿನಿಮಯ ಮಾಡಿಕೊಂಡರು.



ವಿವಿಧ ಬೆಳೆ ರೋಗಕ್ಕೆ ಪರಿಹಾರ

ಮಣ್ಣಿನಲ್ಲಿ ಲವಣಾಂಶ ಹೆಚ್ಚಾಗುವುದು ಮತ್ತು ಅತಿಯಾದ ನೀರು ನಿಲ್ಲುವಿಕೆಯಿಂದ ಕಬ್ಬಿನ ಬೆಳವಣಿಗೆ ಕುಂಠಿತವಾಗುತ್ತಿದೆ. ಮಣ್ಣಿನ ಆರೋಗ್ಯ ಸುಧಾರಣೆಗೆ ರೈತರು ಗಮನ ಹರಿಸಬೇಕು. ಬಿಳಿ ಕಸ (ಉರಮಲ್ಲಿಗೆ) ಕಬ್ಬಿನ ಗದ್ದೆಗಳಲ್ಲಿ ಕಂಡುಬರುವ ಈ ಪರಾವಲಂಬಿ ಕಳೆ ಗಿಡವು ಕಬ್ಬಿನ ಸತ್ವ ಹೀರಿಕೊಳ್ಳುತ್ತದೆ. ಇದು ಇಳುವರಿಯ ಮೇಲೆ ಭಾರಿ ಹೊಡೆತ ನೀಡುತ್ತಿದೆ. ಗೊಣ್ಣೆ ಹುಳು ಮಣ್ಣಿನ ಒಳಗಿರುವ ಈ ಹುಳುಗಳು ಕಬ್ಬಿನ ಬೇರುಗಳನ್ನು ತಿಂದು ಗಿಡವು ಒಣಗುವಂತೆ ಮಾಡುತ್ತವೆ. ಇದರ ಹತೋಟಿಗೆ ಸೂಕ್ತ ಕೀಟನಾಶಕಗಳ ಬಳಕೆ ಅಗತ್ಯ. ಕಾಡಿಗೆ ರೋಗವು ಕಬ್ಬಿನ ಸುಳಿಯಲ್ಲಿ ಕಪ್ಪು ಬಣ್ಣದ ಚಾಟಿಯಂತಹ ರಚನೆಯನ್ನು ಉಂಟುಮಾಡುತ್ತದೆ. ಇದು ಇಡೀ ಬೆಳೆಗೆ ಹರಡುವ ಸಾಧ್ಯತೆ ಇರುವುದರಿಂದ ಪೀಡಿತ ಗಿಡಗಳನ್ನು ತಕ್ಷಣವೇ ನಾಶಪಡಿಸಬೇಕು.

ತಜ್ಞರ ಸಲಹೆ: ಈ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಸೂಕ್ತ ಕ್ರಮ ಕೈಗೊಳ್ಳುವುದರಿಂದ ರೈತರು ನಷ್ಟದಿಂದ ಪಾರಾಗಬಹುದು. ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳುವಂತೆ ಹಾಗೂ ಕೃಷಿ ಇಲಾಖೆಯ ಅಽಕಾರಿಗಳ ಮಾರ್ಗದರ್ಶನ ಪಡೆಯಬೇಕು. ಕಳೆ ನಿರ್ವಹಣೆ, ಕೀಟ ಮತ್ತು ರೋಗಗಳ ನಿರ್ವಹಣೆ ಕುರಿತು ಸಮಗ್ರ ಮಾಹಿತಿ ನೀಡಿದರು. ಸುಳಿ ಕೊರೆಯುವ ಕೀಟ, ಬಿಳಿ ಉಣ್ಣೆ, ಬಿಳಿ ನೊಣ, ಗೊಣ್ಣೆ ಹುಳ ಕೀಟ ಬಾಧೆಯ ನಿರ್ವಹಣೆ ಬಗ್ಗೆ ಮಾತನಾಡಿದರು.

ಸಂಕೇಶ್ವರದ ಕೃಷಿ ಸಂಶೋಧನಾ ಕೇಂದ್ರದ ಮುಖ್ಯ ವಿಜ್ಞಾನಿ ಡಾ. ಎಸ್.ಎಸ್.ನೂಲಿ ಅವರು ಕಬ್ಬಿನಲ್ಲಿ ಮಣ್ಣು ಪೋಷಕಾಂಶ ಹಾಗೂ ನೀರು ನಿರ್ವಹಣೆ ಕುರಿತು ಮಾತನಾಡಿದರು. ಉಪ ಕೃಷಿ ನಿರ್ದೇಶಕ ಶರಣಗೌಡ ಪಾಟೀಲ ಹಾಗೂ ಚಂದ್ರಕಾಂತ ಪವಾರ, ವಿಜಯಪುರದ ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ಜಾನಮಟ್ಟಿ, ಜಿಲ್ಲಾ ಕೃಷಿಕ ಸಮಾಜ ಅಧ್ಯಕ್ಷ ಶಿವನಗೌಡ ಬಿರಾದಾರ, ಎಸ್.ಬಿ ಜಗ್ಗಿನವರ, ಶಿವಪ್ಪಗೌಡ ಬಿರಾದಾರ, ಕೃಷಿಕ ಸಮಾಜದ ಸಿಂದಗಿ ತಾಲೂಕಾಧ್ಯಕ್ಷ, ಕೃಷಿ ಮಹಾವಿದ್ಯಾಲಯದ ವಿಜ್ಞಾನಿಗಳು, ರೈತರು ಇದ್ದರು.

ಸಂಸ್ಕಾರ ಕಲಿತವರು ಉತ್ತಮ ಪ್ರಜೆಯಾಗಲು ಸಾಧ್ಯ

◆**ಬಸವನಬಾಗೇವಾಡಿ:** ವಿದ್ಯೆ ಕಲಿತ ವ್ಯಕ್ತಿ ಭ್ರಷ್ಟನಾಗಬಹುದು ಆದರೆ ಸಂಸ್ಕಾರ ಕಲಿತ ವ್ಯಕ್ತಿ ಸಮಾಜದಲ್ಲಿ ಉತ್ತಮ ಪ್ರಜೆಯಾಗಲು ಸಾಧ್ಯ ಎಂದು ಸಾಹಿತಿ ಶಾಂತಾ ಬಿರಾದಾರ(ಚೌರಿ) ಹೇಳಿದರು.

ಪಟ್ಟಣದ ಬಿಎಲ್‌ಡಿಇ ಸಂಸ್ಥೆ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ ಜಾನಪದ ಉತ್ಸವ ಮತ್ತು ಮೋಜಿನ ಆಟಗಳು ಮುಕ್ತಾಯ ಸಮಾರಂಭ ಹಾಗೂ ದತ್ತಿನಿಧಿ ಉಪನ್ಯಾಸದಲ್ಲಿ ಮಾತನಾಡಿ, ದೈವ ಶಕ್ತಿ ಮುಂದೆ ಯಾವ ಶಕ್ತಿವಿಲ್ಲ. ವಿಜ್ಞಾನ ಎಷ್ಟೇ ಮುಂದುವರೆದರು ಭಕ್ತಿ ಭಾವನೆ ಮುಂದೆ ಯಾವುದು ಇಲ್ಲ. ಹೀಗಾಗಿ ಈ ಕ್ಷೇತ್ರಕ್ಕೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರದಿಂದ ಭಕ್ತರು ಆಗಮಿಸುತ್ತಾರೆ. ಪವಾಡ ಪುರುಷ ಮಲ್ಲಯ್ಯ ಎಂದರು.

ಉಪನ್ಯಾಸಕಿ ಡಾ.ಸುಜಾತಾ ಝುಳಕಿ ಮಾತನಾಡಿ, ಬಸವಣ್ಣನವರ ಹಾಗೂ ಅವರ ಸಮಕಾಲೀನ ಬಸವಾದಿ ಶರಣರು ಸಮಾಜದಲ್ಲಿ ಜಾತಿ .ಧರ್ಮ, ಮೇಲು-ಕೀಳು ವಿರುದ್ಧ ಹೋರಾಡಿ ಸಮಾನತೆ ಸ್ವಾತಂತ್ರ್ಯ ತಂದ ಬಸವಾದಿ ಶರಣರ ವಚನಗಳು ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತವೆ. ಸಮಾಜದಲ್ಲಿ ಪುರುಷ ಸರಿ ಸಮಾನವಾಗಿ ಮಹಿಳೆಯರಿಗೆ ಸ್ಥಾನ ಮಾನ ನೀಡಿದ್ದು ಬಸವಾದಿ ಶರಣರು ಎಂದು ಹೇಳಿದರು.

ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಾಹಿತಿ ವಿವೇಕಾನಂದ ಕಲ್ಯಾಣಶೆಟ್ಟಿ ಉದ್ಘಾಟನೆ ನೆರವೇರಿಸಿದರು.

ಪ್ರಾಚಾರ್ಯ ಡಾ.ಎ.ವಿ.ಸೂರ್ಯವಂಶಿ ಅಧ್ಯಕ್ಷತೆ ವಹಿಸಿದ್ದರು.ಸಾಹಿತಿ ಅಶೋಕ ಹಂಚಲಿ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ತಾಲೂಕಾಧ್ಯಕ್ಷ ಶಿವಾನಂದ ಡೋಣೂರ, ದತ್ತಿದಾನಿಗಳಾದ ಕೆವಿಡಬ್ಲ್ಯೂಜೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಪ್ರಕಾಶ ಬೆಣ್ಣೂರ, ಈರನಗೌಡ ಪಾಟೀಲ, ನಾಟಕ ಬರಹಗಾರ ಸಂಘದ ಜಿಲ್ಲಾಧ್ಯಕ್ಷ ಯಮನಪ್ಪ ಅಂಗಡಗೇರಿ, ಶಿಕ್ಷಕರಾದ ಸಿ.ಪಿ.ದಡ್ಡೆಕರ, ವಿ.ಬಿ ಚಕ್ರಮನಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಶಿವು ಮಡಿಕೇಶ್ವರ ಪ್ರಾಸ್ತಾವಿಕ ಮಾತನಾಡಿದರು.ವೈ.ಎನ್. ಮಿಣಜಿಗಿ ಸ್ವಾಗತಿಸಿದರು, ಕಾವೇರಿ ಅಡಗಿಮನಿ ನಿರೂಪಿಸಿದರು, ಜ್ಯೋತಿ ಕುಂಬಾರ ವಂದಿಸಿದರು.



ಅಂಬೇಡ್ಕರರು ಮಹಾನ್ ಮಾನವತಾವಾದಿ: ಪಾಟೀಲ

◆**ಇಂಡಿ:** ಡಾ.ಬಿ.ಆರ್.ಅಂಬೇಡ್ಕರ್ ಆಧುನಿಕ ಭಾರತದ ನಿರ್ಮಾತೃ ಶೋಷಿತ ಸಮುದಾಯಗಳ ಬಿಡುಗಡೆಗಾಗಿ ಶ್ರಮಿಸಿದವರು. ಮಹಿಳೆಯರ ಸ್ವಾವಲಂಬನೆ ಬದುಕಿಗಾಗಿ ಹೋರಾಡಿದವರು. ಭಾರತ ಸಂವಿಧಾನ ಬರೆಯುವ ಮೂಲಕ ಆಧುನಿಕ ಪ್ರಜಾಪ್ರಭುತ್ವ ಭಾರತ ರೂಪಿಸಿದವರು ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ನಗರದ ಅಂಬೇಡ್ಕರ್ ನಗರದಲ್ಲಿ ಬುದ್ಧರ 2570ನೇ ಬುದ್ಧ ಪೂರ್ಣಿಮೆ ಮತ್ತು ಡಾ.ಬಾಬಾಸಾಹೇಬ ಅಂಬೇಡ್ಕರರ 135ನೇ ಜಯಂತಿಯಲ್ಲಿ ಮಾತಾನಾಡಿದರು.

ಕಲಬುರಗಿ ಕರ್ನಾಟಕ ಕೇಂದ್ರೀಯ ವಿವಿ ಪ್ರಾಧ್ಯಾಪಕ ಡಾ.ಅಪ್ಪಗೆರೆ ಸೋಮಶೇಖರ ಮಾತನಾಡಿ, ಬಾಬಾ ಸಾಹೇಬ ಅಂಬೇಡ್ಕರ ಅವರು ರಚಿಸಿದ ಭಾರತ ಸಂವಿಧಾನ ದೇಶದ ಎಲ್ಲ ಜಾತಿ ಧರ್ಮ ಮತ ಪಂಥ ಸಮುದಾಯಗಳಿಗೂ ಶಿಕ್ಷಣ, ಉದ್ಯೋಗ ರಾಜಕೀಯ ಅಧಿಕಾರ, ಮತದಾನ ಹಕ್ಕು ನ್ಯಾಯ ಮೂಲಭೂತ ಇತ್ಯಾದಿಗಳನ್ನು ಕಲ್ಪಿಸುತದೆ ಎಂದರು.

ಬುದ್ಧ ವಿಹಾರ ಸಿಂದಗಿ ಸಂಘಪಾಲ ಬಂತೇಜಿ ಮಾತನಾಡಿ, ಅಂಬೇಡ್ಕರ ಜಯಂತಿ ಅನುಸರಣೆಗಳಾಗಬೇಕು. ಅವರ ಬದುಕಿದ್ದಾಗಲೂ ಅವರನ್ನು ಅವಮಾನಿಸಲಾಗಿದೆ. ಸತ್ತ ನಂತರವೂ ಅವಮಾನಿಸಲಾಗುತ್ತಿದೆ. ದಲಿತೇತರ ಸಮುದಾಯಗಳು ಅಂಬೇಡ್ಕರರ ಸಾದನೆ ಅರ್ಥ ಮಾಡಿಕೊಳ್ಳುವಲ್ಲಿ ಸೋತಿವೆ ಎಂದರು.

ವಿಕಾಸ ಗುಡಿಮನಿ, ಪ್ರೊ.ಎಸ್.ಜೆ. ಮಾಡ್ಯಾಳ, ಪ್ರಶಾಂತ ಕಾಳೆ, ಸಾಧ್ವಿ ಬಸವರಾಜ ಮಾಶ್ಯಾಳ ಮಾತನಾಡಿದರು. ಬಿ.ಡಿ.ಪಾಟೀಲ, ಡಿಐಎಸ್ಪಿ ಸದಾಶಿವ ಕಟ್ಟಿಮನಿ, ಸತ್ತಾರ ಬಾಗವಾನ, ಅಯೂಬ ನಾಟಿಕಾರ, ಶಿವು ಬಗಲಿ, ಮಲ್ಲಪ್ಪ ಕಾಲೇಭಾಗ, ಭೀಮಾಶಂಕರ ಮೂರಮನ, ಬುದ್ದವ್ವ ಕಾಳೆ, ಮಿಲಿಂದ ಹೊಸಮನಿ, ಮೋಹನ ಕಾಳೆ, ಭೀಮಣ್ಣ ಕೌಲಗಿ, ಜಟ್ಟೆಪ್ಪ ರವಳಿ, ಅಜೀತ ಧನಶೆಟ್ಟಿ , ನಿಜಣ್ಣ ಕಾಳೆ ಮತ್ತಿತರಿದ್ದರು. ಸುಚಿತ ಕಾಳೆ ದೇಣಿಗೆ ಪೆಟ್ಟಿಗೆಯನ್ನು ಒಂದು ಬಂತೇಜಿಯವರಿಗೆ ಇನ್ನೊಂದು ಸಂಘಟಕರರಿಗೆ ನೀಡಿದರು.



ನೂತನ ಪಪಂ ಕಟ್ಟಡ, ಆರೋಗ್ಯ ಕೇಂದ್ರ ಲೋಕಾರ್ಪಣೆ

◆**ದೇವರಹಿಪ್ಪರಗಿ:** ಪಟ್ಟಣದಲ್ಲಿ ವಿವಿಧ ಸರ್ಕಾರಿ ಕಟ್ಟಡಗಳ ಉದ್ಘಾಟನೆ ಮೇ.2ರಂದು ನೆರವೇರಿಸಲು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಆಗಮಿಸಲಿದ್ದಾರೆ ಎಂದು ಕ್ಷೇತ್ರದ ಕಾಂಗ್ರೆಸ್ ಉಸ್ತುವಾರಿ ಹಾಗೂ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಪ್ರಭುಗೌಡ ಲಿಂಗದಳ್ಳಿ (ಚಬನೂರ) ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಟ್ಟಣದಲ್ಲಿ ನಿರ್ಮಾಣ ಆದ ನೂತನ ಪಟ್ಟಣ ಪಂಚಾಯಿತಿ ಕಟ್ಟಡ, ಸುಸಜ್ಜಿತ 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರದ ಲೋಕಾರ್ಪಣೆಯನ್ನು



ನೆರವೇರಿಸಲಿದ್ದಾರೆ.ನಂತರ ಪಟ್ಟಣದ ಪರದೇಶಿ ಮಠದಲ್ಲಿ ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದ ಕಾರ್ಯಕರ್ತರು,ಬಿಎಲ್‌ಒಗಳು, ಪಕ್ಷದ ಮುಖಂಡರು ಹಾಗೂ ವಿವಿಧ ಘಟಕಗಳ ಪದಾಽಕಾರಿಗಳ ಮಹತ್ವದ ಸಭೆ ನಡೆಯಲಿದೆ. ಸಭೆಯಲ್ಲಿ ಪಕ್ಷದ ಸಂಘಟನೆ, ಬಲವರ್ಧನೆ, ಕಾರ್ಯಕರ್ತರ ಸಮನ್ವಯ ಹಾಗೂ ಮುಂದಿನ ರಾಜಕೀಯ ಕಾರ್ಯ ಚಟುವಟಿಕೆಗಳ ಕುರಿತು ಮುಖಂಡರ ಜೊತೆ ಚರ್ಚೆ ನಡೆಯಲಿದೆ ಕ್ಷೇತ್ರದ ಮುಖಂಡರು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಹೇಳಿದರು.

ಇದೇ ಸಂದರ್ಭದಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಸುಭಾಷ ಛಾಯಗೋಳ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಬಸೀರ ಅಹ್ಮದ್ ಬೇಪಾರಿ, ಬಾಳಾಸಾಹೇಬಗೌಡ ಪಾಟೀಲ ಮುಖಂಡರುಗಳಾದ ಮುನೀರ್ ಬಿಜಾಪುರ, ಮುರ್ತುಜಾ ತಾಂಬೋಳಿ ಸೇರಿದಂತೆ ಹಲವಾರು ಜನ ಮುಖಂಡರು ಉಪಸ್ಥಿತರಿದ್ದರು.

ಸಾರ್ವಜನಿಕ ವೆಚ್ಚ ಜಾಗತಿಕ ವಿಸ್ತರಣೆಗೆ ಪೂರಕವಾಗಿರಲಿ: ಮಾಣಿಕರಾವ್

◆**ಮುದ್ದೇಬಿಹಾಳ:** ಸ್ವಾತಂತ್ರ್ಯ ಬಂದ ನಂತರ ಸಾರ್ವಜನಿಕ ವೆಚ್ಚ ಮಿತಿ ಇರಬೇಕು, ಪರಿಸರ ಸಮತೋಲನ ಇರಬೇಕು ಎಂಬ ಸಾಂಪ್ರದಾಯಿಕ ತಿಳುವಳಿಕೆ ಇಂದಿನ ಸಮಯದಲ್ಲಿ ಜನ ಆಧಾರಿತ ಮತ್ತು ಅಭಿವೃದ್ಧಿ ಆಧಾರಿತ ಸಾರ್ವಜನಿಕ ಆಡಳಿತದಲ್ಲಿ ಬದಲಾಗಿದೆ. ಪರಿಸರ ಸಮತೋಲನದ ಜೊತೆ ಸುಸ್ಥಿರ ಅಭಿವೃದ್ಧಿ ಪರಿಕಲ್ಪನೆ ಬೆಳೆದು ಉದ್ಯೋಗಾವಕಾಶ ಹೆಚ್ಚಿಸುವಲ್ಲಿ ಸಾರ್ವಜನಿಕ ವೆಚ್ಚ ಇರಬೇಕು ಎಂದು ಇಲಕಲ್ ವಿಜಯ ಮಹಾಂತೇಶ್ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಮಾಣಿಕರಾವ್ ಮಿರ್ಚೇಕರ್ ಹೇಳಿದರು.

ಸರ್ಕಾರಿ ಪದವಿ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಲಾಗಿದ ಆರ್ಥಿಕ ಅಭಿವೃದ್ಧಿಯಲ್ಲಿ ಸಾರ್ವಜನಿಕ ವೆಚ್ಚ ಎಂಬ ಐಕ್ಯೂಎಸಿ ಪ್ರಾಯೋಜಿತ ಕಾರ್ಯಾಗಾರದಲ್ಲಿ ಮಾತನಾಡಿ, ಅರ್ಥಶಾಸ್ತ್ರದಲ್ಲಿ ಪರಿಣಾಮಕಾರಿ ಬೇಡಿಕೆ ಹೆಚ್ಚಿಸಲು ಸಾಮಾಜಿಕ ವೆಚ್ಚ ಮಾಡಲಾಗುತ್ತದೆ. ಆದರಿಂದ ಬಡ, ಹಿಂದುಳಿದ ಜನರ ಅಭಿವೃದ್ಧಿಯಾಗುತ್ತದೆ. ಆದರೆ ಸುಸ್ಥಿರ ಅಭಿವೃದ್ಧಿ ಸಾಧಿಸುವ ಮೂಲಕ ಭವಿಷ್ಯದ ಪೀಳಿಗೆಗೆ ಉದ್ಯೋಗ, ಅವಕಾಶ ಹಾಗೂ ಸುಧಾರಿತ ಜೀವನ ಕೊಡುವುದು ಸರ್ಕಾರದ ಸವಾಲಿನ ಕೆಲಸವಾಗಿದೆ. ಅಭಿವೃದ್ಧಿ, ಸಾಮಾಜಿಕ ಗುರಿಗಳ ನಡುವೆ ಸಮತೋಲನ ಮಾಡುವುದು ಇಂದಿನ ಅವಶ್ಯಕತೆ ಎಂದರು.



ಬದಲಾಗಿರುವ ಜಾಗತಿಕ ಯುದ್ಧ ಹಾಗೂ ಸಂಪನ್ಮೂಲಗಳ ಬೇಡಿಕೆ ಗಮನಿಸಿ, ದೇಶದ ವಿಸ್ತರಣಾ ನೀತಿ, ಬದಲಾಗಿರುವ ತಂತ್ರಜ್ಞಾನ, ಸಂರಕ್ಷಣೆ ಹಾಗೂ ಶಕ್ತಿ ಸಂವರ್ಧನೆ ಯೋಜನೆಯಲ್ಲಿ ಸಾರ್ವಜನಿಕ ವೆಚ್ಚದ ಪಾತ್ರ ಮಹತ್ವದ್ದಾಗಿದೆ. ಸರಕಾರಗಳು ಹೂಡಿಕೆಯತ್ತ ಗಮನ ಹರಿಸಬೇಕಾಗಿದೆ ಎಂದು ಹೇಳಿದರು.

ಪ್ರಾಂಶುಪಾಲ ಡಾ.ಎಚ್ ಕಟಗೂರ ಅಧ್ಯಕ್ಷತೆ ವಹಿಸಿದ್ದರು. ಐಕ್ಯೂಎಸಿ ಸಂಯೋಜಕ ಪ್ರೊ.ಪ್ರದೀಪ್, ವಾಣಿಜ್ಯಶಾಸ್ತ್ರ ವಿಭಾಗದ ಪ್ರೊ ಧನಶ್ರೀ, ಪ್ರೊ.ಸರಿತಾ ಅಲ್ಲೊಳ್ಳಿ, ಕಾರ್ಯಕ್ರಮ ಸಂಯೋಜಕ ಪ್ರೊ.ಮೌನೇಶ್, ಪ್ರೊ. ಹಂಪಣ್ಣ, ಅಯ್ಯನಗೌಡ ನಾಡಗೌಡ ಸೇರಿದಂತೆ ವಾಣಿಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಭಗವಾನ್ ಬುದ್ಧ ಜಯಂತಿ ಆಚರಣೆ ಇಂದು

◆**ವಿಜಯಪುರ:** ಜಿಲ್ಲಾಡಳಿತ, ಜಿ.ಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಮೇ 1ರಂದು ನಗರದಲ್ಲಿ ಭಗವಾನ್ ಬುದ್ಧ ಜಯಂತಿ ಹಮ್ಮಿಕೊಳ್ಳಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಭವನದಿಂದ ಜಿಪಂ ಆವರಣದಿಂದ ಬುದ್ಧ ವಿಹಾರದವರಗೆ ಭವ್ಯ ಮೆರವಣಿಗೆ ನಡೆಯಲಿದೆ.

ಬೆಳಗ್ಗೆ 10ಕ್ಕೆ ಬುದ್ಧ ವಿಹಾರದಲ್ಲಿ ಪ್ರಾರ್ಥನೆ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ. ಸಚಿವ ಡಾ.ಎಂ.ಬಿ.ಪಾಟೀಲ ಉದ್ಘಾಟಿಸುವರು. ಶಾಸಕ ಬಸನಗೌಡ ಆರ್. ಪಾಟೀಲ ಯತ್ನಾಳ ಅಧ್ಯಕ್ಷತೆ ವಹಿಸುವರು.

ಸಚಿವ ಶಿವಾನಂದ ಎಸ್.ಪಾಟೀಲ, ವಿರೋಧ ಪಕ್ಷದ ಮುಖ್ಯ ಸಚೇತಕ ರವಿಕುಮಾರ್ ಎನ್., ಶಾಸಕ ಪ್ರಕಾಶ ಬಿ.ಹುಕ್ಕೇರಿ, ಶಾಸಕ ಅಪ್ಪಾಜಿ ಸಿ.ಎಸ್. ನಾಡಗೌಡ, ಸಂಸದರಾದ ರಮೇಶ ಜಗಜಿಣಗಿ ಹಾಗೂ ಸುಧಾ ಮೂರ್ತಿ, ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷ ಕಾಂತಾ ನಾಯ್ಕ, ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿ.ಎಸ್.ಕವಲಗಿ, ಶಾಸಕ ಯಶವಂತರಾಯಗೌಡ ಪಾಟೀಲ, ವಿಠ್ಠಲ ಕಟಕಧೋಂಡ, ರಾಜುಗೌಡ ಪಾಟೀಲ, ಅಶೋಕ ಮನಗೂಳಿ, ಹಣಮಂತ ನಿರಾಣಿ, ಸುನೀಲಗೌಡ ಪಾಟೀಲ, ಪಿ.ಎಚ್. ಪೂಜಾರ, ಕೇಶವ ಪ್ರಸಾದ ಎಸ್, ಮಹಾನಗರ ಪಾಲಿಕೆಯ ಮಹಾಪೌರರಾದ ಮಡಿವಾಳಪ್ಪ ಕರಡಿ, ನಗರಾಭಿವೃದ್ಧಿ ಪ್ರಾಽಕಾರದ ಅಧ್ಯಕ್ಷ ಡಾ.ಗಂಗಾಧರ ಎಸ್.ಸಂಬಣ್ಣಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಇಲಿಯಾಸ ಬೋರಾಮಣಿ ಉಪಸ್ಥಿತಿರುವರು.

ತಾಳಿಕೋಟೆ ಎಸ್‌ಕೆ ಕಾಲೇಜ್ ಸಹಾಯಕ ಪ್ರಾಧ್ಯಾಪಕ ಡಾ.ಸುಜಾತಾ ಚಲವಾದಿ ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಿವಾರ ತೆಗೆಸಿದ್ದನ್ನು ವಿರೋಧಿಸಿ ಪ್ರತಿಭಟನೆ

◆**ವಿಜಯಪುರ:** ಏ.23, 24ರಂದು ನಡೆದ ಸಿಇಟಿ ಪರೀಕ್ಷೆಯಲ್ಲಿ ಬೆಂಗಳೂರಿನ ಮಡಿವಾಳದ ಕೃಪಾನಿಧಿ ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಿದ್ದ ಬ್ರಾಹ್ಮಣ ವಿದ್ಯಾರ್ಥಿ ಜನಿವಾರವನ್ನು ಕಾಲೇಜ್ ಆಡಳಿತ ಮಂಡಳಿ ತೆಗೆಸಿದ್ದನ್ನು ಖಂಡಿಸಿ ಈ ಪ್ರಕರಣವನ್ನು ಎಸ್‌ಐಟಿ ತಂಡ ರಚಿಸಿ ತನಿಖೆ ನಡೆಸಬೇಕೆಂದು ಅಖಿಲ ಭಾರತೀಯ ಬ್ರಾಹ್ಮಣ ಮಹಾಸಭಾ ವಿಜಯಪುರ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಅಖಿಲ ಭಾರತೀಯ ಬ್ರಾಹ್ಮಣ ಮಹಾಸಭಾದ ಜಿಲ್ಲಾಧ್ಯಕ್ಷ ಮುಕುಂದ ಕುಲಕರ್ಣಿ ಮಾತನಾಡಿ, ಜನಿವಾರ ಧರಿಸುವುದು ಬ್ರಾಹ್ಮಣ ಸಮಾಜದ ಸಾಂಪ್ರದಾಯಿಕ ಗುರುತು. ಜನಿವಾರ ನಮ್ಮ ಸಮಾಜದ ಹೆಮ್ಮೆ, ನಮ್ಮ ಸಮಾಜದ ಗರ್ವದ ಪ್ರತೀಕವಾದ ಜನಿವಾರ ತೆಗೆಸಿದ್ದು ಆಘಾತಕಾರಿ.



ಜನಿವಾರದಿಂದ ಯಾವರೀತಿಯಾಗಿ ಪರೀಕ್ಷೆಯಲ್ಲಿ ನಕಲು ಮಾಡಲು ಸಾಧ್ಯ?. ಅನವಶ್ಯಕ ವಿದ್ಯಾರ್ಥಿ ಜನಿವಾರ ತೆಗೆಸಿ ನಮ್ಮ ಸಮಾಜಕ್ಕೆ ಅಪಮಾನಿಸಿದ್ದು ಖಂಡನಾರ್ಹ ಎಂದರು.

ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ರಾಜ್ಯ ಉಪಾಧ್ಯಕ್ಷರು ಹಾಗೂ ಕಣ್ವ ಮಠ ವಿಜಯಪುರ ಶಾಖೆ ವಿಚಾರಣಕರ್ತ ರಾಘವೇಂದ್ರ ಆಲಗೂರ ಮಾತನಾಡಿ, ಕಳೆದ ವರ್ಷವೇ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರೂ ಮತ್ತೆ ಬ್ರಾಹ್ಮಣರ ಅಸ್ಮಿತೆಯಾದ ಜನಿವಾರನ್ನು ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಯಿಂದ ತೆಗೆದಿದ್ದು ಖೇದಕರ. ಈ ಘಟನೆಯಲ್ಲಿ ಭಾಗಿಯಾದ ಸಿಬ್ಬಂದಿ ವಜಾಗೊಳಿಸಬೇಕು. ಇನ್ನುಮುಂದೆ ಈ ರೀತಿಯಾದ ಘಟನೆ ನಡೆಯದಂತೆ ರಾಜ್ಯ ಸರ್ಕಾರ ನೋಡಿಕೊಳ್ಳಬೇಕು.

ಮತ್ತೆ ಘಟನೆ ನಡೆದ ಪಕ್ಷದಲ್ಲಿ ಬ್ರಾಹ್ಮಣ ಸಮುದಾಯ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ಪ್ರಧಾನಕಾರ್ಯದರ್ಶಿ ಪವನ ಕುಲಕರ್ಣಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಮೀರ್ ಕುಲಕರ್ಣಿ, ನಗರ ಅಧ್ಯಕ್ಷ ಪ್ರಶಾಂತ ದೇಶಪಾಂಡೆ, ಯುವ ಘಟಕ ಜಿಲ್ಲಾಧ್ಯಕ್ಷ ರೋಹನ್ ಆಪ್ಟೆ, ಮಹಿಳಾ ಪ್ರಧಾನಕಾರ್ಯದರ್ಶಿ ಮಿತಾ ದೇಸಾಯಿ, ಯುವ ಘಟಕ ಜಿಲ್ಲಾ ಪ್ರಧಾನಕಾರ್ಯದರ್ಶಿ ವಿವೇಕ ತಾವರಗೇರಿ, ಯುವ ಘಟಕ ನಗರ ಅಧ್ಯಕ್ಷ ಹರೀಶ ಜೋಶಿ, ವೆಂಕಟೇಶ ಗುಡಿ ,ಕೃಷ್ಣ ಗುನ್ನಾಳಕರ, ಗೋವಿಂದ ಜೋಶಿ, ವಿಜಯ್ ಜೋಶಿ, ರಾಕೇಶ ಕುಲಕರ್ಣಿ, ರಾಕೇಶ ಜೋಶಿ, ಪವನ ಕಟ್ಟಿ, ಸುಧೀಂದ್ರ ಇಲ್ಲಾಳ, ಶಂಕರ ಕುಲಕರ್ಣಿ, ಶ್ರೀಹರಿ ಜೋಶಿ, ಸುಜಾತಾ ಕುಲಕರ್ಣಿ, ರಾಧಾ ತಾವರಗೇರಿ, ವಿಕಾಸ್ ಪದಕಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಎಸ್ಸೆಸ್ಸೆಲ್ಸಿ ಫಲಿತಾಂಶ: ಸೂಫಿಯಾನ್ ಜಿಲ್ಲೆಗೆ ಪ್ರಥಮ



◆**ವಿಜಯಪುರ :** ಐಸಿಎಸ್‌ಇ 10ನೇ ತರಗತಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದಲ್ಲಿ ಮೊದಲ ಮೂರು ರ್‍ಯಾಂಕ್ ಗಳಿಸುವ ಮೂಲಕ ಕೀರ್ತಿ ತಂದಿದ್ದಾರೆ.

ಶಾಲೆಯು ಶೇ.100ರಷ್ಟು ಫಲಿತಾಂಶ ದಾಖಲಿಸಿದೆ. ಶಾಲೆಯ ವಿದ್ಯಾರ್ಥಿಗಳಾದ ಗೌರಿ ಪಾಟೀಲ ಮತ್ತು ಸೂಫಿಯಾನ್ ಕಂದಗಲ ಶೇ.93.20 ಅಂಕ ಗಳಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಪ್ರೇಕ್ಷಾ ಪಾಟೀಲ ಶೇ.90.60 ಅಂಕ ಗಳಿಸಿ ದ್ವಿತೀಯ ಮತ್ತು ಮಲ್ಲಿಕಾರ್ಜುನ ಬಿರಾದಾರ ಶೇ.89.80 ಅಂಕ ಗಳಿಸಿ ಜಿಲ್ಲೆಗೆ ತೃತೀಯ ಸ್ಥಾನ ಗಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ.ಬಿ.ಪಾಟೀಲ, ವಿಧಾನ ಪರಿಷತ ಶಾಸಕ ಮತ್ತು ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ, ಶಾಲೆಯ ಕೋ-ಆರ್ಡಿನೇಟರ್ ಜಯಾ ಗಲಗಲಿ ಸಂತಸ ವ್ಯಕ್ತಪಡಿಸಿದ್ದು, ಅಭಿನಂದನೆ ಸಲ್ಲಿಸಿದ್ದಾರೆ.

ಕಿರುಸುದ್ದಿ

ಸಾರ್ವಜನಿಕರ ಸೇವೆ ಸಲ್ಲಿಸಲು ಪಿಡಿಒಗೆ ಉತ್ತಮ ಅವಕಾಶ

ಯಲಬುರ್ಗಾ: ಮೂರು ಹಂತದಲ್ಲಿ ಕೆಲಸ ನಿರ್ವಹಿಸುವಂತೆ ಜಾರಿಗೆ ತಂದಿರುವ ಪಂಚಾಯತ್ ರಾಜ್ ಇಲಾಖೆ ಕೆಲಸವು ಸಾರ್ವಜನಿಕ ಸೇವೆ ಸಲ್ಲಿಸಲು ಉತ್ತಮ ವೇದಿಕೆಯಾಗಿದ್ದು, ಎಲ್ಲರೂ ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಾಲೂಕು ಪಂಚಾಯತಿ ಸಹಾಯಕ ನಿರ್ದೇಶಕರಾದ ಹನಮಂತಗೌಡ ಪೊಲೀಸ್ ಪಾಟೀಲ ಹೇಳಿದರು.

ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ಕೊಪ್ಪಳ, ತಾಲೂಕು ಪಂಚಾಯತ್ ಯಲಬುರ್ಗಾ ರವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಪಂಚಾಯತ್ ರಾಜ್ ದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಾಸ್ತಾವಿಕವಾಗಿ ಸಹಾಯಕ ನಿರ್ದೇಶಕರಾದ ಫಕೀರಪ್ಪ ಕಟ್ಟಿಮನಿ ಮಾತನಾಡಿದರು.

ಹಿರೇವ್ಯಾಗೇರಿ ಗ್ರಾಪಂ ಪಿಡಿಒ ಮಂಗಳೇಶ ನಾಯಕ, ಕಲ್ಲೂರ ಪಿಡಿಒರಾದ ರೇಣುಕಾ ಟಂಕದ, ವಿಷಯ ನಿರ್ವಾಹಕರಾದ ಬಸವರಾಜ ಹಳ್ಳಿ, ಕರವಸೂಲಿಗಾರರಾದ ಪ್ರಕಾಶ, ದುರಗಪ್ಪ, ಗ್ರಂಥಪಾಲಕರಾದ ಶರಣಪ್ಪ ಬಂಡಾರಿ, ವಿಆರ್ ಡಬ್ಲ್ಯೂ ಭರತ್ ರೆಡ್ಡಿ, ಮಾತನಾಡಿದರು.

ಕರವಸೂಲಿ, ಉತ್ತಮ ಗಂಥಾಲಯ ವ್ಯವಸ್ಥೆ, ವಿಆರ್ ಡಬ್ಲ್ಯೂ, ಸ್ವ ಸಹಾಯ ಸಂಘದ ಮಹಿಳೆಯರಿಗೆ ಸನ್ಮಾನಿಸಿ ಗೌರವಿಸಲಾಯಿತು. ತಾಪಂ ಅಧಿಕಾರಿಗಳು, ಸಿಬ್ಬಂದಿ, ಗ್ರಾಪಂ ಪಿಡಿಒ, ಡಿಇಒ, ಕರವಸೂಲಿಗಾರರು, ನೀರು ಗಂಟಿಗಳು, ಸ್ವ ಸಹಾಯ ಸಂಘದ ಮಹಿಳೆಯರು, ವಿಆರ್‌ಡಬ್ಲ್ಯೂ, ಸಿಬ್ಬಂದಿ ಇದ್ದರು.

ಮರು ಮೌಲ್ಯಮಾಪನ: ಉಮೇಶ್ ಜಿಲ್ಲೆಗೆ 2ನೇ ರ್‍ಯಾಂಕ್

ಸಿಂಧನೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಮರು ಮಾಪನದಲ್ಲಿ 6 ಅಂಕಗಳು ಹೆಚ್ಚುವರಿಯಾಗಿ ಬಂದಿದ್ದರಿಂದ ಸಿಂಧನೂರಿನ ಅನಿಕೇತನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಉಮೇಶ್ ತಂದೆ ಬಸಪ್ಪ ಆಡಾಪುರ ರಾಯಚೂರು ಜಿಲ್ಲೆಗೆ 2ನೇ ರಾಂಕ್ ಮತ್ತು ರಾಜ್ಯಕ್ಕೆ 6ನೇ ರಾಂಕ್ ಪಡೆದುಕೊಂಡಿದ್ದಾನೆಂದು ಪ್ರಾಂಶುಪಾಲ ನಾಗರಾಜ ಮುಕ್ಕುಂದಾ ತಿಳಿಸಿದ್ದಾರೆ.



ಬುಧವಾರ ಹೇಳಿಕೆ ನೀಡಿರುವ ಅವರು ಈ ಮೊದಲು ಇತಿಹಾಸ ವಿಷಯದಲ್ಲಿ 95 ಮತ್ತು ರಾಜ್ಯಶಾಸ್ತ್ರ ವಿಷಯದಲ್ಲಿ 95 ಅಂಕ ಬಂದಿದ್ದವು. ಆದರೆ ಮರು ಮೌಲ್ಯಮಾಪನ ಮಾಡಿದ ನಂತರ ಎರಡೂ ವಿಷಯದಲ್ಲೂ ತಲಾ 98 ಅಂಕಗಳು ಬಂದಿದೆ. ಕಲಾ ವಿಭಾಗದಲ್ಲಿ ಒಟ್ಟು 600 ಅಂಕಗಳಿಗೆ 591 (ಶೇ.98.5) ಫಲಿತಾಂಶ ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾನೆ. ಇದಕ್ಕೆ ಸಂಸ್ಥೆಯ ಅಧ್ಯಕ್ಷರು,ನಿರ್ದೇಶಕರು ಸೇರಿದಂತೆ ಉಪನ್ಯಾಸಕ ವರ್ಗದವರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

ಅಪಘಾತ; ಓರ್ವ ಸಾವು, 12 ಜನರಿಗೆ ಗಾಯ

ಕೂಡ್ಲಿಗಿ: ಕಂಪನಿಯ ಕೆಲಸ ಮಾಡುತ್ತಿದ್ದ ಗೆಳೆಯ ಮದುವೆಗೆಂದು ಬೆಂಗಳೂರು ಕಡೆಯಿಂದ ಸಂಡೂರು ತಾಲೂಕಿನ ಹಿರಿಕೆರೆಯಾಗಿನಹಳ್ಳಿಗೆ ಬರುತ್ತಿದ್ದಾಗ ಟೆಂಪೋ ಟ್ರಾವೆಲರ್ ವಾಹನಕ್ಕೆ ಹಿಂಬದಿಯಿಂದ ಲಾರಿ ಡಿಕ್ಕಿಯಾಗಿ ಓರ್ವ ಸ್ಥಳದಲ್ಲೇ ಮೃತಪಟ್ಟು, 12 ಜನರಿಗೆ ಗಂಭೀರ ಗಾಯಗಳಾಗಿರುವ ಘಟನೆ ಪಟ್ಟಣದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಬುಧವಾರ ಬೆಳಗಿನ ಜಾವ ನಡೆದಿದೆ.ಆಂಧ್ರಪ್ರದೇಶದ ಕುಂದುರ್ಪಿಯ ಪದಿರಾಂಪಲ್ಲಿ ನಿವಾಸಿ ಹಾಗೂ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯ ಉದ್ಯೋಗಿ ಟಿ.ಸಿ.ಎಲ್.ಮಧು (28) ಮೃತ ದುರ್ದೈವಿ. ಗೌತಮ್, ಸಂದೀಪ್, ಗಣೇಶ್, ಆಶಾ, ಸೌಂದರ್ಯ, ಸೌಮ್ಯ, ಜ್ಯೋತಿ, ಭರತ್, ಮಧು, ಮನೋಜ್, ರವಿ, ಸುರೇಶ್ ಬಾಬು ಎಂಬುವವರಿಗೆ ತೀವ್ರ ಗಾಯಗಳಾಗಿದ್ದು, ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರ ಗಾಯಗೊಂಡಿರುವ ಕೆಲವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿ ಟ್ರಾಮಾಕೇರ್ ಸೆಂಟರ್‌ಗೆ ಕಳುಹಿಸಲಾಗಿದೆ.

ಅಪಘಾತದ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ, ಸಿಪಿಐ ಪ್ರಹ್ಲಾದ ಆರ್. ಚನ್ನಗಿರಿ, ಪಿಎಸ್‌ಐ ಸಿ.ಪ್ರಕಾಶ್ ಸೇರಿ ಪೊಲೀಸರು ಧಾವಿಸಿ ಗಾಯಾಳುಗಳನ್ನು ಆಂಬ್ಯುಲೆನ್ಸ್ ವಾಹನದಲ್ಲಿ ಆಸ್ಪತ್ರೆಗೆ ಕಳುಹಿಸಿದ್ದಾರೆ. ಕಲಬುರಗಿ ಜಿಲ್ಲೆಯ ಅರ್ಜುಣಗಿ ಗ್ರಾಮದ ಬಂಗಾರೆ ಗಣೇಶ್ ಎಂಬುವವರು ನೀಡಿದ ದೂರಿನನ್ವಯ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಯಲಬುರ್ಗಾ: ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ಕೊಪ್ಪಳ, ತಾಲೂಕು ಪಂಚಾಯತ್ ಯಲಬುರ್ಗಾ ರವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಪಂಚಾಯತ್ ರಾಜ್ ದಿನ ಕಾರ್ಯಕ್ರಮ ನಡೆಯಿತು. ತಾಪಂ ಸಹಾಯಕ ನಿರ್ದೇಶಕರಾದ ಹನಮಂತಗೌಡ ಪೊಲೀಸ್ ಪಾಟೀಲ, ಸಹಾಯಕ ನಿರ್ದೇಶಕ ಫಕೀರಪ್ಪ ಕಟ್ಟಿಮನಿ ಇತರರು ಇದ್ದರು.

ಸಾಮೂಹಿಕ ವಿವಾಹ ಸಮಾಜಕ್ಕೆ ಆದರ್ಶ

ಕುಷ್ಟಗಿ: ಪಟ್ಟಣದ ಸಮಾಜ ಸೇವಕ ರವಿಕುಮಾರಸ್ವಾಮಿ ಹಿರೇಮಠ ಸಹೋದರ ಪುತ್ರನ ವಿವಾಹದಲ್ಲಿ 51 ಜೋಡಿ ಉಚಿತ ಸಾಮೂಹಿಕ ವಿವಾಹಗಳು ಗುರುವಾರ ನಡೆಯಿತು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಸಾಮೂಹಿಕ ವಿವಾಹಗಳು ಬಡ, ಮಧ್ಯಮ ವರ್ಗದ ಕುಟುಂಬಗಳಿಗೆ ನೆರವಾಗಲಿವೆ. ಸಮಾಜಮುಖಿ ಕಾರ್ಯಕ್ರಮಗಳು ನಾಡಿನ ಜನರಿಗೆ ಸಹಕಾರಿಯಾಗಲಿವೆ. ರವಿಕುಮಾರಸ್ವಾಮಿ ಸಮ್ಮುಖದಲ್ಲಿ ನಡೆದ ಇಂತಹ ಅಭೂತ ಕಾರ್ಯ ಶ್ಲಾಘನೀಯ ಎಂದರು.

ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ಮಾತನಾಡಿ, ಸಾಮೂಹಿಕ ಸರಳ ವಿವಾಹಗಳ ಮೂಲಕ ಸಮಾಜದಲ್ಲಿ ಸಮಾನತೆ ಮತ್ತು ಸದ್ಭಾವನೆ ಬೆಳೆಯುತ್ತದೆ. ಗ್ರಾಮೀಣ ಭಾಗದ ಜನರಿಗೆ ವಿವಾಹ ಕಾರ್ಯಕ್ರಮ ಅನುಕೂಲವಾಗಲಿದೆ ಎಂದು ತಿಳಿಸಿದರು.

ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ ಮಾತನಾಡಿದರು. ಉಭಯ ಶ್ರೀಗಳಾದ ರಂಭಾಪುರಿ ಪೀಠದ ಜಗದ್ಗುರುಗಳು, ಶ್ರೀಶೈಲ್ ಪೀಠದ ಜಗದ್ಗುರುಗಳ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಈ ವೇಳೆ ಮದ್ದಾನೇಶ್ವರ ಮಠದ ಕರಿಬಸವ ಶಿವಾಚಾರ್ಯರು, ನಿಡಶೇಸಿ ಚನ್ನಬಸವ ಶಿವಾಚಾರ್ಯ ಮಹಾಸ್ವಾಮಿಗಳು, ದೋಟಿಹಾಳದ ಚಂದ್ರಶೇಖರ್ ದೇವರು, ಬಿಜಕಲ್ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಚಳಗೇರಿ ವೀರ ಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಗಂಗಾವತಿ ಮಾಜಿ ಶಾಸಕ ಪರಣ್ಣ ಮುನವಳ್ಳಿ, ಮಾಜಿ ಶಾಸಕ ವೀರಣ್ಣ ಚರಂತಿಮಠ ಹಾಗೂ ರಾಜಕೀಯ ಧುರೀಣರು ಹಾಗೂ ಸಾರ್ವಜನಿಕರು, ಮುಖಂಡರು ಪಾಲ್ಗೊಂಡಿದ್ದರು.



ಕುಷ್ಟಗಿ: ಪಟ್ಟಣದ ಸಮಾಜ ಸೇವಕ ರವಿಕುಮಾರಸ್ವಾಮಿ ಹಿರೇಮಠ ಸಹೋದರ ಪುತ್ರನ ವಿವಾಹದಲ್ಲಿ 51 ಜೋಡಿ ಉಚಿತ ಸಾಮೂಹಿಕ ವಿವಾಹಗಳು ಗುರುವಾರ ನಡೆಯಿತು. ಉಭಯ ಶ್ರೀಗಳಾದ ರಂಭಾಪುರಿ ಪೀಠದ ಜಗದ್ಗುರುಗಳು, ಶ್ರೀಶೈಲ್ ಪೀಠದ ಜಗದ್ಗುರುಗಳ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪಡಿತರ ಅಕ್ರಮ ಸಾಗಾಟಕ್ಕೆ ಕಡಿವಾಣ ಹಾಕಿ

ಕೊಪ್ಪಳ: ಅನ್ನಭಾಗ್ಯ ಯೋಜನೆಯಡಿ ನೀಡುತ್ತಿರುವ ಪಡಿತರ ಅಕ್ಕಿಯನ್ನು ಕಳ್ಳಸಾಗಣೆ ಮಾಡುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಂಡು ಜಿಲ್ಲೆಯಲ್ಲಿ ಪಡಿತರ ಅಕ್ಕಿ ಕಳ್ಳಸಾಗಣೆಗೆ ಯಾವುದೇ ರೀತಿಯ ಅವಕಾಶ ನೀಡದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಅವರು ಆಹಾರ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಕೊಪ್ಪಳ ಜಿಲ್ಲಾ ಪಂಚಾಯತ್‌ನ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಗುರುವಾರದಂದು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದಪ್ರಗತಿಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ನಿರ್ದೇಶನ

ಅನ್ನಭಾಗ್ಯ ಯೋಜನೆಯಡಿ ವಿತರಿಸಲಾಗುವ ಪಡಿತರ ಧಾನ್ಯಗಳನ್ನು ಮಾರಾಟಕ್ಕೆ ಅವಕಾಶವಿರುವುದಿಲ್ಲ, ಆದ್ಯಾಗೂ ಸಹ ಪಡಿತರ ಅಕ್ಕಿಯನ್ನು ಅಕ್ರಮ ದಾಸ್ತಾನು ಮತ್ತು ಮಾರಾಟ ಮಾಡುತ್ತಿರುವ ಪ್ರಕರಣಗಳು ವರದಿಯಾಗಿದೆ. ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ತ್ವರಿತವಾಗಿ ಕ್ರಮ ಕೈಗೊಳ್ಳುವುದರ ಜೊತೆಗೆ ಅವರ ಮೇಲೆ ಚಾರ್ಜ್ ಶೀಟ್ ಹಾಕುವ ವ್ಯವಸ್ಥೆಯಾಗಬೇಕು. ಅಕ್ರಮ ಪಡಿತರ ಚೀಟಿ ಮಾರಾಟಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಿದ್ದು, ಇದರ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು. ಪಡಿತರ ವಿತರಣೆಯನ್ನು ಜನರಿಗೆ ಅನುಕೂಲವಾಗುವಂತೆ ಮಾಡಿ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸಬೇಕು. ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ಸಿಸಿ ಕ್ಯಾಮರಾ ಅಳವಡಿಕೆಗೆ ಕ್ರಮ ಕೈಗೊಳ್ಳಿ. ಆಹಾರ ಸಾಮಾಗ್ರಿಗಳ ವಿತರಣೆಗೂ ಮುನ್ನ ಅದರ ಗುಣಮಟ್ಟವನ್ನು ಪರಿಶೀಲಿಸಬೇಕು.

ಈ ಬಗ್ಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳ ಎಲ್ಲಾ ಅಧ್ಯಕ್ಷರು, ಸದಸ್ಯರು ಸಹ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಅವರು ಮಾತನಾಡಿದರು. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಬಿ. ಖಾದ್ರಿ, ಮಂಜುನಾಥ ಗೊಂಡಬಾಳ, ಅಮರೇಶಪ್ಪ ಎಸ್.ಜಿ. ಅವರು ಮಾತನಾಡಿದರು.



3,21,019 ಗೃಹಲಕ್ಷ್ಮೀಯರು

ಗೃಹಲಕ್ಷ್ಮೀ ಯೋಜನೆಯಡಿ ಕೊಪ್ಪಳ ಜಿಲ್ಲೆಯ 3,21,019 ಫಲಾನುಭವಿಗಳಿಗೆ ಆಗಸ್ಟ್- 2023 ರಿಂದ ಫೆಬ್ರವರಿ-2026ರ ವರೆಗೆ ಡಿಬಿಟಿ ಮೂಲಕ ಹಣ ಪಾವತಿಸಲಾಗಿದೆ. ಗೃಹಜ್ಯೋತಿ ಯೋಜನೆಯಡಿ ಮಾರ್ಚ್-2026ರ ಅಂತ್ಯದವರೆಗೆ 2,89,212 ಗ್ರಾಹಕರಿಗೆ ಉಚಿತ ವಿದ್ಯುತ್ ಸೌಲಭ್ಯ ದೊರೆತಿದ್ದು, ಇದಕ್ಕಾಗಿ ಇಲ್ಲಿಯವರೆಗೆ 388.23 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ 3,63,521 ಪಡಿತರ ಕಾರ್ಡ್‌ಗಳಿದ್ದು, ಅನ್ನಭಾಗ್ಯ ಯೋಜನೆಯಡಿ ಏಪ್ರಿಲ್-2026ರ ವರೆಗೆ ಪ್ರತಿ ಸದಸ್ಯರಿಗೆ 10 ಕೆ.ಜಿ ಯಂತೆ 12,393 ಮೆ.ಟನ್ ಪಡಿತರ ಆಹಾರ ಪದಾರ್ಥ ಹಂಚಿಕೆ ಮಾಡಲಾಗಿದೆ.

ಶಕ್ತಿ ಯೋಜನೆಯಡಿ ಮಾರ್ಚ್-2026ರ ಮಾಹೆಯಲ್ಲಿ 34,84,433 ಮಹಿಳೆಯರು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದು, ಈ ಯೋಜನೆಯಡಿ ಜೂನ್-2023 ರಿಂದ ಮಾರ್ಚ್-2026ರ ವರೆಗೆ ಕೊಪ್ಪಳ ಜಿಲ್ಲೆಯಲ್ಲಿ 11,22,17,504 ಮಹಿಳೆಯರು ಸೌಲಭ್ಯ ಪಡೆದುಕೊಂಡಿದ್ದಾರೆ. ಯುವನಿಧಿ ಯೋಜನೆಯಡಿ ಜನವರಿ-2026ರವರೆಗೆ 14,266 ಫಲಾನುಭವಿಗಳು ನೋಂದಣಿಯಾಗಿದ್ದು, ಜನವರಿ ಅಂತ್ಯದವರೆಗೆ ಒಟ್ಟು ಮೊತ್ತ ರೂ. 30,32,02,500 ಪಾವತಿಸಲಾಗಿರುತ್ತದೆ ಎಂದು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಬಿಸಿಲಿನ ತಾಪಮಾನಕ್ಕೆ ಮುನ್ನೆಚ್ಚರಿಕೆ ವಹಿಸಿ

ಕಲಬುರಗಿ: ಕಲಬುರಗಿ ಜಿಲ್ಲೆಯಾದ್ಯಂತ ಕಲಬುರಗಿ ಜಿಲ್ಲೆಯಾದ್ಯಂತ ಕಳೆದ ಮೂರು ದಿನಗಳಿಂದ ಸತತವಾಗಿ ಹೆಚ್ಚಿನ ತಾಪಮಾನ (45ಸೇ.) ದಾಖಲಾಗುತ್ತಿರುವುದರಿಂದ ಹೀಟ್ ವೇವ್ (ಶಾಖದ ಹೊಡೆತ) ಮತ್ತು ಹೀಟ್ ವೇವ್ ಸ್ಟ್ರೋಕ್ ನಿಂದಾಗಿ ಸಾರ್ವಜನಿಕರರು ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಬಿಸಿಲಿನ ಹೊಡೆತದಿಂದ ರಕ್ಷಿಸಿಕೊಳ್ಳಲು ಸಾರ್ವಜನಿಕರು ವಿಶೇಷವಾಗಿ ಮಧ್ಯಾಹ್ನ 12 ರಿಂದ ಸಂಜೆ 4 ಗಂಟೆ ವರೆಗೆ ಮನೆಯಿಂದ ಹೊರಹೋಗುವದನ್ನು ಸಾಧ್ಯವಾದಷ್ಟು ಮಟ್ಟಿಗೆ ತಪ್ಪಿಸುವಂತೆ ಡಿ.ಸಿ ಬಿ.ಫೌಜಿಯಾ ತರನ್ನುಮ್ ಸಲಹೆ ನೀಡಿದ್ದಾರೆ.

ಬಿಸಿಲಿನಲ್ಲಿ ಹೋಗುವಾಗ ದೇಹಕ್ಕೆ ರಕ್ಷಣಾತ್ಮಕವಾಗಿ ಕನ್ನಡಕಗಳು, ಛತ್ರಿ-ಟೋಪಿ, ಬೂಟುಗಳು ಅಥವಾ ಚಪ್ಪಲ್‌ಗಳನ್ನು ಬಳಸಬೇಕು. ಪ್ರಯಾಣಿಕರು ತಮ್ಮೊಂದಿಗೆ ನೀರು ತೆಗೆದುಕೊಂಡು ಹೋಗಬೇಕು. ಹಗುರವಾದ ತಿಳಿ ಬಣ್ಣದ, ಸಡಿಲವಾದ ಮತ್ತು ರಂಧ್ರವಿರುವ ಹತ್ತಿ ಬಟ್ಟೆಗಳನ್ನು ಧರಿಸುವಂತೆ ಹಾಗೂ ತಾಪಮಾನ ಹೆಚ್ಚರುವಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸುವಂತೆ ಸಲಹೆ ನೀಡಿರುವ ಅವರು, ಹೆಚ್ಚಾಗಿ ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಬೇಕೆಂದು ಸಾರ್ವಜನಿಕರಲ್ಲಿ ಡಿ.ಸಿ. ಮನವಿ ಮಾಡಿದ್ದಾರೆ.

ಗ್ರಾಮೀಣ ಭಾಗದಲ್ಲಿ ನಿರಂತರ ನೀರು ಪೂರೈಕೆ ಬಗ್ಗೆ ಸಮನ್ವಯ ಸಾಧಿಸಬೇಕು. ವಿದ್ಯುತ್ ಕಡಿತದ ದೂರುಗಳನ್ನು ತ್ವರಿತ ಪರಿಹಾರಕ್ಕೆ ಆದ್ಯತೆ ನೀಡುವುದು. ಜನದಟ್ಟಣೆ ಹೆಚ್ಚಿರುವ ಸ್ಥಳಗಳಲ್ಲಿ ತಾತ್ಕಾಲಿಕ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದೆಂದು ಡಿ.ಸಿ. ಅವರು ಸೂಚಿಸಿದ್ದಾರೆ..

ಕಾರ್ಮಿಕ ಇಲಾಖೆಯು ಮಧ್ಯಾಹ್ನ 12 ರಿಂದ 3 ಗಂಟೆ ವರೆಗೆ ಕಾರ್ಮಿಕರು ಹೊರಾಂಗಣ ಕೆಲಸಗಳನ್ನು ಮಾಡದಂತೆ ತಪ್ಪಿಸಿ ಬೆಳಿಗ್ಗೆ ಮತ್ತು ಸಂಜೆ ವೇಳೆಗೆ ಕೆಲಸ ಮಾಡಲು ಸೂಚನೆ ನೀಡಬೇಕು. ಕೆಲಸದ ಸ್ಥಳದಲ್ಲಿ ತಂಪಾದ ಕುಡಿಯುವ ನೀರನ್ನು ಪೂರೈಸಬೇಕು. ತಲೆ ಸುತ್ತು, ವಾಂತಿ, ಹೆಚ್ಚು ಬೆವರು, ದೇಹದ ತಾಪಮಾನ ಹೆಚ್ಚಳ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ಸಹಾಯ ಪಡೆಯಬೇಕು. ತಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಬೇಕು. ಒಆರ್‌ಎಸ್ ದ್ರಾವಣ ಅಥವಾ ನೀರು ನೀಡಬೇಕು.

ಉಷ್ಣತೆಯ ಅಲೆ ಸಮಯದಲ್ಲಿ ಜೆಸ್ಕಾಂ ಸಿಬ್ಬಂದಿಗಳು ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ನಿರಂತರ ವಿದ್ಯುತ್ ಪೂರೈಕೆ ಖಚಿತಪಡಿಸುವುದು. ಟ್ರಾನ್ಸ್‌ಫಾರ್ಮರ್‌ಗಳು, ಲೈನ್‌ಗಳು ಹೆಚ್ಚು ಬಿಸಿಯಾಗದಂತೆ ನಿರಂತರ ಪರಿಶೀಲನೆ ಮಾಡುವುದು. ಓವರ್‌ಲೋಡ್ ತಪ್ಪಿಸಲು ಲೋಡ್ ಮ್ಯಾನೇಜ್ಮೆಂಟ್ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇನ್ನು ಆಸ್ಪತ್ರೆ, ನೀರು ಸರಬರಾಜಿಗೆ ವಿದ್ಯುತ್ ಪೂರೈಕೆ ನಿರಂತರವಾಗಿರಬೇಕು. 24★7 ತುರ್ತು ದುರಸ್ತಿ ತಂಡ ನಿಯೋಜಿಸಬೇಕೆಂದು ತಿಳಿಸಲಾಗಿದೆ.

ಇನ್ನು ರೈತರು ತಮ್ಮ ಜಮೀನಿನಲ್ಲಿರುವ ಮೇವನ್ನು ಯಾವುದೇ ಕಾರಣಕ್ಕೂ ಸುಟ್ಟು ಹಾಕದೇ ಬಣವೇ ಹಾಕಿ ಅಥವಾ ಸುರುಳಿ ಸುತ್ತಿಟ್ಟುಕೊಂಡು (ಬೇಲಿಂಗ್) ಮೇವನ್ನು ಸಂಗ್ರಹಿಸಬೇಕು. ಇದರಿಂದ ಭೂಮಿಯ ಫಲವತ್ತತೆ ಹಾಳಾಗದಂತೆ ತಡೆಯುವುದರ ಜೊತೆಗೆ ಜಾನುವಾರುಗಳಿಗೆ ಮೇವಿನ ಕೊರತೆ ನೀಗಿಸಬಹುದಾಗಿದೆ.

ಮೆಕ್ಯಾನಿಕ್ ಮಗಳು ಕಾಲೇಜಿಗೆ ಪ್ರಥಮ

▸ಸಿದ್ದಯ್ಯ ಹೆಸರೂರು

ಮಸ್ಕಿ: ಪಟ್ಟಣದ ಮೆಕ್ಯಾನಿಕ್ ಮಗಳು ದ್ವಿತೀಯ ಪಿಯುಸಿ ಪರೀಕ್ಷೆಯ ಮರುಮಾಪನದಲ್ಲಿ ಶೇ 94.83 ಅಂಕ ಪಡೆದು ಶಾಲೆಯ ಹಾಗೂ ಪಟ್ಟಣಕ್ಕೆ ಕೀರ್ತಿ ತಂದಿದ್ದಾಳೆ.

ಬೇರೆ ಪಟ್ಟಣಕ್ಕೆ ಗೂಳೆ ಹೋಗಿ ಮೆಕ್ಯಾನಿಕ್ ಕೆಲಸ ಮಾಡಿ ಬರುವ ಹಣದಲ್ಲಿ ಹಾಗೂ ಸಾಲಸೂಲ ಮಾಡಿ ಮಗಳನ್ನು ಓದಿಸಿದ್ದಾರೆ. ಮಗಳೂ ಸಹ ಮೊಬೈಲ್ ಗೀಳನ್ನು ಬಿಟ್ಟು, ಹಗಲು ರಾತ್ರಿ ಎನ್ನದೇ ಕಷ್ಟಪಟ್ಟು ಓದಿ ವಾಣಿಜ್ಯ ವಿಭಾಗದಲ್ಲಿ ಸಂಜನಾ ರಾಹುತ್ ಹೆಚ್ಚು ಅಂಕ ಪಡೆದು ಪೋಷಕರ ಕೀರ್ತಿ ಪತಾಕೆ ಹೆಚ್ಚಿಸಿದ್ದಾರೆ.

ಪಟ್ಟಣದ ವಾರ್ಡ ಐದರಲ್ಲಿನ ಬಾರಿಕೇರ ಓಣಿಯಲ್ಲಿ ವಾಸವಾಗಿರುವ ಬಡಕುಟುಂಬದ ಮುಕ್ತಾ ಬಾಯಿ, ಕಿರಣ ರಾಹುತ್ ಅವರ ಮಗಳಾದ

ಸಂಜನಾ ದ್ವಿತೀಯ ಪಿಯುಸಿಯಲ್ಲಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಇವರ ತಂದೆ ಮೂಲತಃ ಕಿರಣ ಕುಮಾರ ರವರು ಮೆಕ್ಯಾನಿಕ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ಕಡುಬಡತನದಲ್ಲಿ ಕಷ್ಟಪಟ್ಟು ಓದಿಸಿದ್ದಾರೆ.

ತಂದೆಯ ಮೆಕ್ಯಾನಿಕ್ ಕೆಲಸದಿಂದ ಬರುವ ಅಲ್ಪ ಆದಾಯದಲ್ಲಿಯೇ ಅಚ್ಚುಕಟ್ಟಾಗಿ ಅವಶ್ಯವಿರುವ ಖರ್ಚಿನೊಂದಿಗೆ ಮಗಳನ್ನು ಓದಿಸಿದ್ದು, ಎಲೆಮರಿಕಾಯಿಯಂತೆ ಬದುಕು ಸಾಗಿಸುತ್ತಿದ್ದಾರೆ.

ಒಬ್ಬಳೇ ಹೆಣ್ಣುಮಗಳನ್ನು ಹೊಂದಿರುವ ಈ ಬಡಕುಟುಂಬದ ಮಗಳು ಕುಟುಂಬದ ಕಷ್ಟವನ್ನು ಮೆಟ್ಟಿನಿಂತು ನಿರಂತರ ಅಧ್ಯಯನದಿಂದ ಹಾಗೂ ಶಿಕ್ಷಕರ ಮಾರ್ಗದರ್ಶನ ಮತ್ತು ಪಾಲಕರ ಆಸೆಯಂತೆ ಸಾಧನೆಯ ಮೆಟ್ಟಿಲೇರಿ ಎಲ್ಲರಿಗೂ ಸಂಜನಾ ರಾಹುತ್ ಮಾದರಿಯಾಗಿದ್ದಾಳೆ.



ಈ ಮೊದಲು ಪ್ರಕಟಗೊಂಡ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ವಿದ್ಯಾನಿಕೇತನ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಸಂಜನಾ ರಾಹುತ್ ಅವರು ವ್ಯವಹಾರ ಅಧ್ಯಯನ ವಿಷಯದಲ್ಲಿ ಪ್ರಥಮ ಫಲಿತಾಂಶದಲ್ಲಿ 60 ಅಂಕಗಳನ್ನು ಪಡೆದಿದ್ದರು. ಸಂಜನಾ ಅವರು ಪುನಃ ಮರುಮೂಲ್ಯ ಮಾಪನದ ನಂತರ 75 ಅಂಕಗಳನ್ನು ಪಡೆದು ಶೇಕಡ 94.83 ಅಂದರೆ ಒಟ್ಟು ಅಂಕಗಳು 569 ಪಡೆದು ಕಾಲೇಜಿಗೆ ವಾಣಿಜ್ಯ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡು ಗಮನಾರ್ಹ ಸಾಧನೆ ಮಾಡಿದ್ದಾಳೆ.

ಈ ವಿದ್ಯಾರ್ಥಿಯ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದ್ದಾರೆ.

> ನನ್ನ ಮಗಳು ಕಾಲೇಜಿಗೆ ಫಸ್ಟ್ ಬಂದಾಳ ನನಗೆ ಖುಷಿ ತಂದಿದೆ. ಅವಳು ಮುಂದೆ ಏನೇ ಓದುತ್ತೇನೆ ಎಂದರೂ ಓದಿಸಲು ಶ್ರಮ ಪಡುವೆ.
> ■ ಕಿರಣಕುಮಾರ ರಾಹುತ್. ಸಂಜನಾ ರಾಹುತ್ ರವರ ತಂದೆ.

ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಉತ್ತಮ ಫಲಿತಾಂಶ: ಸೈಫುಲ್ಲಾ ಖಾನ್

ಹಟ್ಟಿಚಿನ್ನದಗಣಿ: ಸತತ ಅಭ್ಯಾಸ, ಕಠಿಣ ಪರಿಶ್ರಮದಿಂದ ವಿದ್ಯಾರ್ಥಿಗಳು, ಶಿಕ್ಷಕ-ಪಾಲಕರು ಶ್ರಮವ ಹಿಸಿದ್ದರಿಂದ 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಫಲಿತಾಂಶದಲ್ಲಿ ಸುಧಾರಣೆ ಕಂಡಿದೆ ಎಂದು ಹಟ್ಟಿಚಿನ್ನದಗಣಿ ಕಂಪನಿ ಪ್ರಧಾನ ವ್ಯವಸ್ಥಾಪಕ (ಸಮನ್ವಯ) ಸೈಫುಲ್ಲಾಖಾನ್ ಹೇಳಿದರು.

ಪಾರ್ಕ್ ಬಾಯ್ಸ್ ತಂಡದಿಂದ ಹಟ್ಟಿಚಿನ್ನದಗಣಿ ಕಂಪನಿ ದಾರುವಾಲಾ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ತಮ್ಮ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಟ್ಟಿ ಭಾಗದಲ್ಲಿ ಪ್ರಸಕ್ತ ಸಾಲಿಗೆ ಬಹುತೇಕ ಶಾಲೆಗಳಲ್ಲಿ ಪ್ರತಿಶತ 100 ರಷ್ಟು ಫಲಿತಾಂಶ ಕಂಡಿದೆ. ಇದೆ ಫಲಿತಾಂಶವನ್ನು ಕಾಯ್ದುಕೊಳ್ಳುವುದು ಮುಖ್ಯವಾಗಿದೆ. ಹೆಚ್ಚು ಅಂಕಗಳನ್ನು ಪಡೆದ ಮಕ್ಕಳಿಗೆ ಪ್ರೋತ್ಸಾಹಿಸುವದರ ಜೊತೆಗೆ ಉತ್ತಮ ಗುಣಮಟ್ಟದ ಶಿಕ್ಷಣ ಕೊಡಿಸಬೇಕೆಂದರು.

ಎಪಿಎಂಸಿ ಮಾಜಿ ನಿರ್ದೇಶಕ ಅಮ್ಜದ್ ಹುಸೇನ್ ಮಾತನಾಡಿ ಸ್ಥಳೀಯ ಹಟ್ಟಿಗಣಿ ಕಾರ್ಮಿಕರ ಮಗನಾಗಿ ಹಟ್ಟಿಯಲ್ಲಿ ಬೆಳೆದು ಉನ್ನತ ಹುದ್ದೆಯಾದ ಕಂಪನಿ ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ ಏರಿದ ಸೈಫುಲ್ಲಾ ಖಾನ್‌ರಿಂದ ಗಣಿಕಾರ್ಮಿಕರಿಗೆ ಉತ್ತಮ ಸೌಲಭ್ಯಗಳನ್ನು ಕೊಡಿಸುವುದರ ಜೊತೆಗೆ ಶೈಕ್ಷಣಿಕವಾಗಿ ವಿವಿಧ ಚಟುವಟಿಕೆಗಳನ್ನು ಕಂಪನಿ ಆಯೋಜಿಸಲು ಶ್ರಮವಹಿಸುತ್ತಾ ಬಂದಿದ್ದಾರೆಂದರು.

ಉಪಪ್ರಧಾನ ವ್ಯವಸ್ಥಾಪಕ (ತಾಂತ್ರಿಕ) ವಿಜಯಕುಮಾರ್ ಶೆಟ್ಟಿ, ವ್ಯವಸ್ಥಾಪಕ ವಿಶ್ವನಾಥ್‌ನಾಯಕ್, ಭದ್ರತಾಧಿಕಾರಿ ವಿಜಯಕುಮಾರ್, ಕ್ರೀಡಾಸಂಸ್ಥೆ ಕಾರ್ಯದರ್ಶಿ ಚಂದ್ರಕಾಂತ್ ಹಾಗೂ ಪ್ರಮುಖರಾದ ಭಗತ್ ಕುಮಾರ್ ಚನ್ನಬಸವ ಗಲಗ್ ಇದ್ದರು.



ಕುಣಿಕೇರಿ ಹಾಲು ಉತ್ಪಾದಕರ ನೂತನ ಕಟ್ಟಡ ಉದ್ಘಾಟನೆ

ಮುನಿರಾಬಾದ್: ಹಾಲು ಉತ್ಪಾದಕರ ಸಹಕಾರ ಸಂಘ ಕುಣಿಕೇರಿ ಸಂಘದ ನೂತನ ಕಟ್ಟಡವನ್ನು ಶಾಸಕ ಹಾಗೂ ರಾಯಚೂರು ಬಳ್ಳಾರಿ,ಕೊಪ್ಪಳ, ವಿಜಯನಗರ ಹಾಲು ಒಕ್ಕೂಟದ ಅಧ್ಯಕ್ಷ ಕೆ. ರಾಘವೇಂದ್ರ ಹಿಟ್ನಾಳ, ರಾ ಬ ಕೊ ವಿ ಜಿಲ್ಲಾ ಹಾಲು ಒಕ್ಕೂಟ ಬಳ್ಳಾರಿ ನಿರ್ದೇಶಕ ಕೃಷ್ಣಾರೆಡ್ಡಿ ಗಲಬಿ, ನಿರ್ದೇಶಕ ಮಂಜುನಾಥ್ ಕೆ., ವಿಶ್ವನಾಥ್ ಹಿರೇಮಠ್, ಕಮಲಮ್ಮ ಗೌರಾಳ್ ನಿರ್ದೇಶಕರು, ಭೂ ನ್ಯಾಯ ಮಂಡಳಿ ನಿರ್ದೇಶಕ ಮಹೇಶ್ ಗೌರಾಳ್, ವ್ಯವಸ್ಥಾಪಕ ಜಿ.ಕೆ. ಎರೆಸ್ವಾಮಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು ಸಂಘದ ಆಡಳಿತ ಮಂಡಳಿಯ ನಿರ್ದೇಶಕರು ಒಕ್ಕೂಟದ ಅಧಿಕಾರಿಗಳಾದ ವಿಸ್ತರಣಾಧಿಕಾರಿಗಳು ಸಮಾಲೋಚಕರು ಉಪಸ್ಥಿತರಿದ್ದಾರೆಂದು ಶ್ರೀ ಹುಲಿಗೇಶ್ ಬೋವಿ ಕಾರ್ಯದರ್ಶಿಗಳು ತಿಳಿಸಿದರು.



ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಜಾತ್ರಾ ಮಹೋತ್ಸವ
ಭಕ್ತರ ವಾಹನ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ: ಡಿಸಿ

ಕೊಪ್ಪಳ: 2026ರ ವಾರ್ಷಿಕ ಜಾತ್ರಾ ಮಹೋತ್ಸವದನಿಮಿತ್ತ ಹುಲಿಗಿ ಕ್ಷೇತ್ರಕ್ಕೆ ಆಗಮಿಸುವ ಭಕ್ತರ ವಾಹನ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕೆಂದು ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ 2026ರ ವಾರ್ಷಿಕ ಜಾತ್ರಾ ಮಹೋತ್ಸವದ ನಿಮಿತ್ತ ಜಾತ್ರಾ ಕಾಲದಲ್ಲಿ ಸಂಚಾರ ದಟ್ಟಣೆಯನ್ನು ಸುಗಮಗೊಳಿಸಲು ವಾಹನಗಳನ್ನು ನಿಲ್ಲಿಸಲು ಕೋರಮಂಡಲ ಫ್ಯಾಕ್ಟರಿ ಜಾಗ ಹಾಗೂ ರೈಲ್ವೆ ಗೇಟಿನ ಆಚೆ ಬದಿಯಲ್ಲಿ ಹೊಸ ತುಂಗಭದ್ರ ಪ್ರೌಢಶಾಲೆಯ ಮುಂದಿನ ಬಯಲಿನಲ್ಲಿ ಹಾಗೂ ದೇವಸ್ಥಾನದ ನದಿ ಕಡೆ ಹೋಗುವ ಗೋಪುರದ ಹಿಂದಿನ ಬಯಲು ಪ್ರದೇಶದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲು ಇತ್ತೀಚೆಗೆ ನಡೆದ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಜಾತ್ರೆಯ ಪ್ರಮುಖ ದಿನಗಳಲ್ಲಿ ಯಾವುದೇ ರೀತಿಯ ವಾಹನಗಳನ್ನು ಕಮಾನಿನ ಒಳಗಡೆ ಬಿಡದಂತೆ ಹಾಗೂ ಜಾತ್ರಾ ಕಾಲದಲ್ಲಿ ಜನಸಂದಣಿ ತುಂಬಾ ಇರುವುದರಿಂದ, ಕಳ್ಳತನ ಪ್ರಕರಣಗಳು ತುಂಬ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಕಳ್ಳತನ, ಜೂಜಾಟಗಳನ್ನು ನಿಯಂತ್ರಿಸಲು ಪೊಲೀಸ್ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಆರಕ್ಷಕ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಕರ್ತವ್ಯ ನಿರ್ವಹಿಸಲು ಹಾಗೂ ಮುನಿರಾಬಾದ್ ಠಾಣಾ ಪೊಲೀಸರು ಸಹಕಾರ ನೀಡುವುದಾಗಿ ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು, ಸಭೆಯ ಗಮನಕ್ಕೆ ತಂದರು. ಮೇ 10 ರಿಂದ 14ರ ವರೆಗೆ ಜಾತ್ರೆ ಇರುವುದರಿಂದ ಹೆಚ್ಚಿನ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಜಾತ್ರೆಗೆ ಬಂದೋಬಸ್ತ್ ಒದಗಿಸಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ಆರಕ್ಷಕ ಸಿಬ್ಬಂದಿಗಳನ್ನು ಬಂದೋಬಸ್ತ್ ಗೆ ನಿಯೋಜಿಸಲು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಗೃಹ ರಕ್ಷಕ ದಳದವರನ್ನು ನಿಯೋಜಿಸಲು ವ್ಯವಸ್ಥೆ ಮಾಡಬೇಕು. ಜಾತ್ರೆಯ ಸಮಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲು, ಕ್ಷೇತ್ರದಲ್ಲಿ ಕಳ್ಳತನಗಳು, ಜೂಜಾಟಗಳನ್ನು ನಿಯಂತ್ರಿಸಲು ಅಹಿತಕರ ಘಟನೆಗಳು ಜರುಗದಂತೆ ತಾತ್ಕಾಲಿಕ ಹೊರ ಠಾಣೆಯ ವ್ಯವಸ್ಥೆ ಮಾಡಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಆರಕ್ಷಕ ಸಿಬ್ಬಂದಿ ಹಾಗೂ ಗೃಹರಕ್ಷಕ ದಳದ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಕರ್ತವ್ಯ ನಿರ್ವಹಿಸಲು ಹಾಗೂ ಭಕ್ತಾದಿಗಳಿಗೆ ತಿಳುವಳಿಕೆಯನ್ನು ನೀಡಲು ಸೂಚನಾ ಫಲಕಗಳನ್ನು ಮತ್ತು ಧ್ವನಿವರ್ಧಕಗಳನ್ನು ಹಾಗೂ ದೇವಾಲಯದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಸಿ.ಸಿ.ಕ್ಯಾಮರಾಗಳು ಇರುವುದಾಗಿ ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.

ಪೋಲಿಸರ ಬೇಡಿಕೆಗನುಗುಣವಾಗಿ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಬೇಕು. ಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ, ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಹಮ್ಮಿಕೊಳ್ಳಬೇಕೆಂದು ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಮೇ 3ಕ್ಕೆ ನೀಟ್ ಪರೀಕ್ಷೆ: ಪರೀಕ್ಷೆ ಕೇಂದ್ರಗಳಿಗೆ ಬಿಗಿ ಭದ್ರತೆ ನೀಡಿ

ಕಲಬುರಗಿ: ಕೇಂದ್ರ ಸರ್ಕಾರದ ಎನ್.ಟಿ.ಎ. ಏಜೆನ್ಸಿಯು ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಇದೇ ಮೇ 3 ರಂದು ಕಲಬುರಗಿನಗರದ 20 ಕೇಂದ್ರಗಳಲ್ಲಿ ನೀಟ್ (ಒಇಇಖ) ಪರೀಕ್ಷೆ ನಡೆಸಲಿದ್ದು, ಪಾರದರ್ಶಕವಾಗಿ ಪರೀಕ್ಷೆ ನಡೆಸುವಂತೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ಜಿಲ್ಲಾಧಿಕಾರಿ ಬಿ. ಫೌಜಿಯಾ ತರುನ್ನುಮ್ ಸೂಚನೆ ನೀಡಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಅಂದು ಮಧ್ಯಾಹ್ನ 2/ ರಿಂದ 5 ಗಂಟೆ ವರೆಗೆ ಪರೀಕ್ಷೆ ನಡೆಯಲಿದೆ.

ಜಿಲ್ಲೆಯಲ್ಲಿ ಸುಮಾರು 8,100 ಜನ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದಾರೆ. ಪರೀಕ್ಷೆಗೆ ಬಿಗಿ ಭದ್ರತೆ ಕಲ್ಪಿಸಬೇಕು. ಎಲ್ಲಿಯೂ ನಕಲಿಗೆ ಅವಕಾಶ ನೀಡಬಾರದು ಎಂದರು.



ಪರೀಕ್ಷೆ ಸುಸೂತ್ರ, ನ್ಯಾಯಸಮ್ಮತವಾಗಿ ಮತ್ತು ಶಾಂತಿಯುತವಾಗಿ ನಡೆಯಲು ಪ್ರತಿ ಕೇಂದ್ರಕ್ಕೆ ಸಿ.ಸಿ.ಟಿ.ವಿ ನಿಗಾ ಇರಲಿದೆ. ಪರೀಕ್ಷೆಗೆ ಬೇಕಾದ ಎಲ್ಲಾ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕೇಂದ್ರದ ವೀಕ್ಷಕರನ್ನಾಗಿ ನೇಮಿಸಿದ್ದು, ಅರ್ಧ ಗಂಟೆ ಮುಂಚೆಯೆ ವೀಕ್ಷಕರು ಕೇಂದ್ರದಲ್ಲಿ ಹಾಜರಾಗಿ ಪಾರದರ್ಶಕವಾಗಿ ಪರೀಕ್ಷೆ ನಡೆಯುವಂತೆ ಮೇಲುಸ್ತುವಾರಿ ವಹಿಸಬೇಕು ಎಂದರು.

ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಮಾತನಾಡಿ ಬೇಸಿಗೆ ಹೆಚ್ಚಿಗೆ ಇರುವುದರಿಂದ ಕುಡಿಯುವ ನೀರಿನ ವ್ಯವಸ್ಥೆ, ಓ.ಆರ್.ಎಸ್ ಪರೀಕ್ಷಾ ಕೇಂದ್ರಗಳಲ್ಲಿ ಇಡುವಂತೆ ಹೇಳಿದರು.

ಪರೀಕ್ಷೆ ದಿನದ ಮುನ್ನವೆ ಕೇಂದ್ರದಲ್ಲಿ ಆಸನ ವ್ಯವಸ್ಥೆ, ವಿದ್ಯುತ್, ಶೌಚಾಲಯದಂತಹ ಮೂಲಸೌಕರ್ಯ ಇರುವುದನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಖಾತ್ರಿಪಡಿಸಿಕೊಳ್ಳಬೇಕು. ಪ್ರವೇಶ ದ್ವಾರದಲ್ಲಿಯೆ ಪೊಲೀಸ್ ಸಿಬ್ಬಂದಿ ಸಹಾಯ ಪಡೆದು ಅಭ್ಯರ್ಥಿಗಳಿಗೆ ಫ್ರಿಸ್ಕಿಂಗ್ ಮಾಡಬೇಕು. ಇನ್ನು ಪರೀಕ್ಷಾ ಕೇಂದ್ರಕ್ಕೆ ಬರುವ ಅಭ್ಯರ್ಥಿಗಳು ಪ್ರವೇಶ ಪತ್ರದ ಜೊತೆಗೆ ಐ.ಡಿ ಕಾರ್ಡ್ ತರುವುದನ್ನು ಮರೆಯಬಾರದು ಎಂದಿದ್ದಾರೆ.

ಎಲೆಕ್ಟ್ರಾನಿಕ್ ಸಾಧನಗಳು ನಿಷೇಧ: ಪರೀಕ್ಷೆ ಕೇಂದ್ರದಲ್ಲಿ ಮೊಬೈಲ್, ಬ್ಲೂಟೂಥ್, ಪೇಜರ್, ಕ್ಯಾಲ್ಕುಲೇಟರ್ ಸೇರಿದಂತೆ ಎಲ್ಲಾ ರೀತಿಯ ಎಲೆಕ್ಟ್ರಾನಿಕ್ ಸಾಧನಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇದಲ್ಲದೆ ಕೇಂದ್ರದಲ್ಲಿ 200 ಮೀಟರ್ ಸುತ್ತ ಪ್ರದೇಶ ನಿಷೇಧಿತ ಪ್ರದೇಶವೆಂದು ಈಗಾಗಲೆ ಘೋಷಿಸಲಾಗಿದ್ದರಿಂದ ಪೊಲೀಸ್ ಇಲಾಖೆ ಎಲ್ಲಾ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಪರೀಕ್ಷೆ ಕೇಂದ್ರದ ಮುಖ್ಯಸ್ಥರು ಹಾಗೂ ಇತರೆ ಅಧಿಕಾರಿಗಳು ಇದ್ದರು.

ಕಿರುಸುದ್ದಿ

ಜಿ.ಎಸ್. ಆಂಜನೇಯಲೂ ಭೇಟಿ: ಚರ್ಚೆ

ಬಳ್ಳಾರಿ: ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹಮ್ಮಿಕೊಂಡ ಪುಣೆ ಪ್ರವಾಸ ಕಾರ್ಯಕ್ರಮದ ಭಾಗವಾಗಿ ವಿವಿಧ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಗಳ ಕುರಿತು, ಬುಡಾ ಅಧ್ಯಕ್ಷ ಜಿ.ಎಸ್. ಆಂಜನೇಯಲೂ ಅವರು, ಪುಣೆ ಮೆಟ್ರೋಪಾಲಿಟನ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಭೇಟಿ ನೀಡಿ, ಪ್ರಾಧಿಕಾರದ ಆಯುಕ್ತರೊಂದಿಗೆ ಕೆಲಕಾಲ ಅಭಿವೃದ್ಧಿಗಳ ಕುರಿತು ಚರ್ಚಿಸಿದರು.

ನಂತರ ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿ, ಮಹಾನಗರಗಳ ಮಹಾ ಯೋಜನೆ ಬಗ್ಗೆ, ಹಾಗೂ ವಿವಿಧ ರೀತಿಯ ಸಮಸ್ಯೆಗಳು ಹಾಗೂ ಅಭಿವೃದ್ಧಿಪಡಿಸುವ ಆಯಾಮಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಮಹಾನಗರ ಪಾಲಿಕೆ ಮೇಯರ್ ಪಿ. ಗಾದೆಪ್ಪ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ ಸದಸ್ಯರಾದ ರಂಜಿತ್ ಹಾಗೂ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ ಸಿಬಂದಿಗಳು, ಇತರರು ಉಪಸ್ಥಿತರಿದ್ದರು.

ಮಹಿಳಾ ಬಿಲ್ ಸೋಲಿಗೆ ಕಾಂಗ್ರೆಸ್ ಕಾರಣ:ಶ್ರೀಧರ

ಯಾದಗಿರಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ತರಲು ಉದ್ದೇಶಿಸಿದ್ದ ಮಹಿಳಾ ಮೀಸಲಾತಿಗೆ ಸೋಲಾಗುವಂತೆ ನೋಡಿಕೊಂಡ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ನಡೆ ಖಂಡನಾರ್ಹ ಎಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಶ್ರೀಧರ ಸಾಹುಕಾರ ಆರೋಪಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು, ದೇಶದ ಮಹಿಳೆಯರಿಗೆ ರಾಜಕೀಯವಾಗಿ ಮೀಸಲು ಒದಗಿಸಲು ಜಾರಿ ಮಾಡಲು ಉದ್ದೇಶದಿಂದ ಮಂಡಿಸಲಾಗಿದ್ದ ಬಿಲ್ ಉದ್ದೇಶಪೂರ್ವಕವಾಗಿ ಸೋಲಿಸಿದ್ದು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು. ಇದರಿಂದಾಗಿ ಮಹಿಳೆಯರ ಬಗ್ಗೆ ಅವರಿಗಿರುವ ನಿಜಬಣ್ಣ ಈಗ ಬಯಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿ ಗಂಡು ಮತ್ತು ಹೆಣ್ಣು ಸಮ ಸಂಖ್ಯೆಯಲ್ಲಿ ಇದ್ದೇವೆ. ಆದರೇ ರಾಜಕೀಯವಾಗಿ ಶೇ.33ರಷ್ಟು ಮೀಸಲು ಎಂದೋ ಸಿಗಬೇಕಿತ್ತು. ಆದರೆ ಕಾಂಗ್ರೆಸ್ ಪಕ್ಷದ ಕೆಟ್ಟ ಮನಸ್ಥಿತಿಯಿಂದಾಗಿ ಮತ್ತು ಅದಕ್ಕೆ ಬೆಂಬಲಿಸುವ ಕೆಲವು ಪಕ್ಷಗಳಿಂದ ಇದಕ್ಕೆ ಹಿನ್ನಡೆಯಾಗುತ್ತಿದೆ. ಕಾರಣ ಮುಂದಿನ ದಿನಗಳಲ್ಲಿ ಇದಕ್ಕೇ ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದು ಅವರು ಹೇಳಿಕೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.




ಕರೂರ: ಸಮೀಪದ ಗೋಸುಬಾಳುದಲ್ಲಿ ಮರಿಲಿಂಗೇಶ್ವರ ದೇವರ ನೂತನ ದೇವಸ್ಥಾನ ಉದ್ಘಾಟನೆ ಕಾರ್ಯಕ್ರಮದಲ್ಲಿ 101 ಮಹಿಳೆಯರಿಂದ ಕಳಸ, ಪೂಜೆ ಮಾಡುವುದರ ಮೂಲಕ ಅಚ್ಚುಕಟ್ಟಾಗಿ ಎಲ್ಲಾ ಕುರುಬ ಸಮುದಾಯದವರು ಸೇರಿ ಸಂಭ್ರಮದಿಂದ ಯಶಸ್ವಿಗೊಳಿಸಿದರು.

ಅಕ್ರಮ ಪಡಿತರ ಅಕ್ಕಿ ವಶ

ಸಿರುಗುಪ್ಪ: ನಗರದಿಂದ ಬೈಪಾಸ್ ರಸ್ತೆಯ ಮುಖಾಂತರ ಸಿಂಧನೂರು ಕಡೆಗೆ ಅಶೋಕ್ ಲೈಲ್ಯಾಂಡ್ ಗೂಡ್ಸ್ ವಾಹನ ಮೂಲಕ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಣಿಕೆ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕ ಎಂ ವಿಜಯಕುಮಾರ್, ಪೊಲೀಸರು ದಾಳಿ ಮಾಡಿ ವಶಕ್ಕೆ ಪಡೆದುಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕ ಎಂ ವಿಜಯಕುಮಾರ್ ಮತ್ತು ಪೊಲೀಸ್ ಸಿಬ್ಬಂದಿಗಳು ಸೇರಿ ಸಾರ್ವಜನಿಕರಿಗೆ ವಿತರಣೆ ಮಾಡುವ ಪಡಿತರ ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ 53,750 ಸಾವಿರ ರೂಪಾಯಿ ಮೌಲ್ಯದ ಸುಮಾರು 21.50 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ. ಈ ಕುರಿತು ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬಳ್ಳಾರಿ: ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹಮ್ಮಿಕೊಂಡ ಪುಣೆ ಪ್ರವಾಸ ಕಾರ್ಯಕ್ರಮದ ಭಾಗವಾಗಿ ವಿವಿಧ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಗಳ ಕುರಿತು, ಬುಡಾ ಅಧ್ಯಕ್ಷ ಜಿ.ಎಸ್. ಆಂಜನೇಯಲೂ ಅವರು, ಪುಣೆ ಮೆಟ್ರೋಪಾಲಿಟನ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಭೇಟಿ ನೀಡಿ, ಪ್ರಾಧಿಕಾರದ ಆಯುಕ್ತರೊಂದಿಗೆ ಕೆಲಕಾಲ ಅಭಿವೃದ್ಧಿಗಳ ಕುರಿತು ಚರ್ಚಿಸಿದರು.

ಸಾಮಾಜಿಕ ಬದ್ಧತೆ, ಶಿಸ್ತಿಗೆ ಎನ್‌ಎಸ್‌ಎಸ್ ಪೂರಕ

ವಿಜಯನಗರ: ದೇಶಸೇವೆ ಎಂದರೆ ಅದು ದೈವಸೇವೆ ಇದ್ದಂತೆ. ವಿದ್ಯಾರ್ಥಿಗಳು ಸಾಮಾಜಿಕ ಬದ್ಧತೆ, ಶಿಸ್ತು ಮತ್ತು ಸೇವಾ ಮನೋಭಾವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮಕ್ಕಳ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವಾಧ್ಯಕ್ಷ ಡಾ. ಎಂ. ಧರ್ಮನ ಗೌಡ ಹೇಳಿದರು.

ಶ್ರೀ ಹಂಪಿ ವಿರೂಪಾಕ್ಷೇಶ್ವರ ಸ್ವಾಮಿ ಪದವಿ ಮಹಾವಿದ್ಯಾಲಯದಿಂದ ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ಬುಧವಾರ ಏರ್ಪಡಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್) ವಾರ್ಷಿಕ ವಿಶೇಷ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು, ಯುವಶಕ್ತಿ ದೇಶದ ಆಸ್ತಿ. ಇಂತಹ ಶಿಬಿರಗಳು ಯುವ ಜನರ ಸಾಂಸ್ಕೃತಿಕ ಮತ್ತು ವ್ಯಕ್ತಿತ್ವ ವಿಕಸನಕ್ಕೆ ನಾಂದಿಯಾಗಲಿವೆ ಎಂದರು. ಕಾಲೇಜಿನ ಪ್ರಾಚಾರ್ಯ ಶ್ರೀ ಬಸವರಾಜ್ ಎಮ್ಮಿಗನೂರು ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮ ಸ್ವರಾಜ್ಯದ ಕನಸು ನನಸಾಗಲು ಸಾಮಾಜಿಕ ಭಾವೈಕ್ಯತೆ ಮುಖ್ಯ ಎಂದರು.ಇದೇ ವೇಳೆ ಉಪನ್ಯಾಸಕ ವೆಂಕಟೇಶ್ ಬಡಿಗೇರ್ ಸಂಪಾದಿಸಿದ 'ಕಲ್ಲುತೇರಿನ ಕುಸುರಿ' ಕವನ ಸಂಕಲನದ ದ್ವಿತೀಯ ಮುದ್ರಣವನ್ನು ಲೋಕಾರ್ಪಣೆ ಮಾಡಲಾಯಿತು. ಕಾರ್ಯಕ್ರಮದ ಅಧಿಕಾರಿ ಡಾ. ವೀಣಾ ಕೆ. ಪ್ರಾಸ್ತಾವಿಕ ನುಡಿಗಳೊಂದಿಗೆ ಶಿಬಿರದ ವರದಿ ಮಂಡಿಸಿದರು.ವೇದಿಕೆ ಮೇಲೆ ಕರವೇ ಜಿಲ್ಲಾಧ್ಯಕ್ಷ ತಾರಿಹಳ್ಳಿ ಹನುಮಂತಪ್ಪ, ನಕ್ಷತ್ರ ಟ್ರಸ್ಟ್‌ನ ಷಣ್ಮುಖಪ್ಪ ಕಡ್ಡಿಪುಡಿ, ಪರಿಸರ ಪ್ರೇಮಿ ಕುಲುಮೆ ತಿಪ್ಪೇಶ್, ಶಿಕ್ಷಕ ಮಂಜಪ್ಪ ರಂಗಪ್ಪನವರ್, ಕಲಾವಿದ ಬಂಡ್ರಿ ಲಿಂಗಪ್ಪ, ಎಸ್. ಸಂದೀಪ್, ನಟರಾಜ್ ವೈ., ಪ್ರವೀಣ್ ಸಿಂಗ್, ಬಿ.ಎಸ್. ವಿಶ್ವನಾಥ್ ಮತ್ತಿತರರು ಉಪಸ್ಥಿತರಿದ್ದರು.



ವಿಜಯನಗರ: ಶ್ರೀ ಹಂಪಿ ವಿರೂಪಾಕ್ಷೇಶ್ವರ ಸ್ವಾಮಿ ಪದವಿ ಮಹಾವಿದ್ಯಾಲಯದಿಂದ ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ಬುಧವಾರ ಏರ್ಪಡಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್) ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ನಡೆಯಿತು. ಮಕ್ಕಳ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವಾಧ್ಯಕ್ಷ ಡಾ. ಎಂ. ಧರ್ಮನ ಗೌಡ, ಕಾಲೇಜಿನ ಪ್ರಾಚಾರ್ಯ ಶ್ರೀ ಬಸವರಾಜ್ ಎಮ್ಮಿಗನೂರು,ಕರವೇ ಜಿಲ್ಲಾಧ್ಯಕ್ಷ ತಾರಿಹಳ್ಳಿ ಹನುಮಂತಪ್ಪ, ನಕ್ಷತ್ರ ಟ್ರಸ್ಟ್‌ನ ಷಣ್ಮುಖಪ್ಪ ಕಡ್ಡಿಪುಡಿ, ಪರಿಸರ ಪ್ರೇಮಿ ಕುಲುಮೆ ತಿಪ್ಪೇಶ್ ಇತರರು ಇದ್ದರು.

ಅಗ್ನಿ ಶಾಮಕ ದಳದಿಂದ ವಿಪತ್ತು ನಿರ್ವಹಣೆ ಅಣಕು ಪ್ರದರ್ಶನ

ಸಮಯಪ್ರಜ್ಞೆ, ಸಮನ್ವಯವೇ ಜೀವರಕ್ಷಕ

ವಿಜಯನಗರ: ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಸಾವು-ನೋವುಗಳ ಕನಿಷ್ಠ ಮಟ್ಟಕ್ಕೆ ಇಳಿಸಲು ಜಿಲ್ಲಾಡಳಿತದ ವಿವಿಧ ಇಲಾಖೆಗಳ ನಡುವಿನ ಸಮನ್ವಯ ಮತ್ತು ಕ್ಷಿಪ್ರ ಸ್ಪಂದನೆ ಅತ್ಯಗತ್ಯ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಆರೋಗ್ಯ ಇಲಾಖೆ, ಹಾಗೂ ಗೃಹರಕ್ಷಕ ಮತ್ತು ಪೊಲೀಸ್ ಇಲಾಖೆ ಸಹಯೋಗದಲ್ಲಿ ಹೊಸಪೇಟೆ ನಗರದ 100 ಬೆಡ್ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ವಿಪತ್ತು ನಿರ್ವಹಣಾ ಅಣಕು ಪ್ರದರ್ಶನದ ಖುದ್ದು ವೀಕ್ಷಿಸಿದ ಅವರು ಮಾತನಾಡಿದರು.

ಈ ಅಣಕು ಪ್ರದರ್ಶನದ ವೇಳೆ ಆಗುವ ಸಣ್ಣಪುಟ್ಟ ಲೋಪದೋಷಗಳನ್ನು ತಿದ್ದಿಕೊಳ್ಳುವ ಮೂಲಕ, ನೈಜ ತುರ್ತು ಸಂದರ್ಭದಲ್ಲಿ ಆಗಬಹುದಾದ ದೊಡ್ಡ ಅನಾಹುತ ತಪ್ಪಿಸಬಹುದು. ಈ ಅಣಕು ಪ್ರದರ್ಶನವು ಕೇವಲ ತಾಲೀಮು ಆಗಿರದೇ, ಜನರ ಜೀವ ರಕ್ಷಣೆಗಾಗಿ ಜಿಲ್ಲಾಡಳಿತ ಸನ್ನದ್ಧವಾಗಿದೆ ಎಂಬುದಕ್ಕೆ ಹಿಡಿದ ಕೈಗನ್ನಡಿ.

ಇಂತಹ ತಾಲೀಮುಗಳು ಕೇವಲ ಪ್ರದರ್ಶನಕ್ಕಲ್ಲ, ಬದಲಾಗಿ ನಮ್ಮ ಸಿದ್ಧತೆಯನ್ನು ಒರೆಗೆ ಹಚ್ಚುವ ಸಾಧನವಾಗಿದೆ ಎಂದ ಅವರು, ವಿಶೇ?ವಾಗಿ ಬೇಸಿಗೆ ಕಾಲದಲ್ಲಿ ವಿದ್ಯುತ್ ಲೋಡ್ ಹೆಚ್ಚಳದಿಂದ ಸಂಭವಿಸಬಹುದಾದ ಶಾರ್ಟ್ ಸರ್ಕ್ಯೂಟ್ ಅವಘಡಗಳ ಬಗ್ಗೆ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು. ಇಂತಹ ಸಂದರ್ಭಗಳಲ್ಲಿ ಬೆಂಕಿ ನಂದಿಸುವ ತಾಂತ್ರಿಕತೆ ಮತ್ತು ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸುವ ವಿಧಾನಗಳ ಬಗ್ಗೆ ಪ್ರತಿಯೊಬ್ಬರಿಗೂ ಕನಿಷ್ಠ ಜ್ಞಾನವಿರಬೇಕು ಎಂದು ತಿಳಿ ಹೇಳಿದರು.

ಈ ವೇಳೆ ಅಗ್ನಿ ಶಾಮಕದಳ ಜಿಲ್ಲಾಅಧಿಕಾರಿ ವಾಲಿ ಪ್ರಮೋದ್, ಗೃಹರಕ್ಷಕ ದಳ ಅಧಿಕಾರಿ, ಡಿಹೆಚ್‌ಓ ಶಂಕರ್ ನಾಯ್ಕ್, ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ, ಹೋಮ್‌ಗಾರ್ಡ್ಸ್ ಮತ್ತುಆರೋಗ್ಯಇಲಾಖೆಯ ಸಿಬ್ಬಂದಿಗಳು ತೋರಿದ ಶಿಸ್ತು ಮತ್ತು ವೇಗದ ಕಾರ್ಯಾಚರಣೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಕಣ್ಣಿಗೆ ಕಟ್ಟುವಂತೆ ಪ್ರಾತ್ಯಕ್ಷಿತೆ

ನಗರದ 100 ಬೆಡ್ ಆಸ್ಪತ್ರೆಯಲ್ಲಿ ಅನಿರೀಕ್ಷಿತವಾಗಿ ಮೊಳಗಿದ ಸೈರನ್ ಸದ್ದು, ಕ್ಷಣಾರ್ಧದಲ್ಲಿ ಧಾವಿಸಿ ಬಂದಅಗ್ನಿಶಾಮಕ ವಾಹನಗಳು, ಆಂಬ್ಯುಲೆನ್ಸ್‌ಗಳ ದೌಡು ಮತ್ತು ಬಿಗಿ ಪೊಲೀಸ್ ಬಂದೋಬಸ್ತ್! ಇದನ್ನು ಕಂಡ ಸಾರ್ವಜನಿಕರು ಒಂದು ಕ್ಷಣ ಸ್ತಬ್ಧರಾದರು. ಆದರೆ, ಇದು ಯಾವುದೇ ನೈಜ ಅವಘಡವಲ್ಲ, ಬದಲಾಗಿ ವಿಪತ್ತು ಎದುರಿಸಲು ಜಿಲ್ಲಾಡಳಿತ ನಡೆಸಿದ ಅಣಕು ಪ್ರದರ್ಶನ ಆಸ್ಪತ್ರೆಯ ಒಂದುಕಟ್ಟಡದಲ್ಲಿ ಬಾಂಬ್ ಸ್ಫೋಟಗೊಂಡು ಬೆಂಕಿ ಕಾಣಿಸಿಕೊಂಡಿದೆ ಎಂಬ ಸನ್ನಿವೇಶ ನೋಡುಗರಕಣ್ಣಿಗೆಕಟ್ಟುವಂತೆ ಸೃಷ್ಟಿಸಲಾಗಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಹೊಗೆಯ ನಡುವೆ ನುಗ್ಗಿ, ಸ್ಫೋಟದಲ್ಲಿ ಸಿಲುಕಿಕೊಂಡವರನ್ನು ರಕ್ಷಿಸುವ ಸಾಹಸಮಯ ದೃಶ್ಯಗಳು ನೋಡುಗರ ಕಣ್ಣಿಗೆ ಕಟ್ಟುವಂತಿತ್ತು. ದಟ್ಟ ಹೊಗೆಯ ನಡುವೆ 'ಕೋಡ್‌ರೆಡ್' ಘೋಷಣೆಯಾಗುತ್ತಿದ್ದಂತೆ, ರಕ್ಷಣಾ ಕಾರ್ಯಚುರುಕುಗೊಂಡಿತು.

ಕರೆ ಬಂದತಕ್ಷಣ ಸ್ಥಳಕ್ಕೆ ಧಾವಿಸಿ, ಬೆಂಕಿಯನ್ನು ನಿಯಂತ್ರಿಸುವಜೊತೆಗೆ ಮಕ್ಕಳನ್ನು ಮತ್ತು ಸಂಕಷ್ಟದಲ್ಲಿದ್ದವರನ್ನು ಸುರಕ್ಷಿತವಾಗಿ ಹೊರತಂದರು. ಸೈರನ್ ಮೊಳಗಿದ ಕೆಲವೇ ಕ್ಷಣಗಳಲ್ಲಿ ಅಂಬ್ಯುಲೆನ್ಸ್‌ಗಳು ಸ್ಥಳಕ್ಕೆ ತಲುಪಿದವು. ಗಂಭೀರವಾಗಿ ಗಾಯಗೊಂಡವರಿಗೆ ಪ್ರಥಮ ಚಿಕಿತ್ಸೆ ನೀಡಿ, ಅವರನ್ನು ತಕ್ಷಣವೇ ಆಸ್ಪತ್ರೆಗೆ ರವಾನಿಸುವ ಪ್ರಕ್ರಿಯೆ ವ್ಯವಸ್ಥಿತವಾಗಿತ್ತು. ತುರ್ತು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲು ಟ್ರಾಫಿಕ್ ನಿಯಂತ್ರಿಸಿ, ಸಾರ್ವಜನಿಕರಲ್ಲಿ ಆತಂಕ ಮೂಡದಂತೆ ಎಚ್ಚರಿಕೆ ವಹಿಸಿದರು. ಇದೆಲ್ಲವೂ ಕಂಡು ಬಂದಿದ್ದು 100 ಬೆಡ್ ಆಸ್ಪತ್ರೆ ಆವರಣದಲ್ಲಿ ಕಂಡು ಬಂದ ದೃಶ್ಯವಿದು.

ಮಲೇರಿಯಾ ಮುಕ್ತ ಜಿಲ್ಲೆಗೆ ಸಂಕಲ್ಪ

ಬಳ್ಳಾರಿ: ಜಿಲ್ಲೆಯನ್ನು 2030ರ ವೇಳೆಗೆ ಮಲೇರಿಯಾ ಮುಕ್ತವಾಗಿಸಲು ಆರೋಗ್ಯ ಇಲಾಖೆ ಸಂಕಲ್ಪ ಹೊಂದಲಾಗಿದೆ. ಮಲೇರಿಯಾ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜಿಲ್ಲೆಯ ಜನತೆ ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಯಲ್ಲಾ ರಮೇಶ್ ಬಾಬು ಅವರು ತಿಳಿಸಿದ್ದಾರೆ.



ಮಲೇರಿಯಾವನ್ನು ಅಂತ್ಯಗೊಳಿಸಲು ಸಂಕಲ್ಪ ಮಾಡೋಣ: ನಮಗಿದು ಸಾಧ್ಯವಿದೆ. ನಾವು ಇದನ್ನು ಮಾಡಬೇಕು'' ಎಂಬ ಘೋಷವಾಕ್ಯದೊಂದಿಗೆ ವಿಶ್ವ ಮಲೇರಿಯಾ ದಿನವನ್ನು ಜಿಲ್ಲೆಯಾದ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಬಳ್ಳಾರಿ ಜಿಲ್ಲೆಯು ಮಲೇರಿಯಾ ನಿಯಂತ್ರಣದಲ್ಲಿ ರಾಜ್ಯದಲ್ಲೇ ಮಾದರಿ ಸಾಧನೆ ಮಾಡಿದೆ. 2015 ರಿಂದ ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣಗಳು ಅತ್ಯಲ್ಪ ಸಂಖ್ಯೆಯಲ್ಲಿದ್ದು, ಕಳೆದ ಮೂರು ವರ್ಷಗಳಿಂದಶೂನ್ಯ ಸ್ಥಳೀಯ ಮಲೇರಿಯಾ ಪ್ರಕರಣಗಳನ್ನು ದಾಖಲಿಸುವ ಮೂಲಕ ಜಿಲ್ಲೆಯು ಮೈಲಿಗಲ್ಲು ಸಾಧಿಸಿದೆ ಎಂದು

2027ರವೇಳೆಗೆಸ್ಥಳೀಯಪ್ರಕರಣಗಳನ್ನು ಸಂಪೂರ್ಣ ಶೂನ್ಯಗೊಳಿಸಿ, 2030ರ ವೇಳೆಗೆ ಜಿಲ್ಲೆಯನ್ನು ಸಂಪೂರ್ಣ ಮಲೇರಿಯಾ ಮುಕ್ತವಾಗಿಸುವ ಗುರಿಯನ್ನು ಇಲಾಖೆ ಹೊಂದಿದೆ ಎಂದಿದ್ದಾರೆ.

ಸಾರ್ವಜನಿಕರಿಗೆ ಸೂಚನೆಗಳು: ಮಲೇರಿಯಾವು ಪ್ಲಾಸ್ಮೋಡಿಯಂ ಪರಾವಲಂಬಿಗಳಿಂದ ಬರುವ ಕಾಯಿಲೆಯಾಗಿದ್ದು, ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಡಿತದಿಂದ ಹರಡುತ್ತದೆ. ಇದನ್ನು ತಡೆಗಟ್ಟಲು ಸಾರ್ವಜನಿಕರು ಅಗತ್ಯ ಕ್ರಮಗಳನ್ನು ಅನುಸರಿಸಬೇಕು ಎಂದು ಅವರು ತಿಳಿಸಿದ್ದಾರೆ.

ಶೀಘ್ರ ಪತ್ತೆ ಮತ್ತು ಚಿಕಿತ್ಸೆ: ಜ್ವರ ಬಂದ ತಕ್ಷಣ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಲಭ್ಯವಿರುವ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಮತ್ತು ಸಂಪೂರ್ಣ ಚಿಕಿತ್ಸೆ ಪಡೆಯಿರಿ.

ಸೊಳ್ಳೆ ಉತ್ಪತ್ತಿ ತಡೆಗಟ್ಟಿ: ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಜಾಗ್ರತೆ ವಹಿಸಿ. ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ಸಮುದಾಯದ ಸಹಭಾಗಿತ್ವ ಅತ್ಯಗತ್ಯ.

ಕೀಟನಾಶಕ ಸಿಂಪಡಣೆ: ಆರೋಗ್ಯ ಇಲಾಖೆಯ ವತಿಯಿಂದ ಕೈಗೊಳ್ಳಲಾಗುವ ಒಳಾಂಗಣ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಾರ್ವಜನಿಕರು ಸಹಕರಿಸಬೇಕು.

ವೈಯಕ್ತಿಕ ರಕ್ಷಣೆ: ಕೀಟನಾಶಕ ಸಂಸ್ಕರಿಸಿದ ಸೊಳ್ಳೆ ಪರದೆಗಳನ್ನು ಬಳಸಿ. ಸೊಳ್ಳೆ ನಿವಾರಕಗಳು ಮತ್ತು ವಿವಿಧ ಸ್ವಯಂ ರಕ್ಷಣಾ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಸೊಳ್ಳೆ ಕಡಿತದಿಂದ ಪಾರಾಗಿ ಎಂದು ಹೇಳಿದ್ದಾರೆ.

ಈ ವರ್ಷದ ಅಭಿಯಾನವು ರಾಜಕೀಯ ಇಚ್ಛಾಶಕ್ತಿ, ಆರ್ಥಿಕ ಹೂಡಿಕೆ ಮತ್ತು ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಒತ್ತು ನೀಡಿದೆ. ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ 2030ರ ಮಲೇರಿಯಾ ಮುಕ್ತ ಗುರಿಯನ್ನು ತಲುಪಲು ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ: ವೀಣಾಗೆ ಸನ್ಮಾನ

ಹೂವಿನ ಹಡಗಲಿ: ತಾಲೂಕಿನ ಇಟ್ಟಿಗಿ ಗ್ರಾಮದ ಶ್ರೀಮತಿ ಬಳಿಗಾರ ಪಾರ್ವತಮ್ಮ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಕುಮಾರಿ ಎಂ. ವೀಣಾ ಅವರು ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.98 ಅಂಕಗಳೊಂದಿಗೆ ಉತ್ತೀರ್ಣರಾಗಿ ಇಡೀ ವಿಜಯನಗರ ಜಿಲ್ಲೆಗೆ ವಿಕಲಚೇತನರ ಕ್ಷೇತ್ರದಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.

ಗುರುವಾರದಂದು ಶ್ರೀ ರಾಮಾಂಜಿನೇಯ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ವಿಜಯನಗರ, ಶಾಲೆಯ ಮುಖ್ಯೋಪಾಧ್ಯಾಯರಾದ ಕರೇಗೌಡ ಸಾಧನೆಗೈದ ವಿದ್ಯಾರ್ಥಿನಿಯ ಮನೆಗೆ ಭೇಟಿ ನೀಡಿ ಬಾಲಕಿಗೆ ಸನ್ಮಾನ ನೆರವೇರಿಸಿದರು.

ಸನ್ಮಾನ ಮಾಡಿ ಮಾತನಾಡಿದ ಅಧಿಕಾರಿಗಳು ಈ ಬಾಲಕಿಯ ಸಾಧನೆಯ ಕುರಿತು ಹರ್ಷ ವ್ಯಕ್ತಪಡಿಸಿದರು. ಇವರ ಮುಂದಿನ ವಿದ್ಯಾಭ್ಯಾಸಕ್ಕೆ ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ವಿಜಯನಗರರವರಿಂದ ಸನ್ಮಾನ ನೆರವೇರಿಸುವುದಾಗಿ ಹಾಗೂ ಜಿಲ್ಲಾಧಿಕಾರಿಗಳಿಂದ, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಿಂದ ಅಗತ್ಯ ಆರ್ಥಿಕ ನೆರವು ಕಲ್ಪಿಸಲು ಶ್ರಮಿಸುವುದಾಗಿ ತಿಳಿಸಿದರು.

ತಾಲೂಕಿನ ಎಂ.ಆರ್.ಡಬ್ಲ್ಯು ಮಂಜುನಾಥ ಮಾತನಾಡಿ, ಇಲಾಖೆಯಿಂದ ಶೈಕ್ಷಣಿಕ ಸಾಧಕರಿಗೆ ಸಿಗುವ ಪ್ರೋತ್ಸಾಹ ಧನ, ಮುಂದಿನ ವಿದ್ಯಾಭ್ಯಾಸದ ಸಂದರ್ಭದಲ್ಲಿ ಶುಲ್ಕ ಮರುಪಾವತಿ, ಹಾಗೂ ವಿದ್ಯಾರ್ಥಿ ವೇತನದ ಸೌಲಭ್ಯ ಕಲ್ಪಿಸುವುದಾಗಿ ತಿಳಿಸಿದರು.

ಶಾಲೆಯ ಮುಖ್ಯೋಪಾಧ್ಯಾಯರಾದ ಕರೇಗೌಡರು ಮಾತನಾಡಿ, ಈ ಬಾಲಕಿಯ ಸಾಧನೆ ಕುರಿತು ಖುಷಿ ವ್ಯಕ್ತಪಡಿಸಿ, ಶಿಕ್ಷಕರ ಮಾರ್ಗದರ್ಶನ, ಬಾಲಕಿ ಪಟ್ಟ ಪರಿಶ್ರಮಕ್ಕೆ ತಕ್ಕ ಫಲ ದೊರೆತಿದೆ, ಇದಕ್ಕೆ ಅವರ ಪೋಷಕರು, ಕುಟುಂಬದ ಪ್ರತಿಯೊಬ್ಬರೂ ಸಹ ಕೈಜೋಡಿಸಿದಕ್ಕೆ ಈ ಸಾಧನೆ ಸಾಧ್ಯವಾಗಿದೆ ಎಂದು ವಿವರಿಸಿದರು. ಶಾಲೆಯ ಸಿಬ್ಬಂದಿ ವರ್ಗ, ಇಟ್ಟಿಗಿ ಗ್ರಾಪಂ ಬಿಲ್ ಕಲೆಕ್ಟರ್ ಕೊಟ್ರೇಶ್ ಹಾಗೂ ಸಿಬ್ಬಂದಿ ವರ್ಗ, ತಾಪಂ ಹಡಗಲಿ ಎಂ.ಆರ್.ಡಬ್ಲ್ಯು ಬಿ. ಮಂಜುನಾಥ, ತಾಪಂ ಹಗರಿಬೊಮ್ಮನಹಳ್ಳಿ ಎಂ.ಆರ್.ಡಬ್ಲ್ಯು ಎನ್. ಲಕ್ಷ್ಮಣ, ಇಟ್ಟಿಗಿ ಗ್ರಾಪಂ ವಿ.ಆರ್.ಡಬ್ಲ್ಯು ಎ. ಜಯಪ್ಪ, ಹಾಗೂ ತಾ. ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ಅಧ್ಯಕ್ಷರಾದ ಎಸ್. ಚಂದ್ರಪ್ಪ ಗ್ರಾಮಸ್ಥರು, ಬಾಲಕಿಯ ಪೋಷಕರು ಕುಟುಂಬದ ಸದಸ್ಯರು ಹಾಜರಿದ್ದರು.



ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಜಯಂತ್ಯುತ್ಸವ

ಬಳ್ಳಾರಿ: ನಗರದ ಸತ್ಯನಾರಾಯಣ ಪೇಟೆಯ ಶ್ರೀಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಶ್ರೀಲಕ್ಷ್ಮೀ ನರಸಿಂಹ ಸ್ವಾಮಿ ಜಯಂತ್ಯುತ್ಸವ ನಿಮಿತ್ತ ವಿವಿಧ ಪೂಜೆ, ಸ್ವಾಮಿಯ ಕಲ್ಯಾಣೋತ್ಸವ ಕಾರ್ಯಕ್ರಮನ್ನು ಗುರುವಾರ ಹಮ್ಮಿಕೊಳ್ಳಲಾಗಿತ್ತು.

ಬಳ್ಳಾರಿ ಮಾಜಿ ಬುಡಾ ಅಧ್ಯಕ್ಷನಾರಾ ಪ್ರತಾಪ್ ರೆಡ್ಡಿ ಹಾಗು ನಾರಾ ಶೈಲಜಾ ಪ್ರತಾಪ್ ರೆಡ್ಡಿ ಕಲ್ಯಾಣೋತ್ಸವ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಕ್ತಿ ಸಮರ್ಪಿಸಿದರು. ದೇಗುಲದ ಅರ್ಚಕರು ಮತ್ತು ವೇದಪಂಡಿತರು ಪೂಜಾ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ, ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ಈ ಸಂಧರ್ಭದಲ್ಲಿ ನಗರದ ಸಾವಿರಾರು ಭಕ್ತರು ಭಾಗವಹಿಸಿ ಶ್ರೀಲಕ್ಷ್ಮೀ ನರಸಿಂಹ ಸ್ವಾಮಿ ಕಲ್ಯಾಣೋತ್ಸವನ್ನು ಕಣ್ತುಂಬಿಕೊಂಡರು. ನಂತರ ಎಲ್ಲ ಭಕ್ತರಿಗೆ ಪ್ರಸಾದ ಹಾಗು ಅನ್ನದಾನ ಕಾರ್ಯಕ್ರಮಕ್ಕೆ ಉದ್ಯಮಿ ನಾರಾಪ್ರತಾಪ ರೆಡ್ಡಿ ದಂಪತಿಗಳು ನೆರವೇರಿಸಿದರು.



ಮೇ 3ರಂದು ಡಿಸಿಎಂ ಜಿಲ್ಲಾ ಪ್ರವಾಸ

ವಿಜಯನಗರ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಅವರು ಮೇ 3 ರಂದು ಹೊಸಪೇಟೆಗೆ ಆಗಮಿಸಲಿದ್ದಾರೆ.

ಅಂದು ಬೆಳಗ್ಗೆ 9.10 ಗಂಟೆಗೆ ಕನ್ನಡ ವಿಶ್ವವಿದ್ಯಾನಿಲಯಆವರಣದ ಎಲಿಪ್ಯಾಡ್‌ಗೆ ಆಗಮಿಸಲಿದ್ದಾರೆ. ಅಲ್ಲಿಂದ ರಸ್ತೆ ಮಾರ್ಗವಾಗಿ ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿ, ಕ್ರಸ್ಟ್‌ಗೇಟ್ ಅಳವಡಿಕೆ ಕಾಮಗಾರಿಯ ಪರಿವೀಕ್ಷಣೆ ನಡೆಸುವರು. ಬಳಿಕ ಬೆಳಗ್ಗೆ 11 ಗಂಟೆಗೆ ರಾಯಚೂರಿಗೆ ಪ್ರಯಾಣಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಾವಯವ, ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ: ಜಯಶಂಕ್ರಪ್ಪ

ಕುರುಗೋಡು: ಮಹಿಳಾ ಗ್ರಾಮ ಸಭೆಗಳಲ್ಲಿ ತೋಟಗಾರಿಕೆ ಮತ್ತು ಪೌಷ್ಟಿಕ ತೋಟ ನಿರ್ಮಾಣಕ್ಕೆ ವಿಶೇಷ ಒತ್ತು ನೀಡುತ್ತಿದ್ದೇವೆ . ಸ್ವ-ಸಹಾಯ ಸಂಘಗಳ ಮಹಿಳೆಯರು, ಪೌಷ್ಟಿಕ ತೋಟಗಳ ಸ್ಥಾಪನೆ, ಸಾವಯವ ಕೃಷಿ, ತರಬೇತಿ ಮತ್ತು ಮಾರುಕಟ್ಟೆ ಸೌಲಭ್ಯಗಳ ಮೂಲಕ ಆರ್ಥಿಕ ಸಬಲೀಕರಣ ಸಾಧಿಸುತ್ತಿದ್ದಾರೆ ಎಂದು ತೋಟಗಾರಿಕೆ ನಿರ್ದೇಶಕ ಜಯಶಂಕ್ರಪ್ಪ ತಿಳಿಸಿದರು.

ಇಲ್ಲಿಗೆ ಸಮೀಪದ ಸಿಂಧಿಗೇರಿ ಗ್ರಾಪಂ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಗ್ರಾಮಸಭೆ ಉದ್ದೇಶಿಸಿ ಮಾತನಾಡಿದರು.

ಸಾವಯವ ಮತ್ತು ನೈಸರ್ಗಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಮನೆಯ ಹಿತ್ತಲಿನಲ್ಲಿ ತರಕಾರಿ ಮತ್ತು ಹಣ್ಣು ಬೆಳೆಯಲು ಮಹಿಳೆಯರಿಗೆ ಪ್ರೋತ್ಸಾಹ, ಸಹಾಯಧನ ನೀಡಲಾಗುತ್ತಿದೆ. ಇದರ ಸದುಪಯೋಗ ಪಡೆದುಕೊಂಡು ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕೆಂದು ತಿಳಿಸಿದರು.

ನಂತರ ಪಿ. ಡಿ. ಓ ರಾಜಲಕ್ಷ್ಮಿ ಮಾತನಾಡಿ, ಮಲ್ಲೇಶ್ವರ ಕ್ಯಾಂಪ್ ನಿವಾಸಿ ರಜನಿ ಅವರು ಉಪ್ಪಿನಕಾಯಿ ಉದ್ಯಮ ಆರಂಭಿಸಿ, ಚೀನಾ ದೇಶಕ್ಕೆ ರಫ್ತು ಮಾಡುವ ಮಟ್ಟಿಗೆ ಬೆಳೆದು ನಿಂತಿದ್ದಾರೆ.ಸರೋಜಮ್ಮ ರೊಟ್ಟಿ ಉದ್ಯಮ ಆರಂಭಿಸಿ ತಮ್ಮ ಕಾಲ ಮೇಲೆ ತಾವು ನಿಂತಿದ್ದಾರೆ. ಇವರಂತೆ ಎಲ್ಲಾ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಂಡು ಎಲ್ಲರಿಗೂ ಮಾದರಿಯಾಗುವಂತೆ ಬೆಳೆದು ತೋರಿಸಬೇಕೆಂದು ತಿಳಿಸಿದರು.

ವಿಶೇಷ ಸಾಧನೆಗೈದ ಮಹಿಳೆಯರಾದ ರಜನಿ ಹಾಗೂ ಸರೋಜಮ್ಮ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಹಾಯಕ ತೋಟಗಾರಿಕೆ ಅಧಿಕಾರಿ ಕಿರಣ್ ಎಂ. ಚೌರದ್, ಗ್ರಾಪಂ ಸಿಬ್ಬಂದಿ, ಮಹಿಳೆಯರು ಹಾಜರಿದ್ದರು.



ಶೌಚಾಲಯ ಸಮಸ್ಯೆಗೆ ತೆರೆ: ವರದಿಗೆ ಅಧಿಕಾರಿಗಳ ಸ್ಪಂದನೆ




ಹೊಸದಿಗಂತ
ಹುಣಸಗಿ ಬಸ್ ನಿಲ್ದಾಣದಲ್ಲಿ ಶೌಚಾಲಯದ ದುಸ್ಥಿತಿ

ದಿಗಂತ ವರದಿ ಪರಿಣಾಮ

ಹುಣಸಗಿ: ಪಟ್ಟಣದ ಕಲ್ಯಾಣ ಕರ್ನಾಟಕ ಸಾರಿಗೆ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಶೌಚಾಲಯದ ದುಸ್ಥಿತಿ ಹಲವು ದಿನಗಳಿಂದ ಸಾರ್ವಜನಿಕರಿಗೆ ದೊಡ್ಡ ತೊಂದರೆಯನ್ನು ಉಂಟುಮಾಡುತ್ತಿತ್ತು. ಸೆಪ್ಟಿ ಟ್ಯಾಂಕ್ ಪೈಪುಗಳು ಬ್ಲಾಕ್ ಆಗಿ, ಮಲಿನ ನೀರು ಸಾರ್ವಜನಿಕರು ಓಡಾಡುವ ರಸ್ತೆಯ ಮೇಲೆಯೇ ಹರಿದು ಪರಿಸರವನ್ನು ಅಸ್ವಚ್ಛಗೊಳಿಸುತ್ತಿತ್ತು. ದಿನನಿತ್ಯ ಸಾವಿರಾರು ಮಂದಿ ಈ ಮಾರ್ಗವನ್ನು ಬಳಸುತ್ತಿದ್ದರಿಂದ, ಸಮಸ್ಯೆ ಮತ್ತಷ್ಟು ಗಂಭೀರವಾಗಿತ್ತು.

ಈ ಕುರಿತು ಸಾರ್ವಜನಿಕರು ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳಲಾಗಿರಲಿಲ್ಲ, ಪಪಂ ಅಧಿಕಾರಿಗಳು ಸಹ ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆಗೆ ಅನೇಕ ಬಾರಿ ಮಾಹಿತಿ ನೀಡಿದರೂ ಕೂಡಾ ಅವರಿಗೂ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ, ಆದರೆ ಏ.29. 2026 ರಂದು 'ಹೊಸದಿಗಂತ' ಪತ್ರಿಕೆಯು ಈ ಸಮಸ್ಯೆಯನ್ನು ವಿಶೇಷ ವರದಿಯಾಗಿ ಪ್ರಕಟಿಸಿತು. ಈ ವರದಿ ಸಾರ್ವಜನಿಕ ಸಮಸ್ಯೆಯನ್ನು ಬೆಳಕಿಗೆ ತಂದಿತು. ಪತ್ರಿಕೆಯ ಈ ಜವಾಬ್ದಾರಿಯುತ ನಡೆಗೆ ಸ್ಪಂದಿಸಿದ ಸಾರಿಗೆ ಇಲಾಖೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು, ಶೌಚಾಲಯದ ಗುತ್ತಿಗೆದಾರರನ್ನು ಕರೆಸಿ ದುರಸ್ತಿ ಕಾರ್ಯವನ್ನು ಪ್ರಾರಂಭಿಸಿದರು. ಬ್ಲಾಕ್ ಆಗಿದ್ದ ಪೈಪುಗಳನ್ನು ತೆರವುಗೊಳಿಸಿ, ಹೊಸ ಪೈಪುಗಳನ್ನು ಅಳವಡಿಸುವ ಮೂಲಕ ಮಲಿನ ನೀರು ರಸ್ತೆ ಮೇಲೆ ಹರಿಯದಂತೆ ವ್ಯವಸ್ಥೆ ಮಾಡಲಾಗುತ್ತಿದೆ.

ಪತ್ರಿಕೆಯ ವಿಶೇಷ ವರದಿ ಪರಿಣಾಮವಾಗಿ ಸಮಸ್ಯೆಗೆ ಪರಿಹಾರ ಸಿಕ್ಕಿರುವುದರಿಂದ ಸಾರ್ವಜನಿಕರು ಸಂತೋಷ ವ್ಯಕ್ತಪಡಿಸಿದ್ದು, ತಮ್ಮ ಸಮಸ್ಯೆಗೆ ನ್ಯಾಯ ಒದಗಿಸಿದ 'ಹೊಸದಿಗಂತ' ಪತ್ರಿಕೆಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಘಟನೆ ಪತ್ರಿಕಾ ಶಕ್ತಿಯ ಮಹತ್ವವನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದು, ಸಾರ್ವಜನಿಕ ಹಿತಾಸಕ್ತಿಗಾಗಿ ಮಾಧ್ಯಮಗಳು ಎಷ್ಟು ಪರಿಣಾಮಕಾರಿ ಯಾಗಿರಬಹುದು ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ.

ವಿಶ್ವ ಮಲೇರಿಯಾ ದಿನಾಚರಣೆ

ಸಿರುಗುಪ್ಪ: ಮಿತಿ ಮೀರಿ ಬೆಳೆಯುತ್ತಿರುವ ಸೊಳ್ಳೆಗಳಿಗೆ ಸ್ವಚ್ಛತೆಯೇ ಕಡಿವಾಣ ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಹಮ್ಮದ್ ಖಾಸಿಂ ಹೇಳಿದರು.

ನಗರ ಆಸ್ಪತ್ರೆ ವ್ಯಾಪ್ತಿಯ 26ನೇ ವಾರ್ಡಿನಲ್ಲಿ ಮಂಗಳವಾರ ವಿಶ್ವ ಮಲೇರಿಯಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಮನೆಯ ಸುತ್ತಮುತ್ತಲಿನ ಪರಿಸರ, ಚರಂಡಿಗಳ ಸ್ವಚ್ಛತೆ ತ್ಯಾಜ್ಯ ವಸ್ತುಗಳ ಸೂಕ್ತ ವಿಲೇವಾರಿ ಇವುಗಳಿಂದ ಸೊಳ್ಳೆಗಳ ಉತ್ಪತ್ತಿಯನ್ನು ನಿಯಂತ್ರಿಸಬೇಕು. ಸಮುದಾಯ ಜಾಗೃತಗೊಳ್ಳುವುದು ಅವಶ್ಯವಾಗಿದೆ. ಯಾವುದೇ ಜ್ವರ ಇರಲಿ, ರಕ್ತ ಪರೀಕ್ಷೆ ಮಾಡಿಸಿದಾಗ ಮಾತ್ರ ಮುಂದಾಗಬಹುದಾದ ಹಾನಿಯನ್ನು ತಡೆಗಟ್ಟಬಹುದು ಎಂದರು.ಮಲೇರಿಯಾ ಮೇಲ್ವಿಚಾರಕ ಶ್ರೀನಿವಾಸ ಮಾತನಾಡಿ, ಹೊರ ರಾಜ್ಯದಿಂದ ಬಂದವರು ಪ್ರವಾಸಿ ತಾಣಗಳಿಗೆ ಹೋಗಿ ಬಂದವರ, ಶ್ರೀಶೈಲ, ಶಬರಿಮಲೈ, ಪಾಂಡುರಂಗ ಪಾದಯಾತ್ರೆಗೆ ಹೋಗಿ ಬಂದವರ ಆರೋಗ್ಯ ವಿಚಾರಿಸಿ ರಕ್ತಪರೀಕ್ಷೆ ಮಾಡಿಸಬೇಕು. ಸೊಳ್ಳೆಗಳಿಂದ ರಕ್ಷಣೆಗಾಗಿ ಪರದೆಯನ್ನು ಬಳಸಲು ಕಿಟಕಿ ಮತ್ತು ಬಾಗಿಲುಗಳಿಗೆ ಜಾಲಾಂದ್ರ ಗಳನ್ನು ಅಳವಡಿಸಲು ಕೋರಿದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಚಂದ್ರಶೇಖರ್, ಮಲೇರಿಯಾ ಲಿಂಕ್ ವರ್ಕರ್ ಗಣೇಶ್, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.



ಪುರಸಭೆ ಅಧ್ಯಕ್ಷರಾಗಿ ರೇಷ್ಮಾ ಸಿಕಂದರ್ ಆಯ್ಕೆ

ಹಗರಿಬೊಮ್ಮನಹಳ್ಳಿ: ಪಟ್ಟಣದ ಪುರಸಭೆಯ ನೂತನ ಅಧ್ಯಕ್ಷರಾಗಿ ರೇಷ್ಮಾ ಸಿಕಂದರ್ ಆಯ್ಕೆ ಆಗಿದ್ದಾರೆ.

23 ಸದಸ್ಯರ ಬಲ ಹೊಂದಿರುವ ಗುರುವಾರ ನಡೆದ ಪುರಸಭೆ ಅಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ರೇಷ್ಮಾ ಸಿಕಂದರ್ ಹಾಗೂ ಬಿಜೆಪಿಯ ಬಣಕಾರ್ ಸುರೇಶ್ ನಾಮಪತ್ರ ಸಲ್ಲಿಸಿದ್ದರು.

ಕಾಂಗ್ರೆಸ್ ಪಕ್ಷದ 12 ಜನ ಸದಸ್ಯರು ಮತ್ತು ಸಂಸದರ ಮತ ಸೇರಿ ರೇಷ್ಮಾ ಸಿಕಂದರ್ 13 ಮತ ಪಡೆದರೆ ಮತ್ತು ಬಿಜೆಪಿಯ 8 ಜನ ಸದಸ್ಯರ ಮತ್ತು ಶಾಸಕರ ಮತ ಸೇರಿ ಬಣಕಾರ್ ಸುರೇಶ್ 9 ಮತ ಪಡೆದರು.ಹೆಚ್ಚು ಮತ ಪಡೆದು ರೇಷ್ಮಾ ಸಿಕಂದರ್ ಪುರಸಭೆಗೆ ನೂತನ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಚುನಾವಣೆಯಲ್ಲಿ ಬೋವಿ ವೀರಣ್ಣ,ಚೆನ್ನಮ್ಮ ವಿಜಯ ಕುಮಾರ್ ,ಮತ್ತು ಮಲ್ಲೇಶ್ವರೀ ಭರತ್ ಮೂರು ಜನ ಸದಸ್ಯರು ಗೈರಾಗಿದ್ದರು.

ಈ ಸಂದರ್ಭದಲ್ಲಿ ಸಂಸದ ಈ ತುಕಾರಾಂ, ಮಾಜಿ ಶಾಸಕ ಭೀಮನಾಯ್ಕ್, ನೂತನ ಅಧ್ಯಕ್ಷ ರೇಷ್ಮಾ ಸಿಕಂದರ್, ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಸಾಹೀರಾ ಭಾನು ಮಾತನಾಡಿದರು.



ಹೆಗ್ಡಾಳು ರಾಮಣ್ಣ, ಅಕ್ಕಿತೋಟೇಶ್, ಹಾಲ್ದಾಳು ವಿಜಯಕುಮಾರ್, ಪುರಸಭೆ ಉಪಾಧ್ಯಕ್ಷೆ ಸರೆಗಾರ್ ನೇತ್ರಾವತಿ ಹುಚ್ಚಪ್ಪ, ನಿಕಟ ಪೂರ್ವ ಅಧ್ಯಕ್ಷ ಎಂ ಮರಿ ರಾಮಣ್ಣ ಸದಸ್ಯರಾದ ಪವಾಡಿ ಹನುಮಂತಪ್ಪ, ಮಂಜುಳಾ ಕೃಷ್ಣನಾಯ್ಕ್, ಅಂಬಿಕಾ ದೇವಿಂದ್ರಪ್ಪ, ಗಣೇಶ್ ನಾಯ್ಕ್, ಅಜೀಜು ಉಲ್ಲಾ, ನೆಲ್ಲು ಇಸ್ಮಾಯಿಲ್, ಖಾಜಾ ಬನ್ನಿ ಅಲ್ಲಾಭಕ್ಷಿ,ಕಾಂಗ್ರೆಸ್ ಅಧ್ಯಕ್ಷ ಕೋರಿ ಗೋಣಿ ಬಸಪ್ಪ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಸೊನ್ನದ ಗುರು ಬಸವರಾಜ ಇದ್ದರು. ಚುನಾವಣೆಯ ಸಮಯದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸದಂತೆ ಪೊಲೀಸ್ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಕೂಡ್ಲಿಗಿಯ ಡಿವೈಎಸ್ಪಿ ಮಲ್ಲೇಶ್ ದೊಡ್ಡನಿ, ಹಗರಿಬೊಮ್ಮನಹಳ್ಳಿ ಸಿಪಿಐ ವಿಕಾಸ್ ಲಮಾಣಿ, ಸಿಪಿಐ ದುರ್ಗಪ್ಪ ಸಿಪಿಐ ಪ್ರಹ್ಲಾದ್, ಮರಿಯಮ್ಮನಹಳ್ಳಿ ಪಿಎಸ್ಐ ತಾರಾಬಾಯಿ, ಕೂಡ್ಲಿಗಿಯ ಪಿಎಸ್ಐ ಪ್ರಕಾಶ್, ಕೊಟ್ಟೂರಿನ ಪಿಎಸ್ಐ ಗೀತಾಂಜಲಿ ಖಾನಹೊಸಳ್ಳಿಯ ಪಿಎಸ್ಐ ಸಿದ್ದರಾಮಪ್ಪ ಸೇರಿದಂತೆ ಇತರ ಪೊಲೀಸ್ ಅಧಿಕಾರಿಗಳು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಿದರು.